ಶೀ: ಸರ್ವೋದಯದ ಸಾಧಕರು

ಲೇ: ಬಸವರಾಧ್ಯ (ಬಿವಿ)
ರೇವಣ್ಣ ಶಿವಪ್ಪ (ಬಿ.ಶಿ.ಟಿ)

1957

ಶ್ರೀ ನಾಗಶಂಕರ ಬುಕ್‌ಡಿಪೋ
ಮೈಸೂರು

ಸರ್ವೋದಯ ಸಾಧಕರು

ಲೇಖಕರು

ಎನ್. ಬಸವಾರಾಧ್ಯ, ಎಂ. ಎ.

ಎಸ್. ಜಿ. ರೇವಣ್ಣಸಿದ್ದಪ್ಪ

ಪ್ರಕಾಶಕರು

ಶ್ರೀ ಗೌರೀಶಂಕರ್ ಬುಕ್ ಡಿಪೋ

ದೇವರಾಜ ಮಾರ್ಕೆಟ್

ಮೈಸೂರು

ಬೆಲೆ : ರೂ. ೦-೯೫

Kumari Shyamala
III year. G.G.H.S.

ಸರ್ವೋದಯ ಸಾಧಕರು

ಪ್ರಕಾಶಕರು
ಶ್ರೀ ಗೌರೀಶಂಕರ್ ಬುಕ್ ಡಿಪೋ
ದೇವರಾಜ ಮಾರ್ಕೆಟ್
ಮೈಸೂರು

ಮೊದಲನೆಯ ಮುದ್ರಣ ೧೯೫೭
ಎರಡನೆಯ ಮುದ್ರಣ ೧೯೫೮
ಮೂರನೆಯ ಮುದ್ರಣ ೧೯೬೦

ಬೆಲೆ : ೯೫ ನ.ಪೈ.

ಮುದ್ರಕರು
ಜಿ. ಎಚ್. ರಾಮರಾವ್, ಬಿ. ಎಸ್‌ಸಿ.
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್
ಮೈಸೂರು

A·B Shyamala
III year C/S.
G.G. H.S.

ಪೀಠಿಕೆ

—

'ಸರ್ವೋದಯ ಸಾಧಕರು' ಗ್ರಂಥದಲ್ಲಿ ಭರತಖಂಡದ ಮೂವರು ಮಹಾಪುರುಷರ ಜೀವನಚರಿತ್ರೆಯನ್ನು ಸಂಕ್ಷೇಪವಾಗಿ ನಿರೂಪಿಸಲಾಗಿದೆ. 'ಸರ್ವೇ ಜನಾಃ ಸುಖಿನೋ ಭವನ್ತು' ಎಂಬ ಆರ್ಯೋಕ್ತಿಯಂತೆ ಮಾನವ ಕಲ್ಯಾಣವನ್ನೇ ತಮ್ಮ ಜೀವನದ ಗುರಿಯನ್ನಾಗಿಟ್ಟುಕೊಂಡು ಅದಕ್ಕಾಗಿ ತನುಮನಧನಗಳನ್ನು ಧಾರೆಯೆರೆದು ದುಡಿದ ಮಹಾನುಭಾವರು ಇವರು. ಇವರಲ್ಲಿ ಗೌತಮಬುದ್ಧ, ವಿಶ್ವಬಂಧು ಬಸವಣ್ಣನವರು ಬಹಳ ಹಿಂದೆಯೇ ಆಗಿಹೋಗಿದ್ದಾರೆ; ಮಹಾತ್ಮ ಗಾಂಧೀಜಿ ಸುಮಾರು ಹತ್ತು ವರ್ಷಗಳ ಹಿಂದೆ ಅಮರರಾದರು. ಈ ಮೂವರು ವಿಭೂತಿಪುರುಷರು ಮಾನವ ಜನಾಂಗದ ಮೇಲೆ ಎಂದೆಂದಿಗೂ ಅಳಿಸಲಾಗದ ಪ್ರಭಾವ ಮುದ್ರೆಯನ್ನು ಒತ್ತಿದ್ದಾರೆ. ಇವರಲ್ಲಿ ಒಬ್ಬೊಬ್ಬರ ವಿಷಯದಲ್ಲೂ ಹಲವಾರು ಉದ್ಗ್ರಂಥ ಗಳು ಹುಟ್ಟಿಕೊಂಡಿವೆ. ಈ ಕಿರುಹೊತ್ತಗೆಯಲ್ಲಿ ಈ ಪಿತಾಮಹರ ಜೀವನ ಚರಿತ್ರೆಯನ್ನು ನಿರೂಪಿಸುವುದಾದರೂ ಎಂತು ?

ಭಾರತದೇಶದಲ್ಲಿ ಸ್ವಾರ್ಥವನ್ನು ಬದಿಗೊತ್ತಿ ಲೋಕಹಿತವನ್ನೇ ಮುಖ್ಯವಾಗಿಟ್ಟುಕೊಂಡು ದುಡಿದವರು ಹಲವರುಂಟು. ಅವರಲ್ಲಿ ಈ ಮೂವರು ಸಾಧಕರನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಅಂದಮಾತ್ರಕ್ಕೇ ಇವರನ್ನುಳಿದು ಮತ್ತಾರೂ ಈ ದಿಶೆಯಲ್ಲಿ ದುಡಿಯಲಿಲ್ಲವೆಂದು ಭಾವಿಸು ವುದಕ್ಕೆ ಎಡೆಯಿಲ್ಲ. ಸರ್ವೋದಯ ದೃಷ್ಟಿಯನ್ನೇ ಮುಖ್ಯವಾಗಿಟ್ಟುಕೊಂಡ ವರಲ್ಲಿ ಇವರು ಅಗ್ರಗಣ್ಯರು.

'ಸರ್ವೋದಯ' ಎಂದರೆ ಸರ್ವರ ಉದಯ; ಎಲ್ಲರ ಏಳಿಗೆ-ಪ್ರಗತಿ. ಸರ್ವೋದಯವು ಸ್ವಯಂಪೂರ್ಣವಾದ ಜೀವನ ದರ್ಶನ. ಪ್ರಸ್ತುತ ಗ್ರಂಥ ದಲ್ಲಿ ಈ ಮೂವರು ಮಹಾನುಭಾವರು ಲೋಕಹಿತಕ್ಕಾಗಿ ಕೈಗೊಂಡ ಮಹತ್ಕಾರ್ಯಗಳನ್ನು ವಿವರಿಸಲಾಗಿದೆ. ಈ ಮಹತ್ತರವಾದ ಕಾರ್ಯಸಾಧನೆ ಯಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿರುವ ಅವರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿಯಾದರೂ ನಿರೂಪಿಸುವುದು ಅನಿವಾರ್ಯವಾಗಿದೆ. ಇಲ್ಲಿ

ಅವರ ಜೀವನಚರಿತ್ರೆ ಗೌಣವಾದದ್ದು; ಲೋಕಕಲ್ಯಾಣಕ್ಕಾಗಿ ಅವರು ಸಾಧಿಸಿದ ಕಾರ್ಯಗಳು ಮುಖ್ಯವಾದುವು. ಈ ದೃಷ್ಟಿಯನ್ನೇ ಗಮನ ದಲ್ಲಿಟ್ಟುಕೊಂಡು ಅವರು ಕೈಗೊಂಡ ಧಾರ್ಮಿಕ, ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಕ್ಷೇತ್ರಗಳನ್ನು ವಿವರವಾಗಿ ಸ್ಫುಟಗೊಳಿಸಿದ್ದೇವೆ.

ಪ್ರಾಚೀನ ಕಾಲದಿಂದಲೂ ಭಾರತದೇಶ ಸತ್ಯ, ಧರ್ಮ, ಅಹಿಂಸೆ ಗಳಿಗೆ ಹೆಸರಾಂತಿದೆ. ಇಂತಹ ಪುಣ್ಯಭೂಮಿಯಲ್ಲಿ ಜನ್ಮವೆತ್ತಿದ ಮಹನೀ ಯರು ಕೇವಲ ಭಾರತದ ಪುರೋಭಿವೃದ್ಧಿಯನ್ನೇ ಅಲ್ಲದೆ ಇಡೀ ಜನಾಂ ಗದ ಕಲ್ಯಾಣವನ್ನೇ ತಮ್ಮ ಮುಖ್ಯಧ್ಯೇಯವನ್ನಾಗಿಟ್ಟುಕೊಂಡವರು. ಇಂದಿನ ಜಗತ್ತಿನಲ್ಲಿ ಅಶಾಂತಿ, ಹಿಂಸೆ, ದೌರ್ಜನ್ಯಗಳ ಭೀತಿಯೇ ಜನಮನ ವನ್ನು ಹೊಕ್ಕಿದೆ. ಈ ಪರ್ವಕಾಲದಲ್ಲಿ ಶಾಂತಿ ಮತ್ತು ಅಹಿಂಸೆಯ ಸ್ಥಾಪನೆಗಾಗಿ ದುಡಿದು ನಡೆದ ಈ ವಿಶ್ವಾಚಾರ್ಯರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವುದು ಅತ್ಯಾವಶ್ಯಕ. ಅದರಲ್ಲೂ ಇಂದಿನ ವಿದ್ಯಾರ್ಥಿ ವರ್ಗವು ಈ ಆಚಾರ್ಯಪುರುಷರ ಜೀವನಮಾರ್ಗವನ್ನೂ ಅವರು ಸಾಧಿಸಿದ ಮಹತ್ಕಾರ್ಯಗಳನ್ನೂ ತದೇಕಚಿತ್ತದಿಂದ ವ್ಯಾಸಂಗಮಾಡಿ ತಮ್ಮ ಮೇಲ್ಮೆಯನ್ನೂ ತಮ್ಮ ದೇಶದ ಮೇಲ್ಮೆಯನ್ನೂ ಒಟ್ಟಿನಲ್ಲಿ ಜಗತ್ತಿನ ಮೇಲ್ಮೆಯನ್ನೇ ಸಾಧಿಸುವಂತಾಗಬೇಕು. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ 'ಎಂಬ ನಾಣ್ಣುಡಿಯಂತೆ ಎಳೆಯ ವಯಸ್ಸಿನಲ್ಲಿಯೇ ಬಾಲಕರಿಗೆ ಈ ಮಹಾತ್ಮರ ಜೀವನದರ್ಶನವನ್ನು ಪರಿಚಯ ಮಾಡಿಕೊಟ್ಟರೆ ಸರ್ವೋದಯ ಭಾವವು ತಾನಾಗಿಯೇ ಮೊಳೆದೋರುತ್ತದೆ. ಸರ್ವೋದಯ ದೃಷ್ಟಿ ಇಂದಿನ ದಲ್ಲ. ನಮ್ಮ ದೇಶದಲ್ಲಿ ಎಂದಿನಿಂದಲೂ ಇದೆ. ಈ ಮಿಸುನಿಗೆ ಇಂದು ಮೆರುಗನ್ನು ಕೊಟ್ಟಿದ್ದೇವೆ. ಈ ದೃಷ್ಟಿಯನ್ನೇ ಮುಖ್ಯವಾಗಿಟ್ಟುಕೊಂಡು ಈ ಗ್ರಂಥವನ್ನು ಬರೆಯಲಾಗಿದೆ.

ಈ ಗ್ರಂಥದ ಕರಡುಪ್ರತಿಯನ್ನು ಆಮೂಲಾಗ್ರವಾಗಿ ಓದಿ ಹಲ ವಾರು ಉತ್ತಮ ಸಲಹೆಗಳನ್ನು ನೀಡಿದ ವಿದ್ವನ್ಮಣಿಗಳಾದ ಪಂಡಿತ ಶ್ರೀ ಹೆಮ್ಮಿಗೆ ದೇಶಿಕಾಚಾರ್ಯರಿಗೆ ನಮ್ಮ ಕೃತಜ್ಞತೆಗಳು ಸಲ್ಲಬೇಕಾಗಿವೆ. ಈ ಪುಸ್ತಕವನ್ನು ಮನಮೆಚ್ಚುವಂತೆ ಸುಂದರವಾಗಿ ಕ್ಷಿಪ್ರದಲ್ಲೇ ಅಚ್ಚು

ಮಾಡಿ ಕೊಟ್ಟ ಓರಿಯಂಟ್ ಪವರ್ ಪ್ರೆಸ್ ಮಾಲೀಕರಾದ ಶ್ರೀ ಜಿ. ಶ್ರೀನಿವಾಸರ್, ಅವರಿಗೆ ನಮ್ಮ ವಂದನೆಗಳು.

ಬೆಂಗಳೂರು — ಎಸ್. ಬಸವಾರಾಧ್ಯ

ತಾ|| ೨೦-೧೧-೧೯೫೮. — ಎಸ್. ಜಿ. ರೇವಣ್ಣಸಿದ್ದಪ್ಪ

ಮೂರನೆಯ ಮುದ್ರಣ

೧೯೬೦-೬೧ ನೆಯ ಸಾಲಿನ ಎಸ್. ಎಸ್. ಎಲ್. ಸಿ ತರಗತಿಗಳಿಗೆ ಈ ಪುಸ್ತಕವನ್ನು ಕನ್ನಡ ನಾನ್ ಡೀಟೈಲ್ ಪಠ್ಯ ಪುಸ್ತಕವನ್ನಾಗಿ ನಿಯಮಿಸಿದ ಪಠ್ಯಪುಸ್ತಕ ಸಮಿತಿಯ ಸದಸ್ಯರಿಗೆ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಈ ಗ್ರಂಥದಲ್ಲಿ ಬಳಸಿರುವ ಗೌತಮ ಬುದ್ಧನ ಪಡಿಯಚ್ಚನ್ನು ಒದಗಿಸಿದ ಶ್ರೀ ಕೆ. ನಾಗರಾಜ್, ವಿಶ್ವಬಂಧು ಬಸವಣ್ಣನವರ ಪಡಿಯಚ್ಚನ್ನು ಒದಗಿಸಿದ ಆಸ್ಥಾನ ವಿದ್ವಾನ್ ಪಂಡಿತರತ್ನಂ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮಹಾತ್ಮ ಗಾಂಧೀಜಿಯ ಪಡಿಯಚ್ಚನ್ನು ಒದಗಿಸಿದ ಶ್ರೀ. ಜಿ. ಶ್ರೀನಿವಾಸನ್–ಈ ಮಹನೀಯರಿಗೆಲ್ಲ ನಮ್ಮ ಅನಂತ ವಂದನೆಗಳು.

ಈ ಪಠ್ಯ ಪುಸ್ತಕದ ಮುದ್ರಣವನ್ನು ಅತಿ ಜಾಗ್ರತೆ ಮುಗಿಸಿಕೊಟ್ಟ ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್ ಮಾಲೀಕರಾದ ಶ್ರೀ. ಜಿ. ಎಚ್. ರಾಮರಾವ್, ಬಿ.ಎಸ್‌ಸಿ. ಅವರಿಗೆ ನಮ್ಮ ಧನ್ಯವಾದಗಳು.

ಬೆಂಗಳೂರು — ಎನ್. ಬಸವಾರಾಧ್ಯ

ತಾ॥ ೧೦-೬-೧೯೬೦ — ಎಸ್. ಜಿ. ರೇವಣ್ಣಸಿದ್ದಪ್ಪ

ವಿಷಯ ಸೂಚಿಕೆ



ಗೌತಮ ಬುದ್ಧ

ಸರ್ವೋದಯ ಸಾಧಕರು

ಗೌತಮ ಬುದ್ಧ

ಪರಿಚಯ

ವಿಶ್ವದ ಮಹಾನುಭಾವರ ಚರಿತ್ರೆಯಲ್ಲಿ ಅಚ್ಚಳಿಯದೆ ಮಿನುಗುತ್ತಿರುವ ಧ್ರುವತಾರೆ ಗೌತಮ ಬುದ್ಧ. ಆತನು ಪರಿನಿರ್ವಾಣಹೊಂದಿ ಇಂದಿಗೆ ಇಪ್ಪತ್ತೈದು ಶತಮಾನಗಳು ಕಳೆದುಹೋಗಿದ್ದರೂ ಮಾನವ ಜನಾಂಗದ ಮೇಲೆ ಆತನ ಪ್ರಭಾವ ಮಾಸಿಹೋಗಿಲ್ಲ. ಮಹಾಜ್ಞಾನಿಯೆಂದೂ ಧರ್ಮದಾನಿಯೆಂದೂ ಪ್ರಖ್ಯಾತಿಯನ್ನು ಪಡೆದ ಗೌತಮ ಬುದ್ಧ ಜಗತ್ತಿಗೇ ಪುಣ್ಯಪುರುಷನಾಗಿದ್ದಾನೆ. ಸತ್ಯ, ಪ್ರೇಮ, ದಯೆಗಳಿಂದ ಕೂಡಿದ ಉತ್ಕೃಷ್ಟ ಧರ್ಮಬೋಧನೆಯಿಂದಲೂ ಪರಿಶುದ್ಧವಾದ ಜೀವನದಿಂದಲೂ ಲೋಕಪೂಜ್ಯತೆಯನ್ನು ಗಳಿಸಿದ್ದಾನೆ. ಆದುದರಿಂದಲೇ ಆತನ ದಿವ್ಯತತ್ತ್ವಗಳು ಪ್ರಗತಿಪರವಾಗಿ ಸರ್ವರಿಗೂ ಸರ್ವಕಾಲದಲ್ಲೂ ಆದರ್ಶಪ್ರಾಯವಾಗಿ ಚಿರವಿನೂತನವಾಗಿ ಬೆಳಗುತ್ತಿವೆ; ಅಷ್ಟೇ ಅಲ್ಲದೆ ಅನ್ಯಮತೀಯರಿಗೂ ಮೇಲ್ಪಂಕ್ತಿಯಾಗಿ ಆಕರ್ಷಣೀಯವಾಗಿವೆ.

ಗೌತಮ ಬುದ್ಧನು ಲೋಕಕಲ್ಯಾಣಕ್ಕಾಗಿ ಜನ್ಮವೆತ್ತಿದ ಪವಾಡಪುರುಷ. ಜಗತ್ತಿನಲ್ಲಿ ಆತನಿಗೆ ವಿಶಿಷ್ಟವಾದ ಘನತೆ, ಗೌರವ, ಪೂಜ್ಯತೆಗಳು ಸಲ್ಲುತ್ತಿವೆ. ಜೀವನದ ಜಂಜಾಟದಲ್ಲಿ ತೊಳಲುತ್ತಿದ್ದ ಮಾನವಕೋಟಿಯ ಕಷ್ಟಕಾರ್ಪಣ್ಯಗಳನ್ನು ಕಂಡು ಮರುಗಿ ಅವರ ಉದ್ಧಾರಕ್ಕಾಗಿ ತನುಮನಧನಗಳನ್ನು ಧಾರೆಯೆರೆದವನವನು. ಅದಕ್ಕಾಗಿ ರಾಜ್ಯವನ್ನೂ, ಕೈಹಿಡಿದ ಹೆಂಡತಿಯನ್ನೂ ಪ್ರೀತಿಯ ಕುವರನನ್ನೂ ಬಂಧುಬಳಗವನ್ನೂ ಪರಿತ್ಯಜಿಸಿ ಸೇವಾಪಥವನ್ನು ಕೈಗೊಂಡವನವನು. ಅಹಿಂಸೆಯೇ ಪರಮಧರ್ಮವೆಂಬುದನ್ನು ಸಾರಿ ತೋರಿದವನವನು. ಬುದ್ಧನ ಧರ್ಮವು ವಿಶ್ವದ ಶ್ರೇಷ್ಠಧರ್ಮಗಳಲ್ಲೊಂದು ಎಂಬುದನ್ನುಪಾಶ್ಚಿಮಾತ್ಯತತ್ತ್ವಜ್ಞಾನಿಗಳೇ ಒಪ್ಪಿಕೊಂಡಿದ್ದಾರೆ. ಇಂದ್ರಿಯಾತೀತವಾದ ವಿಷಯನಿರೂಪಣೆ ಇಲ್ಲದಿರುವುದರಿಂದ ಅದು ವ್ಯಾವಹಾರಿಕ

ವಾದ ಮತ್ತು ತರ್ಕಬದ್ಧವಾದ ತತ್ತ್ವಜ್ಞಾನವೆಂದೂ ಅಭಿಪ್ರಾಯಪಟ್ಟಿದ್ದಾರೆ.

ಬುದ್ಧನ ದೃಷ್ಟಿಯಲ್ಲಿ ಮಾನವತ್ವದ ಕಲ್ಪನೆ, ಜನಾಂಗ ಮತ್ತು ರಾಷ್ಟ್ರಗಳ ಎಲ್ಲೆಯನ್ನು ಮೀರಿದ್ದು. ಕಳಂಕರಹಿತನಾಗಿ ಆತ್ಮದೀಪದ ನೆರವಿನಿಂದ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಬಲ್ಲ ನೂತನ ಮಾದರಿಯ ಸ್ವತಂತ್ರ ಪುರುಷನ ಆವಿರ್ಭಾವವೇ ಬುದ್ಧನ ಗುರಿಯಾಗಿದ್ದಿತು. ಆತನನ್ನು ಧಾರ್ಮಿಕಪರಂಪರೆಯ ವಿಶಿಷ್ಟ ಪ್ರತಿನಿಧಿಯೆಂದೂ ಹೇಳಬಹುದಾಗಿದೆ. ವೈದಿಕಧರ್ಮದಲ್ಲಿ ಪ್ರಚಾರದಲ್ಲಿದ್ದ ಯಜ್ಞಯಾಗಾದಿಗಳನ್ನೂ ಆರ್ಯರ ಚಾತುರ್ವರ್ಣ್ಯ ಸಂಕೋಲೆಯನ್ನೂ ಖಂಡಿಸಿ ಅದಕ್ಕೆ ಬದಲಾಗಿ ಅಹಿಂಸೆಯ ಹೊಸ ಹಾದಿಯನ್ನು ತೆರೆದು ಭಾರತದಲ್ಲಿ ಸಮತಾವಾದದ ಒಂದು ನಿರ್ದಿಷ್ಟ ನೀತಿಯನ್ನು ಆತನು ಎತ್ತಿಹಿಡಿದಿದ್ದಾನೆ. ಸ್ತ್ರೀಯರಿಗಿದ್ದ ಧಾರ್ಮಿಕ ಪಾರತಂತ್ರ್ಯವನ್ನು ಕಿತ್ತೊಗೆದು ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಒಂದು ಕ್ರಾಂತಿಯನ್ನೇ ಎಬ್ಬಿಸಿದ್ದಾನೆ. ಆದುದರಿಂದಲೇ ವಿಶಿಷ್ಟ ತತ್ತ್ವಗಳಿಂದ ಕೂಡಿದ ಈ ಬೌದ್ಧಮತವು ಸರ್ವಜನಾದರಣೀಯವಾಯಿತು: ಅನೇಕ ರಾಜಮಹಾರಾಜರು ಕೂಡ ಈ ಮತವನ್ನವಲಂಬಿಸಿ ವಿಶೇಷ ಪ್ರೋತ್ಸಾಹವನ್ನು ಕೊಟ್ಟರು. ಅವರಲ್ಲಿ ಪ್ರಖ್ಯಾತನಾದ ಅಶೋಕ ಚಕ್ರವರ್ತಿ ಬೌದ್ಧಮತದ ಉದಾತ್ತತತ್ತ್ವಗಳಿಗೆ ಮಾರುಹೋಗಿ ತನ್ನ ದೇಶದಲ್ಲಿ ಮಾತ್ರವಲ್ಲದೆ ಹೊರದೇಶಗಳಲ್ಲಿಯೂ ಈ ಮತವನ್ನು ಪ್ರಚುರಪಡಿಸಿದನು. ಅಶೋಕನ ಸಂತತ ಪ್ರಯತ್ನಗಳ ಫಲವಾಗಿ ಬೌದ್ಧಮತವು ಏಷ್ಯಾಖಂಡದ ಸಿಂಹಳದ್ವೀಪ, ಬರ್ಮಾ, ನೇಪಾಳ, ಲಾವೋಸ್, ಕಾಂಬೋಡಿಯಾ, ಚೀನಾ, ಜಪಾನ್, ಸಿಕ್ಕಿಂ, ಭೂತಾನ, ಇಂಡೋನೇಷ್ಯಾಗಳಲ್ಲೆಲ್ಲಾ ಹರಡಿ ಈಗಲೂ ಜೀವಂತವಾಗಿದೆ. ಅಶೋಕನ ತರುವಾಯ ಈ ಮತದ ಪ್ರಾಬಲ್ಯವು ಕಡಿಮೆಯಾಗುತ್ತಾ ಬಂದಿತು. ಇತ್ತೀಚೆಗೆ ಸ್ವಾಮಿವಿವೇಕಾನಂದ, ಮಹಾತ್ಮಾ ಗಾಂಧಿ, ಪಂಡಿತ ಜವಹರಲಾಲ್‌ನೆಹರೂ ಮುಂತಾದ ಪ್ರತಿಭಾನ್ವಿತ ವ್ಯಕ್ತಿಗಳು ಬೌದ್ಧಮತದ ಉಚ್ಚನೀತಿಯಿಂದ ಉತ್ತೇಜಿತರಾಗಿ ಅದನ್ನು ಅನುಷ್ಠಾನಕ್ಕೆ ತರುವುದಕ್ಕಾಗಿ ಪ್ರಯತ್ನಿಸಿದ್ದಾರೆ. ಜನರಲ್ಲಿ ವಿಚಾರಶಕ್ತಿ ಬೆಳೆದಂತೆಲ್ಲ ಬುದ್ಧನ ತತ್ತ್ವಗಳ ಪ್ರಭಾವವೂ ಹೆಚ್ಚುತ್ತಿದೆ. ಆತನ ಸಂದೇಶ ಇಡೀ ಜಗತ್ತಿಗೇ ಆಗಿದೆ. ನಮ್ಮ ರಾಷ್ಟ್ರೀಯ ಸರ್ಕಾರವೂ ಬುದ್ಧನ

ಶಾಂತಿಮಯವಾದ ಉದಾತ್ತತತ್ತ್ವಗಳ ಆಧಾರದ ಮೇಲೆ ದೇಶೀಯ ಮತ್ತು ಅಂತರರಾಷ್ಟ್ರೀಯ ನೀತಿಯನ್ನು ಅನುಸರಿಸುತ್ತಿರುವುದೇ ಬುದ್ಧನ ಅಮೋಘ ವ್ಯಕ್ತಿತ್ವಕ್ಕೆ ನಿದರ್ಶನವಾಗಿದೆ.

'ಬುದ್ಧ' ಎಂದರೆ ಜ್ಞಾನಿ, ಪರತತ್ತ್ವವನ್ನು ತಿಳಿದವನು ಎಂದರ್ಥ. ಜನಸಾಮಾನ್ಯರಿಗೆ ದುರ್ಲಭವಾದ ಉಚ್ಚಜ್ಞಾನವನ್ನೂ ಶೀಲವನ್ನೂ ಪಡೆದವನೇ ಬುದ್ಧ. ಅಂದಮಾತ್ರಕ್ಕೇ ಗೌತಮನು ಮಾನವನಲ್ಲವೆಂದು ಯಾರೂ ಭಾವಿಸಕೂಡದು. ಎಲ್ಲರಂತೆಯೇ ಆತನೂ ಹುಟ್ಟಿ ಬೆಳೆದು ತನ್ನ ಅಪಾರವಾದ ತ್ಯಾಗದಿಂದಲೂ ಹಸನಾದ ಬಾಳಿನಿಂದಲೂ ದೇವತ್ವವನ್ನು ಪಡೆದನು. ಗೌತಮನು ಸಂಪ್ರದಾಯಕ್ಕಿಂತ ಸತ್ಯಕ್ಕೆ ಬೆಲೆಗೊಟ್ಟು ಸ್ವಶಕ್ತಿಯಿಂದಲೂ, ಸ್ವಾನುಭವದಿಂದಲೂ ಜ್ಞಾನಾರ್ಜನೆಮಾಡಿ ಪೂರ್ಣತ್ವವನ್ನೂ ಮುಕ್ತಿಯನ್ನೂ ಗಳಿಸಿದನು. ಮಾನವರ ಉದ್ಧಾರಕ್ಕೂ ಉತ್ಥಾನಕ್ಕೂ ಅಹಿಂಸಾಮಾರ್ಗದ ಹೊಸ ಬೆಳಕನ್ನು ಬೀರಿ ವಿಶ್ವಪ್ರೇಮವನ್ನು ಹರಡಿದನು. ಇಂತಹ ಮಹಾತ್ಮರ ಹುಟ್ಟಿನಿಂದಲೇ ಭರತಖಂಡ 'ಪುಣ್ಯಭೂಮಿ' ಎಂದು ಹೆಸರಾಂತಿದೆ.

ಜನನ-ಬಾಲ್ಯ-ವಿದ್ಯಾಭ್ಯಾಸ

ನೇಪಾಳದ ಬಳಿ ಇರುವ ಕಪಿಲವಸ್ತು ಎಂಬ ನಗರದಲ್ಲಿ ಈಗ್ಗೆ ಸುಮಾರು ಎರಡುಸಾವಿರದೈನೂರು ವರ್ಷಗಳ ಹಿಂದೆ ಶುದ್ಧೋದನ ಮಹಾರಾಜನು ರಾಜ್ಯಭಾರವನ್ನು ನಡೆಸುತ್ತಿದ್ದನು. ಕೋಲಿಯ ಕುಲದ ಸುಪ್ರಬುದ್ಧರಾಜನ ಮಗಳಾದ ಮಾಯಾದೇವಿ ಆತನ ಪಟ್ಟಮಹಿಷಿ. ಸಚ್ಚರಿತ್ರೆಯೂ ಶೀಲವಂತೆಯೂ ಆದ ಮಾಯಾದೇವಿಯೊಡನೆ ಶುದ್ಧೋದನನು ನ್ಯಾಯದಿಂದಲೂ ಧರ್ಮದಿಂದಲೂ ರಾಜ್ಯವನ್ನು ಪರಿಪಾಲಿಸುತ್ತ ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಣುತ್ತಿದ್ದನು. ಈ ದಂಪತಿಗಳು ಸುಖಸಂತೋಷಗಳಲ್ಲಿ ಸ್ವಲ್ಪಕಾಲವನ್ನು ಕಳೆದರು. ಹೀಗಿರುವಲ್ಲಿ ಒಂದು ದಿನ ಮಾಯಾದೇವಿಯು ಒಂದು ಕನಸನ್ನು ಕಂಡಳು. ಕನಸಿನಲ್ಲಿ ನಾಲ್ವರು ದೇವತೆಗಳು ಬಂದು ಆಕೆಯನ್ನು ಮಂಚದ ಸಮೇತ ಹಿಮಾಚಲಕ್ಕೆ ಒಯ್ದಂತೆಯೂ; ಆಕೆ ಅಲ್ಲಿದ್ದ ತಿಳಿಗೊಳದಲ್ಲಿ ಮಿಂದು ಬೆಳ್ಳಿಯ ಬೆಟ್ಟ

ದಲ್ಲಿದ್ದ ಚಿನ್ನದ ಮನೆಯನ್ನು ಹೊಕ್ಕು ಪವಡಿಸಿದಂತೆಯೂ; ಆಗ ಒಂದು ಬಿಳಿಯ ಆನೆ ಸೊಂಡಿಲಲ್ಲಿ ಒಂದು ಬಿಳಿಯ ಕಮಲವನ್ನು ಹಿಡಿದುಕೊಂಡು ಆಕೆಯ ಹೊಟ್ಟೆಯನ್ನು ಪ್ರವೇಶಿಸಿದಂತೆಯೂ ಭಾಸವಾಯಿತು. ಅಲ್ಲಿಗೆ ಎಚ್ಚರವಾಗಿ ಆಕೆಯ ಕನಸು ಹರಿಯಿತು.

ಮಾರನೆಯ ದಿನ ಪ್ರಾತಃಕಾಲ ಹಿಂದಿನ ರಾತ್ರಿ ತಾನು ಕಂಡ ಕನಸಿನ ಸುದ್ದಿಯನ್ನು ರಾಜನಿಗೆ ಹೇಳಿದಳು. ರಾಜನು ಜೋಯಿಸರನ್ನು ಕೂಡಲೆ ಕರೆಸಿ ಆ ಕನಸಿನ ಅಂತರಾರ್ಥವನ್ನು ಕೇಳಿದನು. ಅದಕ್ಕೆ ಜೋಯಿಸರು "ಮಹಾರಾಜ! ರಾಣಿಯು ಕಂಡ ಈ ಕನಸಿನಂತೆ ನಿನಗೆ ಒಬ್ಬ ಮಗನು ಹುಟ್ಟುವನು. ಅವನು ಸಂಸಾರಿಯಾದ ಪಕ್ಷದಲ್ಲಿ ಮಹಾರಾಜನಾಗುತ್ತಾನೆ; ಅದು ತಪ್ಪಿ ಸಂನ್ಯಾಸಿಯಾದ ಪಕ್ಷದಲ್ಲಿ ಮಹಾಜ್ಞಾನಿಯಾಗಿ ವಿಶ್ವವಿಖ್ಯಾತ ನಾಗುತ್ತಾನೆ" ಎಂದು ತಿಳಿಸಿದರು.

ಕ್ರಮೇಣ ಮಾಯಾದೇವಿಯು ಗರ್ಭವತಿಯಾದಳು. ಹೆರಿಗೆಗಾಗಿ ತನ್ನ ತವರೂರಾದ ದೇವದಹಪಟ್ಟಣಕ್ಕೆ ಹೊರಟಳು. ದಾರಿಯಲ್ಲಿ 'ಲುಂಬಿಣಿ' ಎಂಬ ಉದ್ಯಾನವನವು ಸಿಕ್ಕಿತು. ಅದರ ಮನೋಹರವಾದ ಪ್ರಕೃತಿ ಸೌಂದರ್ಯವು ಆಕೆಯ ಮನಸ್ಸನ್ನು ಸೆರೆಹಿಡಿಯಿತು. ವಿಶ್ರಾಂತಿ ಗಾಗಿ ಸ್ವಲ್ಪಕಾಲ ಅಲ್ಲಿಯೇ ತಂಗಿದಳು. ಅಷ್ಟರಲ್ಲಿ ಆಕೆಗೆ ಪ್ರಸವವೇದನೆಯು ತಲೆದೋರಲು ಒಂದು ಮರದಡಿಯಲ್ಲಿ ಗಂಡುಮಗುವನ್ನು ಹಡೆದಳು. ಅಂದು ವೈಶಾಖಪೂರ್ಣಿಮೆಯಾಗಿತ್ತು. ಮಹಾತ್ಮರು ಜನಿಸುವಾಗ ಸಂಭವಿ ಸುವ ಶುಭನಿಮಿತ್ತಗಳೆಲ್ಲ ಸಿದ್ಧಾರ್ಥನು ಹುಟ್ಟಿದಾಗಲೂ ಆದುವು.

ಮಾಯಾದೇವಿಗೆ ಗಂಡುಮಗುವಾದ ಶುಭಸಮಾಚಾರವನ್ನು ಕೇಳಿದ ಶುದ್ಧೋದನ ಮಹಾರಾಜನಿಗೆ ಅಮಿತವಾದ ಆನಂದವಾಯಿತು. ರಾಜ್ಯದ ಪ್ರಜೆಗಳೆಲ್ಲ ಸಂತೋಷಭರಿತರಾದರು. ಮಗುವಿಗೆ ಸಿದ್ಧಾರ್ಥನೆಂದು ನಾಮಕರಣ ಮಾಡಿದರು. ಸರ್ವಲಕ್ಷಣಸಂಪನ್ನನಾಗಿದ್ದ ಆ ರಾಜಕುಮಾರ ವಿಭೂತಿಪುರುಷನಾಗುವುದರಲ್ಲಿ ಸಂದೇಹವಿಲ್ಲವೆಂದು ಜೋಯಿಸರು ಭವಿಷ್ಯ ವನ್ನು ನುಡಿದರು. ಆಗ ಅಸಿತನೆಂಬ ಮಹರ್ಷಿಯು ಬಂದು ಪುಟಕ್ಕೆ ಹಾಕಿದ ಚಿನ್ನದಂತೆ ಪ್ರಜ್ಜ್ವಲಿಸುತ್ತಿದ್ದ ಆ ಮಗುವಿನ ಮುಖಕಾಂತಿಯನ್ನು ಕಂಡು "ಈತನೇ ಪುರುಷೋತ್ತಮ. ಈತನನ್ನು ಮೀರಿಸುವವರಾರೂ ಇಲ್ಲ.

ಈತನು ಮಾನವಕೋಟಿಯ ಕಷ್ಟಪರಂಪರೆಗಳನ್ನು ಪರಿಹರಿಸಿ ಅವರನ್ನು ಉದ್ಧಾರಮಾಡುವ ತಾರಕನಾಗುತ್ತಾನೆ; ಸಂಬೋಧಿಯನ್ನು ಪಡೆದು ಧರ್ಮದಾನಿಯಾಗುತ್ತಾನೆ" ಎಂದು ತಿಳಿಸಿ, ತಾನು ವಯೋವೃದ್ಧನಾಗಿರುವುದರಿಂದ ಮುಂದೆ ಆತನ ಧರ್ಮೋಪದೇಶವನ್ನು ಕೇಳುವ ಸುಯೋಗವಿಲ್ಲವೆಂದು ಪರಿತಪಿಸಿದನು. ಈ ಎಲ್ಲ ಗುರುಹಿರಿಯರು ಹೇಳಿದ್ದನ್ನು ಕೇಳಿದ ಮಾಯಾದೇವಿ ಮತ್ತು ಶುದ್ಧೋದನರು ಸಂತಸದಿಂದ ಹಿರಿಹಿರಿ ಹಿಗ್ಗಿದರು.

ಹೀಗಿರುವಲ್ಲಿ ರಾಜಕುಮಾರ ಸಿದ್ಧಾರ್ಥನಿಗೆ ಏಳು ದಿನಗಳು ತುಂಬುವಷ್ಟರಲ್ಲಿಯೆ ಮಾಯಾದೇವಿಯು ಮರಣಹೊಂದಿದಳು. ಇದರಿಂದ ಶುದ್ಧೋದನ ಮಹಾರಾಜನಿಗೂ ಆತನ ಬಂಧುವರ್ಗಕ್ಕೂ ಕಪಿಲವಸ್ತುವಿನ ಪ್ರಜಾಸಮೂಹಕ್ಕೂ ಅಪರಿಮಿತವಾದ ದುಃಖವುಂಟಾಯಿತು. ಆಗ ಮಾಯಾದೇವಿಯ ತಂಗಿ ಗೌತಮೀದೇವಿಯು ರಾಜಕುಮಾರನ ಪೋಷಣೆಯ ಹೊರೆಯನ್ನು ಹೊತ್ತಳು. ತಾಯಿಯಿಲ್ಲದ ಆ ಕೂಸನ್ನು ತನ್ನ ಮಗುವಿನಂತೆಯೇ ಅಪ್ರತಿಮ ಪ್ರೇಮದಿಂದ ಸಾಕಿ ಸಲಹುತ್ತಿದ್ದಳು. ಶುದ್ಧೋದನನು ಪುತ್ರನ ಬಾಲಲೀಲೆಗಳನ್ನು ನೋಡುತ್ತ ಗತಿಸಿದ ರಾಣಿಯ ಚಿಂತೆಯನ್ನು ಮರೆಯತೊಡಗಿದನು.

ಸಿದ್ಧಾರ್ಥನು ಪ್ರವರ್ಧಮಾನನಾದಂತೆಲ್ಲ ಶುದ್ಧೋದನನಿಗೆ ಚಿಂತೆ ಬಲವಾಯಿತು. ಜೋಯಿಸರು ನುಡಿದಿದ್ದಂತೆ ತನ್ನ ಮಗನು ಎಲ್ಲಿ ಸಂನ್ಯಾಸಿಯಾಗಿ ಹೊರಟುಹೋಗುವನೋ ಎಂದು ಹಗಲಿರುಳೂ ಯೋಚಿಸುತ್ತಿದ್ದನು. ತನ್ನ ಮಗನು ರಾಜವೈಭವವನ್ನು ತ್ಯಜಿಸಿ ಭಿಕ್ಷಾಟನೆ ಮಾಡುತ್ತ ವಿರಾಗಿಯಾಗುವುದು ಆತನಿಗೆ ಇಷ್ಟವಿರಲಿಲ್ಲ. ಅದಕ್ಕೆ ಬದಲಾಗಿ ಚಕ್ರವರ್ತಿಯಾಗಿ ಬೆಳಗಬೇಕೆಂಬುದೇ ಆತನ ಹಿರಿಯಾಸೆಯಾಗಿತ್ತು. ಈ ಆಸೆಯನ್ನು ಕೈಗೂಡಿಸಲು ಬಹಳ ಎಚ್ಚರಿಕೆಯನ್ನು ವಹಿಸಿ ರಾಜಕುಮಾರನಿಗೆ ಈ ಲೋಕದ ಕಷ್ಟಕಾರ್ಪಣ್ಯಗಳ ಸುಳಿವೇ ಗೊತ್ತಾಗದಂತೆ ಸದಾ ಸುಖಸಾಮ್ರಾಜ್ಯದಲ್ಲಿಯೇ ಬೆಳೆಸಬೇಕೆಂದು ಅದಕ್ಕೆ ತಕ್ಕ ಎಲ್ಲ ವ್ಯವಸ್ಥೆಗಳನ್ನೂ ಮಾಡಿದನು.

ಸಿದ್ಧಾರ್ಥನಿಗೆ ಐದು ವರ್ಷಗಳಾಗುತ್ತಲೆ ಶುದ್ಧೋದನನು ವಿಶ್ವಾಮಿತ್ರನೆಂಬ ಗುರುವನ್ನು ನೇಮಿಸಿ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡಿಸಿದನು. ವಿಶ್ವಾಮಿತ್ರನು ರಾಜಕುಮಾರನಿಗೆ ಕುದುರೆ ಸವಾರಿ,

ಧನುರ್ವಿದ್ಯೆ, ಕತ್ತಿವರಸೆ ಮೊದಲಾದ ಕ್ಷತ್ರಿಯೋಚಿತವಾದ ವಿದ್ಯೆಗಳನ್ನೆಲ್ಲ ಹೇಳಿಕೊಟ್ಟನು. ಸಿದ್ಧಾರ್ಥನು ಗುರುಗಳು ಬೋಧಿಸಿದ್ದನ್ನೆಲ್ಲ ಅಸಾಧಾರಣವಾದ ಜ್ಞಾಪಕಶಕ್ತಿಯಿಂದಲೂ, ಬುದ್ಧಿಕೌಶಲ್ಯದಿಂದಲೂ, ಶ್ರದ್ಧೆಯಿಂದಲೂ ಕಲಿತು ಸಕಲವಿದ್ಯಾಪಾರಂಗತನಾದನು. ತನ್ನ ಸಹಪಾಠಿಗಳಿಗಿಂತ ಎಲ್ಲ ವಿದ್ಯೆಗಳಲ್ಲಿಯೂ ಮೇಲೆನಿಸಿಕೊಂಡನು.

ಅರಮನೆಯಲ್ಲಿ ಸದಾ ಸುಖಸಂತೋಷಗಳ ಮಧ್ಯದಲ್ಲಿದ್ದರೂ ಸಿದ್ಧಾರ್ಥನು ವಿಚಾರಮಗ್ನನಾಗಿಯೇ ಇರುತ್ತಿದ್ದನು. ರಾಜವೈಭವವಾಗಲಿ ಭೋಗಭಾಗ್ಯವಾಗಲಿ ಆತನನ್ನು ಆಕರ್ಷಿಸಲಿಲ್ಲ. ಧಾರ್ಮಿಕ ಮತ್ತು ತಾತ್ವಿಕಗ್ರಂಥಗಳ ಅವಲೋಕನದಲ್ಲಿಯೇಹೆಚ್ಚು ಶ್ರದ್ಧೆ ಆಸಕ್ತಿಗಳನ್ನು ತೋರುತ್ತಿದ್ದನು. ಆತನ ಮನಸ್ಸು ರಾಜವೈಭವದ ಅರಮನೆಯ ಎಲ್ಲೆಯನ್ನು ದಾಟಿ ಸುತ್ತಮುತ್ತಲಿನ ಜಗತ್ತನ್ನು ಅರಿಯುವುದಕ್ಕೆ ಹಾತೊರೆಯಿತು. ಕ್ಷಣಿಕವೂ ಅಶಾಶ್ವತವೂ ಆದ ಇಹಲೋಕದ ಭೋಗಭಾಗ್ಯಗಳನ್ನು ತ್ಯಜಿಸಿ ಶಾಶ್ವತ ಸುಖವನ್ನು ಅರಸತೊಡಗಿದನು.

ರಾಜಕುಮಾರ ಸಿದ್ಧಾರ್ಥ ಕರುಣಾಮೂರ್ತಿ. ಪ್ರಾಣಿವರ್ಗದಲ್ಲಿ ಆತನಿಗೆ ಅಪಾರವಾದ ದಯೆಯಿತ್ತು. ಕ್ಷತ್ರಿಯರಿಗೆ ಸಹಜವಾದ ಬೇಟೆಯಲ್ಲಿಯೂ ಆತನಿಗೆ ಅಷ್ಟಾಗಿ ಆಸಕ್ತಿ ಇರಲಿಲ್ಲ. ಮೊದಮೊದಲು ವಿನೋದಕ್ಕಾಗಿ ಬೇಟೆಗೆ ಹೋಗುತ್ತಿದ್ದನು. ಆದರೆ ತಿಳಿವಳಿಕೆ ಬಂದಮೇಲೆ ಪ್ರಾಣಿಹಿಂಸಾಕಾರಕವಾದ ಬೇಟೆಗೆ ಆತನ ಮನಸ್ಸೊಪ್ಪಲಿಲ್ಲ. ಒಮ್ಮೆ ಕಾಡಿನಲ್ಲಿ ಮುದ್ದಾದ ಜಿಂಕೆಯೊಂದನ್ನು ಕಂಡು ಅದಕ್ಕೆ ಗುರಿಯಿಟ್ಟು ಬಾಣವನ್ನು ಬಿಡಲು ಸನ್ನದ್ಧನಾದನು. ಇದರ ಸುಳಿವನ್ನು ತಿಳಿದ ಆ ಜಿಂಕೆ ಪ್ರಾಣಭಯದಿಂದ ಓಡಲಾರಂಭಿಸಿತು. ಭಯಚಕಿತವಾದ ಜಿಂಕೆಯ ದೈನ್ಯಾವಸ್ಥೆಯು ಸಿದ್ಧಾರ್ಥನ ಮನಸ್ಸನ್ನು ಕರಗಿಸಿತು. ಅಂದಿನಿಂದ ಪ್ರಾಣಿಗಳನ್ನು ಕೊಲ್ಲುವುದಿಲ್ಲವೆಂದು ನಿರ್ಧರಿಸಿದನು. ಸಿದ್ಧಾರ್ಥನ ಹತ್ತಿರ 'ಕಂಥಕ' ಎಂಬ ಉತ್ತಮ ಜಾತಿಯ ಕುದುರೆಯೊಂದಿತ್ತು. ಒಂದುದಿನ ಕುದುರೆಯ ಪಂದ್ಯದಲ್ಲಿ ಸಿದ್ಧಾರ್ಥನು ತನ್ನ ಜೊತೆಯವರಿಗಿಂತ ಬಹಳ ಮುಂದೆ ಹೋಗಿದ್ದನು. ಆಗ ತನ್ನ ಕುದುರೆ ವೇಗವಾಗಿ ಓಡುತ್ತಿದ್ದುದರಿಂದ ಆಯಾಸಗೊಂಡು ನಿಟ್ಟುಸಿರನ್ನು ಬಿಡುತ್ತಿತ್ತು. ಅದನ್ನು ಕಂಡ ಸಿದ್ಧಾರ್ಥನು ಕೂಡಲೆ

ಕುದುರೆಯನ್ನು ನಿಲ್ಲಿಸಿ ಅದನ್ನು ಉಪಚರಿಸಿದನು. ಪಂದ್ಯದಲ್ಲಿ ತಾನು ಸೋತರೂ ತನ್ನ ಕುದುರೆ ಆಯಾಸಗೊಂಡು ವೃಥಾ ತೊಂದರೆಗೀಡಾಗಬಾರ ದೆಂಬುದೇ ಆತನ ಅಭಿಮತವಾಗಿದ್ದಿತು. ಆದುದರಿಂದಲೇ ಆತನನ್ನು 'ಮಹಾಕಾರುಣಿಕ' ಎಂದು ಕರೆಯುತ್ತಿದ್ದರು.

ಒಂದು ದಿನ ಸಂಧ್ಯಾಕಾಲದಲ್ಲಿ ಹಿಮಾಲಯದ ತಪ್ಪಲಿನ ಉದ್ಯಾನ ವನದಲ್ಲಿ ಕೆಲವು ರಾಜಹಂಸಗಳು ಹಾರಾಡುತ್ತಿದ್ದುವು. ಪ್ರಶಾಂತವಾದ ರಮ್ಯ ವಾತಾವರಣದ ಆಕಾಶದಲ್ಲಿ ಚಲಿಸುತ್ತಿದ್ದ ಆ ಹಂಸಗಳನ್ನು ಸಿದ್ಧಾರ್ಥನು ಎವೆಯಿಕ್ಕದೆ ನಿಟ್ಟಿಸುತ್ತಿದ್ದನು. ಅಷ್ಟರಲ್ಲಿ ಪಕ್ಕದಲ್ಲೇ ವಿಹರಿಸುತ್ತಿದ್ದ ಸಿದ್ಧಾರ್ಥನ ದಾಯಾದಿ ದೇವದತ್ತನು ಬಾಣವನ್ನು ಬಿಟ್ಟು ಒಂದು ಹಂಸ ವನ್ನು ನೆಲಕ್ಕುರುಳಿಸಿದನು. ಇದನ್ನು ನೋಡಿದ ಸಿದ್ಧಾರ್ಥನಿಗೆ ಮನಸ್ಸು ಕನಿಕರದಿಂದ ಕರಗಿಹೋಯಿತು. ಕೂಡಲೆ ಕೆಳಕ್ಕೆ ಬಿದ್ದಿದ್ದ ಹಕ್ಕಿಯನ್ನು ಎತ್ತಿಕೊಂಡು ಉಪಚರಿಸಿ ಪ್ರಾಣವನ್ನು ರಕ್ಷಿಸಿದನು. ಅಷ್ಟುಹೊತ್ತಿಗೆ ತಾನು ಹೊಡೆದ ಹಕ್ಕಿಯನ್ನು ಹುಡುಕುತ್ತ ಅಲ್ಲಿಗೆ ಬಂದ ದೇವದತ್ತನು "ಸಿದ್ಧಾರ್ಥ! ಅದು ನಾನು ಹೊಡೆದ ಹಕ್ಕಿ. ಆದುದರಿಂದ ಅದನ್ನು ನನಗೆ ಕೊಡು" ಎಂದು ಕೇಳಿದನು. ಅದಕ್ಕೆ ಸಿದ್ಧಾರ್ಥನು "ದೇವದತ್ತ! ಹಕ್ಕಿಯನ್ನು ಹೊಡೆದು ಉರುಳಿಸಿದವನು ನೀನು ನಿಜ. ಆದರೆ ಅದನ್ನು ರಕ್ಷಿಸಿದವನು ನಾನು. ಯಾರು ಬೇಕಾದರೂ ಪ್ರಾಣವನ್ನು ತೆಗೆಯಬಲ್ಲರು. ಆದರೆ ಎಲ್ಲರೂ ರಕ್ಷಿಸ ಲಾರರು. ಆದುದರಿಂದ ಪ್ರಾಣವನ್ನು ಉಳಿಸಿದವನಿಗೆ ಹಕ್ಕಿ ಸೇರಬೇಕಲ್ಲದೆ ಪ್ರಾಣವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸಿದವನಿಗಲ್ಲ" ಎಂದು ಹೇಳಿ ದನು. ಈ ಧರ್ಮೋಪದೇಶ ದೇವದತ್ತನಿಗೆ ಹಿಡಿಸಲಿಲ್ಲ. ಕೊನೆಗೆ ಈ ವ್ಯಾಜ್ಯವು ನ್ಯಾಯಮಂಡಲದ ಮುಂದೆ ಹೋದಾಗ ಎಲ್ಲರೂ ಸಿದ್ಧಾರ್ಥನ ವಾದವನ್ನು ಎತ್ತಿಹಿಡಿದರು. ಇದರಿಂದ ಮುಖಭಂಗಿತನಾಗಿ ಕೋಪಗೊಂಡ ದೇವದತ್ತ ಸಿದ್ಧಾರ್ಥನನ್ನು ದ್ವೇಷಿಸುವುದಕ್ಕೆ ಪ್ರಾರಂಭಿಸಿದನು.

ದೇವದತ್ತನಿಗೆ ಸಿದ್ಧಾರ್ಥನ ಮೇಲಿನ ದ್ವೇಷವು ದಿನೇದಿನೇ ವೃದ್ಧಿ ಯಾಗುತ್ತಿತ್ತು. ಸೌಮ್ಯಪ್ರಕೃತಿಯಿಂದ ಕೂಡಿದ್ದ ಸಿದ್ಧಾರ್ಥನು ಜನಾನು ರಾಗಿಯಾಗುತ್ತಿದ್ದುದನ್ನು ನೋಡಿ ಅವನಿಗೆ ಸಹಿಸಲಾಗಲಿಲ್ಲ. ಬಾಲ್ಯ ದಿಂದಲೂ ಸಿದ್ಧಾರ್ಥನು ವಿಚಾರಪರನಾದುದರಿಂದ ಲೋಕವ್ಯವಹಾರಗಳಲ್ಲಿ

ಅವನು ವಿಮುಖನೆಂದೂ ಸಿಂಹಾಸನವನ್ನೇರುವ ಸದ್ಗುಣಗಳು ಅವನಲ್ಲಿಲ್ಲ ವೆಂದೂ ದೇವದತ್ತನು ಅಪಪ್ರಚಾರ ಮಾಡುತ್ತಿದ್ದನು. ಅದೂ ಅಲ್ಲದೆ ರಾಜರಿಗೆ ಯೋಗ್ಯವಾದ ಯುದ್ಧದಲ್ಲಿ ಅವನಿಗೆ ಆಸಕ್ತಿಯೇ ಇಲ್ಲವೆಂದೂ ರಾಜ್ಯಭಾರವನ್ನು ನಡೆಸುವ ಸಾಮರ್ಥ್ಯವೂ ಇಲ್ಲವೆಂದು ಜನರಲ್ಲಿ ಅಭಿ ಪ್ರಾಯಗಳನ್ನು ಬಿತ್ತುತ್ತಿದ್ದನು. ಈ ಸಲ್ಲದ ಆರೋಪಗಳನ್ನು ಕೇಳಿದ ಶುದ್ಧೋದನನಿಗೂ ರಾಜಪರಿವಾರದವರಿಗೂ ತುಂಬ ವ್ಯಾಕುಲವುಂಟಾ ಯಿತು. ಇದನ್ನರಿತ ಸಿದ್ಧಾರ್ಥನು ತಂದೆಯ ಸಮಾಧಾನಾರ್ಥವಾಗಿ ದೇವದತ್ತನೊಡನೆ ಶಸ್ತ್ರಾಸ್ತ್ರ ಪರೀಕ್ಷೆಗೆ ಒಡಂಬಟ್ಟನು.

ರಾಜಕುಮಾರರ ಶಸ್ತ್ರಾಸ್ತ್ರ ಪರೀಕ್ಷೆಗೆ ರಂಗಭೂಮಿ ಸಿದ್ಧವಾಯಿತು. ರಾಜಪರಿವಾರದವರೂ ಗುರುಗಳೂ ಪಂಡಿತರೂ ಮಿಕ್ಕ ಪೌರರೂ ಬಂದು ಉಚಿತಾಸನಗಳಲ್ಲಿ ಮಂಡಿಸಿದರು. ಮೊದಲು ದೇವದತ್ತನೇ ಅಖಾಡಕ್ಕೆ ಚಕ್ಕನೆ ಹಾರಿಬಂದು ಕುದುರೆಸವಾರಿ, ಬಿಲ್ಲುವಿದ್ಯೆ, ಕತ್ತಿವರಸೆ ಮುಂತಾದ ಕ್ಷತ್ರಿಯೋಚಿತವಾದ ವಿದ್ಯೆಗಳಲ್ಲಿ ತನ್ನ ಸಾಮರ್ಥ್ಯವನ್ನು ತೋರ್ಪಡಿಸಿದನು. ಅಲ್ಲಿ ನೆರೆದಿದ್ದ ಜನರೆಲ್ಲಾ ಹರ್ಷೋದ್ಗಾರದಿಂದ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಶಸ್ತ್ರಾಸ್ತ್ರ ವಿದ್ಯೆಯಲ್ಲಿ ಪರಿಣತನಲ್ಲದ ಸಿದ್ಧಾರ್ಥನು ದೇವ ದತ್ತನ ಮಟ್ಟವನ್ನು ಮುಟ್ಟಲಾರನೆಂದೂ ಅವರು ಭಾವಿಸಿದ್ದರು. ಆಗ ಏಕಾಗ್ರಚಿತ್ತನೂ ಶಾಂತಮನಸ್ಕನೂ ಆದ ಸಿದ್ಧಾರ್ಥನು ಮಧ್ಯಾಂಗಣಕ್ಕೆ ಎದ್ದು ಬಂದನು. ಎಲ್ಲರೂ ಸಿದ್ಧಾರ್ಥನ ಕಡೆಯೇ ಲಕ್ಷ್ಯವಿಟ್ಟು ನೋಡುತ್ತಿ ದ್ದರು. ಸಿದ್ಧಾರ್ಥನು ದೇವದತ್ತನು ಪ್ರದರ್ಶಿಸಿದ ಕುದುರೆಸವಾರಿ, ಬಿಲ್ಲುವಿದ್ಯೆ, ಕತ್ತಿವರಸೆ ಮುಂತಾದುವನ್ನು ಒಂದಾದಮೇಲೊಂದರಂತೆ ಲೀಲಾಜಾಲವಾಗಿ ಪ್ರದರ್ಶಿಸಿ ದೇವದತ್ತನನ್ನು ಮೀರಿಸಿದನು. ಇದನ್ನು ನೋಡಿದ ಪ್ರೇಕ್ಷಕರು ಬೆಲ್ಲುಂಬೆರಗಾದರು. ಸಿದ್ಧಾರ್ಥನ ಅಪ್ರತಿಮ ಧೈರ್ಯ ಸಾಮರ್ಥ್ಯಗಳು ಎಲ್ಲರಿಗೂ ಮನದಟ್ಟಾದುವು. ಒಕ್ಕೊರಲಿನಿಂದ ಎಲ್ಲರೂ ಜಯಕಾರ ಮಾಡಿ ದರು. ದೇವದತ್ತನ ಸೊಕ್ಕು ಅಡಗಿಹೋಯಿತು. ಶುದ್ಧೋದನನಿಗೆ ಅಪರಿ ಮಿತವಾದ ಆನಂದವುಂಟಾಯಿತು. ಅಪಮಾನಗೊಂಡ ದೇವದತ್ತನು ಅಂದಿನಿಂದ ಸಿದ್ಧಾರ್ಥನನ್ನು ಬಹಳವಾಗಿ ದ್ವೇಷಿಸತೊಡಗಿದನು.

A. B. Madhavi Kumari.

ವಿವಾಹ-ಪುರಪ್ರವೇಶ

ರಾಜಕುಮಾರ ಸಿದ್ಧಾರ್ಥನಿಗೆ ಬಾಲ್ಯವು ಕಳೆದು ಯೌವನವು ಪ್ರಾಪ್ತವಾಯಿತು. ಹದಿನೆಂಟು ವರ್ಷದ ಹರೆಯದವನಾದರೂ ಪ್ರಾಪಂಚಿಕ ಭೋಗ ಲಾಲಸೆಗಳ ಕಡೆ ಅವನ ಮನಸ್ಸು ಹರಿಯದುದನ್ನು ಕಂಡು ಶುದ್ಧೋದನನಿಗೆ ಚಿಂತೆಗಿಟ್ಟುಕೊಂಡಿತು. ತನ್ನ ಮಗನು ಜೋಯಿಸರು ಹೇಳಿದಂತೆ ಎಲ್ಲಿ ಸಂನ್ಯಾಸಿಯಾಗಿಬಿಡುವನೋ ಎಂದು ಕಳವಳಗೊಂಡನು. ಅದಕ್ಕಾಗಿ ಒಂದು ಉಪಾಯವನ್ನು ಹುಡುಕಿದನು. ರಾಜಕುಮಾರನಿಗೆ ವಿವಾಹವನ್ನು ಮಾಡಿಬಿಟ್ಟರೆ ಆತನ ಮನಸ್ಸು ಪ್ರಾಪಂಚಿಕ ಸುಖದತ್ತ ತಿರುಗುವುದೆಂದು ಭಾವಿಸಿದನು. ಈ ಅಭಿಪ್ರಾಯ ಮನಸ್ಸಿನಲ್ಲಿ ಮೂಡಿದೊಡನೆಯೇ ಸಿದ್ಧಾರ್ಥನ ವಿವಾಹಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿಸಿದನು. ರೂಪು ಗುಣ ಶೀಲಗಳಲ್ಲಿ ಅಪ್ರತಿಮಳೆನಿಸಿದ 'ಯಶೋಧರೆ' ಎಂಬ ಕನ್ಯಾರತ್ನವನ್ನು ತಂದು ಶುಭಮುಹೂರ್ತದಲ್ಲಿ ವಿಜೃಂಭಣೆಯಿಂದ ಮದುವೆಯನ್ನು ಮಾಡಿಸಿದನು. ವಿರಾಗಿಯಾಗುತ್ತಿದ್ದ ಸಿದ್ಧಾರ್ಥನು ಕೂಡ ಯಶೋಧರೆಯ ನಯ ವಿನಯ ಸೌಶೀಲ್ಯಗಳನ್ನು ಕಂಡು ಬಹಳವಾಗಿ ಮೆಚ್ಚಿಕೊಂಡನು.

ಅರಮನೆಯಲ್ಲಿ ರಾಜದಂಪತಿಗಳಿಗೆ ಎಳ್ಳಷ್ಟೂ ಕೊರತೆಯಿರಲಿಲ್ಲ. ಅವರು ಕಾಲವನ್ನೆಲ್ಲ ಸುಖಸಂತೋಷಗಳಲ್ಲೇ ಕಳೆಯುತ್ತಿದ್ದರು. ಶುದ್ಧೋದನನು ತನ್ನ ಮಗನಿಗೆ ಇಹಲೋಕದ ಕಷ್ಟಕಾರ್ಪಣ್ಯಗಳಾವುವೂ ಕಾಣದಂತೆ ಮಾಡಿದ್ದನು. ತಮ್ಮಂತೆಯೇ ಎಲ್ಲರ ಜೀವನವೂ ಸುಖಕರವಾಗಿರುತ್ತದೆ ಎಂದು ಸಿದ್ಧಾರ್ಥನು ಭಾವಿಸಿಕೊಳ್ಳಲಿ; ಆತನಿಗೆ ಬಾಹ್ಯ ಪ್ರಪಂಚದ ಅರಿವಾಗುವುದು ಬೇಡ ಎಂದು ಯೋಚಿಸಿ ಮೂರು ಋತುಗಳಿಗೂ ಹೊಂದಿಕೊಳ್ಳುವ ಮೂರು ಭವ್ಯವಾದ ಅರಮನೆಗಳನ್ನು ನಿರ್ಮಿಸಿದನು. ಸಿದ್ಧಾರ್ಥನು ತನ್ನ ಪತ್ನಿಯೊಡನೆ ಬೇಸಿಗೆಕಾಲ ಚಳಿಗಾಲ ಮತ್ತು ಮಳೆಗಾಲಗಳಿಗನುಸಾರವಾಗಿ ಒಂದೊಂದು ಅರಮನೆಯಲ್ಲೂ ವಾಸಮಾಡುತ್ತಿದ್ದನು. ಹೀಗೆ ಹತ್ತು ವರ್ಷಗಳು ಕಳೆದುವು.

ಸಂಸಾರಿಯಾದ ಮೇಲೂ ಸಿದ್ಧಾರ್ಥನ ಮನಸ್ಸು ಪೂರ್ತಿಯಾಗಿ ಇಹದ ಭೋಗಭಾಗ್ಯಗಳ ಕಡೆ ಒಲಿಯಲಿಲ್ಲ. ಇವುಗಳಿಂದ ಆತನ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಬಹುಶಃ ಈ ತೆರದ ಜೀವನ ಆತನಿಗೆ ಕೃತಕವಾಗಿ ಕಂಡಿರ

ಬೇಕು. ಚಿನ್ನದ ಪಂಜರದಲ್ಲಿ ಬೆಳೆದ ಅರಗಿಳಿಯಂತೆ ಸ್ವಲ್ಪ ಕಾಲವನ್ನು ಕಳೆದರೂ ಅತೃಪ್ತಿಯಿಂದ ಕೂಡಿದ ಆತನ ಮನಸ್ಸಿಗೆ ಸಮಾಧಾನವಿರಲಿಲ್ಲ. ಲೋಕದಲ್ಲಿ ಎಲ್ಲರೂ ತನ್ನಂತೆಯೇ ಇರಲಾರರು; ದೀನದಲಿತರೂ ಇರಬಹುದು ಎಂಬ ಯೋಚನೆ ಮೂಡಿತು. ಹಿಂದೆ ಪ್ರಾಣಿವರ್ಗದ ಕಷ್ಟವನ್ನು ತಿಳಿದಿದ್ದ ಸಿದ್ಧಾರ್ಥನಿಗೆ ಮಾನವವರ್ಗದ ಕಷ್ಟವೇನಿರಬಹುದೆಂಬುದನ್ನು ತಿಳಿಯುವ ಮನಸ್ಸಾಯಿತು. ಅದಕ್ಕಾಗಿ ಪುರಪ್ರವೇಶ ಮಾಡಲು ನಿರ್ಧರಿಸಿದನು.

ಒಂದು ದಿನ ಸಿದ್ಧಾರ್ಥನು ತನ್ನ ನೆಚ್ಚಿನ ಸೇವಕನಾದ ಚನ್ನನೊಡನೆ ಸುತ್ತುಮುತ್ತಲಿನ ಪ್ರಪಂಚವನ್ನು ನೋಡುವ ಅಭಿಲಾಷೆಯಿಂದ ಅರಮನೆಯನ್ನು ಬಿಟ್ಟು ಹೊರಡಲು ಅನುವಾದನು. ಈ ಸುಳಿವನ್ನು ಮೊದಲೇ ಚನ್ನನಿಂದ ತಿಳಿದಿದ್ದ ಮಹಾರಾಜನು ನಗರದ ಎಲ್ಲೆಡೆಗಳಲ್ಲೂ ಹರ್ಷವೇ ತುಂಬಿ ತುಳುಕುವಂತೆ ವ್ಯವಸ್ಥೆಯನ್ನು ಮಾಡಿಸಿದ್ದನು. ಜೀವನದ ಸಾವು ನೋವುಗಳಾವುವೂ ಅಂದು ಕಣ್ಣಿಗೆ ಕಾಣಿಸದಂತೆ ಮಾಡಲು ತಕ್ಕ ಎಚ್ಚರಿಕೆಯನ್ನೂ ಕೊಟ್ಟಿದ್ದನು.

ಮಹಾರಾಜನ ಆದೇಶದಂತೆ ರಾಜಕುಮಾರನ ಆಗಮನವನ್ನರಿತ ಪುರನಿವಾಸಿಗಳು ಪಟ್ಟಣವನ್ನು ಸಿಂಗರಿಸಿದರು. ಬೀದಿಗಳನ್ನು ತಳಿರು ತೋರಣಗಳಿಂದ ಅಲಂಕರಿಸಿದರು. ಮನೆಗಳನ್ನು ಗುಡಿಸಿ ಸಾರಿಸಿ ರಂಗವಲ್ಲಿಗಳನ್ನಿಕ್ಕಿ ಚೊಕ್ಕಟಮಾಡಿದರು. ಯುವರಾಜನ ಬರವನ್ನು ಕುತೂಹಲದಿಂದ ನಿರೀಕ್ಷಿಸುತ್ತಿದ್ದರು.

ಸಿದ್ಧಾರ್ಥನು ಸಾರಥಿಯಾದ ಚನ್ನನೊಡನೆ ಬಿಳಿಯ ಕುದುರೆಗಳನ್ನು ಕಟ್ಟಿದ ರಥದಲ್ಲಿ ಕುಳಿತು ಹೊರಟನು. ಯುವರಾಜನನ್ನು ಕಂಡಕೂಡಲೆ ಇಕ್ಕೆಲಗಳಲ್ಲೂ ನೆರೆದಿದ್ದ ಪುರನಿವಾಸಿಗಳು ಆರತಿ ಅಕ್ಷತೆಗಳಿಂದ ಸ್ವಾಗತಿಸಿ, ಸಂತೋಷದಿಂದ 'ಯುವರಾಜನಿಗೆ ಜಯವಾಗಲಿ' ಎಂದು ಜಯಕಾರವನ್ನು ಮಾಡಿದರು. ಎಲ್ಲೆಡೆಗಳಲ್ಲೂ ಕಿಕ್ಕಿರಿದು ನಿಂತಿದ್ದ ಪೌರರ ಉತ್ಸಾಹವನ್ನು ಕಂಡು ಸಿದ್ಧಾರ್ಥನಿಗೆ ಪರಮಾನಂದವಾಯಿತು.

ರಥವು ರಾಜಬೀದಿಗಳಲ್ಲಿ ಹಾದುಹೋಗುತ್ತಿತ್ತು. ಸಿದ್ಧಾರ್ಥನು ನಾಲ್ಕೂಕಡೆ ನೋಡಿಕೊಂಡು ಹೋಗುತ್ತಿರುವಾಗ ಒಂದೆಡೆ ಅತಿವೃದ್ಧನಾದ

ಬಡವನೊಬ್ಬನು ಆತನ ಕಣ್ಣಿಗೆ ಕಾಣಿಸಿದನು. ಕೃಶಾಂಗನಾಗಿದ್ದ ಆ ಮುದುಕನ ಬೆನ್ನು ಬಾಗಿಹೋಗಿತ್ತು. ವಯಸ್ಸಿನಿಂದಲೂ ಬಡತನದಿಂದಲೂ ಅವನ ಶರೀರ ವಿಕೃತವಾಗಿತ್ತು. ಅವನು ಜನರ ನಡುವೆ ಬಂದು ದೀನಸ್ವರದಿಂದ "ಧರ್ಮ ಮಾಡಿ ತಂದೆ! ನಾನು ಹಸಿವಿನಿಂದ ಸಾಯುತ್ತಿದ್ದೇನೆ; ನಡೆಯಲಾರೆ; ದಾರಿಯನ್ನು ಬಿಡಿ" ಎಂದು ಕೂಗಿಕೊಂಡನು. ಅಲ್ಲಿ ನೆರೆದಿದ್ದ ಜನ "ಮೂರ್ಖ! ದೂರ ಸರಿ" ಎಂದು ಗದರಿಸಿ ಅವನು ಅಮಂಗಳಕಾರಕನೆಂದು ರಾಜಕುಮಾರನಿಂದ ದೂರ ಕಳುಹಿಸಿದರು. ಇದೆಲ್ಲವನ್ನೂ ಸಿದ್ಧಾರ್ಥನು ಎವೆಯಿಕ್ಕದೆ ನೋಡುತ್ತಿದ್ದನು. ಆತನು ಹಿಂದೆಂದೂ ಇಂತಹ ದೃಶ್ಯವನ್ನು ಕಂಡಿರಲಿಲ್ಲ. ಆಗ ತನ್ನ ಸಾರಥಿಯನ್ನು ಕುರಿತು "ಚನ್ನಾ! ಇದೇನು ಮನುಷ್ಯರು ಹೀಗಿರುವುದುಂಟೆ? ಅವನ ಚರ್ಮ ಸುಕ್ಕುಗಟ್ಟಿ ದೇಹ ಕುಗ್ಗಿಹೋಗಿದೆಯಲ್ಲ. ಅದೇನು ಸಾಯುತ್ತೇನೆ ಎಂಬ ನರಳಾಟ. ಆಹಾರವಿಲ್ಲದೆ ಹೀಗಾಗಿದೆಯೇ?" ಎಂದು ಪ್ರಶ್ನಿಸಿದನು. ಅದಕ್ಕೆ ಚನ್ನನು "ದೇವಾ! ಅವನೊಬ್ಬ ಭಿಕ್ಷುಕ. ಮುದಿತನ ಮತ್ತು ಬಡತನಗಳಿಂದ ಬಳಲಿ ಬೆಂಡಾಗಿದ್ದಾನೆ. ಅವನು ಹುಟ್ಟಿ ಇಂದಿಗೆ ಎಪ್ಪತ್ತು ವರ್ಷಗಳಾಗಿವೆ. ಯುವಕನಾಗಿದ್ದಾಗ ಅವನೂ ನಮ್ಮಂತೆಯೇ ದೃಢಕಾಯನಾಗಿದ್ದನು. ಈಗ ಮುಪ್ಪು ಕವಿದು ಅವನ ಬಾಳು ಬರಡಾಗಿದೆ. ಎಲ್ಲರೂ ಒಂದಲ್ಲ ಒಂದು ದಿನ ಮುಪ್ಪಿನಿಂದ ಬಳಲಲೇ ಬೇಕು. ಮಾನವರ ಜೀವನವೇ ಹೀಗೆ. ಇವಕ್ಕೆಲ್ಲ ರಾಜಕುಮಾರನು ಲಕ್ಷ್ಯವೀಯಬಾರದು" ಎಂದು ಹೇಳಿ ಕೂಡಲೆ ರಥವನ್ನು ಮುಂದಕ್ಕೆ ನಡೆಸಿದನು. ಆದರೂ ಮರೆಯಲಾಗದ ಆ ದೃಶ್ಯ ಸಿದ್ಧಾರ್ಥನ ಮನಸ್ಸಿನಲ್ಲಿಯೇ ನಾಟಿಕೊಂಡಿತು.

ಮತ್ತೊಂದು ದಿನ ಸಿದ್ಧಾರ್ಥನು ಎರಡನೆಯ ಬಾರಿಗೆ ನಗರವನ್ನು ನೋಡಲು ಹೊರಟನು. ಬೀದಿಬೀದಿಗಳನ್ನು ಹಾದು ಬರುತ್ತಿರುವಾಗ ಒಂದೆಡೆ ನರಳುತ್ತಿದ್ದ ರೋಗಿಯೊಬ್ಬನನ್ನು ಕಂಡನು. ರೋಗದಿಂದ ಬಸವಳಿದು ಬೆಂಡಾಗಿದ್ದ ಅವನ ಆಕಾರ ವಿಕಾರವಾಗಿತ್ತು. ಆಹಾರವು ಸೇರದೆ ನಿರ್ಬಲನಾಗಿ ಬೇನೆಯಿಂದ ನರಳುತ್ತಿದ್ದ ಆ ಬಡಪ್ರಾಣಿಯನ್ನು ನೋಡಿ ಸಿದ್ಧಾರ್ಥನ ಮನಸ್ಸು ಕರಗಿ ನೀರಾಯಿತು. ಸಾರಥಿಯನ್ನು ಕುರಿತು "ಚನ್ನ! ಇವನು ಯಾರು? ಇದೇಕೆ ಹೀಗೆ ನರಳುತ್ತಿರುವನು" ಎಂದು

ಪ್ರಶ್ನಿಸಿದನು. ಅದಕ್ಕೆ ಚನ್ನನು " ರಾಜಕುಮಾರ! ಇವನೊಬ್ಬ ರೋಗಿ. ರೋಗದ ಬಲದಿಂದ ಕಂಗೆಟ್ಟು ಹೀಗಾಗಿದ್ದಾನೆ. ರೋಗವು ಮನುಷ್ಯರನ್ನು ಅನೇಕ ರೀತಿಯಲ್ಲಿ ಕಾಡುತ್ತದೆ. ಅದು ಯಾರಿಗಾದರೂ ಯಾವಾಗ ಲಾದರೂ ಬರಬಹುದು "ಎಂದು ಹೇಳಿದನು. ಅದನ್ನು ಕೇಳಿದ ಸಿದ್ಧಾರ್ಥನು ಚಿಂತಾಕ್ರಾಂತನಾಗಿ ಅರಮನೆಯನ್ನು ಸೇರಿದನು.

ಸಿದ್ಧಾರ್ಥನು ಮೂರನೆಯ ಸಲ ನಗರವನ್ನು ನೋಡಲು ಹೊರಟನು. ಆಗ ಕೆಲವರು ಒಂದು ಹೆಣವನ್ನು ಹೊತ್ತುಕೊಂಡು ಎದುರಿಗೆ ಬರುತ್ತಿದ್ದರು. ಹೆಣದ ಮುಂದೆ ಧೂಮಾಗ್ನಿಯೂ ಹಿಂದೆ ದುಃಖದಿಂದ ಗೋಳಾಡುತ್ತಿದ್ದ ಬಂಧುವರ್ಗವೂ ಇತ್ತು. ಸಿದ್ಧಾರ್ಥನು ಅದನ್ನು ನೋಡಿ ಬೆಚ್ಚಿ "ಚನ್ನ, ಇದೇನು ಮಲಗಿರುವವನನ್ನು ಹೊತ್ತುಕೊಂಡು ಹೋಗುತ್ತಿರುವರಲ್ಲ! ಅವನ ಹಿಂದೆ ಬರುತ್ತಿರುವವರೇಕೆ ಹೀಗೆ ಗೋಳಾಡುತ್ತಿದ್ದಾರೆ" ಎಂದು ಕೇಳಿದನು. ಅದಕ್ಕೆ ಅವನು "ಕುಮಾರ! ಅದೂ ಮನುಷ್ಯದೇಹವೇ. ಆದರೆ ಅದರಲ್ಲಿ ಈಗ ಜೀವವಿಲ್ಲ, ಕಾವಿಲ್ಲ, ದೃಷ್ಟಿಯಿಲ್ಲ, ಚಲನವೂ ಇಲ್ಲ. ಬದುಕಿದ್ದಾಗ ರುಚಿ ನೋಡುತ್ತಿದ್ದಂತೆ ಈಗ ರುಚಿನೋಡಲಾರನು. ಪ್ರಿಯಜನರ ರೋದನವು ಅವನಿಗೆ ಈಗ ಕೇಳಿಸುವುದಿಲ್ಲ. ಈ ಮೃತದೇಹವನ್ನುತೆಗೆದುಕೊಂಡುಹೋಗಿ ಹೂಳುವರು ಅಥವ ಸುಡುವರು. ಬಲ್ಲಿದರಾಗಲಿ ಬಡವರಾಗಲಿ ಹಿರಿಯು ರಾಗಲಿ ಕಿರಿಯರಾಗಲಿ, ಅರಸನಾಗಲಿ ಆಳಾಗಲಿ ಯಾರಿಗೂ ಈ ಸಾವು ತಪ್ಪಿದ್ದಲ್ಲ. ಹೀಗೆಯೇ ಪ್ರಪಂಚದಲ್ಲಿ ಹುಟ್ಟಿದವರೆಲ್ಲ ಒಂದಲ್ಲ ಒಂದುದಿನ ಸಾಯಲೇಬೇಕು. ಭವಿಷ್ಯ ಯಾರಿಗೂ ತಿಳಿಯದು " ಎಂದು ಹೇಳಿದನು.

ಜೀವನದ ದುಃಖಪರಂಪರೆಯನ್ನರಿತ ಸಿದ್ಧಾರ್ಥನ ಮನಸ್ಸಿಗೆ ಸಮಾಧಾನ ತೋರಲಿಲ್ಲ. ಮುಪ್ಪಿನಿಂದ ಯೌವನವು ಕೆಡುತ್ತದೆ; ರೋಗದಿಂದ ದೇಹವು ಕೃಶವಾಗುತ್ತದೆ; ಸಾವಿನಿಂದ ಬಾಳು ಕೊನೆಯಾಗುತ್ತದೆ. ಈ ಪರಿಯ ಮುಪ್ಪು ರೋಗ ಸಾವುಗಳನ್ನು ತಡೆಯುವುದಕ್ಕೆ ಮನುಷ್ಯನಿಂದ ಸಾಧ್ಯವಿಲ್ಲವೆ? ಜೀವನದ ಸಂಕಷ್ಟಗಳಿಗೆ ಕಾರಣವೇನು? ಅಜ್ಞಾನದಿಂದ ನರಳುತ್ತಿರುವ ಮಾನವಕೋಟಿಯ ಪರಿಹಾರ ಮಾರ್ಗವೇನು? ಎಂದು ಹಗಲಿರುಳೂ ಚಿಂತಿಸತೊಡಗಿದನು. ಈ ಚಿಂತೆಯಿಂದ ರಾಜಕುಮಾರನಿಗೆ ರಾಜಭೋಗಗಳಾವುವೂ ಬೇಕಾಗಲಿಲ್ಲ.

ಸಿದ್ಧಾರ್ಥನು ನಗರಸಂಚಾರವನ್ನು ಮುಗಿಸಿಕೊಂಡು ಹಿಂತಿರುಗುತ್ತಿದ್ದಾಗ ಒಂದು ಬೀದಿಯ ಸಮೀಪದ ಪ್ರಶಾಂತವಾದ ಸ್ಥಳದಲ್ಲಿ ಒಬ್ಬ ಸಂನ್ಯಾಸಿಯು ಒಂದು ವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿ ಕುಳಿತಿದ್ದನು. ಕಾವಿಬಟ್ಟೆಯನ್ನು ಧರಿಸಿ ಕಣ್ಣುಗಳನ್ನು ಮುಚ್ಚಿಕೊಂಡು ಕುಳಿತಿದ್ದ ಆ ಸಂನ್ಯಾಸಿಯ ಗಂಭೀರಾಕೃತಿಯನ್ನು ನೋಡಿ ಸಿದ್ಧಾರ್ಥನು ವಿಸ್ಮಯಗೊಂಡನು. ವಿರಾಗಿಯೂ ಪ್ರಪಂಚದ ಆಗುಹೋಗುಗಳಿಂದ ದೂರನೂ ಆದ ಆತನ ಮೂರ್ತಿಯನ್ನು ಕಂಡು ರಾಜಕುಮಾರನಿಗೆ ಒಂದು ಹೊಸ ಅನುಭವವುಂಟಾಯಿತು. ಜ್ಞಾನಸಾಧನೆಗೆ ಒಂದು ದಾರಿ ತೋರಿದಂತಾಯಿತು. ಅಷ್ಟರಲ್ಲಿ ರಥವು ಅರಮನೆಯನ್ನು ಸೇರಿತು.

ಆಲೋಚನಾಕ್ರಾಂತನಾಗಿ ಅರಮನೆಯನ್ನು ಸೇರಿದ ಸಿದ್ಧಾರ್ಥನಲ್ಲಿ ವೈರಾಗ್ಯವು ಮೂಡುತ್ತಿತ್ತು. ಆತನ ಈ ಅಲೌಕಿಕ ನಡವಳಿಕೆಯನ್ನು ಕಂಡ ಯಶೋಧರೆಗೆ ತುಂಬ ಭಯವಾಯಿತು. ತನ್ನ ಪತಿಯ ಉದಾಸೀನ ಪ್ರವೃತ್ತಿಗೆ ಕಾರಣವನ್ನು ತಿಳಿಯದೆ ಪರಿತಪಿಸಿದಳು. ತನ್ನಿಂದೇನಾದರೂ ಅಪಚಾರವಾಗಿರಬಹುದೆ ಎಂದು ಸಂದೇಹಿಸಿದಳು. ಆದರೂ ಸಮಾಧಾನವಾಗದೆ ನಮ್ರತೆಯಿಂದ ತನ್ನ ಪತಿಯನ್ನೇ ಕೇಳಿಕೊಂಡಳು. ಅದಕ್ಕೆ ಸಿದ್ಧಾರ್ಥನು "ಯಶೋಧರೆ! ನೀನು ನನ್ನ ಪ್ರಿಯಪತ್ನಿ. ನಿನ್ನಿಂದ ನನಗೆ ಯಾವ ಅಪಚಾರವೂ ಆಗಿಲ್ಲ. ಮಾನವರನ್ನು ಮುಪ್ಪು, ರೋಗ, ಸಾವುಗಳಿಂದ ಪಾರುಮಾಡುವ ಯೋಚನೆಯಲ್ಲಿ ನನ್ನ ಮನಸ್ಸು ಸಿಕ್ಕಿಕೊಂಡಿದೆ. ಅದಕ್ಕಾಗಿ ನೀನು ಚಿಂತಿಸಬೇಡ. ಮರಣದ ಹಿಡಿತ ಸಡಿಲವಾಗಬಹುದು; ಅಜ್ಞಾನದ ಅಂಧಕಾರ ಜ್ಞಾನದ ಬೆಳಕಿನಿಂದ ನಾಶವಾಗಬಹುದು" ಎಂದು ಹೇಳಿ ಆಕೆಯನ್ನು ಸಮಾಧಾನಪಡಿಸಿದನು.

ರಾಹುಲನ ಜನನ-ಸಿದ್ಧಾರ್ಥನ ಗೃಹಪರಿತ್ಯಾಗ

ಮಾನವರ ದುಃಖಪರಿಹಾರಕ್ಕಾಗಿ ಸಿದ್ಧಾರ್ಥನು ಕಂಡಕಂಡ ಸಂನ್ಯಾಸಿಗಳಲ್ಲೆಲ್ಲ ಚರ್ಚೆ ಮಾಡಿದನು. ಆದರೆ ಈ ಚರ್ಚೆಯಿಂದ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಅಶಾಶ್ವತವೂ ದುಃಖಮಯವೂ ಆದ ಜೀವನದಿಂದ ಪ್ರಾಣಿಕೋಟಿಯನ್ನು ಉದ್ಧಾರಮಾಡುವುದಕ್ಕಾಗಿ ತನ್ನ

ಭೋಗಭಾಗ್ಯಗಳನ್ನೆಲ್ಲ ತೊರೆದು ಕಾಡಿಗೆ ಹೋಗಿ ಮುಕ್ತಿಯನ್ನರಸ ಬೇಕೆಂದು ನಿರ್ಧರಿಸಿದನು.

ಸಿದ್ಧಾರ್ಥನು ಈ ರೀತಿ ಯೋಚಿಸುತ್ತಿರುವಾಗ ಅತ್ತ ಯಶೋಧರೆಯು ಸರ್ವಲಕ್ಷಣಸಂಪನ್ನನಾದ ಪುತ್ರನನ್ನು ಹಡೆದಳು. ಯುವರಾಜನಿಗೆ ಪುತ್ರೋತ್ಸವವಾದುದನ್ನು ಕೇಳಿದ ಬಂಧುವರ್ಗಕ್ಕೂ ಪ್ರಜಾಸಮೂಹಕ್ಕೂ ಹಿಡಿಸಲಾರದಷ್ಟು ಸಂತೋಷವಾಯಿತು. ಆದರೆ ಸಿದ್ಧಾರ್ಥನಿಗೆ ಈ ಸುದ್ದಿ ತಿಳಿದಾಗ "ನನಗೆ ಇದೊಂದು ತೊಡಕಾಯಿತು. ಇನ್ನು ತಡಮಾಡಿದರೆ ಪ್ರಯೋಜನವಿಲ್ಲ. ದಿನಗಳುರುಳಿದಂತೆ ಮಹತ್ಕಾರ್ಯಗಳಿಗೆ ಅಡ್ಡಿ ಆತಂಕಗಳೇ ಹೆಚ್ಚಾಗುತ್ತವೆ. ಸಂಸಾರದ ಬಂಧನ ಬಲವಾಗುತ್ತದೆ. ಆದಷ್ಟು ಬೇಗನೆ ಇವನ್ನು ದಾಟಬೇಕು" ಎಂದು ಮನಸ್ಸಿನಲ್ಲಿ ನಿಶ್ಚಯಿಸಿದನು.

ಕಪಿಲವಸ್ತುವಿನಲ್ಲಿ ಅಂದು ವಿಶೇಷ ಸಂಭ್ರಮ. ಶುದ್ಧೋದನರಾಜನಿಗೆ ಮೊಮ್ಮಗನು ಹುಟ್ಟಿದನೆಂದು ಎಲ್ಲರೂ ಉತ್ಸಾಹಿತರಾದರು. ನಗರವನ್ನು ಪರಿಪರಿಯಾಗಿ ಅಲಂಕರಿಸಿ ಪುತ್ರೋತ್ಸವ ಸಮಾರಂಭವನ್ನು ವಿಜೃಂಭಣೆಯಿಂದ ಆಚರಿಸಿದರು. ಇನ್ನು ಅರಮನೆಯಲ್ಲಿನ ಸಂಭ್ರಮವನ್ನಂತೂ ಹೇಳತೀರದು. ಪ್ರಕಾಶಮಾನವಾದ ದೀಪಗಳಿಂದ ಅದನ್ನು ಅಲಂಕರಿಸಿ ಸಂಗೀತ ನಾಟ್ಯಗಳನ್ನು ಏರ್ಪಡಿಸಿದ್ದರು. ಶುದ್ಧೋದನನು ಮೊಮ್ಮಗನನ್ನು ನೋಡಿ ಹಿಗ್ಗಿಹೋದನು.

ಬೆಳಗಿನಿಂದ ಸಂಭ್ರಮದಲ್ಲಿಯೇ ಮುಳುಗಿದ್ದ ಅರಮನೆಯಲ್ಲಿ ಜನ ರಾತ್ರಿಯಾಗುತ್ತಲೇ ಬಳಲಿಕೆಯಿಂದ ನಿದ್ರಾಪರವಶರಾದರು. ಅಂದು ಚೈತ್ರ ಮಾಸದ ಪೂರ್ಣಿಮಾರಾತ್ರಿ ಬೆಳುದಿಂಗಳಿಂದ ಕೂಡಿ ರಮ್ಯವಾಗಿತ್ತು. ತಂಗಾಳಿಗೆ ಚಲಿಸುವ ಗಿಡಮರಗಳ ಎಲೆಗಳ ಶಬ್ದ ಹೊರತು ಮತ್ತಾವ ಶಬ್ದವೂ ಇರಲಿಲ್ಲ. ಕಪಿಲವಸ್ತುವಿನ ಜನರು ನಿದ್ರೆಯಿಂದ ಮೈಮರೆತಿದ್ದರು. ಚಿಂತಾಕ್ರಾಂತನಾಗಿದ್ದ ಸಿದ್ಧಾರ್ಥನಿಗೆ ಅಂದು ಮಧ್ಯರಾತ್ರಿಯಲ್ಲಿ ಎಚ್ಚರವಾಯಿತು. ಲೋಕಕಲ್ಯಾಣಾರ್ಥವಾಗಿ ಸರ್ವಸ್ವವನ್ನೂ ಪರಿತ್ಯಜಿಸಿ ಹೋಗುವುದಕ್ಕೆ ಮುಂಚೆ ತನ್ನ ಮಡದಿ ಮಕ್ಕಳನ್ನು ಕೊನೆಯ ಸಲ ನೋಡುವುದಕ್ಕಾಗಿ ಅಂತಃಪುರಕ್ಕೆ ಬಂದನು. ಅಲ್ಲಿ ಸಂಗೀತ ನೃತ್ಯಕಲಾಕೋವಿದೆಯರೂ ದಾದಿಯರೂ ಮೈಮರೆತು ಮಲಗಿದ್ದರು. ಚಿರಪರಿಚಿತರಾದ ಅವರನ್ನು

ಸಿದ್ಧಾರ್ಥನು ಒಮ್ಮೆ ನೋಡಿದನು. ನಿಶ್ಶಬ್ದವಾಗಿ ಅಲ್ಲಿಂದ ಮುಂದಕ್ಕೆ ನಡೆದನು. ಯಶೋಧರೆಯ ಬಳಿಸಾರಿದನು. ಹಂಸತೂಲಿಕಾತಲ್ಪದಲ್ಲಿ ಪ್ರಶಾಂತವಾಗಿ ನಿದ್ರಿಸುತ್ತಿದ್ದ ಮೋಹದ ಮಡದಿಯನ್ನು ಒಮ್ಮೆ ಕಣ್ತುಂಬ ನೋಡಿದನು. ಪ್ರಫುಲ್ಲವದನೆಯೂ, ನವಮೋಹನಾಂಗಿಯೂ ಆದ ಆಕೆ ಯನ್ನು ಬಿಟ್ಟು ಹೋಗುವುದಾದರೂ ಎಂತು ? ಎಂದು ಯೋಚಿಸಿದನು. ಪರಮಪತಿವ್ರತೆಯೂ ಸಾಧ್ವೀಮಣಿಯೂ ಆದ ಆಕೆಯನ್ನು ಪರಿತ್ಯಜಿಸು ವುದಕ್ಕೆ ಮನಸ್ಸು ತಲ್ಲಣಗೊಂಡಿತು. ಆಕೆಯ ಪಕ್ಕದಲ್ಲಿ ಕಿಶೋರಚಂದ್ರನಂತೆ ರಾಹುಲನು ಮಲಗಿದ್ದನು. ಅವನನ್ನು ಮುದ್ದಿಸಬೇಕೆಂಬ ಆಸೆಯಾಯಿತು. ಆದರೆ ಧೈರ್ಯ ಬರಲಿಲ್ಲ. ಅವರನ್ನು ಮುಟ್ಟಿದರೆ ಎಲ್ಲಿ ಎಚ್ಚರಗೊಳ್ಳುವರೋ ಅದರಿಂದ ತನ್ನ ಮುಂದಿನ ಪ್ರಯಾಣಕ್ಕೆ ಎಲ್ಲಿ ಅಡ್ಡಿಯಾಗುವುದೋ ಎಂದು ಹೆದರಿದನು. ದೂರದಿಂದಲೇ ಮಡದಿಮಕ್ಕಳನ್ನು ಕೊನೆಯಬಾರಿ ಕಣ್ತುಂಬ ನೋಡಿದನು. ಆಮೇಲೆ " ಯಶೋಧರಾ ! ಲೋಕಕಲ್ಯಾಣಾರ್ಥವಾಗಿ ನಿನ್ನನ್ನೂ ಈ ಮುದ್ದುಕಂದನನ್ನೂ ಸಕಲ ಸಾಮ್ರಾಜ್ಯವನ್ನೂ ಬಿಟ್ಟು ಹೋಗುತ್ತಿದ್ದೇನೆ. ನನಗೆ ಅನಿತ್ಯವಾದ ಈ ಭೋಗವಿಲಾಸಗಳಿಂದ ಶಾಂತಿ ದೊರಕುವುದಿಲ್ಲ. ಆದುದರಿಂದ ಹೊರಡುತ್ತಿದ್ದೇನೆ. ನಿಮಗೆಲ್ಲರಿಗೂ ಮಂಗಳ ವಾಗಲಿ " ಎಂದು ಮನಸ್ಸಿನಲ್ಲಿಯೇ ಹರಸಿ ಹೊರಬಂದನು.

ಸಿದ್ಧಾರ್ಥ ತನ್ನ ನೆಚ್ಚಿನ ಸೇವಕನಾದ ಚನ್ನನಿಗೆ ಕುದುರೆಯನ್ನು ತರುವಂತೆ ಹೇಳಿದನು. ಒಡೆಯನ ಒತ್ತಾಯಪೂರ್ವಕವಾದ ಆಜ್ಞೆಯಂತೆ ಚನ್ನನು ಕುದುರೆಯನ್ನು ಸಿದ್ಧಪಡಿಸಿ ತಂದನು. ಇಬ್ಬರೂ ಅರಮನೆಯನ್ನು ಬಿಟ್ಟು ಹೊರಟರು. ನಗರವನ್ನು ದಾಟುತ್ತಲೇ ಮಾರನೆಂಬ ದೇವತೆ ಸಿದ್ಧಾರ್ಥನ ಮನಸ್ಸನ್ನು ಚಂಚಲಗೊಳಿಸುವುದಕ್ಕೆ ಪ್ರಯತ್ನಿಸಿದನು. ಸಿದ್ಧಾರ್ಥನನ್ನು ಕುರಿತು "ಯುವರಾಜ ! ವೃಥಾ ಮರುಳನಂತಾಡಬೇಡ. ಈ ರಾಜವೈಭವವು ನಿನಗೆ ಬೇರೆ ಎಲ್ಲಿ ದೊರಕುವುದು? ಪರಸುಖವೇನೆಂಬುದನ್ನು ತಿಳಿದವರಾರು? ಕೈಯಲ್ಲಿರುವ ಕನ್ನಡಿಗಿಂತ ನೀರಿನನೆಳಲು ಮಿಗಿಲಲ್ಲ. ಆದುದ ರಿಂದ ಹಿಂತಿರುಗಿ ರಾಜವೈಭವಗಳಿಂದ ಚಕ್ರವರ್ತಿಯಾಗಿ ಬಾಳು. ಇಹ ಲೋಕದ ಸುಖವನ್ನು ಪೂರ್ತಿಯಾಗಿ ಅನುಭವಿಸು. ಬರಿದೆ ಕನಸಿನ ನಿಧಿ ಯನ್ನು ಅರಸಿ ಗಾಂಪನಾಗಬೇಡ. ಕೈಹಿಡಿದ ಹೆಂಡತಿಯನ್ನು ಶೋಕಸಾಗರ

ದಲ್ಲಿ ತಳ್ಳಿ ಹೋಗುವುದು ತರವಲ್ಲ" ಎಂದು ಬೋಧಿಸಿ ವಿಮುಖನನ್ನಾಗಿ ಮಾಡಲು ಪ್ರಯತ್ನಿಸಿದನು. ಆದರೆ ಸಿದ್ಧಾರ್ಥನ ದೃಢನಿಶ್ಚಯ ಮೇರುವಿನಂತೆ ಅಚಲವಾಗಿತ್ತು. ಅದು ಇಂತಹ ಮಾಯಾಪ್ರಲೋಭಗಳಿಗೆ ಒಳಗಾಗುವಂತಿರಲಿಲ್ಲ.

ಚನ್ನ ಮತ್ತು ಸಿದ್ಧಾರ್ಥರು ರಾತ್ರಿಯೆಲ್ಲ ಪ್ರಯಾಣ ಮಾಡಿದರು. ಬೆಳಗಾಗುವ ಹೊತ್ತಿಗೆ ಅನುಮಾ ನದಿಯ ತೀರವನ್ನು ಸೇರಿದರು. ಅಲ್ಲಿಂದ ಚನ್ನನನ್ನು ಹಿಂದಕ್ಕೆ ಕಳುಹಿಸಬೇಕೆಂದು ಸಿದ್ಧಾರ್ಥನು ಯೋಚಿಸಿದನು. ಅವನಿಗೆ ತಾನು ತೊಟ್ಟಿದ್ದ ಆಭರಣಗಳನ್ನು ತೆಗೆದುಕೊಟ್ಟು ಪ್ರೀತಿಯಿಂದ "ಚನ್ನಾ! ನಾನು ರಾಜನಾಗಿ ಪಡೆಯಲಾಗದ ಮಹಾಭಾಗ್ಯವನ್ನು ಪಡೆಯಲು ಕಾಡಿಗೆ ಹೊರಟಿದ್ದೇನೆ. ಸಾವುನೋವುಗಳಿಂದ ದೂರವಾದ ನಿರ್ವಾಣವನ್ನು ಪಡೆಯಬೇಕೆಂಬುದೇ ನನ್ನ ಅಂತಿಮ ಗುರಿ. ಅದರಿಂದ ಲೋಕಕಲ್ಯಾಣವಾಗುತ್ತದೆ; ನನ್ನ ಮನಸ್ಸಿಗೆ ಶಾಂತಿ ದೊರೆಯುತ್ತದೆ. ಆದುದರಿಂದ ನೀನು ಕಪಿಲವಸ್ತುವಿಗೆ ಹಿಂದಿರುಗಿ ಮಹಾರಾಜನನ್ನೂ ಯಶೋಧರೆಯನ್ನೂ ಸಮಾಧಾನಪಡಿಸು. ನಿನಗೆ ಮಂಗಳವಾಗಲಿ" ಎಂದು ಹರಸಿದನು.

ಚನ್ನನಿಗೆ ತನ್ನ ಒಡೆಯನ ಇಂಗಿತ ಚೆನ್ನಾಗಿ ತಿಳಿದಿತ್ತು. ಆದರೂ ಮುಪ್ಪಿನ ರಾಜ, ಹರೆಯದ ಯಶೋಧರೆಯ ನೆನಪಾಗಿ "ರಾಜಕುಮಾರ, ನೀನಿಷ್ಟು ನಿಷ್ಕರುಣಿಯಾಗಬೇಡ. ನಿನ್ನ ಅಗಲಿಕೆಯಿಂದ ವೃದ್ಧನಾದ ನಿನ್ನ ತಂದೆಗೆ ಆಗುವ ಸಂಕಟವನ್ನು ಯೋಚಿಸು. ನಿನ್ನನ್ನೇ ಗತಿಮತಿಯೆಂದು ನೆಚ್ಚಿರುವ ಮಡದಿಯ ಪಾಡೇನು? ಅದು ಹೋಗಲಿ, ಆ ಮುದ್ದು ಕಂದನ ನೆನಪಾದರೂ ಬೇಡವೆ? ಕಪಿಲವಸ್ತುವಿನ ಪ್ರಜೆಗಳು ನಿನ್ನಲ್ಲಿ ಎಷ್ಟು ಪ್ರೇಮವನ್ನಿಟ್ಟಿದ್ದಾರೆ ಎಂಬುದನ್ನೂ ಮರೆಯಬಹುದೆ? ಈಗಲಾದರೂ ಹಿಂತಿರುಗಿ ನಡೆ" ಎಂದು ದೈನ್ಯದಿಂದ ಬೇಡಿಕೊಂಡನು. ಸಿದ್ಧಾರ್ಥನು ಗಂಭೀರವಾಗಿ "ಚನ್ನಾ! ನೀನು ಹೇಳಿದಂತೆ ಮೋಹಕ್ಕೆ ಮರುಳಾಗಿ ಈಗ ಹಿಂತಿರುಗಿದರೂ ಸಾಯುವಾಗಲಾದರೂ ಈ ವಿಯೋಗವು ತಪ್ಪತಕ್ಕದ್ದಲ್ಲ. ಲೋಕಕಲ್ಯಾಣಕ್ಕಾಗಿ ಸ್ವಾರ್ಥವನ್ನು ಬಲಿಗೊಡಬೇಕು. ನನಗೆ ಭೋಗವಾಗಲಿ ಕೀರ್ತಿಯಾಗಲಿ ಬೇಕಾಗಿಲ್ಲ. ಜಗತ್ತಿನಲ್ಲಿ ದಿವ್ಯಜ್ಞಾನವನ್ನು ಉದ್ದೀಪನಗೊಳಿಸುವ ಕಾರ್ಯಕ್ಕಾಗಿ ನನ್ನ ಮನಸ್ಸು ಕಾತರಗೊಂಡಿದೆ.

ಆದುದರಿಂದ ನೀನು ಈ ಮಂಗಳಕಾರ್ಯಕ್ಕೆ ಅಡ್ಡಿಯಾಗದೆ ಹಿಂತಿರುಗು" ಎಂದು ಹೇಳಿದನು. ಅಲ್ಲಿಗೂ ಚನ್ನನು ಬಿಡದೆ ತನ್ನನ್ನೂ ಜೊತೆಯಲ್ಲಿ ಕರೆದುಕೊಂಡು ಹೋಗುವಂತೆ ಕೇಳಿಕೊಂಡನು. ಆದರೆ ರಾಜನಿಗೂ ಯಶೋಧರೆಗೂ ಕಪಿಲವಸ್ತುವಿನ ಪ್ರಜೆಗಳಿಗೂ ಸಿದ್ಧಾರ್ಥನ ವಿಷಯವನ್ನು ತಿಳಿಸಿ ಅವರನ್ನು ಸಮಾಧಾನಪಡಿಸುವ ಹೊಣೆಗಾರಿಕೆ ಚನ್ನನ ಮೇಲೆ ಬಿದ್ದಿತ್ತು. ಅದನ್ನರಿತ ಸಿದ್ಧಾರ್ಥನು ಆತನನ್ನು ಸಮಾಧಾನಪಡಿಸಿ ಹಿಂದಕ್ಕೆ ಕಳುಹಿಸಿಕೊಟ್ಟನು. ಅವನು ಮರೆಯಾಗುತ್ತಲೆ ಕಾವಿಬಟ್ಟೆಯನ್ನು ಧರಿಸಿ ಏಕಾಂಗಿಯಾಗಿ ವನವನ್ನು ಪ್ರವೇಶಿಸಿದನು. ಇದೇ ಮಹಾನಿಷ್ಕ್ರಮಣ.

ರಾಜಕೀಯ ಮತ್ತು ಧಾರ್ಮಿಕ ಪರಿಸ್ಥಿತಿ

ಕಪಿಲವಸ್ತುವಿನಲ್ಲಿ ಈ ರೀತಿ ಮಾರ್ಪಾಡುಗಳಾಗುತ್ತಿದ್ದಾಗ ದೇಶದ ಅಂದಿನ ಸ್ಥಿತಿಗತಿಗಳನ್ನು ಸ್ವಲ್ಪಮಟ್ಟಿಗೆ ಗಮನಿಸಬೇಕು. ಆಗ ಭರತಖಂಡದಲ್ಲಿ ಅಂಗ, ಮಗಧ, ವಜ್ಜಿ, ಕಾಶಿ, ಕೋಸಲ, ಮಲ್ಲ, ವತ್ಸ, ಚೇದಿ, ಪಾಂಚಾಲ, ಕುರು, ಮತ್ಸ್ಯ, ಅಸ್ಸಕ, ಅವಂತಿ, ಗಾಂಧಾರ, ಕಾಂಭೋಜ ಮುಂತಾದ ರಾಜ್ಯಗಳು ತಲೆಯೆತ್ತಿಕೊಂಡು ದೇಶದ ಐಕ್ಯತೆಯನ್ನು ಹಾಳು ಮಾಡುತ್ತಿದ್ದುವು. ಅದೂ ಅಲ್ಲದೆ ಜಾತಿ ಮತಗಳ ಅಂತಃಕಲಹಗಳಿಂದ ದೇಶದ ಸ್ಥಿತಿ ಹದಗೆಡುತ್ತಿತ್ತು. ಸಮಾಜದಲ್ಲಿ ಬಿಗಿ ತಪ್ಪಿ ಜನರಲ್ಲಿ ಅಸಮಾಧಾನ ಮೂಡಿತ್ತು.

ಭರತಖಂಡದ ಉತ್ತರಭಾಗದಲ್ಲಿ ವೈದಿಕಮತವು ಪ್ರಬಲವಾಗಿತ್ತು. ಉತ್ತಮಕುಲದವರು ಹಿಂದೂಧರ್ಮದ ತತ್ತ್ವಬೋಧಕರಾಗಿದ್ದರು. ಅವರು ರಾಜರಂತೆ ಶಕ್ತಿವಂತರಾಗಿ ಜನರ ಮೇಲೆ ಅಧಿಕಾರವನ್ನು ನಡೆಸುವುದಕ್ಕೆ ಪ್ರಾರಂಭಿಸಿದರು. ಜಪತಪಗಳಿಗೂ ಯಜ್ಞಯಾಗಾದಿಗಳಿಗೂ ಪ್ರಾಮುಖ್ಯವನ್ನು ಕೊಡಬೇಕೆಂದು ಬೋಧಿಸುತ್ತಿದ್ದರು. ಉಪವಾಸವೇ ಮುಂತಾದ ದೇಹದಂಡನೆ, ತಪಸ್ಸು, ತಲೆಬೋಳಿಸಿಕೊಳ್ಳುವುದು ಇಂತಹ ಸಂಸ್ಕಾರಗಳಿಂದ ಧರ್ಮವನ್ನು ಸಾಧಿಸಬಹುದೆಂದೂ ಆ ಧರ್ಮವನ್ನು ಕಾಪಾಡುವುದು ಎಲ್ಲ ಹಿಂದುಗಳ ಕರ್ತವ್ಯವೆಂದೂ ಜನತೆಗೆ ತಿಳಿಸುತ್ತಿದ್ದರು. ಒಟ್ಟಿನಲ್ಲಿ ಸಮಾಜವು ಜಾತಿಯ ಮೇಲೆ ವಿಭಾಗವಾಗಿತ್ತು.

ಉತ್ತಮ ವರ್ಣದವರೆನಿಸಿಕೊಂಡ ಪಂಡಿತರೂ ಪುರೋಹಿತರೂ ತಾವು ಆರ್ಯರೆಂದೂ ಶ್ರೇಷ್ಠ ಕುಲಜರೆಂದೂ ಹೇಳಿಕೊಂಡು ರಾಜಮಹಾರಾಜರ ಆಶ್ರಯವನ್ನು ಪಡೆದು ತಮ್ಮ ಪ್ರತಿಷ್ಠೆಗಳನ್ನು ಬೆಳೆಸುತ್ತಿದ್ದರು. ಅವರು ಮಾಡಿದ ಮೊಟ್ಟಮೊದಲ ಅನ್ಯಾಯವೆಂದರೆ ಸಮಾಜದಲ್ಲಿ ಮೇಲು ಕೀಳೆಂಬ ಅಂತರವನ್ನು ಕಲ್ಪಿಸಿದ್ದು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣ್ಯವಲ್ಲದೆ ಅಸ್ಪೃಶ್ಯರೆಂಬ ಪಂಚಮವರ್ಗವನ್ನೂ ಸೃಷ್ಟಿಸಿದುದು. ಮನುಷ್ಯರು ಹುಟ್ಟುವಾಗಲೇ ಅವರ ಸ್ಥಾನಮಾನಗಳು ನಿರ್ಧರಿಸಲ್ಪಡುತ್ತಿದ್ದುವು. ಅದರಂತೆ ಆ ಪಂಡಿತರೂ ಪುರೋಹಿತರೂ ತಾವು ಉತ್ತಮಕುಲದವರೆಂಬ ಹಮ್ಮಿನಿಂದ ಇತರರನ್ನು ಕೀಳಾಗಿ ಕಾಣುತ್ತಿದ್ದರು. ಅಸ್ಪೃಶ್ಯರಿಗೆ ಸಮಾಜದಲ್ಲಿ ಸ್ಥಾನಮಾನಗಳೇ ಇಲ್ಲದಂತೆ ಮಾಡಿದರು. ವೃತ್ತಿಗಳ ಮೇಲೆ ಸ್ಥಾನಮಾನಗಳನ್ನು ನಿರ್ಧರಿಸುತ್ತಿದ್ದ ಅವರ ಸಂಕುಚಿತದೃಷ್ಟಿ ಹಿಂದೂ ಸಮಾಜದ ದೌರ್ಬಲ್ಯಕ್ಕೆ ಅಡಿಗಲ್ಲಾಯಿತು. ಅದರಿಂದಲೇ ಜಾತಿವಾದಕ್ಕೂ ಎಡೆಯುಂಟಾಯಿತೆಂದು ಭಾವಿಸಿದರೂ ತಪ್ಪಾಗಲಾರದು.

ಸಮಾಜದಲ್ಲಿ ಪ್ರಬಲರಾಗಿದ್ದ ಆ ಪಂಡಿತರು ಮತ್ತು ಪುರೋಹಿತವರ್ಗದವರು ಧರ್ಮಬೋಧಕರಾಗಿದ್ದುದರಿಂದ ಅನ್ಯಮತೀಯರಿಗೆ ಧರ್ಮ ತತ್ತ್ವಗಳನ್ನು ಅಭ್ಯಾಸಮಾಡುವ ಅವಕಾಶವು ಇಲ್ಲದಂತೆ ಮಾಡಿ ಅನೇಕ ಎಡರು ತೊಡರುಗಳನ್ನು ತಂದೊಡ್ಡಿದರು. ಅದೂ ಅಲ್ಲದೆ ತತ್ತ್ವಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿ ಪ್ರಚುರಪಡಿಸುತ್ತಿದ್ದುದರಿಂದ ಅವು ಕೇವಲ ಕೆಲವರ ಸ್ವತ್ತಾಗಿ ಉಳಿದುವು.

ಈ ವಿಷಮಪರಿಸ್ಥಿತಿಯಿಂದ ಶಾಸ್ತ್ರೀಯಧರ್ಮವು ಮಾಯವಾಗಿ ವೇದಗಳ ಆಸ್ತಿಕಭಂಡಾರವು ಕೆಲವರಲ್ಲೇ ನಿಂತಿತು. ಅರ್ಥಶೂನ್ಯವಾದ ಕೆಲವು ವಿಷಯಗಳು ಪ್ರಚಾರಕ್ಕೆ ಬಂದುವು. ಸಂಕುಚಿತದೃಷ್ಟಿಯಿಂದ ಕೂಡಿದ್ದ ವೈದಿಕರು ಹುಂಬತನದಿಂದ ತಮ್ಮ ಧರ್ಮವೇ ಶ್ರೇಷ್ಠವೆಂದು ಸಾರುತ್ತ ನಿಜವಾದ ಧರ್ಮವನ್ನು ಹುದುಗಿಸಿಟ್ಟರು. ಆದುದರಿಂದ ಜನಗಳಿಗೆ ವೇದಗಳಲ್ಲಿನ ನಂಬಿಕೆ ಸಡಿಲವಾಯಿತು; ಸಮಾಜದಲ್ಲಿ ಮೇಲುಕೀಳೆಂಬ ಭಾವನೆ ತಲೆದೋರಿತು; ಅಸಮಾಧಾನಕ್ಕೆ ಕಾರಣವಾಯಿತು. ರೊಚ್ಚಿಗೆದ್ದ ಜನ ವರ್ಣಾಶ್ರಮಪದ್ಧತಿಯನ್ನೂ ಯಜ್ಞ

ಯಾಗಾದಿಗಳಲ್ಲಿನ ಪಶುವಧೆ ಮುಂತಾದ ಆಚರಣೆಗಳನ್ನೂ ಬಹಿರಂಗವಾಗಿ ಖಂಡಿಸುವುದಕ್ಕೆ ಪ್ರಾರಂಭಿಸಿದರು. ಇಂತಹ ಪರ್ವಕಾಲದಲ್ಲಿ ಗೌತಮ ಬುದ್ಧನು ಜನ್ಮವೆತ್ತಿ ಜನತೆಯನ್ನು ಸನ್ಮಾರ್ಗಕ್ಕೆ ಕೊಂಡೊಯ್ಯಲು ಮುಖ್ಯ ಕಾರಣನಾದನು. ಬುದ್ಧನಿಗೆ ಸಮಕಾಲೀನರಾಗಿ ವಿಶ್ವದ ಕೆಲವು ಕಡೆ ಸಮಾಜಸುಧಾರಕರು ಜನ್ಮವೆತ್ತಿದರು. ಅವರಲ್ಲಿ ಚೀನಾದ ಕಾನ್ಫೂಷಿಯಸ್, ಲಯೊಟ್ಸಿಯಾ ಮತ್ತು ಪ್ಯಾಲೆಸ್ಟೈನಿನ ಏಸು ಕ್ರಿಸ್ತ ಮುಖ್ಯರಾದವರು.

ಗೌತಮ ಬಿಂಬಸಾರರ ಸಮಾಗಮ

ಸರ್ವಸ್ವವನ್ನೂ ಪರಿತ್ಯಜಿಸಿ ಕಾಡನ್ನು ಸೇರಿದ ಸಿದ್ಧಾರ್ಥನು ತನ್ನ ಗೋತ್ರದ 'ಗೌತಮ' ಎಂಬ ಹೆಸರನ್ನು ತಳೆದನು. ಅನುಮಾನದಿಯ ತೀರದಲ್ಲಿ ಕೆಲವು ದಿನಗಳನ್ನು ಕಳೆದು ಜ್ಞಾನಿಗಳನ್ನು ಹುಡುಕಿಕೊಂಡು ಕಾಡುಗಳನ್ನೆಲ್ಲಾ ಸುತ್ತಾಡುವುದಕ್ಕೆ ಮೊದಲು ಮಾಡಿದನು. ಅರಮನೆಯಲ್ಲಿ ಸುಖಲೋಲುಪನಾಗಿ ಬೆಳೆದಿದ್ದ ರಾಜಕುಮಾರನು ಆ ಕಾಡಿನಲ್ಲಿ ಬೀಡಿಲ್ಲದೆ, ಮೈತುಂಬ ಬಟ್ಟೆಯಿಲ್ಲದೆ, ಹೊಟ್ಟೆಗೆ ಅನ್ನವಿಲ್ಲದೆ ಅಲೆಯಬೇಕಾಯಿತು. ಭಿಕ್ಷಾಟನೆಯಿಂದ ಹಸಿವನ್ನು ನೀಗಿಸಿಕೊಳ್ಳಬೇಕಾಯಿತು. ರಾಜದಂಡವನ್ನು ಹಿಡಿಯುತ್ತಿದ್ದ ಕೈಗಳಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿಯಬೇಕಾಯಿತು. ಗೌತಮನು ಅವನ್ನೆಲ್ಲ ಲೆಕ್ಕಿಸದೆ ತನ್ನ ಪ್ರಯಾಣವನ್ನು ಮುಂದುವರಿಸಿದನು. ಗಂಗಾನದಿಯನ್ನು ದಾಟಿ ಮಗಧದೇಶದ ರಾಜಧಾನಿಯಾದ 'ರಾಜಗೃಹ' ವನ್ನು ತಲುಪಿದನು. ರಾಜಗೃಹದ ಹತ್ತಿರ 'ಗೃಧ್ರಕೂಟ' ವೆಂಬ ಬೆಟ್ಟವಿತ್ತು. ಅದು ಪ್ರಶಾಂತವಾದ ವಾತಾವರಣದಿಂದಲೂ ಸೊಂಪಾಗಿ ಬೆಳೆದಿದ್ದ ಗಿಡಮರಗಳಿಂದಲೂ ಕೂಡಿ ಮನೋಹರವಾಗಿತ್ತು. ಹೀಗೆ ಪ್ರಕೃತಿಯ ಸೊಬಗಿನಿಂದ ಕಂಗೊಳಿಸುತ್ತಿದ್ದ ಆ ಬೆಟ್ಟದಲ್ಲಿ ಅನೇಕ ಯೋಗಿಗಳು ತಪಸ್ಸಾಧನೆಯನ್ನು ಮಾಡುತ್ತಿದ್ದರು. ಗೌತಮನೂ ಕೂಡ ಅಲ್ಲಿಯೇ ಒಂದು ಗುಹೆಯಲ್ಲಿ ತಂಗಿ ತನ್ನ ಸಾಧನೆಯನ್ನೂ ಪ್ರಾರಂಭಿಸಿದನು. ಹಗಲಿರುಳೆನ್ನದೆ ಹಸಿವಿನ ಪರಿವೆಯೇ ಇಲ್ಲದೆ ಧ್ಯಾನದಲ್ಲಿ ಮಗ್ನನಾಗುತ್ತಿದ್ದನು. ಆಗಾಗ ರಾಜಗೃಹಕ್ಕೆ ಹೋಗಿ ಭಿಕ್ಷಾಟನೆಯಿಂದ ಹಸಿವನ್ನು ನೀಗಿಕೊಳ್ಳುತ್ತಿದ್ದನು. ಭಿಕ್ಷೆಗಾಗಿ ನಗರಕ್ಕೆ ಬರುತ್ತಿದ್ದ ಆತನ ಗಂಭೀರವೂ ಮನೋಹರವೂ ಆದ ಆಕೃತಿಯು

ಎಲ್ಲರ ಹೃದಯವನ್ನೂ ಆಕರ್ಷಿಸಿ ಆತನಲ್ಲಿ ಗೌರವ ಭಾವನೆಯನ್ನುಂಟು ಮಾಡುತ್ತಿತ್ತು.

ಒಂದು ದಿನ ಗೌತಮನು ಭಿಕ್ಷಾಟನೆಯನ್ನು ಮುಗಿಸಿಕೊಂಡು ರಾಜಗೃಹದಿಂದ ಹಿಂತಿರುಗುತ್ತಿದ್ದನು. ಆಗ ಮಟಮಟ ಮಧ್ಯಾಹ್ನವಾಗಿತ್ತು. ಆ ಉರಿಬಿಸಿಲಿನಲ್ಲಿ ಒಬ್ಬ ಕುರುಬ ಕುರಿಮಂದೆಯನ್ನು ಓಡಿಸಿಕೊಂಡು ಹೋಗುತ್ತಿದ್ದನು. ಗೌತಮನಿಗೆ ಆ ಕುರುಬನ ಪರಿಚಯದಿಂದ ಅವನು ಒಯ್ಯುತ್ತಿದ್ದ ಆ ಕುರಿಗಳು ಆ ರಾಜ್ಯದ ದೊರೆ ಬಿಂಬಸಾರನು ಆಗ ಆಚರಿಸುತ್ತಿದ್ದ ಯಾಗವೊಂದರಲ್ಲಿ ಬಲಿಗೊಡುವುದಕ್ಕಾಗಿ ಎಂದು ತಿಳಿದು ಬಂದಿತು. ಗೌತಮನು ಆ ಮೂಕಪ್ರಾಣಿಗಳನ್ನು ಒಮ್ಮೆ ನೋಡಿದನು. ಮಂದೆಯಲ್ಲಿನ ಒಂದು ಮರಿಗೆ ಕಾಲಿನಲ್ಲಿ ರಕ್ತಬಸಿದು ನಡೆಯಲಾರದೆ ಕುಂಟುತ್ತಾ ಸಾಗುತ್ತಿತ್ತು. ಅದನ್ನು ನೋಡಿದ ಗೌತಮನಿಗೆ ಕರುಳು ಕಿತ್ತುಬಂದಂತಾಗಿ ಆ ಮರಿಯನ್ನು ಎತ್ತಿ ಎದೆಗವಚಿಕೊಂಡು ತಾನೂ ಆ ಕುರುಬನೊಡನೆ ಯಜ್ಞಶಾಲೆಯನ್ನು ಸೇರಿದನು. ಆ ಸಮಯಕ್ಕೆ ಸರಿಯಾಗಿ ಪುರೋಹಿತನೊಬ್ಬನು ಯಜ್ಞಕುಂಡದ ಮುಂದೆ ರಾಜನ ಎದುರಿಗೆ ಒಂದು ಕುರಿಯನ್ನು ಬಲಿಗೊಡಲು ನಿಲ್ಲಿಸಿದ್ದನು. ದಯಾರ್ದ್ರಹೃದಯನಾದ ಗೌತಮನಿಗೆ ಇದನ್ನು ನೋಡಿ ಸಹಿಸಲಾಗಲಿಲ್ಲ. ದಿಟ್ಟತನದಿಂದ ರಾಜನ ಮುಂದೆ ನಿಂತು ಗಂಭೀರವಾಣಿಯಿಂದ "ಮಹಾರಾಜ! ಈ ಪ್ರಾಣಿವಧೆಯನ್ನು ನಿಲ್ಲಿಸು. ಪ್ರಾಣವನ್ನುಕೊಡುವುದಕ್ಕೆ ಶಕ್ತಿಯಿಲ್ಲದ ಮನುಷ್ಯರಿಗೆ ಪ್ರಾಣವನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ನಮ್ಮಂತೆಯೇ ಈ ಮೂಕಪ್ರಾಣಿಗಳಿಗೂ ಬದುಕಬೇಕೆಂಬ ಆಸೆಯಿದೆ. ಸ್ವಾರ್ಥದೃಷ್ಟಿಯಿಂದ ಈ ಅಸಹಾಯಕ ಪ್ರಾಣಿಗಳನ್ನು ಕೊಲ್ಲುವುದು ಸರಿಯೆ? ದೇವರ ಅನುಗ್ರಹ ಸಂಪಾದನಾರ್ಥವಾಗಿ ಈ ರೀತಿ ಪ್ರಾಣಿವಧೆಯನ್ನು ಮಾಡಬಹುದೆ? ಇದರಿಂದ ನಮ್ಮ ಪಾಪಗಳಾದರೂ ಹೇಗೆ ಪರಿಹಾರವಾದಾವು? ದೇವರು ಈ ಪರಿಯ ಲಂಚಗುಳಿತನಕ್ಕೆ ಒಲಿಯುವುದಿಲ್ಲ. ಪ್ರತಿಯೊಬ್ಬರೂ ಅವರವರ ಕರ್ಮಫಲಗಳನ್ನು ಅನುಭವಿಸಲೇಬೇಕು. ಸಕಲ ಪ್ರಾಣಿಗಳಲ್ಲೂ ದಯೆತೋರಿ ದ್ವೇಷಾಸೂಯೆಗಳನ್ನು ತ್ಯಜಿಸಿ ಪ್ರೇಮದಿಂದ ಕೂಡಿದ ಅಹಿಂಸಾಜೀವನವನ್ನು ನಡೆಸುವುದೇ ಲೋಕದಲ್ಲಿ ಉತ್ತಮವಾದ ಮಾರ್ಗ" ಎಂದು ಹೇಳಿ,

ಗಂಭೀರಭಾವದಿಂದ ಅಲ್ಲಿ ನೆರೆದಿದ್ದ ಜನರ ಮೇಲೆ ಒಮ್ಮೆ ತನ್ನ ದೃಷ್ಟಿಯನ್ನು ಬೀರಿದನು. ಧೀರಗಂಭೀರವಾದ ಗೌತಮನ ಆ ವರ್ತನೆ ರಾಜನನ್ನು ಚಕಿತನನ್ನಾಗಿ ಮಾಡಿ ಅವನ ಕಣ್ದೆರೆಯಿಸಿತು. ಆತನಿಗೆ ತಾನು ಮಾಡು ತ್ತಿದ್ದ ಅಕಾರ್ಯದ ಅರಿವಾಯಿತು. ಪಶ್ಚಾತ್ತಾಪದಿಂದ ಗೌತಮನ ಕ್ಷಮೆ ಯನ್ನು ಬೇಡಿ, ಹೇಯವಾದ ಪ್ರಾಣಿವಧೆಯನ್ನು ನಿಲ್ಲಿಸಿದನು. ಕ್ರಮವಾಗಿ ತನ್ನ ರಾಜ್ಯದಲ್ಲಿ ಇನ್ನು ಮುಂದೆ ಯಾರೂ ಪ್ರಾಣಿವಧೆಯನ್ನೇ ಮಾಡಬಾರ ದೆಂದು ಕಟ್ಟಾಜ್ಞೆಯನ್ನು ಮಾಡಿದನು.

ಗೌತಮನ ಉಪದೇಶದಿಂದ ಮಾರುಹೋದ ಬಿಂಬಸಾರನು ತನ್ನ ಸಂಪತ್ತನ್ನೆಲ್ಲಾ ಆತನಿಗೆ ಅರ್ಪಿಸಲು ಸಿದ್ಧನಾಗಿ ತನ್ನಲ್ಲಿಯೇ ಉಳಿದುಕೊಳ್ಳ ಬೇಕೆಂದು ಪ್ರಾರ್ಥಿಸಿಕೊಂಡನು. ಆದರೆ ಸಕಲ ರಾಜ್ಯವೈಭವಗಳನ್ನೂ ಪತ್ನೀಪುತ್ರರನ್ನೂ ಪರಿತ್ಯಾಗಮಾಡಿ ಬಂದಿದ್ದ ಗೌತಮನಿಗೆ ಆ ರಾಜನ ಆಶ್ರಯ ಐಶ್ವರ್ಯಗಳಿಂದಾಗಬೇಕಾದುದೇನು ? ರಾಜನಿಗೆ ತಾನು ಬಂದಿ ರುವ ಉದ್ದೇಶವನ್ನು ವಿವರವಾಗಿ ತಿಳಿಸಿದನು. ಗೌತಮನ ನಿಶ್ಚಯವನ್ನೂ ಹಿರಿಯಾಸೆಯನ್ನೂ ತಿಳಿದ ಬಿಂಬಸಾರನು ಆತನನ್ನು ಮತ್ತೆ ಬಲವಂತ ಪಡಿಸಲಿಲ್ಲ. ಆದರೆ ಸಿದ್ಧಿಯನ್ನು ಪಡೆದು ಬುದ್ಧನಾದ ಮೇಲೆ ರಾಜಗೃಹಕ್ಕೆ ಬಂದು ತನಗೆ ಉಪದೇಶ ಮಾಡಬೇಕೆಂದು ಬೇಡಿಕೊಂಡನು. ಗೌತಮನು ಅದಕ್ಕೆ ಸಮ್ಮತಿಸಿ ತನ್ನ ಗುಹೆಗೆ ಹಿಂತಿರುಗಿದನು.

ಗೌತಮನು ಬಿಂಬಸಾರನ ಯಾಗಶಾಲೆಯನ್ನು ಪ್ರವೇಶಿಸುವುದಕ್ಕೆ ಮುಂಚೆ ದಾರಿಯಲ್ಲಿ ಮತ್ತೊಂದು ಪ್ರಸಂಗ ನಡೆಯಿತು. ಕೃಶಾಗೌತಮಿ ಎಂಬ ಹೆಂಗಸು ಹಾವು ಕಚ್ಚಿ ಸತ್ತಿದ್ದ ತನ್ನ ಏಕಮಾತ್ರ ಪುತ್ರನನ್ನು ಎದೆ ಗಪ್ಪಿಕೊಂಡು ಗೋಳಾಡುತ್ತ, ಕಂಡಕಂಡವರನ್ನೆಲ್ಲಾ ತನ್ನ ಮಗನನ್ನು ಬದು ಕಿಸಿ ಕೊಡುವಂತೆ ಬೇಡಿಕೊಳ್ಳುತ್ತಿದ್ದಳು. ಎಲ್ಲರೂ ಗೌತಮನ ಕಡೆ ಕೈ ತೋರಿದರು. ಆಕೆಯ ಅಂದಿನ ಸ್ಥಿತಿಯನ್ನು ಕಂಡರೆ ಕಲ್ಲೆದೆಯೂ ಕರಗಿ ನೀರಾಗುವಂತಿತ್ತು. ಆಕೆ ಕುರಿಮರಿಯನ್ನು ಎತ್ತಿಕೊಂಡು ತನ್ನೆದುರಿಗೆ ಬರುತ್ತಿದ್ದ ತರುಣ ಸಂನ್ಯಾಸಿ ಗೌತಮನ ಭವ್ಯಾಕೃತಿಯನ್ನು ಕಂಡು ಆತನ ಬಳಿಗೆ ಬಂದಳು. ತನ್ನ ಮಗುವನ್ನು ಬದುಕಿಸಿಕೊಡಬೇಕೆಂದು ಅಂಗಲಾಚಿ ಬೇಡಿಕೊಂಡಳು. ಗೌತಮನಿಗೆ ವಿಚಾರವೆಲ್ಲ ಮನದಟ್ಟಾಯಿತು. ಆಕೆ

ಯನ್ನು ಕುರಿತು "ತಾಯಿ ! ನೀನು ಯಾರೂ ಸತ್ತಿಲ್ಲದ ಮನೆಯಿಂದ ಸ್ವಲ್ಪ ಸಾಸಿವೆಕಾಳನ್ನು ತಂದರೆ ನಿನ್ನ ಮಗನನ್ನು ಬದುಕಿಸಿಕೊಡುತ್ತೇನೆ" ಎಂದು ಗಂಭೀರವಾಗಿ ಹೇಳಿದನು. ಅದನ್ನು ಕೇಳಿದ ಕೃಶಾಗೌತಮಿ "ಇದೇನು ! ಇಷ್ಟು ಸುಲಭವಾದ ಔಷಧಿ ದೊರೆಯದೇ" ಎಂದು ಆತುರಾತುರವಾಗಿ ಮನೆ ಮನೆಗೂ ಹೋಗಿ ಸಾಸಿವೆಕಾಳನ್ನು ಕೇಳಿದಳು. ಆದರೆ ಸಾವಿಲ್ಲದ ಮನೆಯೇ ಕಾಣಲಿಲ್ಲ. ಪ್ರತಿಯೊಂದು ಮನೆಯಲ್ಲಿಯೂ ಯಾರಾದರೊಬ್ಬರ ಅಥವಾ ಹಲವರ ಸಾವಿನ ಸಂತಾಪದಿಂದ ನೊಂದು ಬೆಂದಿದ್ದ ಮಂದಿಯನ್ನು ಕಂಡಳು. ತನ್ನಂತೆಯೇ ಮಕ್ಕಳನ್ನು ಕಳೆದುಕೊಂಡಿದ್ದ ತಾಯಂದಿರ ಗೋಳನ್ನೂ ಕೇಳಿದಳು. ಇಷ್ಟು ಹೊತ್ತಿಗೆ ಕೃಶಾಗೌತಮಿಗೆ ಜಗತ್ತಿನ ದುಃಖದ ಪೂರ್ಣ ಅರಿವಾಯಿತು. ಆಕೆ ಅಲ್ಲಿಂದ ನೇರವಾಗಿ ಬರಿಗೈಯಲ್ಲಿ ಗೌತಮನ ಬಳಿಗೆ ಬಂದಳು. ಎಲ್ಲವನ್ನೂ ಗ್ರಹಿಸಿದ್ದ ಗೌತಮನು 'ತಾಯೇ! ಪ್ರಪಂಚದ ಎಲ್ಲ ಜೀವಿಗಳ ದುಃಖವೂ ಅಪಾರವಾಗಿದೆ. ಆ ದುಃಖಸಾಗರಕ್ಕೆ ನಿನ್ನ ಕಣ್ಣೀರಿನ ಹನಿಯೂ ಸೇರಿದೆ. ಸತ್ತವರು ಮತ್ತೆ ಮರಳುವುದಿಲ್ಲ. ನಿನ್ನ ಮಗನಂತೆಯೇ ಎಲ್ಲರೂ ಒಂದು ದಿನ ಸಾಯಲೇಬೇಕು. ಅದಕ್ಕಾಗಿ ಶೋಕಿಸಬಾರದು. ನಿನ್ನಂತೆಯೇ ಶೋಕದಲ್ಲಿರುವವರನ್ನು ನೋಡಿಕೊಂಡು ಸಮಾಧಾನವನ್ನು ತಂದುಕೊಳ್ಳಬೇಕು. ಜಗತ್ತಿನ ಈ ದುಃಖಕ್ಕೆ ಮೂಲವನ್ನೂ ಅದರ ಪರಿಹಾರ ಮಾರ್ಗವನ್ನೂ ಕಂಡುಕೊಳ್ಳುವುದಕ್ಕಾಗಿ ನಾನು ಈ ದೇಹವನ್ನೇ ತೇಯುತ್ತಿದ್ದೇನೆ. ಆದುದರಿಂದ ನೀನು ಹಂಬಲಿಸಬೇಡ. ನಿನ್ನ ಮಗುವಿಗೆ ಅಂತ್ಯಕ್ರಿಯೆಯನ್ನು ನಡೆಸು ಹೋಗು" ಎಂದು ಸಮಾಧಾನಪಡಿಸಿ ಕಳುಹಿಸಿದನು.

ಜ್ಞಾನಾರ್ಜನೆಗಾಗಿ ಅಲೆದಾಟ

ಗೌತಮನು ಗುರುವಿನ ಮೂಲಕ ಜ್ಞಾನಾರ್ಜನೆ ಮಾಡಬೇಕೆಂದು ಕೆಲವು ಯೋಗಿಗಳಲ್ಲಿ ಶಾಸ್ತ್ರ ಆಗಮಗಳನ್ನು ಅಧ್ಯಯನ ಮಾಡುವುದಕ್ಕೆ ಪ್ರಾರಂಭಿಸಿದನು. ಮೊದಲು ವೈಶಾಲಿಯ ಆರಾಡಕಾಲಾಮನೆಂಬ ತತ್ತ್ವ ಬೋಧಾಚಾರ್ಯನಲ್ಲಿ ಶಿಷ್ಯವೃತ್ತಿಯನ್ನವಲಂಬಿಸಿದನು. ಆದರೆ ಆತನಿಂದ ತೃಪ್ತಿಯನ್ನು ಪಡೆಯಲಾಗಲಿಲ್ಲ. ಸ್ವಲ್ಪ ಕಾಲದ ಮೇಲೆ ಆತನನ್ನು ಬಿಟ್ಟು ರಾಜಗೃಹದ ರುದ್ರಕನೆಂಬ ಮುನಿಯ ಶಿಷ್ಯನಾದನು. ಬರುಬರುತ್ತ ಆತನ

ಉಪದೇಶದಿಂದಲೂ ಜೀವನದ ದುಃಖ ನಿವಾರಣೆಯಾಗುವಂತೆ ಕಂಡು ಬರಲಿಲ್ಲ. ಈ ವೇದವೇದಾಂಗ ಪಂಡಿತರ ತರ್ಕ ಗೌತಮನಿಗೆ ಸರಿಗಾಣಲಿಲ್ಲ. ಆದರೂ ಉಪನಿಷತ್ತುಗಳನ್ನೂ ವೇದಾಗಮಗಳನ್ನೂ ಅಧ್ಯಯನ ಮಾಡಿದನು. ಕೊನೆಗೆ ಸ್ವಪ್ರಯತ್ನದಿಂದಲೇ ಏಕಾಂತವಾಗಿ ತಪಸ್ಸನ್ನಾಚರಿಸಿ ಜ್ಞಾನಸಂಪಾದನೆ ಮಾಡಬೇಕೆಂದು ನಿಶ್ಚಯಿಸಿದನು. ಅಂತೆಯೇ 'ಉರುವೇಲು' ಎಂಬ ಕಾಡಿನಲ್ಲಿ ನಿಂತು ಉಗ್ರತಪಸ್ಸನ್ನಾಚರಿಸಲು ಮೊದಲು ಮಾಡಿದನು. ಚಳಿ ಗಾಳಿ ಮಳೆ ಬಿಸಿಲೆನ್ನದೆ, ನಿದ್ರಾಹಾರಗಳನ್ನು ಬಯಸದೆ, ಘೋರ ತಪಸ್ಸಿನಲ್ಲಿ ನಿರತನಾದನು. ಹೀಗೆ ಆರು ವರ್ಷಗಳು ನಿರಂತರ ಪ್ರಯತ್ನಮಾಡಿದರೂ ಆತನು ಉದ್ದೇಶ ಸಾಧನೆಯಾಗಲಿಲ್ಲ. ಅದಕ್ಕೆ ಬದಲಾಗಿ ಈ ಪ್ರಚಂಡ ಸಾಧನೆಯಿಂದ ದೇಹವು ಕೃಶವಾಗಿ ಅಸ್ಥಿಪಂಜರದಂತಾಯಿತು.

ಈ ಆರು ವರ್ಷಗಳ ಅನುಭವದಿಂದ ಗೌತಮನು ಒಂದು ನಿರ್ಧಾರಕ್ಕೆ ಬಂದನು. ಮಿತಿಮೀರಿದ ದೇಹದಂಡನೆ ನಿರಶನವ್ರತಗಳಿಂದ ಏನೂ ಪ್ರಯೋಜನವಿಲ್ಲವೆಂದು ಆತನಿಗೆ ಮನದಟ್ಟಾಯಿತು. ಇದಕ್ಕಿಂತಲೂ ಬೇರೆಯಾದ ಒಂದು ಸತ್ಯಮಾರ್ಗವಿರಬೇಕೆಂದು ಆತನ ಮನಸ್ಸಿಗೆ ಹೊಳೆಯಿತು ಹಾಗೆಯೇ ಮಿತಿಮೀರಿದ ಭೋಗಲಾಲಸೆಗಳಿಂದ ಮನಸ್ಸು ಅಸ್ವಾಧೀನವಾಗಿ ಬೋಧಿಯನ್ನು ಸಂಪಾದಿಸಲಾಗದೆಂದೂ ಮನಗಂಡನು. ಈ ವೈಪರೀತ್ಯಮಾರ್ಗಗಳೆರಡನ್ನೂ ಬಿಟ್ಟು ಮಧ್ಯಮಾರ್ಗವನ್ನವಲಂಬಿಸುವುದೇ ಸೂಕ್ತವೆಂದು ಎಣಿಸಿದನು. ಬದುಕುವುದಕ್ಕೆ ಬೇಕಾದಷ್ಟನ್ನು ಮಾತ್ರ ತಿಂದು ಸತ್ಯವನ್ನರಸಿ, ಬೋಧಿಯನ್ನು ಸಂಪಾದಿಸಬೇಕೆಂದು ನಿಶ್ಚಯಿಸಿದನು- ಮೋಕ್ಷಕ್ಕೆ ಧ್ಯಾನವೇ ಪರಮಸಾಧನವೆಂಬುದನ್ನು ತಿಳಿದು ಅದರಂತೆ ಆಚರಿಸತೊಡಗಿದನು.

ಗೌತಮನು ಈ ದಿಸೆಯಲ್ಲಿ ಮುಂದುವರಿದು 'ಸೇನಾನಿ' ಎಂಬ ಗ್ರಾಮದ ಹತ್ತಿರ ಏಕಾಂತದಲ್ಲಿ ತಪಸ್ಸನ್ನುಮಾಡುತ್ತಿದ್ದನು. ಒಂದು ದಿನ ಧ್ಯಾನಾಸಕ್ತನಾಗಿದ್ದಾಗ ನಿಶ್ಶಕ್ತಿಯಿಂದ ಬಳಲಿಹೋಗಿದ್ದನು. ಆಗ 'ಸುಜಾತೆ' ಎಂಬ ಸಭ್ಯ ಗೃಹಿಣಿಯು ವನದೇವತೆಗೆ ಎಡೆಯನ್ನರ್ಪಿಸಲು ಅಲ್ಲಿಗೆ ಬಂದಳು. ಮರದ ಕೆಳಗೆ ಧ್ಯಾನಾಸಕ್ತನಾಗಿದ್ದ ಗೌತಮನ ದಿವ್ಯಮೂರ್ತಿಯನ್ನು ನೋಡಿ ಆತನೇ ವನದೇವತೆಯೆಂದು ಅತ್ಯಂತ ಭಕ್ತಿಯಿಂದ ಎಡೆಯನ್ನರ್ಪಿಸಿದಳು.

ಗೌತಮನು ಮರುಮಾತಾಡದೆ ಆ ಎಡೆಯನ್ನು ಸವಿದನು. ಅಮೃತದಂತಿದ್ದ ಆ ಭಕ್ಷ್ಯಗಳನ್ನು ಸವಿದಕೂಡಲೆ ಆತನಿಗೆ ಚೈತನ್ಯವುಂಟಾಯಿತು. ಆ ಸಾಧ್ವೀ ಮಣಿಯ ಇಷ್ಟದಂತೆ ಆಕೆಯ ಮಗನನ್ನು ಹರಸಿ ಆಕೆಗೂ ಸಂತೋಷ ವನ್ನುಂಟುಮಾಡಿದನು.

ಅದಾದಮೇಲೆ ಗೌತಮನು ಗಯೆಯ ಬಳಿಗೆ ಹೋಗಿ ಒಂದು ಅಶ್ವತ್ಥ ವೃಕ್ಷದ ಕೆಳಗೆ ಧ್ಯಾನಾಸಕ್ತನಾಗಿ ಕುಳಿತನು. ಜ್ಞಾನವನ್ನು ಪಡೆದಲ್ಲದೆ ಅಲ್ಲಿಂದ ತೆರಳುವುದಿಲ್ಲವೆಂದು ಸಂಕಲ್ಪಿಸಿದನು. ಅದಕ್ಕಾಗಿ ಏಕಾಗ್ರಚಿತ್ತತೆಯಿಂದ ಘೋರ ತಪಸ್ಸನ್ನಾಚರಿಸುತ್ತಿದ್ದನು. ತಪಸ್ಸಿನಲ್ಲಿಯೇ ತಲ್ಲೀನನಾದ ಗೌತ ಮನು ಉರುಳಿಹೋಗುತ್ತಿದ್ದ ಉದಯಾಸ್ತಗಳನ್ನು ಲಕ್ಷಿಸಲಿಲ್ಲ. ಹೀಗೆ ಬಹಳ ದಿನಗಳು ಕಳೆದಮೇಲೆ ಒಂದು ದಿನ ಸಂಜೆ ಧ್ಯಾನಾಸಕ್ತನಾಗಿದ್ದ ಆತನಿಗೆ ಅನಂತವಾದ ಒಂದು ದಿವ್ಯಜ್ಯೋತಿಯ ದರ್ಶನವಾಯಿತು. ಹುಟ್ಟುಗುರುಡ ನಿಗೆ ಕಣ್ಣುಬಂದಂತೆ ಗೌತಮನಿಗೆ ಒಂದು ಭವ್ಯವಾದ ದಿವ್ಯ ಜಗತ್ತೇ ಕಂಡಿತು. ಆ ಅಮರ ಆನಂದದಲ್ಲಿ ಮಿಂದು ಆತನ ತನು ಪವಿತ್ರವಾಯಿತು. ಜಗತ್ತಿನ ಕಷ್ಟಪರಂಪರೆಗಳ ಪರಿಹಾರಮಾರ್ಗ ಗೋಚರಿಸಿತು. ಅಂದು ಸತ್ಯವನ್ನು ಕಂಡ ಗೌತಮನು ಬುದ್ಧನಾದನು; ಜ್ಞಾನಿಯೆನಿಸಿಕೊಂಡನು; ಆತನ ಜ್ಞಾನದಿಂದ ಲೋಕಕ್ಕೇ ಕಲ್ಯಾಣವಾಯಿತು. ಗೌತಮಬುದ್ಧನು ಸಿದ್ಧಿಯನ್ನು ಪಡೆದಾಗ ಆತನಿಗೆ ಮೂವತ್ತೈದು ವರ್ಷಗಳಾಗಿದ್ದುವು. ಆತನು ಕಂಡ ಹೊಸ ಅರಿವಿನ ಬೆಳಕಿನಲ್ಲಿ ಯಜ್ಞಯಾಗಾದಿ ಕರ್ಮಗಳಿಂದ ಎಳ್ಳಷ್ಟೂ ಪ್ರಯೋಜನವಿಲ್ಲವೆಂದು ಸ್ಪಷ್ಟವಾಯಿತು. ಲೋಕಕಲ್ಯಾಣಕ್ಕೆ ಅವು ಯಾವ ದೃಷ್ಟಿಯಿಂದಲೂ ಸಹಾಯಕವಾಗುವಂತೆ ಆತನಿಗೆ ಕಂಡು ಬರಲಿಲ್ಲ.

ಗೌತಮಬುದ್ಧನು ಸಿದ್ಧಿಯನ್ನು ಪಡೆದ ಸ್ಥಳವು ಗಯೆಗೆ ಆರುಮೈಲಿಗಳ ದೂರದಲ್ಲಿ 'ಬುದ್ಧಗಯಾ' ಎಂದು ಪ್ರಸಿದ್ಧಿಯಾಗಿದೆ. ಈಚೆಗೆ ಅಲ್ಲಿ ಮಹಾ ಬೋಧಿ ದೇವಸ್ಥಾನವೊಂದನ್ನು ಕಟ್ಟಿ ಬುದ್ಧನ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಿದ್ದಾರೆ. ಆ ದೇವಸ್ಥಾನದ ಪಕ್ಕದಲ್ಲಿ ಬುದ್ಧನು ಜ್ಞಾನವನ್ನು ಮನನ ಮಾಡಿಕೊಂಡು ಕೆಲವು ದಿನಗಳನ್ನು ಕಳೆದ ಪ್ರದೇಶವಿದೆ. ಗೌತಮನು ಸಿದ್ಧಿಯನ್ನು ಪಡೆದ ಅಶ್ವತ್ಥವೃಕ್ಷವು ಬೋಧಿವೃಕ್ಷವೆಂದು ಪ್ರಖ್ಯಾತಿಹೊಂದಿದೆ.

ಪ್ರತಿವರ್ಷವೂ ಲಕ್ಷಾಂತರ ಯಾತ್ರಾರ್ಥಿಗಳು ಅದರ ಸಂದರ್ಶನಾರ್ಥವಾಗಿ ಅಲ್ಲಿಗೆ ಬಂದುಹೋಗುತ್ತಾರೆ.

ಜ್ಞಾನದಾನ

ಗೌತಮನು ಬುದ್ಧನಾದಮೇಲೆ ಲಭಿಸಿದ ಜ್ಞಾನವನ್ನು ಮನನ ಮಾಡುತ್ತ ನಿರ್ವಾಣದ ಆನಂದವನ್ನು ಅನುಭವಿಸುತ್ತ ನಲವತ್ತೊಂಬತ್ತು ದಿನಗಳನ್ನು ಕಾಡಿನಲ್ಲಿಯೇ ಕಳೆದನು. ಅಜ್ಞಾನ, ಮೌಢ್ಯ, ಅಂಧಕಾರ ಗಳಲ್ಲಿ ಮುಳುಗಿದ್ದ ಮಾನವಕೋಟಿಗೆ ತಾನು ತಿಳಿದ ಜ್ಞಾನವನ್ನು ಬೋಧಿಸಿ, ಅವರನ್ನು ಉದ್ಧಾರಮಾಡುವುದಕ್ಕಾಗಿ ತನ್ನ ಉಳಿದ ಜೀವಿತಕಾಲವನ್ನೆಲ್ಲ ವಿನಿಯೋಗಿಸಬೇಕೆಂದು ನಿರ್ಧರಿಸಿದನು. ಅಲ್ಲಿಂದ ಹಿಂದೂಗಳಿಗೆ ಪವಿತ್ರ ಯಾತ್ರಾಸ್ಥಳವಾದ ಕಾಶೀಕ್ಷೇತ್ರಕ್ಕೆ ಬಂದನು. ಅಲ್ಲಿಯ ಮೃಗದಾವನದಲ್ಲಿ ತಂಗಿದ್ದಾಗ ತನ್ನಉಪದೇಶವನ್ನು ಕೇಳಲು ಬಂದ ಐವರು ಶಿಷ್ಯರಿಗೆ ಬೋಧನೆ ಯನ್ನು ಮಾಡಿದನು. ಮೊಟ್ಟಮೊದಲು ಉಪದೇಶವನ್ನು ಬೋಧಿಸಿದ ಮೃಗದಾವನವು ಈಗ 'ಸಾರಾನಾಥ' ಎಂಬ ಪವಿತ್ರಕ್ಷೇತ್ರವಾಗಿ ಪ್ರಾಮುಖ್ಯತೆ ಯನ್ನು ಪಡೆದಿದೆ. ಕಾಲಾಂತರದಲ್ಲಿ ಅಲ್ಲಿ ಅನೇಕ ಬೌದ್ಧವಿಹಾರಗಳೂ, ಶಿಕ್ಷಣಾಲಯಗಳೂ ಚೈತ್ಯಗಳೂ ದೇಗುಲಗಳೂ ನಿರ್ಮಿತವಾದುವು.

ಬುದ್ಧನಲ್ಲಿ ಭಾರತೀಯ ಸಂಸ್ಕೃತಿಯು ರೂಢಮೂಲವಾಗಿತ್ತು. ಆತನು ಹಿಂದೂತತ್ತ್ವಶಾಸ್ತ್ರಗಳನ್ನು ಆಳವಾಗಿ ಅಭ್ಯಾಸಮಾಡಿ ಉತ್ತಮ ವಿಚಾರ ಗಳನ್ನೆಲ್ಲ ಸಂಶೋಧಿಸಿ ತನ್ನ ಧರ್ಮಕ್ಕೆ ಅಳವಡಿಸಿಕೊಂಡನು. ಬುದ್ಧನ ಧರ್ಮ ಹಿಂದೂಧರ್ಮದಿಂದ ಹೊರತಾದುದಲ್ಲ. ಅದನ್ನು ಮಾರ್ಪಡಿಸಿದ ಹಿಂದೂಧರ್ಮವೆಂದರೂ ತಪ್ಪಾಗಲಾರದು. ಮೊದಲು ಆತನ ಉಪದೇಶ ವನ್ನು ಕೇಳಿದ ಆ ಐವರು ಶಿಷ್ಯರಿಗೆ ಬುದ್ಧನ ಧರ್ಮ ಹಿಂದಿನಿಂದ ಬಂದ ಹಿಂದೂಧರ್ಮದ ಬೇರೊಂದು ರೂಪವೆಂದು ಮನದಟ್ಟಾಯಿತು. ಅದರಿಂದ ಅವರಿಗೆ ಒಂದು ಹೊಸತತ್ತ್ವ ಗೊತ್ತಾಯಿತು. ಆವರು ಆ ಜ್ಞಾನದಿಂದ ಸಂತುಷ್ಟರಾದರು. ಬುದ್ಧನ ಧರ್ಮಚಕ್ರ ಪ್ರವರ್ತನವಾಯಿತು.

ಗೌತಮಬುದ್ಧನ ಉಪದೇಶದಂತೆ ಜೀವನ ದುಃಖಮಯವಾದುದು. ಹುಟ್ಟು, ಸಾವು, ರೋಗ, ಮುಪ್ಪು, ಅಹಿತಸಮಾಗಮ, ಹಿತದ ಅಗಲಿಕೆ ಮುಂತಾದುವು ಸದಾ ಮನುಷ್ಯರನ್ನು ಕಾಡುತ್ತವೆ. ಅಸಂತೋಷ ಸೋಲು

ಗಳಿಂದಲೂ ನೋವುಂಟಾಗುತ್ತದೆ. ಮುಖ್ಯವಾಗಿ ಆಸೆ ಆಕಾಂಕ್ಷೆಗಳೇ ಈ ನೋವಿಗೆ ಕಾರಣ. ಆದುದರಿಂದ ದುಃಖ ಅಥವಾ ನೋವಿಗೆ ಮೂಲವಾದ ಈ ಆಸೆಯನ್ನೂ ಮನೋದೌರ್ಬಲ್ಯವನ್ನೂ ತ್ಯಜಿಸಬೇಕು. ಆಸೆ ಅಥವಾ ತೃಷ್ಣೆಯೇ ಪುನರ್ಜನ್ಮಗಳಿಗೆ ಕಾರಣ. ರಾಗಾದಿಗಳು ಅಳಿದು ಮನಸ್ಸು ಪರಿಶುದ್ಧವಾದರೆ ಆಸೆ ನಾಶವಾಗಿ ದುಃಖ ಮಾಯವಾಗುತ್ತದೆ. ನಿಷ್ಕಾಮವೇ ಮೋಕ್ಷಮಾರ್ಗವೆಂದು ವೇದಾಂತಗಳೂ ಸಾರುತ್ತಿವೆ.

ಲೋಕದಲ್ಲಿ ದುಃಖಕ್ಕೆ ಮೂಲಕಾರಣವಾದ ಆಸೆಯನ್ನು ತ್ಯಜಿಸುವುದಕ್ಕಾಗಿ ಅಜ್ಞಾನ ಮೌಢ್ಯಗಳನ್ನು ದೂರೀಕರಿಸಿ ವಿವೇಕದಿಂದ ಸನ್ಮಾರ್ಗದಲ್ಲಿ ನಡೆಯಬೇಕು. ಆರ್ಯ ಅಷ್ಟಾಂಗಿಕ ನೀತಿಮಾರ್ಗದಿಂದ ದುಃಖವು ತಾನಾಗಿ ಅಳಿದು ಮನಸ್ಸು ಪರಿಶುದ್ಧವಾಗುತ್ತದೆ. ಸದವಲೋಕನ, ಸದವಧಾನ, ಸಚ್ಚಿಂತನ, ಸತ್ಪ್ರಯತ್ನ, ಸತ್ಕಾಂಕ್ಷೆ, ಸದ್ವರ್ತನೆ, ಸದುಕ್ತಿ ಮತ್ತು ಸಜ್ಜೀವನೋಪಾಯಗಳ ಅನುಸರಣೆಯಿಂದ ಅಹಿಂಸಾಮಾರ್ಗದಲ್ಲಿ ನಡೆದು ಆಸೆಯನ್ನು ದೂರಮಾಡಬೇಕು. ಮುಖ್ಯವಾಗಿ ಅಸತ್ಯವನ್ನು ನುಡಿಯದೆ ಮತ್ತೊಬ್ಬರ ಮನವನ್ನು ನೋಯಿಸದೆ ಸತ್ಯದಿಂದಲೂ ಕರುಣೆಯಿಂದಲೂ ಬಾಳಬೇಕು. ಪ್ರಾಣಿಹಿಂಸೆಯನ್ನು ಎಂದಿಗೂ ಮಾಡಬಾರದು. ಮಾಂಸಾಹಾರವನ್ನೂ ಮದ್ಯಾದಿಮಾದಕಗಳನ್ನೂ ತ್ಯಜಿಸಬೇಕು. ಸೋಮಾರಿತನವನ್ನೂ ಹೀನವೃತ್ತಿಯನ್ನೂ ಬಿಟ್ಟು ಸದ್ಗುಣಗಳಿಂದ ಸನ್ಮಾರ್ಗದಲ್ಲಿ ನಡೆಯುವುದನ್ನು ಕಲಿಯಬೇಕು. ಕೆಟ್ಟದ್ದನ್ನು ಎಂದಿಗೂ ಯೋಚಿಸದೆ, ಎಲ್ಲರಿಗೂ ಹಿತವಾಗುವಂತೆ ಸಚ್ಚಾರಿತ್ರದಿಂದ ನಡೆದರೆ ಪೂರ್ಣಸಿದ್ಧಿದೊರೆತು ಜೀವನದ ಕಷ್ಟಪರಂಪರೆಗಳಿಂದ ಬಿಡುಗಡೆಯಾಗುವುದು. ಇದೇ ಬುದ್ಧನ ಅಭಿಪ್ರಾಯವಾಗಿತ್ತು.

ಬುದ್ಧನ ತತ್ತ್ವಗಳು ಭಾರತಕ್ಕೇನೂ ಹೊಸವಲ್ಲ. ಎಂದಿನಿಂದಲೂ ಬಂದಿದ್ದ ಹಿಂದೂಧರ್ಮದ ತತ್ತ್ವಗಳೇ ಅವು. ಆಂದಿನ ಮಂದಿಯಲ್ಲಿ ಹಲವರು ದೇವರಿಗೆ ಪೂಜೆಯನ್ನು ಸಲ್ಲಿಸಿ ಪೂಜಾರಿಗೆ ಹಣವನ್ನು ಕೊಟ್ಟರೆ ದೇವರು ಸುಪ್ರಸನ್ನನಾಗಿ ತಮ್ಮ ಪಾಪವು ಪರಿಹಾರವಾಗುವುದೆಂದು ನಂಬಿದ್ದರು. ಇದರಿಂದ ಅವರಲ್ಲಿ ಪಾಪಭೀತಿ ತಪ್ಪಿ, ದುರ್ಮಾರ್ಗದಲ್ಲಿ ನಡೆದು ತಮ್ಮ ಹಿತಕ್ಕೂ ಇತರರ ಹಿತಕ್ಕೂ ಧಕ್ಕೆಯನ್ನು ತರುತ್ತಿದ್ದರು.

ಬುದ್ಧನು ಆ ಬಗೆಯ ಭಾವನೆಗಳು ತಪ್ಪೆಂದೂ ಅವರವರ ಪಾಪಕ್ಕೆ ಅವರವರೇ ಭಾಗಿಗಳೆಂದೂ ಸ್ಪಷ್ಟಪಡಿಸಿದನು.

ಪದ್ಧತಿಗಳು ಪ್ರಾಚೀನವಾದುವೆಂದೂ ಸಂಪ್ರದಾಯಗಳು ಶತಮಾನಗಳಿಂದ ನಡೆದುಬಂದುವೆಂದೂ ಮೂಢತನದಿಂದ ಎಲ್ಲ ಕಾಲದಲ್ಲೂ ವಿವೇಕವನ್ನು ಉಪಯೋಗಿಸದೆ ಒಂದೇ ಮಾರ್ಗವನ್ನು ಅನುಸರಿಸಬಾರದೆಂಬುದು ಬುದ್ಧನ ಮತವಾಗಿತ್ತು. ಪ್ರಾಚೀನವಾದ ಮಾತ್ರಕ್ಕೆ ಎಲ್ಲವನ್ನೂ ಸರಿಯೆಂದು ನಂಬಬಾರದು. ನಮ್ಮ ಶ್ರೇಯಸ್ಸಿಗೂ ಇತರರ ಮೇಲ್ಮೆಗೂ ಯಾವುದು ಉಚಿತವೋ ಅದೇ ಸದ್ಧರ್ಮ. ಅದರಂತೆ ನಾವು ನಮ್ಮ ಬದುಕನ್ನು ತಿದ್ದಿಕೊಳ್ಳಬೇಕು. ಸದ್ಧರ್ಮ, ಸದಾಚಾರ, ಸತ್ಯಾವಲಂಬನೆ, ಭಕ್ತಿ, ದಯೆಗಳಿಂದ ಕೂಡಿದ್ದರೆ ಸರ್ವರಿಗೂ ಏಳಿಗೆಯುಂಟಾಗುತ್ತದೆ. ಶೀಲಶುದ್ಧತೆಯನ್ನು ಪಡೆದವರೆಲ್ಲರೂ ನಿರ್ವಾಣಸುಖಕ್ಕೆ ಅರ್ಹರೆಂದೂ, ಪ್ರಜ್ಞಾಲಾಭವು ಯಜ್ಞಯಾಗಾದಿ ಕರ್ಮಗಳಿಗಿಂತ ಮಿಗಿಲಾದುದೆಂದೂ ಬುದ್ಧನು ಸಾರಿದನು. ದ್ವೇಷಕ್ಕೆ ಬದಲಾಗಿ ಪ್ರೀತಿ, ಅಪಕಾರಕ್ಕೆ ಪ್ರತಿಯಾಗಿ ಉಪಕಾರ, ಅಸತ್ಯಕ್ಕೆ ಬದಲಾಗಿ ಸತ್ಯ, ಮುಂತಾದ ನೈತಿಕ ಕಟ್ಟಳೆಗಳನ್ನು ಪಾಲಿಸುತ್ತ ಪ್ರಾಣಿವರ್ಗದಲ್ಲಿ ದಯೆಯನ್ನು ತೋರಿ ಅಹಿಂಸೆಯ ಶಾಂತಿಮಾರ್ಗದಲ್ಲಿ ನಡೆಯುವುದೇ ಉಚ್ಚನೀತಿಯೆಂದು ಬುದ್ಧನು ತಿಳಿಯಪಡಿಸಿದನು.

ಬುದ್ಧನ ಈ ಬೋಧನೆಯು ಕೇವಲ ಶುಷ್ಕವೇದಾಂತವೆಂದಾಗಲಿ ಅಥವಾ ಏಕಪಕ್ಷೀಯವೆಂದಾಗಲಿ ಭಾವಿಸುವುದಕ್ಕೆ ಎಡೆಯಿಲ್ಲ. ವೇದಗಳಲ್ಲಿ ಪ್ರಚಾರದಲ್ಲಿದ್ದ ವರ್ಣಾಶ್ರಮಪದ್ಧತಿಯನ್ನೂ ಯಜ್ಞಯಾಗಾದಿಗಳನ್ನೂ ಪಶುವಧೆಗಳನ್ನೂ ಆತನು ಒಪ್ಪಲಿಲ್ಲ. ಮನುಷ್ಯನ ಶ್ರೇಷ್ಠತೆಯು ಆತನ ಸಚ್ಚರಿತ್ರೆಯಿಂದಲ್ಲದೆ ಜಾತಿಯಿಂದಲೂ ಹುಟ್ಟಿನಿಂದಲೂ ನಿರ್ಧರವಾಗುವುದಿಲ್ಲ. ಈ ಮೇಲುಕೀಳುಗಳೆಂಬ ಅಂತಸ್ತನ್ನು ಕಲ್ಪಿಸುವ ವರ್ಣಾಶ್ರಮ ತತ್ತ್ವವನ್ನು ಬುದ್ಧನು ಕಡೆಗಣಿಸಿದನು. ಜಾತಿಯ ಕಟ್ಟಳೆಗಳನ್ನು ಕಿತ್ತೊಗೆದು ತನ್ನ ಮತಕ್ಕೆ ಅಗ್ರಜರಿಂದ ಅಂತ್ಯಜರವರೆಗೆ ಎಲ್ಲರನ್ನೂ ಸೇರಿಸಿಕೊಂಡನು. ಬೌದ್ಧಧರ್ಮದಲ್ಲಿ ಎಲ್ಲರಿಗೂ ಸಮಾನವಾದ ಅವಕಾಶವಿದ್ದಿತು.

ಬುದ್ಧನು ಚಂಡಾಲ ಹುಡುಗಿಯೊಬ್ಬಳನ್ನು ತನ್ನ ಮತಕ್ಕೆ ಸೇರಿಸಿಕೊಂಡನು. ಸಂಪ್ರದಾಯಶರಣರಲ್ಲಿ ಕೆಲವರು ಅದನ್ನು ಪ್ರತಿಭಟಿಸಿದರು.

ಬುದ್ಧನು ಅವರಿಗೆ ಸೂಕ್ತಸಮಾಧಾನಗಳನ್ನು ಕೊಟ್ಟು ತುಟಿಮಿಸುಕದಂತೆ ಮಾಡಿದನು. ಚಿನ್ನಕ್ಕೂ ಬೂದಿಗೂ ಇರುವ ವ್ಯತ್ಯಾಸ ಸರ್ವವಿದಿತವಾಗಿದೆ. ಆದರೆ ಒಬ್ಬ ಮನುಷ್ಯನಿಗೂ ಮತ್ತೊಬ್ಬನಿಗೂ ಏನೂ ವ್ಯತ್ಯಾಸವಿಲ್ಲ. ಏಕೆಂದರೆ ಬ್ರಾಹ್ಮಣನೂ ಚಂಡಾಲನೂ ತಾಯಿಯ ಗರ್ಭದಿಂದ ಒಂದೇ ರೀತಿಯಲ್ಲಿ ಹುಟ್ಟಿಬಂದಿದ್ದಾರೆ. ಅವರ ಅಂಗಾಂಗಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಅದೇ ರೀತಿ ರಾಜಕುಮಾರನ ದೇಹಕ್ಕೂ ಗುಲಾಮನ ದೇಹಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಸೂರ್ಯನಾಗಲಿ ಬೆಂಕಿಯಾಗಲಿ ನೀರಾಗಲಿ ಬ್ರಾಹ್ಮಣರಿಗೆ ವಿಶೇಷ ಸೌಲಭ್ಯಗಳೇನನ್ನೂ ತೋರಿಲ್ಲ. ಅವುಗಳಿಗೆ ಬ್ರಾಹ್ಮಣ ಚಂಡಾಲ ಎಂಬ ಭೇದಭಾವವಿಲ್ಲ. ಅಂದಮೇಲೆ ಕೇವಲ ಹುಟ್ಟಿನಿಂದಲೇ ಬ್ರಾಹ್ಮಣ ಮೇಲಾಗಲಿಲ್ಲ ಶೂದ್ರ ಕೀಳಾಗಲಿಲ್ಲ. ಎಲ್ಲರೂ ಹುಟ್ಟಿನಿಂದ ಒಂದೇ. ಅವರವರ ಸದ್ಗುಣ ಮತ್ತು ವರ್ತನೆಗಳಿಂದ ಯಾರು ಬೇಕಾದರೂ ಮೇಲಾಗಬಹುದು.

ಈ ಉದಾತ್ತತತ್ತ್ವಗಳನ್ನು ಬುದ್ಧನು ಅನೇಕರಿಗೆ ಅರ್ಥವಾಗದ ಸಂಸ್ಕೃತ ಭಾಷೆಯಲ್ಲಿ ಬೋಧಿಸಲಿಲ್ಲ. ಸಂಸ್ಕೃತವು ಪ್ರಾಚೀನ ಭಾಷೆಯಾದರೂ ಅನೇಕರ ವ್ಯವಹಾರಗಳಲ್ಲಿ ಅದು ಇರಲಿಲ್ಲ. ಆದುದರಿಂದ ಅಂದು ಪ್ರಚಲಿತವಾಗಿದ್ದ ಎಲ್ಲರಿಗೂ ಸುಲಭವಾಗಿ ಅರ್ಥವಾಗುತ್ತಿದ್ದ ಪಾಳೀಭಾಷೆಯಲ್ಲಿ ಬುದ್ಧನು ಧರ್ಮೋಪದೇಶವನ್ನು ಮಾಡಿದನು. ಇದರಿಂದ ಬೌದ್ಧಮತವು ಬಹುಬೇಗನೆ ಹರಡಿತು.

ಹೀಗೆ ಬುದ್ಧನು ಉಪದೇಶಿಸಿದ ಧರ್ಮಕ್ಕೆ ಬೌದ್ಧಮತವೆಂದೂ ಅವನ ಅನುಯಾಯಿಗಳಿಗೆ ಬೌದ್ಧರೆಂದೂ ಹೆಸರಾಯಿತು. ಬುದ್ಧನು ತನ್ನ ಧರ್ಮ ಪ್ರಸಾರಕ್ಕೆ ಒಂದು ವ್ಯವಸ್ಥಿತ ಕ್ರಮವನ್ನು ಅನುಸರಿಸಿದನು. ಮೊಟ್ಟಮೊದಲು ತಾನು ಉಪದೇಶಿಸಿದ ಐವರು ಶಿಷ್ಯರನ್ನು ಸೇರಿಸಿ ಒಂದು 'ಸಂಘ'ವನ್ನು ಸ್ಥಾಪಿಸಿದನು. ಬೌದ್ಧಸಂನ್ಯಾಸಿಗಳನ್ನು ಭಿಕ್ಷುಗಳೆಂದು ಕರೆದನು. ಆಮೇಲೆ ಶಿಷ್ಯರಿಗೆ "ಓ, ಭಿಕ್ಕುಗಳೇ! ಎಲ್ಲರ ಲಾಭಕ್ಕಾಗಿ ಕ್ಷೇಮಕ್ಕಾಗಿ ದೇಶಸಂಚಾರ ಮಾಡಿ" ಎಂದು ಹೇಳಿ ಧರ್ಮಪ್ರಸಾರಕ್ಕೆ ಕಳುಹಿಸಿದನು. ಕ್ರಮೇಣ ಬೌದ್ಧ ಸಂನ್ಯಾಸಿಗಳ ಗೋಷ್ಠಿಯಾದ ಈಸಂಘವು ಬೆಳೆಯಲಾರಂಭಿಸಿತು. ಕಾಶಿಯ ಶ್ರೀಮಂತ ಶ್ರೇಷ್ಠಿಯ ಮಗನೂ ಆತನ ಐವತ್ತುನಾಲ್ಕು ಅನುಯಾಯಿಗಳೂ

ಬೌದ್ಧಮತಕ್ಕೆ ಸೇರಿ, ಧರ್ಮಪ್ರಸಾರಕ್ಕಾಗಿ ದೇಶದ ನಾನಾ ಭಾಗಗಳಿಗೂ ಹೋದರು.

ಬುದ್ಧನು ಸ್ಥಾಪಿಸಿದ ಸಂಘಕ್ಕೆ ಯಾರು ಬೇಕಾದರೂ ಸೇರಲವಕಾಶವುಂಟು. ಆದರೆ ಎಲ್ಲ ಭಿಕ್ಷುಗಳೂ ಉಪಾಸಕರೂ ಕೆಲವು ನಿಯಮಗಳನ್ನು ಪಾಲಿಸಬೇಕು. ಅವು ಯಾವುವೆಂದರೆ :—

(1) ದುಷ್ಟಜಂತುಗಳಿಂದ ಮೊದಲುಗೊಂಡು ಯಾವ ಪ್ರಾಣಿಯನ್ನೂ ಹಿಂಸೆಮಾಡಬಾರದು.

(2) ದರೋಡೆ ಕಳ್ಳತನಗಳನ್ನು ಎಂದೂ ಮಾಡಬಾರದು; ವೃತ್ತಿ ಯಾವುದೇ ಆದರೂ ಅದು ಶುದ್ಧವಾಗಿದ್ದರೆ ಆಯಾ ವೃತ್ತಿಯಿಂದಲೇ ಜನರು ಹಿತವನ್ನು ಹೊಂದುವುದಕ್ಕೆ ಸಹಾಯ ಮಾಡಬೇಕು.

(3) ಪರಸ್ತ್ರೀಸಂಗವನ್ನು ಮಾಡಬಾರದು ; ವ್ಯಾಮೋಹವನ್ನು ತ್ಯಜಿಸಬೇಕು ; ಶುದ್ಧಜೀವನವನ ನಡೆಸಬೇಕು.

(4) ಎಂದೂ ಸುಳ್ಳಾಡಬಾರದು.

(5) ಆವ ಕಾರಣದಿಂದಲೂ ಆಣೆಯನ್ನು ಇಡಬಾರದು ; ನಿಂದನೆ ಮತ್ತು ಅಪ್ರಯೋಜಕವಾದ ಮಾತನ್ನಾಡನೆ ಸಂದರ್ಭಾನುಸಾರ ಹಿತಮಿತವಾಗಿ ಮಾತನಾಡಬೇಕು; ಇಲ್ಲವೆ ಮೌನಿಗಳಾಗಿರಬೇಕು.

(6) ಮಾದಕಪದಾರ್ಥಗಳನ್ನು ಸೇವಿಸಬಾರದು.

(7) ಚಾಡಿಮಾತುಗಳನ್ನು ಎಂದೂ ಹೇಳಬಾರದು; ಗುಣಿಗಳನ್ನು ಹಿಂಸಕರಿಂದ ಕಾಪಾಡುವುದಕ್ಕೆ ಪ್ರಯತ್ನಿಸಬೇಕು.

(8) ಪರರ ಸ್ವತ್ತಿಗೆ ಆಶಿಸಬಾರದು ; ಇತರರ ಮೇಲ್ಮೆಯನ್ನು ಕಂಡು ಸಂತೋಷಿಸಬೇಕು.

(9) ಮತ್ಸರ, ಕ್ರೋಧ, ಹಗೆತನ ಮುಂತಾದ ದುರ್ಭಾವನೆಗಳನ್ನು ದೂರೀಕರಿಸಬೇಕು. ತನಗೆ ತೊಂದರೆಯನ್ನುಂಟುಮಾಡಿದವರ ಮೇಲೂ ವೈರವನ್ನು ಬೆಳೆಸಬಾರದು.

(10) ಅಜ್ಞಾನ ಮೌಢ್ಯಗಳಿಂದ ಬಿಡುಗಡೆ ಹೊಂದಲು ಯತ್ನಿಸಿ ಸಂಶಯವನ್ನು ತೊರೆದು, ಸತ್ಯವನ್ನು ಅರಿಯಬೇಕು.

ಮೇಲಿನ ನಿಯಮಗಳಂತೆ ಅತಿಯಾದ ಸುಖಾಪೇಕ್ಷೆಯನ್ನೂ ವೈರಾಗ್ಯವನ್ನೂ ಬಿಟ್ಟು ಮಧ್ಯಮಾರ್ಗವನ್ನನುಸರಿಸಿ ಪವಿತ್ರ ಜೀವನ ವನ್ನು ನಡೆಸುವುದೇ ಭಿಕ್ಷುಗಳಿಗೆ ಮುಖ್ಯವಾದದ್ದು. ಸೂರ್ಯೋದಯ ವಾದ ಮೇಲೆ ಮಧ್ಯಾಹ್ನದೊಳಗಾಗಿ ಭಿಕ್ಷೆಯನ್ನು ಮುಗಿಸಿಕೊಂಡು ಬರ ಬೇಕು. ತಾವಾಗಿ ಕೊಟ್ಟವರಿಂದ ಭಿಕ್ಷೆಯನ್ನು ಪಡೆಯಬೇಕು ಜೀವ ವನ್ನುಳಿಸಿಕೊಳ್ಳುವುದಕ್ಕೆ ಬೇಕಾದಷ್ಟನ್ನು ಮಾತ್ರ ತಿಂದು ಜೀವಿಸಬೇಕು. ಭಿಕ್ಷುವಿಗೆ ಕೌಪೀನ, ಅಂಗವಸ್ತ್ರ, ಉತ್ತರೀಯ, ದಟ್ಟಿ, ಕ್ಷೌರಗತ್ತಿ, ಸೂಜಿ, ಭಿಕ್ಷಾಪಾತ್ರೆ ಮತ್ತು ನೀರುಸೋಸುವ ಬಟ್ಟೆ ಈ ಎಂಟು ವಸ್ತುಗಳಲ್ಲದೆ ಬೇರಾವ ಸ್ವಂತ ವಸ್ತುಗಳೂ ಇರಕೂಡದು. ಭಿಕ್ಷುಗಳೆಂದಿಗೂ ಬತ್ತಲೆ ಯಿಂದಿರಕೂಡದು. ಮಳೆಗಾಲವನ್ನು ಬಿಟ್ಟು ವರ್ಷದ ಉಳಿದ ಎಲ್ಲಾ ಕಾಲದಲ್ಲೂ ಪ್ರಯಾಣಮಾಡುತ್ತ ಧರ್ಮಪ್ರಚಾರವನ್ನು ಕೈಗೊಳ್ಳಬೇಕು. ಮೇಲಿನ ನಿಯಮಗಳನ್ನು ಪಾಲಿಸುವವರು ಯಾರು ಬೇಕಾದರೂ ಮತ್ತಾವ ನಿರ್ಬಂಧವೂ ಇಲ್ಲದೆ ಸಂಘಕ್ಕೆ ಸೇರಬಹುದಾಗಿತ್ತು. ಆದುದರಿಂದಲೇ ಅನೇಕರು ಬೌದ್ಧಧರ್ಮವನ್ನವಲಂಬಿಸಿ ಭಿಕ್ಷುಗಳಾದರು.

ಬುದ್ಧನಿಗೆ ಸ್ತ್ರೀಯರಲ್ಲಿ ಅಪಾರವಾದ ಗೌರವವಿತ್ತು. ಆದರೆ ಭಿಕ್ಷು ಸಂಘಕ್ಕೆ ಅವರನ್ನು ಸೇರಿಸಿಕೊಳ್ಳಲು ಆತನಿಗೆ ಇಷ್ಟವಿರಲಿಲ್ಲ. ಏಕೆಂದರೆ ಮನೋದೌರ್ಬಲ್ಯದಿಂದ ಸಂಘದಲ್ಲಿ ಅನೀತಿ ಹುಟ್ಟಿಕೊಳ್ಳಬಹುದೆಂದೂ ಅದರಿಂದ ವ್ರತ ಭಂಗವಾದೀತೆಂದೂ ಆತನು ನಂಬಿದ್ದನು. ಆದರೂ ಹಲವರ ಒತ್ತಾಯದಿಂದಲೂ ತನ್ನ ಸಾಕುತಾಯಿ ಗೌತಮೀದೇವಿಯ ಪ್ರಾರ್ಥನೆ ಯಿಂದಲೂ ಹೆಂಗಸರನ್ನೂ ಭಿಕ್ಷುಣಿಯರನ್ನಾಗಿ ಸೇರಿಸಿಕೊಂಡನು. ಭಿಕ್ಷುಣಿಯರೂ ನಿಯಮಿತವಾದ ಅಷ್ಟಶೀಲಗಳನ್ನು ಪಾಲಿಸುತ್ತ ಪುರುಷರಿಗೆ ಸಮಾನರಾಗಿ ಧರ್ಮಜೀವನವನ್ನು ನಡೆಸಬಹುದಾಗಿತ್ತು. ಹೀಗೆ ಸ್ತ್ರೀಯರಿಗೆ ಸಮಾನತೆಯನ್ನು ಕೊಟ್ಟು ಆಗಿನ ಹಿಂದೂಸಮಾಜದಲ್ಲಿದ್ದ ಒಂದು ದೌರ್ಬಲ್ಯವನ್ನು ತೊಡೆದುಹಾಕಿದನು. ಸ್ತ್ರೀಯರನ್ನು ಕೀಳುಭಾವನೆಯಿಂದ ಜನರು ಅಲ್ಲಗಳೆಯುವುದು ಅನುಚಿತವೆಂಬುದು ಆತನ ನಿಷ್ಕೃಷ್ಟಭಾವನೆ. ಆದುದರಿಂದ ಹೆಂಗಸು ಬುದ್ಧಿವಂತಳೂ ಶೀಲವಂತಳೂ ಆಗಿ ಅತ್ತೆ

ಮಾವಂದಿರನ್ನು ಗೌರವದಿಂದ ಕಾಣುತ್ತ ಪಾತಿವ್ರತ್ಯದಿಂದ ಬಾಳಿದರೆ ಆಕೆಯೇ ಗಂಡಸಿಗಿಂತ ಶ್ರೇಷ್ಠಳು ಎಂದಿದ್ದಾನೆ.

ಹೀಗೆ ಬುದ್ಧನು ಸ್ತ್ರೀಯರನ್ನು ಗೌರವದಿಂದ ಕಾಣುತ್ತ ಅವರಿಗೆ ಗೃಹಿಣಿಯರ ಧರ್ಮವನ್ನು ಉಪದೇಶಿಸುತ್ತ ಸಂನ್ಯಾಸದಲ್ಲೂ ಸಮಾನಾಧಿಕಾರವನ್ನು ಕೊಟ್ಟನು. ಅವರು ಬುದ್ಧನ ಉಪದೇಶದಂತೆ ನಡೆದು ತಮ್ಮ ಶೀಲ ಮತ್ತು ಸೇವೆಗಳಿಂದ ವಿಶೇಷ ಮನ್ನಣೆಯನ್ನೂ ಸಿದ್ಧಿಯನ್ನೂ ಪಡೆದು ಸತ್ಯಸಾಕ್ಷಿಗಳಾದರು. ಅವರಲ್ಲಿ ಮುಕ್ತಾ, ಸುಮಂಗಲಮಾತಾ, ಕೃಶಾಗೌತಮಿ, ಚಂದ್ರಾ, ವಿಮಲಾ, ಸುಜಾತಾ, ಅನುಪಮಾ, ಪೂರ್ಣಾ, ರೋಹಿಣಿ ಮುಂತಾದವರು ಮುಖ್ಯರು.

ಬುದ್ಧನು ಧರ್ಮೋಪದೇಶವನ್ನು ಮಾಡಲು ಪ್ರಾರಂಭಿಸಿದಮೇಲೆ ಅನೇಕರು ಬೌದ್ಧಮತವನ್ನು ಸೇರುವುದಕ್ಕೆ ಮುಂದೆ ಬಂದರು. ಆತನ ಶಿಷ್ಯರು ದೇಶದ ನಾನಾ ಭಾಗಗಳಿಗೆ ಹೋಗಿ ಧರ್ಮವನ್ನು ಪ್ರಸಾರಮಾಡುತ್ತಿದ್ದರು. ವೈದಿಕಮತದ ಪಂಡಿತರ ಸಂಕುಚಿತ ದೃಷ್ಟಿಯಿಂದ ಅಸಮಾಧಾನಗೊಂಡಿದ್ದ ಜನರಿಗೆ ಮೇಲು ಕೀಳುಗಳೆಂಬ ಅಂತರವಿಲ್ಲದೆ ಬೌದ್ಧಧರ್ಮವು ತೃಪ್ತಿಕರವಾಗಿ ಕಂಡುಬಂದುದರಿಂದ ಅನೇಕರು ಈ ಧರ್ಮಕ್ಕೆ ಶರಣು ಹೋದರು. ಅಷ್ಟೇ ಅಲ್ಲದೆ ದೇಶವಿದೇಶಗಳಿಂದ ವಿವಿಧ ಜಾತಿಯ ಜನರು ಬಂದು ಬೌದ್ಧಧರ್ಮಾನುಯಾಯಿಗಳಾದರು. ಮಳೆಗಾಲದಲ್ಲಿ ಶಿಷ್ಯರೆಲ್ಲರೂ ಒಂದೆಡೆ ವಿಹಾರಗಳಲ್ಲಿ ತಂಗುತ್ತಿದ್ದರು. ಆಗ ಅವರು ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳುವುದಕ್ಕೂ ಜ್ಞಾನವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೂ ಅವಕಾಶವಿರುತ್ತಿತ್ತು.

ಬುದ್ಧನು ಜ್ಞಾನಿಯಾಗಿದ್ದರೂ ಕುಳಿತೆಡೆಯಲ್ಲಿಯೇ ಧರ್ಮವನು ಪ್ರಸಾರಮಾಡದೆ ಇತರರಂತೆ ತಾನೂ ದೇಶದ ನಾನಾ ಭಾಗಗಳಲ್ಲಿ ಸಂಚಾರ ಮಾಡಲು ಪ್ರಾರಂಭಿಸಿದನು. ಅಲ್ಲಲ್ಲಿ ಸಂಘಗಳನ್ನೂ ವಿಹಾರಗಳನ್ನೂ ಸ್ಥಾಪಿಸಿ ಶಿಷ್ಯರನ್ನು ದೇಶದ ಎಲ್ಲೆಡೆಗಳಿಗೂ ಕಳುಹಿಸಿದನು. ಹೀಗೆ ಧರ್ಮ ಪ್ರಸಾರಕ್ಕಾಗಿಯೇ ನಿರ್ಮಿತವಾದ ಸುಸಂಘಟಿತ ಸಂಸ್ಥೆಗಳಲ್ಲಿ ಬೌದ್ಧ ಭಿಕ್ಷುಗಳಸಂಘವೇ ಜಗತ್ತಿನಲ್ಲಿ ಮೊದಲನೆಯದು. ಗೌತಮನು ಜ್ಞಾನಿಯಾಗಿ ಬುದ್ಧನಾದಮೇಲೆ ತನ್ನ ಜೀವಿತದ ಸುಮಾರು ನಾಲ್ವತ್ತೈದು ವರ್ಷಗಳನ್ನು

ಧರ್ಮೋಪದೇಶದಲ್ಲೇ ಕಳೆದನು. ಆತನ ನಿರಂತರ ಪ್ರಯತ್ನಗಳ ಫಲವಾಗಿಯೇ ಬೌದ್ಧಮತವು ವಿಶ್ವವ್ಯಾಪಕತೆಯನ್ನು ಪಡೆದು ವಿಶ್ವಮತವಾಯಿತು.

ಧರ್ಮವನ್ನು ಪ್ರಸಾರಮಾಡುತ್ತ ಬುದ್ಧನು ಗಯೆಯ ಮಾರ್ಗವಾಗಿ ರಾಜಗೃಹಕ್ಕೆ ಪ್ರಯಾಣ ಬೆಳೆಸಿದನು. ಮೊದಲು ತಾನು ಬಿಂಬಸಾರನಿಗೆ ವಚನವಿತ್ತಿದ್ದಂತೆ ಉಪದೇಶವನ್ನು ಮಾಡಿದನು. ಬುದ್ಧನ ಅಮೃತವಾಣಿಯನ್ನು ಕೇಳಿದ ಬಿಂಬಸಾರನು ಸಂತೃಪ್ತನಾಗಿ ಬೌದ್ಧಮತದ ಉಪಾಸಕನಾದನು. ತನ್ನ ಗುರುವಿಗೆ ಕಾಣಿಕೆಯಾಗಿ ವೇಣುವನವನ್ನು ಕೊಟ್ಟನು. ಬುದ್ಧನು ಸಂಘದ ಪರವಾಗಿ ಅದನ್ನು ಸ್ವೀಕರಿಸಿದನು. ಆ ವೇಣುವನದಲ್ಲಿದ್ದಾಗ ಸಾರಿಪುತ್ರ ಮತ್ತು ಮೌದ್ಗಲ್ಯಾಯನ ಎಂಬಿಬ್ಬರು ಬುದ್ಧನ ಉಪದೇಶವನ್ನು ಕೇಳಿ ಆತನ ಶಿಷ್ಯರಾದರು. ಕ್ರಮೇಣ ಅವರಿಬ್ಬರು ಬುದ್ಧನ ಶಿಷ್ಯರಲ್ಲಿ ಮುಖ್ಯರೆನಿಸಿಕೊಂಡರು. ಹಾಗೆಯೇ ಮಹಾಕಾಶ್ಯಪನೆಂಬ ಬ್ರಾಹ್ಮಣನೂ ಬೌದ್ಧಮತವನ್ನು ಸೇರಿದನು.

ಬುದ್ಧನ ಅಭಿಪ್ರಾಯದಂತೆ ಅನಾದಿಯಾದ ಕರ್ಮಗಳೇ ಜನ್ಮ ಮತ್ತು ದುಃಖಕ್ಕೆ ಕಾರಣ. ಈ ದುಃಖಪೂರಿತವಾದ ಜನ್ಮದಿಂದ ಪಾರಾಗುವುದೇ ಮಹಾ ಪುಣ್ಯ. ಅದಕ್ಕಾಗಿ ಕಷ್ಟಸಾಧ್ಯವಾದ ಆತ್ಮ ಬ್ರಹ್ಮಾದಿಗಳ ಜಿಜ್ಞಾಸೆಯಲ್ಲಿ ತೊಡಗುವುದಕ್ಕಿಂತ ಸನ್ಮಾರ್ಗಪ್ರವರ್ತಕರಾದರೆ ದುಃಖವು ನಿವಾರಣೆಯಾಗಿ ನಿರ್ವಾಣಕ್ಕೆ ಸೋಪಾನವಾಗುವುದು. ಆದುದರಿಂದ ಮಾನವರು ಉತ್ತಮಮಾರ್ಗದಲ್ಲಿ ಬಾಳಿ ಬದುಕಿ ಜೀವನದ ಜಂಜಾಟದಿಂದ ಪಾರಾಗಿ ನಿರ್ವಾಣಸುಖವನ್ನು ಪಡೆಯಲು ಪ್ರಯತ್ನಿಸಬೇಕು.

ಯಜ್ಞಯಾಗಾದಿಗಳಿಂದಲೂ ವರ್ಣಭೇದದಿಂದಲೂ ಬೇಸತ್ತಿದ್ದ ಅಂದಿನ ಜನಕ್ಕೆ ಬುದ್ಧನ ಈ ಸುಧಾರಿತ ತತ್ತ್ವಗಳು ತುಂಬ ಪ್ರಿಯವಾಗಿ ಕಂಡವು. ಇದೂ ಅಲ್ಲದೆ ರಾಜಕುಮಾರನಾಗಿದ್ದ ಗೌತಮನು ಸಕಲ ಸಾಮ್ರಾಜ್ಯವನ್ನೂ, ಭೋಗಭಾಗ್ಯಗಳನ್ನೂ, ಒಟ್ಟಿನಲ್ಲಿ ಸರ್ವಸ್ವವನ್ನೂ ತೊರೆದು ತಪಸ್ಸಾಧನೆಯಿಂದ ಬುದ್ಧಪದವಿಯನ್ನು ಪಡೆದುದನ್ನು ಕಂಡು ಕೇಳಿದ ಜನ ಆತನ ತ್ಯಾಗಮಯ ಜೀವನಕ್ಕೆ ಮಾರುಹೋದರು. ಬುದ್ಧನ ಗಂಭೀರವಾದ ಸೌಮ್ಯಾಕೃತಿ, ದಿವ್ಯತೇಜಸ್ಸು, ಅಪಾರವಾದ ಜ್ಞಾನ, ಕಂಡವರನ್ನೆಲ್ಲ ಆಕರ್ಷಿಸುವ ದೃಷ್ಟಿ, ಅಸಾಧಾರಣ ವಾಗ್ವೈಖರಿ, ಬೌದ್ಧ

ಧರ್ಮದಲ್ಲಿ ಆತನಿಗಿದ್ದ ಅಚಲವಾದ ನಂಬಿಕೆ, ಸಜ್ಜನತ್ವ, ಉದಾರತ್ವ ಮುಂತಾದ ವಿಶಿಷ್ಟಗುಣಗಳಿಂದ ಹಲವರಿಗೆ ಆತನು ಸಾಕ್ಷಾತ್ ಪರಮೇಶ್ವರನ ಸ್ವರೂಪವಾಗಿಯೇ ಕಂಡನು. ಆತನ ಕೇವಲ ನಾಮಸ್ಮರಣೆಯಿಂದಲೇ ಮೈರೋಮಾಂಚಗೊಂಡು ಆತನ ವ್ಯಕ್ತಿತ್ವದಲ್ಲಿ ಒಂದು ಪೂಜ್ಯಭಾವನೆಯನ್ನುಂಟುಮಾಡುತ್ತದೆ. ಈ ರೀತಿ ಜನದ ಮನದಲ್ಲಿ ಅಚ್ಚೊತ್ತಿದಂತೆ ನಿಲ್ಲುವ ಮಹಾನುಭಾವರು ಅತ್ಯಂತ ವಿರಳ.

ಹೀಗೆ ದೇಶದ ನಾನಾ ಭಾಗಗಳಲ್ಲಿ ಬೌದ್ಧಧರ್ಮವನ್ನು ಪ್ರಚಾರಮಾಡುತ್ತಿದ್ದ ಭಿಕ್ಷುಗಳಲ್ಲಿ ಅಜ್ಞಾತಕೌಂಡಿನ್ಯ, ಅಶ್ವಜಿತ್, ಸಾರಿಪುತ್ರ, ಮೌದ್ಗಲ್ಯಾಯನ, ಮಹಾಕಾಶ್ಯಪ, ಮಹಾಕಾತ್ಯಾಯನ, ಅನುರುದ್ಧ, ಉಪಾಲಿ, ಭಾರದ್ವಾಜ, ಕೌಸ್ತಿಲ, ರಾಹುಲ, ಮೈತ್ರಾಯಿನಿ ಎಂಬುವರು ಮುಖ್ಯರು. ಇವರು ಪ್ರಧಾನ ಮತಪ್ರಚಾರಕರೆಂದು ಹೆಸರನ್ನು ಪಡೆದರು.

ಇವರೇ ಅಲ್ಲದೆ ಅನಾಥಪಿಂಡಿಕನೆಂಬ ಶ್ರೀಮಂತ ವ್ಯಾಪಾರಿಯು ಬೌದ್ಧಮತಕ್ಕೆ ಸೇರಿ ಅನಾಥರಕ್ಷಕನೂ ಧರ್ಮಾತ್ಮನೂ ಆದನು. ಈತನು ಅಪಾರ ಹಣವನ್ನು ಕೊಟ್ಟು 'ಜೇತವನ' ಎಂಬ ವನವನ್ನು ಕೊಂಡುಕೊಂಡು ಅಲ್ಲಿ ವಿಹಾರಗಳನ್ನು ಕಟ್ಟಿಸಿ ಬುದ್ಧನಿಗೆ ಅವೆಲ್ಲವನ್ನೂ ಕಾಣಿಕೆಯಾಗಿ ಅರ್ಪಿಸಿದನು. ಜೀವಕನೆಂಬ ವೈದ್ಯನು ಬೌದ್ಧಭಿಕ್ಷು ಭಿಕ್ಷುಣಿಯರಿಗೆ ಬೇಕಾದ ಔಷಧೋಪಚಾರಗಳನ್ನು ಒದಗಿಸುತ್ತಿದ್ದನು. ಶ್ರಾವಸ್ತಿಯ ಶ್ರೀಮಂತ ಜೈನವ್ಯಾಪಾರಿಯ ಮಗಳಾದ ವೈಶಾಖೆಯು ಬೌದ್ಧರಿಗೆ ಅಗತ್ಯವಾದ ಉಡುಪುಗಳನ್ನು ಒದಗಿಸುತ್ತಿದ್ದಳು. ಈಕೆ 'ಪೂರ್ವರಾಮವಿಹಾರ' ಎಂಬ ಭವ್ಯವಾದ ಕಟ್ಟಡವನ್ನು ಕಟ್ಟಿಸಿಕೊಟ್ಟಳು. ಇವರೇ ಅಲ್ಲದೆ ಕೋಸಲದ ಪ್ರಸೇನಜಿತ್, ಕೌಸಾಂಬಿಯ ಉದ್ಯಾಯನ, ಬಿಂಬಸಾರ ಮುಂತಾದ ರಾಜರೂ; ಸುನೀತ, ಸ್ವಾತಿ, ನಂದನ, ಚಂಪ, ಉಪಾಲಿ, ವಿಮಲ, ಪೂರ್ಣಾ ಮೊದಲಾದ ಹೀನವಂಶಜರೂ ಬುದ್ಧನ ಶಿಷ್ಯರಾದರು. ಇವರೆಲ್ಲರ ಪೈಕಿ ಬುದ್ಧನ ದಾಯಾದಿಯಾದ ಆನಂದನೇ ಅತ್ಯಂತ ಪ್ರಿಯಶಿಷ್ಯನಾದನು.

ಬುದ್ಧ ಯಶೋಧರೆಯರ ಸಂದರ್ಶನ

ಬುದ್ಧನು ಧರ್ಮಪ್ರಚಾರಕ್ಕಾಗಿ ದೇಶದ ನಾನಾ ಭಾಗಗಳಲ್ಲಿ ಸಂಚರಿಸುತ್ತ ರಾಜಗೃಹದಲ್ಲಿ ತಂಗಿದ್ದ ವರ್ತಮಾನವು ಕಪಿಲವಸ್ತುವಿಗೆ ಮುಟ್ಟಿತು.

ಆತನ ಕೀರ್ತಿ ಗೌರವ ಪ್ರತಿಷ್ಠೆಗಳನ್ನು ಕೇಳಿದ್ದ ಶುದ್ಧೋದನನೂ ಕಪಿಲವಸ್ತುವಿನ ಪ್ರಜೆಗಳೂ ಬುದ್ಧನ ಸಂದರ್ಶನಕ್ಕಾಗಿ ಕಾತರಗೊಂಡಿದ್ದರು. ಶುದ್ಧೋದನನು ಬುದ್ಧನನ್ನು ಕರೆತರಲು ತನ್ನ ಮಂತ್ರಿಗಳಲ್ಲಿ ಒಬ್ಬನನ್ನು ಕಳುಹಿಸಿಕೊಟ್ಟನು. ಎಷ್ಟು ದಿನಗಳಾದರೂ ಆತನು ಹಿಂತಿರುಗಲೇ ಇಲ್ಲ. ಆಮೇಲೆ ಮತ್ತೊಬ್ಬ ಮಂತ್ರಿಯನ್ನು ಕಳುಹಿಸಿದನು. ಆದರೆ ಆತನೂ ಹಿಂತಿರುಗಲಿಲ್ಲ. ಮಂತ್ರಿಗಳೆಲ್ಲ ಒಬ್ಬರಾದಮೇಲೆ ಒಬ್ಬರು ಹೋದವರು ಯಾರೂ ಹಿಂತಿರುಗಲೇ ಇಲ್ಲ. ಅವರೆಲ್ಲರೂ ಬುದ್ಧನ ಧರ್ಮೋಪದೇಶವನ್ನು ಕೇಳಿ ಕಾರ್ಯಗೌರವವನ್ನೂ ಮರೆತು ಬುದ್ಧನಲ್ಲಿಯೇ ನೆಲಸಿಬಿಟ್ಟರು. ಕೊನೆಗೆ. ಶುದ್ಧೋದನನು ತನ್ನ ಆಪ್ತಸಚಿವನನ್ನೇ ಕಳುಹಿಸಿದನು. ಆತನೂ ಸಹ ಬುದ್ಧನ ಧರ್ಮೋಪದೇಶಕ್ಕೆ ಮಾರುಹೋದನು. ಆದರೆ ತಾನು ಬಂದಿದ್ದ ಕಾರ್ಯವನ್ನು ಮರೆಯಲಿಲ್ಲ. ಬುದ್ಧನು ಶುದ್ಧೋದನನ ಅಭೀಷ್ಟದಂತೆ ಕಪಿಲವಸ್ತುವಿಗೆ ಪ್ರಯಾಣವನ್ನು ಬೆಳೆಸಿದನು.

ಬುದ್ಧನ ಆಗಮನವನ್ನರಿತ ಕಪಿಲವಸ್ತುವಿನ ಪ್ರಜೆಗಳು ನಗರವನ್ನು ತಳಿರು ತೋರಣಗಳಿಂದ ಅಲಂಕರಿಸಿದರು. ಊರ ಹೊರಗಡೆಯ ಒಂದು ದೊಡ್ಡ ನ್ಯಗ್ರೋಧವೃಕ್ಷದ ಕೆಳಗೆ ಬಿಡಾರವನ್ನು ಸಿದ್ಧಪಡಿಸಿದರು. ಬುದ್ಧನು ಕಪಿಲವಸ್ತುವನ್ನು ಸಮೀಪಿಸುತ್ತಲೇ ದರ್ಶನಾಕಾಂಕ್ಷಿಗಳಾದ ಪ್ರಜೆಗಳು ಊರುಮುಂದೆ ಬಂದು ಅತ್ಯಾದರದಿಂದ ಆತನನ್ನು ಸ್ವಾಗತಿಸಿ ಪುಷ್ಪವೃಷ್ಟಿಯನ್ನು ಸುರಿಸಿದರು; ಅಪೂರ್ವಶೋಭೆಯಿಂದ ಕಂಗೊಳಿಸುತ್ತಿದ್ದ ಬುದ್ಧನಿಗೆ ದೀರ್ಘ ದಂಡಪ್ರಣಾಮವನ್ನು ಮಾಡಿದರು; ತಮ್ಮ ಜನ್ಮ ಪುನೀತವಾಯಿತೆಂದು ತೃಪ್ತಿಪಟ್ಟುಕೊಂಡರು.

ಊರುಮುಂದೆ ತಮಗಾಗಿ ಏರ್ಪಡಿಸಿದ್ದ ರಮ್ಯಪ್ರದೇಶದಲ್ಲಿ ಬುದ್ಧನೂ ಆತನ ಭಿಕ್ಷುಗಳೂ ಇಳಿದುಕೊಂಡರು. ಮರುದಿನ ಬುದ್ಧನು ಶಿಷ್ಯರೊಡನೆ ಭಿಕ್ಷೆಗೆ ಹೊರಟನು. ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಮನೆಮನೆಗೂ ಹೋಗುತ್ತಿದ್ದ ಬುದ್ಧನನ್ನು ನೋಡಿದ ಜನ ಅರಸುಕುವರನಾಗಿದ್ದು ರಾಜವೈಭವಗಳಲ್ಲಿ ಮೆರೆಯುತ್ತಿದ್ದ ಆತನ ಮನಃಸ್ಥಿತಿಯನ್ನು ಕಂಡು ಮಂತ್ರಮುಗ್ಧರಂತಾದರು. ಬುದ್ಧನು ಭಿಕ್ಷೆಯೆತ್ತುತ್ತಿರುವನೆಂಬುದನ್ನು ಕೇಳಿದ ಶುದ್ಧೋದನನಿಗೆ ಅಪಮಾನವಾದಂತಾಗಿ ನೇರವಾಗಿ ಆತನಲ್ಲಿಗೆ

ಬಂದು "ಶಾಕ್ಯವಂಶದಲ್ಲಿ ಹುಟ್ಟಿದ ನೀನು ನನಗೂ ನನ್ನ ವಂಶಕ್ಕೂ ಅಪಮಾನವಾಗುವಂತೆ ಹೀಗೆ ಭಿಕ್ಷೆಯನ್ನು ಬೇಡಬಹುದೆ? ಯಾವ ನಗರದ ರಾಜಕುಮಾರನಾಗಿ ಬೆಳಗಬೇಕಾಗಿತ್ತೋ ಅದೇ ನಗರದಲ್ಲಿ ಭಿಕ್ಷೆಯನ್ನು ಬೇಡಬಹುದೆ" ಎಂದು ಪ್ರಶ್ನಿಸಿದನು. ಅದನ್ನು ಕೇಳಿದ ಬುದ್ಧನು ಸೌಮ್ಯವಾಗಿ "ಭಿಕ್ಷೆಬೇಡುವುದು ನಮ್ಮ ಸಂಪ್ರದಾಯ" ಎಂದು ಉತ್ತರಿಸಿದನು. ಶುದ್ಧೋದನನು "ಇದು ಕ್ಷತ್ರಿಯರ ಸಂಪ್ರದಾಯ ವಲ್ಲ. ತಮ್ಮ ಖಡ್ಗದ ಬಲದಿಂದ ರಾಜ್ಯ ಐಶ್ವರ್ಯಗಳನ್ನು ಸಂಪಾದಿಸಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಪರಿಪಾಲಿಸುವುದು ಕ್ಷತ್ರಿಯರ ಸಂಪ್ರದಾಯ" ಎಂದನು. ಅದಕ್ಕೆ ಬುದ್ಧನು "ಅದೂ ಇರಬಹುದು. ಆದರೆ ಭಿಕ್ಷೆಬೇಡುವುದು ನನ್ನ ವಂಶೀಯರ ಪದ್ಧತಿಯಾಗಿದೆ" ಎಂದು ಹೇಳಿದನು. ಇದನ್ನು ಕೇಳಿದ ಶುದ್ಧೋದನನು ಅವಾಕ್ಕಾದನು. ಆಮೇಲೆ "ಶಾಕ್ಯವಂಶೀಯರು ಯಾರೂ ಹಿಂದೆ ಭಿಕ್ಷೆಯನ್ನು ಬೇಡಿರಲಿಲ್ಲವಲ್ಲ" ಎಂದನು. ಬುದ್ಧನು "ನನ್ನದು ಶಾಕ್ಯವಂಶವಲ್ಲ; ಬುದ್ಧವಂಶ. ಬೌದ್ಧವಂಶೀಯರಿಗೆ ಈ ವೃತ್ತಿ ಬಹಳ ಹಿಂದಿನಕಾಲದಿಂದಲೂ ಬಂದಿರುವ ಧರ್ಮವಾಗಿದೆ. ನನ್ನಂತೆಯೇ ಹಿಂದೆ ಸಾವಿರಾರು ಬುದ್ಧರು ಭಿಕ್ಷೆಮಾಡಿ ಬಾಳಿದ್ದಾರೆ"ಎಂದು ಹೇಳಿದನು. ಅದನ್ನು ಕೇಳಿದ ಶುದ್ಧೋದನನು "ಈಗ ನೀನು ನನ್ನದು ಎಂಬುದನ್ನೆಲ್ಲ ಬಿಟ್ಟು ವಿಶ್ವದ ಅನಂತದ ಆಶ್ರಯವನ್ನು ಪಡೆದಿದ್ದೀಯೆ. ಎಂದಿಗೂ ಅಳಿಯದ ಶಾಶ್ವತ ಸಾಮ್ರಾಜ್ಯವನ್ನು ಸ್ಥಾಪಿಸಿದ್ದೀಯೆ. ತಾತ್ಕಾಲಿಕವೂ ಅನಿತ್ಯವೂ ಆದ ಈ ರಾಜ್ಯ ನಿನ್ನ ಕಣ್ಣಿಗೆ ಕಾಣಿಸುವುದಿಲ್ಲ. ನನಗಾದರೋ ಕ್ಷಣಿಕವೂ ಅಶಾಶ್ವತವೂ ಆದ ಈ ರಾಜ್ಯಭಾರವೇ ವೃತ್ತಿಯಾಗಿದೆ. ನನ್ನ ಅದೃಷ್ಟಫಲವಂತೆ ಶಾಕ್ಯರಾಜನಾಗಿ ನ್ಯಾಯಾಧಿಪತಿಯಾಗಿ ಪ್ರಜೆಗಳ ರಕ್ಷಕನಾಗಿ ಬಾಳಬೇಕು. ನನ್ನ ಬಾಳೂ ಕೊನೆಯನ್ನು ಮುಟ್ಟುತ್ತಿದೆ. ಒಡೆಯ ಸೇವಕನಿಗೆ ಆಜ್ಞಾಪಿಸುವಂತೆ ಸ್ವಲ್ಪಕಾಲದಲ್ಲಿಯೇ ಮೃತ್ಯುವು ನನಗೆ ಕರೆಯನ್ನು ಕಳುಹಿಸುವುದು" ಎಂದು ಹೇಳಿದನು. ಇದನ್ನು ಕೇಳಿದ ಬುದ್ಧನು ಮೌನವಾಗಿಯೇ ಇದ್ದನು. ಶುದ್ಧೋದನನು "ಹಾಗಾದರೆ ನಿನ್ನನ್ನು ಅಪೇಕ್ಷಿಸುತ್ತಿರುವ ಪ್ರಜೆಗಳಲ್ಲಿಗೆ ಹಿಂತಿರುಗುವುದಕ್ಕೆ ಮನವಿಲ್ಲವೆ" ಎಂದು ಕೇಳಲು, ಬುದ್ಧನು ಮೌನವಾಗಿಯೇ ತಲೆಯನ್ನು ಅಲ್ಲಾಡಿಸಿದನು. ಇಬ್ಬರೂ ಕ್ಷಣಕಾಲ ಒಬ್ಬರನ್ನೊಬ್ಬರು

ದಿಟ್ಟಿಸಿ ನೋಡಿದರು. ಶುದ್ಧೋದನನಿಗೆ ಎಲ್ಲವೂ ಅರಿವಾಯಿತು. ಬುದ್ಧನ ದೃಢನಿಶ್ಚಯವನ್ನು ಕಂಡ ಶುದ್ಧೋದನನು "ಸರ್ವವನ್ನೂ ಅರಿತ ಬುದ್ಧನು ನನ್ನನ್ನೂ ತನ್ನ ಶಿಷ್ಯನನ್ನಾಗಿ ಪರಿಗಣಿಸಲಿ" ಎಂದು ಹೇಳಿ ಮಗನ ಕೈಯಲ್ಲಿದ್ದ ಭಿಕ್ಷಾಪಾತ್ರೆಯನ್ನು ತಾನೇ ಹಿಡಿದುಕೊಂಡು ಬುದ್ಧನನ್ನೂ ಆತನ ಶಿಷ್ಯರನ್ನೂ ಅರಮನೆಗೆ ಕರೆದುಕೊಂಡು ಬಂದು ಸತ್ಕರಿಸಿದನು.

ಹೀಗೆ ಕಪಿಲವಸ್ತುವಿನ ಪೌರರೆಲ್ಲ ಬಂದು ಬುದ್ಧನ ಸಂದರ್ಶನವನ್ನು ಪಡೆದರೂ ಯಶೋಧರೆಯು ಮಾತ್ರ ಬರಲಿಲ್ಲ. ಆಕೆಯ ಸೇವಕಿಯರು ಬಂದು "ತಾಯಿ! ಊರಿಗೆ ಊರೇ ಬಂದು ತಮ್ಮ ಪತಿದೇವರನ್ನು ಕಂಡು ನಮಿಸುತ್ತಿದೆ. ತಾವೂ ಹೋಗಿ ಆ ದಿವ್ಯಮೂರ್ತಿಯ ದರ್ಶನಭಾಗ್ಯವನ್ನು ಪಡೆಯಿರಿ. ತಮ್ಮನ್ನು ನೋಡಿಯಾದರೂ ಅಥವಾ ತಮ್ಮ ಮಾತನ್ನು ಕೇಳಿಯಾದರೂ ಅವರು ಸಂನ್ಯಾಸವನ್ನು ತೊರೆದು ಸಂಸಾರಿಗಳಾಗಬಹುದು" ಎಂದು ಬಿನ್ನೈಸಿಕೊಂಡರು. ಅದನ್ನು ಕೇಳಿದ ಯಶೋಧರೆಯು ಗಂಭೀರವಾಗಿ "ನನ್ನ ಪತಿದೇವರು ಇಹಸುಖಕ್ಕಿಂತ ಉತ್ತಮವಾದ ಶಾಶ್ವತ ಸಾಮ್ರಾಜ್ಯವನ್ನರಸಿ ಈ ರಾಜ್ಯವನ್ನೇ ಬಿಟ್ಟರು. ತಮ್ಮ ಸರ್ವಸ್ವವನ್ನೂ ತ್ಯಜಿಸಿ ಜಿತೇಂದ್ರಿಯರಾದರು. ಇಂತಹ ನನ್ನ ಸ್ವಾಮಿಯು ಕೇವಲ ಅವರ ಸೇವಕಿಯಾದ ನನ್ನನ್ನು ನೋಡಿ ಅಥವಾ ನನ್ನ ಮಾತನ್ನು ಕೇಳಿ ಸೋಲುವರೆಂದು ನಾನು ತಿಳಿಯಲಾರೆ. ಅವರನ್ನು ಗೆಲ್ಲುವುದು ಅಸಂಭವ"ಎಂದು ಹೇಳಿದಳು. ಸೇವಕಿಯರೂ ಸಖಿಯರೂ ಎಷ್ಟೆಷ್ಟು ಬಲವಂತ ಮಾಡಿದಾಗ್ಯೂ ಯಶೋಧರೆಯು ಮಾತ್ರ ಬುದ್ಧನಿದ್ದಲ್ಲಿಗೆ ಹೋಗಲಿಲ್ಲ. ಅದಕ್ಕೆ ಬದಲಾಗಿ "ನಾನು ಒಂದು ವಸ್ತುವೆಂದು ಅವರು ಪರಿಗಣಿಸುವುದಾದರೆ ಅವರೇ ನಾನಿದ್ದಲ್ಲಿಗೆ ಬರಲಿ" ಎಂದು ಅವರಿಗೆ ಹೇಳಿ ಅಂತಃಪುರದಲ್ಲಿಯೇ ಮರುಗುತ್ತ ಕುಳಿತಳು.

ಬುದ್ಧನು ತನ್ನ ಪೂರ್ವಾಶ್ರಮದ ಪತ್ನಿಯಾದ ಯಶೋಧರೆಯು ಬಾರದಿದ್ದುದನ್ನು ಗಮನಿಸಿದನು. ಅದಕ್ಕೆ ಕಾರಣವೂ ಆತನಿಗೆ ತಿಳಿಯಿತು. ಆಗ ಸಾರಿಪುತ್ರ, ಮೌದ್ಗಲ್ಯಾಯನರನ್ನು ಕರೆದುಕೊಂಡು ಯಶೋಧರೆಯ ಅಂತಃಪುರಕ್ಕೆ ತಾನೇ ಹೊರಟನು. ಅಲ್ಲಿ ತನಗಾಗಿ ಅಣಿಮಾಡಿದ್ದ ಪೀಠದ ಮೇಲೆ ಕುಳಿತನು. ಆಗ ಯಶೋಧರೆಯು ಆತನ ಎದುರಿಗೆ ಬಂದಳು. ಹಳದಿ ಬಟ್ಟೆಯನ್ನು ಧರಿಸಿಕೊಂಡು ಬೋಳುತಲೆಯಿಂದಲೂ ಗಂಭೀರವಾದ ಮುಖಮುದ್ರೆ

ಯಿಂದಲೂ ಕುಳಿತಿದ್ದ ಆ ದಿವ್ಯಮೂರ್ತಿಯನ್ನು ಕಣ್ಣೆತ್ತಿ ನೋಡಿದಳು. ಹಿಂದಿನ ತಮ್ಮ ದಾಂಪತ್ಯಜೀವನದ ಸವಿನೆನಪುಗಳೆಲ್ಲಾ ಕ್ಷಣ ಮಾತ್ರದಲ್ಲಿ ಕಣ್ಣು ಮುಂದೆ ಸುಳಿದುಹೋದುವು. ದುಃಖವು ಒತ್ತರಿಸಿಕೊಂಡು ಬಂದಿತು. ತಡೆಯಲಾರದ ಸಂಕಟದಿಂದ ಬಿಕ್ಕಿಬಿಕ್ಕಿ ಅಳುತ್ತ ತನ್ನ ಪತಿದೇವನ ಪಾದಗಳ ಮೇಲೆ ದೊಪ್ಪನೆ ಕೆಡೆದಳು. ಬುದ್ಧನು ಕರುಣೆಯಿಂದ ಆಕೆಯನ್ನು ಮೇಲಕ್ಕೆ ಎತ್ತಿ ಮುಖವನ್ನುಕೈಯಿಂದ ಸವರಿ ಸಮಾಧಾನ ಮಾಡಿದನು. ಇಬ್ಬರೂಸ್ವಲ್ಪ ಕಾಲ ಮೌನದಿಂದಿದ್ದರು. ಅದನ್ನುನೋಡಿದ ಶುದ್ಧೋದನನು " ಈಕೆಯು ನಿನ್ನನ್ನು ಕ್ಷಮಿಸಿರುವಂತೆ ನೀನೂ ಈಕೆಯನ್ನು ಕ್ಷಮಿಸು. ಅಂದಿನಿಂದ ಇಂದಿನ ವರೆಗೂ ನಿನ್ನನ್ನೇ ತದೇಕಚಿತ್ತದಿಂದ ಧ್ಯಾನಿಸುತ್ತ ಚಾತಕಪಕ್ಷಿಯಂತೆ ನಿನ್ನ ಆಗಮನವನ್ನೇ ಕಾಯುತ್ತಿದ್ದಳು. ನಿನ್ನಂತೆಯೇ ಊಟ ಉಪಚಾರಗಳ ಲ್ಲಿಯೂ ಬಟ್ಟೆಬರೆಗಳ ವಿಚಾರದಲ್ಲಿಯೂ ನಿರ್ಲಕ್ಷ್ಯಳಾಗಿದ್ದಾಳೆ. ಈ ಕಠೋರ ನಿಯಮಗಳಲ್ಲಿ ನಿರತಳಾಗಿದ್ದಳೆಂದು ಆಕೆಯ ಸೊರಗಿರುವ ದೇಹವೇ ವ್ಯಕ್ತ ಪಡಿಸುತ್ತಿದೆ. ನೀನು ಒಂದೇ ಊಟದಿಂದ, ಹಾಸಿಗೆಯನ್ನು ಬಿಟ್ಟು ನೆಲದ ಮೇಲೆ ಮಲಗುತ್ತಿರುವೆಯೆಂಬುದನ್ನುಕೇಳಿದಾಗಿನಿಂದ ಈಕೆಯೂ ಹಾಗೆಯೇ ಮಾಡುತ್ತಿದ್ದಾಳೆ. ನೀನು ಎಲ್ಲವನ್ನೂ ತ್ಯಜಿಸಿ ಸಂನ್ಯಾಸಿಯಾಗಿದ್ದರೆ, ಈಕೆ ಅರಮನೆಯಲ್ಲಿ ಎಲ್ಲವನ್ನೂ ಹೊಂದಿದ್ದೂ ಭೋಗವಿಮುಖಳಾಗಿ ಸಂನ್ಯಾಸಿನಿ ಯಾಗಿ ನಿನ್ನನ್ನೇ ಅನುಸರಿಸುತ್ತಿದ್ದಾಳೆ" ಎಂದು ಹೇಳಿದನು. ಇದನ್ನು ಕೇಳಿದ ಬುದ್ಧನು ಮೌನದಿಂದ ಮುಖವನ್ನು ತಗ್ಗಿಸಿದನು. ಸ್ವಲ್ಪ ಹೊತ್ತಾದ ಮೇಲೆ ಯಶೋಧರೆಯು ಸಮಾಧಾನಗೊಂಡು ಅಳುವನ್ನು ನಿಲ್ಲಿಸಿ ಬುದ್ಧ ನನ್ನೇ ನೋಡುತ್ತಿದ್ದಳು. ಆಕೆಯ ಮನೋಭಾವವನ್ನರಿತ ಬುದ್ಧನು "ದೇವಿ ಯರು ಏನನ್ನೋ ಕೇಳಬೇಕೆಂದಿರುವಂತಿದೆ. ನಿಸ್ಸಂಕೋಚವಾಗಿ ಕೇಳ ಬಹುದು" ಎಂದನು. ಯಶೋಧರೆಯು "ಸ್ವಾಮಿ ! ತಮ್ಮ ದರ್ಶನಭಾಗ್ಯ ದಿಂದ ಸಂತುಷ್ಟಳಾದೆ; ಕೃತಾರ್ಥಳಾದೆ. ಆದರೆ ತಾವು ಮುಕ್ತಿಯನ್ನು ಸಾಧಿ ಸಲು ಮನೆಯನ್ನು ಬಿಟ್ಟು ಕಾಡಿಗೆ ಹೋಗಬೇಕಾದ ಪ್ರಮೇಯವೇನಿತ್ತು?" ಎಂದು ಪ್ರಶ್ನಿಸಿದಳು. ಅದಕ್ಕೆ ಬುದ್ಧನು " ಯಶೋಧರೆ, ಮನೆಯಲ್ಲಿದ್ದು ಕೊಂಡೇ,ಧರ್ಮವನ್ನೂಮುಕ್ತಿಯನ್ನೂ ಸಾಧಿಸುವವರು ಕೆಲವರಿರಬಹುದು. ಆದರೆ ನನಗೆ ಆಗ ಈಗಿನಷ್ಟು ಅನುಭವವಿರಲಿಲ್ಲ. ಆದುದರಿಂದ ಕಾಡಿಗೆ

ಹೋಗಿ ಏಕಾಗ್ರಚಿತ್ತದಿಂದಲೂ ತಪಸ್ಸಿನಿಂದಲೂ ದೃಢವಾದ ಆತ್ಮಸಂಸ್ಕೃತಿಯನ್ನೂ ಶಾಂತಿಯನ್ನೂ ಪಡೆದೆನು" ಎಂದು ಉತ್ತರವಿತ್ತನು. ಅದನ್ನು ಕೇಳಿದ ಯಶೋಧರೆ "ಅದೂ ಸರಿಯೆ. ಆದರೆ ಕೈಹಿಡಿದ ಹೆಂಡತಿಗೂ ಹೇಳದೆ ಹೋಗಬಹುದೆ? ಈ ರೀತಿ ನನ್ನನ್ನು ಪರಿತ್ಯಜಿಸಿ ಹೋದದ್ದು ಸರಿಯೆ?" ಎಂದು ಕೇಳಿದಳು. ಅದಕ್ಕೆ ಬುದ್ಧನು "ನೀನು ಕೇಳಿದ್ದು ಯುಕ್ತವೆ. ಆದರೆ ನನ್ನಿಂದ ಪರರಿಗೆ ಒಳ್ಳೆಯದಾಗಲೆಂದು ಶಾಂತಿಯನ್ನರಸಲು ಕಾಡಿಗೆ ಹೋದೆನು. ನನ್ನನ್ನು ಕೈಹಿಡಿದಾಕೆ ಧರ್ಮಿಷ್ಠೆ, ದೃಢಚಿತ್ತೆ ಎಂದು ಮೊದಲಿನಿಂದಲೂ ನನಗೆ ತಿಳಿದಿತ್ತು. ಜೀವನದ ಸುಖ ಸಂತೋಷಗಳಲ್ಲಿ ನೆರವಾದಂತೆಯೇ ಧರ್ಮಾಚರಣೆಯಲ್ಲಿಯೂ ನನಗೆ ನೆರವಾಗುವಳೆಂಬ ನಂಬಿಕೆಯೂ ಇತ್ತು. ಇಷ್ಟಾದರೂ ಒಮ್ಮೆಲೇ ಮನೆಯನ್ನು ಬಿಟ್ಟುಹೋಗಲು ನನಗೆ ಸಮ್ಮತಿಯನ್ನು ಕೊಡದಿರಬಹುದು; ಬಂಧುವರ್ಗವೂ ಪರಿವಾರವೂ ತಡೆಯಬಹುದು ಎಂದು ನನಗೆ ತೋರಿತು. ಆದುದರಿಂದ ಇವುಗಳಿಗೆ ಆಸ್ಪದವನ್ನೇ ಕೊಡದೆ ಮಾಡುವುದನ್ನು ಮಾಡಲೇಬೇಕೆಂಬ ಸಂಕಲ್ಪದಿಂದ ಹೊರಟು ಹೋದೆನು" ಎಂದು ಹೇಳಿದನು.

ಬುದ್ಧನು ಕೊಟ್ಟ ಉತ್ತರಗಳು ಯಶೋಧರೆಗೆ ತುಂಬ ಸಮಂಜಸವಾಗಿ ಕಂಡವು. ಅದರಿಂದ ಸಮಾಧಾನಪಟ್ಟುಕೊಂಡು ಬುದ್ಧನಿಗೆ ತನ್ನ ಸೇವೆಯನ್ನು ಸಲ್ಲಿಸಿದಳು. ಆಮೇಲೆ ರಾಹುಲನನ್ನು ತನ್ನ ಸ್ವಾಮಿಯ ಬಳಿಗೆ ಕಳುಹಿಸಿದಳು. ರಾಹುಲನನ್ನು ಕಂಡ ಬುದ್ಧನು "ಈತನು ಮುಂದೆ ರಾಜನಾದರೆ ಈತನ ಪಾಲಿಗೆ ಈ ನಶ್ವರವಾದ ರಾಜ್ಯವು ಮಾತ್ರ ಉಳಿದುಕೊಳ್ಳುತ್ತದೆ. ಆದುದರಿಂದ ಈತನಿಗೆ ಶಾಶ್ವತವೂ ಅಮರವೂ ಆದ ನನ್ನ ಧರ್ಮವನ್ನೇ ಕೊಡುವೆನು" ಎಂದು ಹೇಳಿ ಅವನನ್ನು ಸಂಘಕ್ಕೆ ಸೇರಿಸಿಕೊಂಡನು. ಈ ವಿಚಾರವು ಶುದ್ಧೋದನನಿಗೆ ತಿಳಿಯಿತು. ತನ್ನ ವಂಶಕ್ಕೆ ಇದ್ದ ಒಂದು ಕುಡಿಯೂ ಬೌದ್ಧಧರ್ಮಕ್ಕೆ ಸೇರಿದುದನ್ನು ಕಂಡು ತಡೆಯಲಾರದ ದುಃಖದಿಂದ ಗೋಳಾಡಿದನು. ಇದನ್ನು ಕೇಳಿದ ಬುದ್ಧನು "ಹಿರಿಯರ ಅಪ್ಪಣೆಯಿಲ್ಲದೆ ಕಿರಿಯರನ್ನು ಸಂಘಕ್ಕೆ ಇನ್ನೆಂದಿಗೂ ಸೇರಿಸಿಕೊಳ್ಳುವುದಿಲ್ಲ" ಎಂದು ವಚನವನ್ನಿತ್ತನು. ಶುದ್ಧೋದನನು ಬೌದ್ಧಧರ್ಮಾವಲಂಬಿಯಾಗಿ ಉಳಿದ ಕಾಲವನ್ನೆಲ್ಲ ರಾಜ್ಯಾಡಳಿತದಲ್ಲಿಯೇ ಕಳೆಯುವುದಾಗಿ ನಿಶ್ಚಯಿಸಿದನು.

ಬುದ್ಧನ ಉಪದೇಶಾಮೃತವನ್ನು ಕೇಳಿದ್ದ ಯಶೋಧರೆಯೂ ತನ್ನ ವೃದ್ಧ ಮಾವ ಮತ್ತು ಮಗನ ಯೋಗಕ್ಷೇಮವನ್ನು ನೋಡಿಕೊಂಡು ಅರಮನೆಯಲ್ಲಿಯೇ ಉಳಿದುಕೊಳ್ಳಲು ನಿರ್ಧರಿಸಿದಳು.

ದುಷ್ಟಪರಿವರ್ತನ

ಬುದ್ಧನು ಸಜ್ಜನರಿಗೆ ಉಪದೇಶವನ್ನು ಮಾಡಿದಂತೆಯೇ ದುರ್ಜನರನ್ನೂ ಹುಡುಕಿಕೊಂಡು ಹೋಗಿ ಅವರ ಮಧ್ಯೆ ನಿಂತು ಸದ್ಬೋಧನೆಯಿಂದ ಅವರನ್ನು ಸನ್ಮಾರ್ಗಕ್ಕೆ ತರಲು ಬಹಳವಾಗಿ ಶ್ರಮಿಸಿದನು. ಲೋಕದಲ್ಲಿ ಮನುಷ್ಯರು ತಪ್ಪುಮಾಡುವುದು ಸಹಜ. ಆದರೆ ಜನ್ಮತಃ ಯಾರೂ ತಪ್ಪಿತಸ್ಥರಲ್ಲ. ಸನ್ನಿವೇಶ ವಾತಾವರಣಗಳಿಂದ ಅವರು ತಪ್ಪುದಾರಿ ಹಿಡಿಯುತ್ತಾರೆ. ಆದುದರಿಂದ ಎಷ್ಟೇ ಕೆಟ್ಟವರಾಗಿದ್ದರೂ ತಮ್ಮ ತಪ್ಪನ್ನು ಅರಿತುಕೊಂಡು ಒಳ್ಳೆಯ ಮಾರ್ಗದಲ್ಲಿ ನಡೆದರೆ ಅವರಿಗೆ ಮೋಕ್ಷ ಪ್ರಾಪ್ತಿಯಾಗುವುದೆಂದು ಬುದ್ಧನು ತಿಳಿಯಪಡಿಸಿದನು. ಪಾಪಿಷ್ಠರನ್ನು ಎಂದೂ ದೂರಮಾಡಲಿಲ್ಲ. ಇದರ ಪರಿಣಾಮವಾಗಿ ಅನೇಕ ಪತಿತರು ಪರಿಶುದ್ಧರಾದರು.

ಒಮ್ಮೆ ರೋಹಿಣೀ ನದಿಯ ನೀರಿನ ಹಂಚಿಕೆಗಾಗಿ ಶಾಕ್ಯರಿಗೂ ಕೋಲಿಯರಿಗೂ ವಿವಾದವುಂಟಾಯಿತು. ಇದು ವಿಷಮ ಪರಿಸ್ಥಿತಿಗೇರಿ ಯುದ್ಧಕ್ಕೆ ಎಡೆಮಾಡಿಕೊಟ್ಟಿತು. ಈ ವಿಚಾರವು ಬುದ್ಧನಿಗೆ ತಿಳಿಯಿತು. ಆಗ ಆತನು ಎರಡು ಕಡೆಯ ಮುಖಂಡರನ್ನೂ ಕರೆಯಿಸಿ ಅವರಿಗೆ "ನೀರಿನ ಬೆಲೆಯೂ ನೆಲದ ಬೆಲೆಯೂ ಅಲ್ಪವಾದುದು. ಆದರೆ ಮಾನವನ ಬೆಲೆ ಅಗಣಿತವಾದುದು. ಸಮೃದ್ಧಿಯಾಗಿ ಹರಿಯುವ ನದಿಯ ನೀರನ್ನು ಕಾಲುವೆಗಳ ಮೂಲಕ ನೀವಿಬ್ಬರೂ ಪಡೆಯಬಹುದು; ಅನ್ಯೋನ್ಯತೆಯಿಂದ ಬಾಳಬಹುದು" ಎಂದು ಬುದ್ಧಿವಾದವನ್ನು ಹೇಳಿದನು. ಅದನ್ನು ಕೇಳಿದ ಆ ಮುಖಂಡರು ತಮ್ಮ ಸಣ್ಣತನಕ್ಕೆ ತಾವೇ ನಾಚಿದರು. ಬುದ್ಧನನ್ನು ಅತ್ಯಂತ ಆದರದಿಂದ ತಮ್ಮ ತಮ್ಮ ದೇಶಗಳಿಗೆ ಬರಮಾಡಿಕೊಂಡು ಆತನ ಉಪದೇಶವನ್ನು ಕೇಳಿ ಬೌದ್ಧಮತಾವಲಂಬಿಗಳಾದರು.

ಬುದ್ಧನು ಸನ್ಮಾರ್ಗಕ್ಕೆ ಪರಿವರ್ತಿಸಿದವರಲ್ಲಿ ಅಂಗುಳಿಮಾಲನೆಂಬುವನು ಮುಖ್ಯನು. ಅವನು ತನ್ನ ದುಷ್ಟತನವನ್ನು ಬಿಟ್ಟು ಬೌದ್ಧಭಿಕ್ಷುವಾದುದು ಬಹಳ ಸ್ವಾರಸ್ಯವಾಗಿದೆ. ಒಂದುಸಲ ಬುದ್ಧನು ಶ್ರಾವಸ್ತಿಯ

ಜೇತವನದಲ್ಲಿ ತಂಗಿದ್ದನು. ಅಲ್ಲಿ ಪ್ರಚಂಡಚೋರನಾದ ಅಂಗುಳಿಮಾಲನು ವಾಸಿಸುತ್ತಿದ್ದನು. ಅವನು ದಾರಿಹೋಕರನ್ನು ಅಡ್ಡಗಟ್ಟಿ ನಿರ್ದಯದಿಂದ ಅವರನ್ನು ಕೊಂದು ಅವರ ಬೆರಳುಗಳನ್ನು ಹಾರವನ್ನಾಗಿ ಮಾಡಿಕೊಂಡು ಧರಿಸುತ್ತಿದ್ದನು. ಮಹಾಬಲಿಷ್ಠನಾಗಿದ್ದ ಅವನು ಎಷ್ಟು ಜನರು ಬಂದರೂ ಅವರೆಲ್ಲರನ್ನೂ ಲೀಲಾಜಾಲವಾಗಿ ಕೊಂದುಹಾಕುತ್ತಿದ್ದನು. ಅವನ ಹಾವಳಿಯಿಂದ ಅನೇಕ ಕುಟುಂಬಗಳೂ ಹಳ್ಳಿಗಳೂ ಹೇಳಹೆಸರಿಲ್ಲವಾದುವು. ಅಂಗುಳಿಮಾಲನ ಹೆಸರನ್ನು ಕೇಳಿದೊಡನೆಯೇ ಜನರು ನಡುಗುತ್ತಿದ್ದರು. ಆ ದೇಶದ ರಾಜನು ಎಷ್ಟು ಪ್ರಯತ್ನಮಾಡಿದರೂ ದುಷ್ಟನಾದ ಅಂಗುಳಿಮಾಲನನ್ನು ಹಿಡಿಯಲು ಸಾಧ್ಯವಾಗಲಿಲ್ಲ. ಈ ವಿದ್ಯಮಾನಗಳನ್ನೆಲ್ಲಾ ಸುತ್ತಮುತ್ತಲ ಜನರಿಂದ ತಿಳಿದುಕೊಂಡ ಬುದ್ಧನು ಅಂಗುಳಿಮಾಲನನ್ನು ಸಂಧಿಸಿ ಅವನನ್ನು ಸನ್ಮಾರ್ಗಕ್ಕೆ ತಂದು ಜನರಿಗೆ ಪೀಡೆಯನ್ನು ತಪ್ಪಿಸಬೇಕೆಂದು ನಿರ್ಧರಿಸಿದನು.

ಒಂದು ದಿನ ಬುದ್ಧನು ಅಂಗುಳಿಮಾಲನನ್ನು ಹುಡುಕಿಕೊಂಡು ಹೊರಟನು. ದಾರಿಯಲ್ಲಿ ಜನರು ಬದ್ಧನನ್ನು ತಡೆದು ಆ ದುಷ್ಟಚೋರನಲ್ಲಿಗೆ ಹೋಗಬೇಡಿರೆಂದು ನಾನಾ ಪರಿಯಾಗಿ ಕೇಳಿಕೊಂಡರು. ಬುದ್ಧನು ಅವರ ಮಾತಿಗೆ ಕಿವಿಗೊಡದೆ ದಿಟ್ಟತನದಿಂದ ಮುಂದೆ ಸಾಗಿದನು. ಅಂಗುಳಿಮಾಲನು ಏಕಾಂಗಿಯಾಗಿ ಬರುತ್ತಿದ್ದ ಶ್ರಮಣನನ್ನು ದೂರದಿಂದಲೇ ನೋಡಿದನು. ನಿರ್ಭೀತನಾಗಿ ಸಾವನ್ನಪ್ಪಲು ಸಿದ್ಧನಾಗಿ ಬರುತ್ತಿದ್ದ ಆತನನ್ನು ಕಂಡು ಆ ಚೋರನಿಗೆ ಆಶ್ಚರ್ಯವಾಯಿತು. ಚಕಿತಚಿತ್ತದಿಂದಲೇ ಬುದ್ಧನಿಗೆ ಎದುರಾದನು. ಒಬ್ಬರನ್ನೊಬ್ಬರು ಸಮೀಪಿಸಿದರು. ಹತ್ತಿರದಿಂದ ಬುದ್ಧನ ಸೌಮ್ಯ ಗಂಭೀರಾಕೃತಿಯನ್ನು ಕಂಡ ಅಂಗುಳಿಮಾಲನ ಮನಸ್ಸು ತಳಮಳಗೊಂಡಿತು. ಅವನ ಆಸುರೀಶಕ್ತಿಯೂ ಆತನೆದುರಿಗೆ ನಿರರ್ಥಕವಾಗುವಂತೆ ಕಂಡು ಬಂದಿತು. ಕತ್ತಿಯನ್ನು ಮೇಲಕ್ಕೆತ್ತಲೂ ಬಲವಿಲ್ಲದಂತಾಯಿತು. ಆದರೂ ತನ್ನೆಲ್ಲ ಬಲವನ್ನೂ ಉಪಯೋಗಿಸಿ ಬುದ್ಧನನ್ನು ಕೊಲ್ಲಲು ಕತ್ತಿಯನ್ನು ಮೇಲಕ್ಕೆತ್ತಿ "ಓ ಶ್ರಮಣ! ನಿನ್ನ ಅಂತ್ಯವು ಸಮೀಪಿಸಿದೆ. ಸಾಯಲು ಸಿದ್ಧನಾಗು" ಎಂದನು. ಅಂಗುಳಿಮಾಲನು ಮೇಲೆತ್ತಿದ್ದ ಕತ್ತಿಯನ್ನು ಕಂಡಾಗಲಿ ಆತನ ಮಾತನ್ನು ಕೇಳಿಯಾಗಲಿ ಬುದ್ಧನು ಬೆದರ

ಲಿಲ್ಲ, ಹಿಂದೆಗೆಯಲಿಲ್ಲ. ನಿರ್ವಿಕಾರವಾದ ಆತನ ಭವ್ಯಮೂರ್ತಿಯನ್ನು ಕಂಡು ಅಂಗುಳಿಮಾಲನಿಗೆ ಅಚ್ಚರಿಯಮೇಲಚ್ಚರಿ. ಆ ಮಂಗಳಮೂರ್ತಿಯ ದಿವ್ಯಸ್ವರೂಪವನ್ನು ಮತ್ತೊಮ್ಮೆ ಕಣ್ತುಂಬ ನೋಡಿದನು. ಅಜ್ಞಾನ ಅಂಧಕಾರದಿಂದ ಮುಚ್ಚಿಹೋಗಿದ್ದ ಅವನ ಒಳಗಣ್ಣನ್ನು ಬುದ್ಧನ ಜ್ಞಾನಾಂಜನ ಶಲಾಕೆಯು ತೆರೆಯಿಸಿತು. ಕೂಡಲೆ ಕತ್ತಿಯನ್ನು ದೂರ ಬಿಸುಟು ಆತನ ಪಾದಗಳನ್ನು ಬಿಗಿಯಾಗಿ ಅಪ್ಪಿಕೊಂಡನು. ಬುದ್ಧನು ಆತನನ್ನು ಮೇಲಕ್ಕೆತ್ತಿ ಧರ್ಮೋಪದೇಶವನ್ನು ಮಾಡಿದನು. ಬುದ್ಧನ ಈ ಅಮೃತಸೇಚನದಂತಿದ್ದ ಉಪದೇಶವನ್ನು ಕೇಳಿದ ಅಂಗುಳಿಮಾಲನು ಆತನನ್ನು ತನ್ನ ಗುರುವನ್ನಾಗಿ ಸ್ವೀಕರಿಸಿ, ಬೌದ್ಧಮತವನ್ನವಲಂಬಿಸಿ ಭಿಕ್ಷುವಾದನು. ಹೀಗೆ ದುಷ್ಟನೂ ದುರ್ಮಾರ್ಗಿಯೂ ಆಗಿದ್ದ ಅಂಗುಳಿಮಾಲನು ಶಿಷ್ಟನೂ ಸನ್ಮಾರ್ಗಿಯೂ ಆದನು.

ಪರಿವರ್ತನ ಹೊಂದಿದ ಅಂಗುಳಿಮಾಲನು ಒಮ್ಮೆ ಬುದ್ಧನೊಡನೆ ಶ್ರಾವಸ್ತಿಗೆ ಬಂದನು. ಆತನೂ ಬುದ್ಧನಂತೆಯೇ ಕೇಶಖಂಡನ ಮಾಡಿಸಿಕೊಂಡು ಕಾಷಾಯವಸ್ತ್ರಗಳನ್ನು ಧರಿಸಿದನು. ಈ ವಿಚಾರವನ್ನು ತಿಳಿದ ಅಲ್ಲಿನ ರಾಜನು ಬುದ್ಧನಲ್ಲಿಗೆ ಬಂದನು. ಶ್ರಮಣನಾಗಿದ್ದ ಅಂಗುಳಿಮಾಲನನ್ನು ನೋಡಿದನು. ತನ್ನ ಕಣ್ಣುಗಳನ್ನು ತಾನೇ ನಂಬಲಾರದವನಾದನು. ಆತನು ಅಂಗುಳಿಮಾಲನೆಂದೇ ಸ್ಥಿರಪಟ್ಟಮೇಲೆ ಆತನ ಆಶ್ಚರ್ಯಕ್ಕೆ ಕೊನೆಯಿಲ್ಲದಾಯಿತು. ರಾಜನಾದ ತಾನು ಶಸ್ತ್ರಾಸ್ತ್ರಗಳಿಂದಲೂ ದಮನ ಮಾಡಲಾಗದ ಆ ಚೋರನನ್ನು ಬುದ್ಧನು ನಿರಸ್ತ್ರನಾಗಿ ಕೈವಶ ಮಾಡಿಕೊಂಡದ್ದನ್ನು ನೋಡಿ ಬುದ್ಧದೇವನ ಹಿರಿಮೆಯನ್ನು ಮನಗಂಡು ಆತನಿಗೆ ಅನಂತ ಪ್ರಣಾಮಗಳನ್ನು ಅರ್ಪಿಸಿ ಅರಮನೆಗೆ ಹಿಂತಿರುಗಿದನು.

ಅಂಗುಳಿಮಾಲನು ಒಂದು ದಿನ ಭಿಕ್ಷೆಗಾಗಿ ಹೋಗುತ್ತಿದ್ದನು. ಆತನನ್ನು ಕಂಡ ಜನ ಆತನು ಹೊಂದಿದ್ದ ಪರಿವರ್ತನೆಯನ್ನರಿಯದೆ ಚೋರ ಅಂಗುಳಿಮಾಲನೆಂದೇ ಭಾವಿಸಿ ಪರಿಪರಿಯಾಗಿ ಹಿಂಸಿಸತೊಡಗಿದರು. ಕೆಲವರು ಆತನ ಮೇಲೆ ಕಲ್ಲುಗಳನ್ನೆಸೆದರು; ಕೆಲವರು ಮಣ್ಣುಹೆಂಟೆಗಳನ್ನೆಸೆದರು; ಕೆಲವರು ಮಡಕೆಯ ಚೂರುಗಳನ್ನೆಸೆದರು; ಮತ್ತೆ ಕೆಲವರು ದೊಣ್ಣೆಗಳಿಂದ ಥಳಿಸಿದರು. ಅಂಗುಳಿಮಾಲನ ತಲೆ ಒಡೆದು ರಕ್ತ ಸ್ರವಿಸು

ತ್ತಿತ್ತು. ಆದರೂ ಅಂಗುಳಿಮಾಲನು ಒಂದು ಮಾತನ್ನೂ ಆಡದೆ ಮೌನವಾಗಿ ಅದೆಲ್ಲವನ್ನೂ ಸಹಿಸಿಕೊಂಡನು. ಅದು ತನ್ನ ಪಾಪಕ್ಕೆ ಪ್ರಾಯಶ್ಚಿತ್ತವೆಂದು ಬಗೆದನು. ಹಾಗೆಯೇ ಬುದ್ಧನ ಬಳಿಗೆ ಸಾಗಿದನು.

ಬುದ್ಧನು ದೂರದಿಂದಲೇ ಅಂಗುಳಿಮಾಲನನ್ನು ನೋಡಿದನು. ಅವನನ್ನು ಕುರಿತು, "ಭಿಕ್ಷುವೆ! ಎಲ್ಲವನ್ನೂ ಸಹಿಸಿಕೊ. ನಿನ್ನ ಪಾಪಕ್ಕೆ ಅನೇಕ ವರ್ಷಗಳು ಪ್ರಾಯಶ್ಚಿತ್ತವನ್ನು ಅನುಭವಿಸಬೇಕಾಗಿತ್ತು. ಆದರೆ ಸ್ವಲ್ಪಕಾಲದಲ್ಲಿಯೇ ಅದನ್ನು ನೀನು ಅನುಭವಿಸಿ ತೀರಿಸುವೆ" ಎಂದು ಹೇಳಿದನು. ಅಂಗುಳಿಮಾಲನು ಮೌನವಾಗಿಯೇ ಬುದ್ಧನಿಗೆ ನಮಿಸಿದನು. ಆಮೇಲೆ ಏಕಾಂತವಾದ ಸ್ಥಳಕ್ಕೆ ಹೋಗಿ ಧ್ಯಾನಾಸಕ್ತನಾಗಿ ಕೊನೆಗೆ ವಿಮುಕ್ತಿಯ ಸುಖವನ್ನು ಅನುಭವಿಸಿದನು.

ಒಂದುಸಲ ಬುದ್ಧನು ತನ್ನ ಭಿಕ್ಷುಗಳೊಡನೆ ವೈಶಾಲಿಯ ಬಳಿಯಲ್ಲಿದ್ದ ಆಮ್ರವನದಲ್ಲಿ ತಂಗಿದ್ದನು. ಅದನ್ನು ಬುದ್ಧನ ಶಿಷ್ಯಳಾದ 'ಅಂಬಾಪಾಲಿ' ಎಂಬ ದೇವದಾಸಿ ಅರಿತಳು. ಆಕೆಯು ನೃತ್ಯಕಲಾಕೋವಿದೆಯೂ ಅನುಪಮಸುಂದರಿಯೂ ಆಗಿದ್ದುದಷ್ಟೇ ಅಲ್ಲದೆ ರಾಜನ ಪ್ರೇಯಸಿಯೂ ಆಗಿದ್ದಳು. ಆಕೆ ತನ್ನ ಗುರುವಾದ ಬುದ್ಧನ ಬಳಿಗೆ ಬಂದು ಆತನನ್ನೂ ಆತನ ಶಿಷ್ಯರನ್ನೂ ಮಾರನೆಯ ದಿನ ತನ್ನ ಮನೆಗೆ ಔತಣಕ್ಕೆ ಆಹ್ವಾನಿಸಿದಳು. ಬುದ್ಧನು ಆಕೆಯ ಕೋರಿಕೆಯನ್ನು ಸಲ್ಲಿಸಿದನು. ಅದೇ ಸಮಯಕ್ಕೆ ಲಿಚ್ಛವಿಯ ಕೆಲವು ಪ್ರಮುಖರು ಬುದ್ಧನಲ್ಲಿಗೆ ಬಂದರು. ಮಾರನೆಯ ದಿನ ತಮ್ಮ ಸತ್ಕಾರವನ್ನು ಕೈಗೊಳ್ಳಬೇಕೆಂದು ಕೇಳಿಕೊಂಡರು. ಬುದ್ಧನು ಮೊದಲು ಅಂಬಾಪಾಲಿಗೆ ಕೊಟ್ಟಿದ್ದ ಮಾತನ್ನು ಅವರಿಗೆ ಹೇಳಿದನು. ಕೂಡಲೆ ಆ ಪ್ರಮುಖರು ಅಂಬಾಪಾಲಿಯನ್ನು ಕಂಡು ಬುದ್ಧನನ್ನು ಸತ್ಕರಿಸುವ ಗೌರವವನ್ನು ಮೊದಲು ತಮಗೆ ಬಿಟ್ಟುಕೊಡಬೇಕೆಂದು ಆಕೆಗೆ ತಿಳಿಸಿದರು. ಅದನ್ನು ಕೇಳಿದ ಅಂಬಾಪಾಲಿಯು, "ಸ್ವಾಮಿ! ಬುದ್ಧನಂತಹ ಮಹಾತ್ಮರು ನನ್ನ ಮನೆಗೆ ದಯಮಾಡಿಸುವುದು ನನ್ನ ಪುಣ್ಯವಿಶೇಷ. ನಿಮ್ಮ ವೈಶಾಲಿಯ ರಾಜ್ಯವನ್ನೇ ಅಲ್ಲ, ಎಲ್ಲ ಸಾಮಂತರುಗಳ ರಾಜ್ಯವನ್ನು ಕೊಟ್ಟರೂ ನನಗೆ ಬೇಕಾಗಿಲ್ಲ. ಬುದ್ಧನನ್ನು ಸತ್ಕರಿಸುವುದಕ್ಕಿಂತ ಮಿಗಿಲಾದುದು ಮತ್ತಾವುದು? ಆ ಧರ್ಮಾತ್ಮನ ಪಾದಧೂಳಿಯಿಂದ ನನ್ನ

ಮನೆಯು ಪರಿಶುದ್ಧವಾಗುತ್ತದೆ. ಆದುದರಿಂದ ದಯವಿಟ್ಟು ಹಿಂತಿರುಗಿ" ಎಂದು ಹೇಳಿ ಅವರನ್ನು ಕಳುಹಿಸಿಕೊಟ್ಟಳು. ಮಾರನೆಯ ದಿನ ಸಡಗರದಿಂದ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡು ಬುದ್ಧನನ್ನೂ ಆತನ ಶಿಷ್ಯರನ್ನೂ ಬರಮಾಡಿಕೊಂಡು ಭೋಜನದಿಂದ ಅವರೆಲ್ಲರನ್ನೂ ತೃಪ್ತಿಪಡಿಸಿದಳು. ಕೊನೆಗೆ ಪುನೀತಳಾದೆನೆಂದು ಭಾವಿಸಿ ಬುದ್ಧನ ಬಳಿ ಸಾರಿ, "ಪ್ರಭುವೇ! ನನ್ನಂತಹ ನೀಚಳಿಗೂ ಧರ್ಮಮಾರ್ಗದಲ್ಲಿ ನಡೆಯಲು ಎಡೆಯುಂಟೆ?" ಎಂದು ಪ್ರಶ್ನಿಸಿದಳು. ಅದಕ್ಕೆ ಬುದ್ಧನು, "ಮಗಳೇ! ಧರ್ಮಮಾರ್ಗದಲ್ಲಿ ನಡೆಯಲು ನಿನಗೂ ಎಡೆಯುಂಟು" ಎಂದು ಹೇಳಿದನು. ಅದನ್ನು ಕೇಳಿದ ಅಂಬಾಪಾಲಿ ಪುಳಕಗೊಂಡು ಆನಂದಬಾಷ್ಪದಿಂದ ಬುದ್ಧನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಭವ್ಯವಾದ ತನ್ನ ಗೃಹವನ್ನೂ ಬುದ್ಧನೂ ಆತನ ಶಿಷ್ಯರೂ ಇಳಿದುಕೊಂಡಿದ್ದ ಮಾವಿನ ತೋಪನ್ನೂ ನಮ್ರಕಾಣಿಕೆಯನ್ನಾಗಿ ಅರ್ಪಿಸಿದಳು. ಬುದ್ಧನು ಸಂಘದ ಪರವಾಗಿ ಅವುಗಳನ್ನು ಸ್ವೀಕರಿಸಿದನು. ಅಂದಿನಿಂದ ಅಂಬಾಪಾಲಿಯು ಪರಿಶುದ್ಧಾತ್ಮಳಾಗಿ ಧರ್ಮಮಾರ್ಗವನ್ನನುಸರಿಸಿದಳು; ಭಿಕ್ಷುಣಿಯಾದಳು.

ಬುದ್ಧನ ಕೆಲವೇ ಶತ್ರುಗಳಲ್ಲಿ ದೇವದತ್ತ ಪ್ರಮುಖನಾದವನು. ಬಾಲ್ಯದಲ್ಲಿ ಬುದ್ಧನ ಮೇಲೆ ಮೊಳೆತ ದೇವದತ್ತನ ದ್ವೇಷ ಹೆಮ್ಮರವಾಗಿ ಬೆಳೆದಿತ್ತು. ದೇವದತ್ತನು ಬುದ್ಧನ ಬಂಧುವಾಗಿದ್ದರೂ ಆತನ ಕೀರ್ತಿಯನ್ನು ಕೇಳಿ ಕೇಳಿ ಸಹಿಸಲಾರದಾದನು. ಅದಕ್ಕಾಗಿ ಬಿಂಬಸಾರನ ಮಗನಾದ ಅಜಾತಶತ್ರುವಿನ ಸಖ್ಯವನ್ನು ಬೆಳೆಸಿದನು. ದೇವದತ್ತನ ದುಷ್ಪ್ರೇರಣೆಗಳಿಗೆ ಕಿವಿಗೊಟ್ಟ ಅಜಾತಶತ್ರು ಮಾಡಬಾರದ ಕೆಲಸವನ್ನೂ ಮಾಡಿದನು. ತನ್ನ ತಂದೆಯಾದ ಬಿಂಬಸಾರನನ್ನು ಸೆರೆಯಲ್ಲಿಡಿಸಿ ತಾನೇ ಆಡಳಿತ ಸೂತ್ರಗಳನ್ನು ವಹಿಸಿಕೊಂಡನು.

ಅಜಾತಶತ್ರುವಿನ ಸ್ನೇಹವನ್ನು ಸಂಪಾದಿಸಿಕೊಂಡ ದೇವದತ್ತ ಬುದ್ಧನಿಗೂ ಆತನ ಶಿಷ್ಯರಿಗೂ ಕಿರುಕುಳವನ್ನು ಕೊಡಲಾರಂಭಿಸಿದನು. ಭಿಕ್ಷುಗಳಿಗೆ ಅಲ್ಲಸಲ್ಲದ್ದನ್ನು ಬೋಧಿಸಿ ಸಂಘದಲ್ಲಿ ಒಡಕನ್ನು ಹುಟ್ಟಿಸಿದನು. ಮತ್ತು ತಾನೇ ಒಂದು ಸಂಘವನ್ನು ಸ್ಥಾಪಿಸುವುದಾಗಿ ಹೇಳಿ ಕೆಲವರನ್ನು ತನ್ನ ಪಕ್ಷಕ್ಕೆ ಸೇರಿಸಿಕೊಂಡನು. ಕಾಲಾಂತರದಲ್ಲಿ ದೇವದತ್ತನ ಪಕ್ಷಕ್ಕೆ ಸೇರಿ

ಕೊಂಡಿದ್ದ ಭಿಕ್ಷುಗಳು ತಮ್ಮ ತಿಳಿಗೇಡಿತನಕ್ಕೆ ತಾವೇ ನಾಚಿ ಬುದ್ಧನನ್ನು ಮರೆಹೊಕ್ಕರು.

ಇಷ್ಟಾದರೂ ದೇವದತ್ತನು ತನ್ನ ಹಟಮಾರಿತನವನ್ನು ಬಿಡಲಿಲ್ಲ. ದುರುದುಂಬಿತನದಿಂದ ಬುದ್ಧನ ಪ್ರಾಣವನ್ನೇ ತೆಗೆಸುವ ಹೇಯಕಾರ್ಯಕ್ಕೂ ಕೈಹಾಕಿದನು. ಅದಕ್ಕಾಗಿ ಕೆಲವರಿಗೆ ಹಣವನ್ನು ಕೊಟ್ಟು ಬುದ್ಧನನ್ನು ಕೊಲ್ಲುವಂತೆ ಹೇಳಿಕಳುಹಿಸಿದನು. ಆ ಕಟುಕರು ಬುದ್ಧನ ಸೌಮ್ಯರೂಪ ವನ್ನು ಕಂಡು ಕೊಲೆಗೆ ಹೇಸಿ ಹಿಂತಿರುಗಿದರು. ಅದಾದಮೇಲೆ ದೇವದತ್ತನು ಮತ್ತೊಂದು ಸಂಚನ್ನು ಹೂಡಿದನು. ಒಂದು ದಿನ ಬುದ್ಧನು ತನ್ನ ಶಿಷ್ಯ ರೊಡನೆ ಭಿಕ್ಷಕ್ಕೆ ಹೊರಟಿದ್ದನು. ಅದನ್ನು ತಿಳಿದ ದೇವದತ್ತನು ಅಜಾತ ಶತ್ರುವಿನ ಬಳಿಗೆ ಹೋಗಿ ಆತನಲ್ಲಿದ್ದ ಒಂದು ಮದದಾನೆಗೆ ಮದ್ಯವನ್ನು ಕುಡಿಸಿ, ರೇಗಿಸಿ ಬುದ್ಧನು ಬರುತ್ತಿದ್ದ ದಾರಿಗೆ ಎದುರಾಗಿ ಓಡಿಸುವಂತೆ ಮಾಡಿದನು. ಆ ಮದದಾನೆ ಘೀಳಿಡುತ್ತ ಬೀದಿಯ ನಾಲ್ಕಂಚುಗಳನ್ನೂ ಸವರಿಕೊಂಡು ಬರುತ್ತಿತ್ತು. ಅದನ್ನು ಕಂಡ ಬುದ್ಧನ ಶಿಷ್ಯರು ಪ್ರಾಣಭಯ ದಿಂದ ಚೆಲ್ಲಾಪಿಲ್ಲಿಯಾಗಿ ಓಡಿಹೋದರು. ಆದರೆ ಬುದ್ಧನು ಮಾತ್ರ ಧೃತಿ ಗೆಡದೆ ಆ ಮದದಾನೆಯ ಎದುರಿಗೇ ಗಂಭೀರವಾಗಿ ಬರುತ್ತಿದ್ದನು. ಆಗ ಆ ಮದದಾನೆಯು ಬುದ್ಧನ ಗಂಭೀರವೂ, ಶಾಂತವೂ ಆದ ಮುಖಮುದ್ರೆ ಯನ್ನು ನೋಡಿತು. ಅದರ ಸೊಕ್ಕೆಲ್ಲ ಅಡಗಿಹೋಗಿ ನಮ್ರಭಾವದಿಂದ ಮಂಡಿಯೂರಿ ತನ್ನ ಸೊಂಡಿಲನ್ನು ಬುದ್ಧನ ಪಾದದೆಡೆಗೆ ಚಾಚಿತು. ಬುದ್ಧನು ಪ್ರೀತ್ಯಾದರಗಳಿಂದ ಅದನ್ನು ಸವರಿದನು. ಅದರಿಂದ ಸಮಾ ಧಾನಗೊಂಡ ಆ ಮದಗಜ ನೇರವಾಗಿ ಸ್ವಸ್ಥಾನಕ್ಕೆ ಮರಳಿತು.

ಬುದ್ಧನ ಪ್ರಾಣವನ್ನು ತೆಗೆಯಲು ತಾನು ಪ್ರಯೋಗಿಸಿದ ಈ ಮಹಾ ಸ್ತ್ರವೂ ವಿಫಲವಾದುದನ್ನು ಕಂಡು ದೇವದತ್ತನಿಗೆ ಆತನ ಹಿರಿಮೆ ಘನತೆಗಳು ಮನದಟ್ಟಾಗಿ ಆತನ ವಿಷಯದಲ್ಲಿ ಪೂಜ್ಯ ಭಾವನೆಯುಂಟಾಯಿತು. ತಾನು ಮಾಡಿದ ಅಕಾರ್ಯಗಳಿಗಾಗಿ ಬಹಳವಾಗಿ ಮರುಗಿದನು. ಬುದ್ಧನ ಮೇಲೆ ತನಗುಂಟಾದ ಅನಿಮಿತ್ತ ವೈರಕ್ಕಾಗಿ ಕೊರಗಿದನು. ಈ ಕೊರಗಿನಿಂದಲೇ ಹಾಸಿಗೆಯನ್ನೂ ಹಿಡಿದನು. ಕ್ರಮೇಣ ಆ ಕಾಯಿಲೆಯಿಂದಲೇ ನರಳಿ ನರಳಿ ಸತ್ತುಹೋದನು. ಈ ವೇಳೆಗೆ ಅಜಾತಶತ್ರುವಿಗೆ ದೇವದತ್ತನ ಮೇಲಿನ ಸ್ನೇಹ

ಇಳಿಮುಖವಾಗಿತ್ತು. ಒಮ್ಮೆ ತನ್ನ ಮಗನನ್ನು ಮುದ್ದಿಸುತ್ತಿದ್ದಾಗ್ಗೆ ಹಿಂದೆ ತನ್ನ ತಂದೆ ಬಾಲ್ಯದಲ್ಲಿ ತನ್ನನ್ನು ಯಾವರೀತಿ ಮುದ್ದಿಸುತ್ತಿದ್ದನೆಂಬುದರ ನೆನಪಾಯಿತು. ಕೂಡಲೆ ತಂದೆಯನ್ನು ಕಾಣಲು ಸೆರೆಮನೆಗೆ ಹೋದನು. ಅಷ್ಟು ಹೊತ್ತಿಗೆ ಕಾಲ ಮಿಂಚಿಹೋಗಿತ್ತು; ಬಿಂಬಸಾರನು ಅನ್ನಹಾರ ಗಳಿಲ್ಲದೆ ಸೆರೆಮನೆಯಲ್ಲೇ ಸತ್ತುಹೋಗಿದ್ದನು. ಅಜಾತಶತ್ರು ತಾನು ಮಾಡಿದ ಅಕೃತ್ಯಕ್ಕಾಗಿ ಪರಿಪರಿಯಾಗಿ ಶೋಕಿಸಿದನು. ಆ ಶೋಕವು ದಾವಾಗ್ನಿಯಂತೆ ಆತನನ್ನು ನಾಲ್ಕೂ ಕಡೆಯೂ ಮುತ್ತಿತ್ತು. ಅದರಿಂದ ಪಾರಾಗಲು ಬುದ್ಧನನ್ನು ಶರಣುಹೋಗುವುದು ಒಂದೇಮಾರ್ಗವೆಂದು ತಿಳಿದು ಆತನಲ್ಲಿಗೆ ಹೋದನು. ಅದುವರೆಗೆ ತಾನು ಮಾಡಿದ್ದ ಪಾಪಕಾರ್ಯಗಳನ್ನೆಲ್ಲಾ ಬುದ್ಧನಿಗೆ ತಿಳಿಸಿ ಕ್ಷಮೆಯನ್ನು ಕೋರಿದನು. ಬುದ್ಧನು ಆತನನ್ನು ಸಮಾಧಾನಪಡಿಸಿ, ಉಪದೇಶಿಸಿ, ಪಾಪಕ್ಕೆ ಪ್ರಾಯಶ್ಚಿತ್ತವೇ ಪರಿಹಾರಮಾರ್ಗವೆಂಬುದನ್ನು ಮನಗಾಣಿಸಿ ಬೀಳ್ಕೊಟ್ಟನು. ಅಂದಿನಿಂದ ಅಜಾತಶತ್ರುವು ಬೌದ್ಧ ಧರ್ಮವನ್ನನುಸರಿಸಿ ಸತ್ಯದಿಂದಲೂ ನ್ಯಾಯದಿಂದಲೂ ಬಾಳುತ್ತಿದ್ದನು.

ಒಂದುದಿನ ಬೆಳಿಗ್ಗೆ ಬುದ್ಧನು ಭಿಕ್ಷೆಗೆ ಹೊರಟನು. ದಾರಿಯ ಪಕ್ಕದಲ್ಲಿನ ಹೊಲದಲ್ಲಿ ಕೆಲಸಗಾರರಿಗೆ ಊಟವನ್ನು ಹಾಕುತ್ತಿದ್ದುದನ್ನು ಕಂಡು ಅಲ್ಲಿಗೆ ಹೋದನು. ಭಿಕ್ಷೆಗೆ ಬಂದ ಬುದ್ಧನನ್ನು ಕಂಡು ಆ ಹೊಲದ ಯಜಮಾನನಾದ ಭಾರದ್ವಾಜನಿಗೆ ಸಿಟ್ಟುಬಂದಿತು. ಸೋಮಾರಿತನದಿಂದ ಭಿಕ್ಷೆಯನ್ನು ಬೇಡುವುದು ಆ ಬ್ರಾಹ್ಮಣನಿಗೆ ಸರಿದೋರಲಿಲ್ಲ. ಬುದ್ಧನನ್ನು ಕುರಿತು "ಏ ಭಿಕ್ಷು, ನಾನು ಉತ್ತು ಬಿತ್ತು ಬೆವರುಸುರಿಸಿ ಬೇಸಾಯಮಾಡಿ ಜೀವನವನ್ನು ನಡೆಸುತ್ತಿದ್ದೇನೆ. ನೀನೂ ಇದೇ ರೀತಿ ಏಕೆ ಮಾಡಬಾರದು?" ಎಂದು ಪ್ರಶ್ನಿಸಿದನು. ಅದಕ್ಕೆ ಬುದ್ಧನು ಸಾವಧಾನದಿಂದ, "ನಾನೂ ಬೇಸಾಯದಿಂದಲೇ ಜೀವನವನ್ನು ಮಾಡುತ್ತಿದ್ದೇನೆ" ಎಂದು ಉತ್ತರ ಕೊಟ್ಟನು. ಅದನ್ನು ಕೇಳಿದ ಆ ಬ್ರಾಹ್ಮಣನಿಗೆ ಅತ್ಯಾಶ್ಚರ್ಯವಾಯಿತು. ಅದನ್ನು ಕಂಡ ಬುದ್ಧನು "ನನ್ನ ಬಳಿ ನೊಗ ನೇಗಿಲುಗಳಿಲ್ಲವೆಂದು ನೀನು ಆಶ್ಚರ್ಯಪಡುತ್ತಿರುವೆಯಲ್ಲವೆ? ಆದರೆ ನನ್ನ ವ್ಯವಸಾಯದ ರೀತಿಯೇ ಬೇರೆ. ನಾನು ಬಿತ್ತುವ ಬೀಜವೆಂದರೆ ಧರ್ಮದಲ್ಲಿ ವಿಶ್ವಾಸ; ನನ್ನ ಉಪಾಸನೆಯೇ ಅದಕ್ಕೆ ಮಳೆ; ಮನಸ್ಸೇ ನೊಗ; ಶ್ರದ್ಧೆಯೇ ಎತ್ತುಗಳು; ಸತ್ಯವೇ ಹಗ್ಗ;

ವಿನಯವೇ ನೇಗಿಲಕಡ್ಡಿ; ಕರ್ತವ್ಯನಿಷ್ಠೆಯೇ ನೇಗಿಲು; ಈ ಬೇಸಾಯದಿಂದ ಜಗತ್ತಿನ ಮಾಯೆಯನ್ನು ಮರೆಸಿ ನಿರ್ವಾಣವೆಂಬ ಬೆಳೆಯನ್ನು ತೆಗೆಯುತ್ತಿದ್ದೇನೆ" ಎಂದು ವಿವರಿಸಿದನು. ಭಾರದ್ವಾಜನು ಅದರ ಅಂತರಾರ್ಥವನ್ನು ಗ್ರಹಿಸಿ ಬುದ್ಧನಿಂದ ಉಪದೇಶವನ್ನು ಪಡೆದನು.

ಈಮೇಲೆ ಕಾಣಿಸಿರುವ ವ್ಯಕ್ತಿಗಳನ್ನು ಸನ್ಮಾರ್ಗಕ್ಕೆ ಪರಿವರ್ತನಗೊಳಿಸುವಲ್ಲಿ ಕೆಲವರು ಬುದ್ಧನಿಗೆ ತೊಂದರೆಗಳನ್ನು ಕೊಟ್ಟರು. ಅವರು ಕೊಟ್ಟ ತೊಂದರೆಗಳನ್ನೆಲ್ಲಾ ಬುದ್ಧನು ಸಮಾಧಾನದಿಂದಲೂ ಹರ್ಷಚಿತ್ತದಿಂದಲೂ ಎದುರಿಸಿದನು. ಅವರಿಗೆ ಸರಿಯಾದ ತಿಳಿವಳಿಕೆಯನ್ನು ಕೊಟ್ಟು ಸನ್ಮಾರ್ಗಕ್ಕೆ ಪರಿವರ್ತಿಸಿದನು. ಆ ದುಷ್ಟರು ಎಗ್ಗತನದಿಂದ ತಂದೊಡ್ಡಿದ ಎಡರುಗಳೆಲ್ಲಾ ತರಣಿಯುದಯದ ಮುಂದೆ ನಿಂದ ತಿಮಿರದಂತೆ ಹರೆದೋಡಿದುವು. ಉತ್ತಮರ ಮುಂದೆ ಆವ ಠಕ್ಕು ಇರಲಾಪುದು ?

ಬುದ್ಧನ ದಿನಚರಿ

ಬುದ್ಧನು ಕಾಲವನ್ನು ಎಂದೂ ವ್ಯರ್ಥವಾಗಿ ಕಳೆಯುತ್ತಿರಲಿಲ್ಲ. ಪ್ರತಿನಿತ್ಯವೂ ಬೆಳಿಗ್ಗೆ ಸೂರ್ಯೋದಯಕ್ಕೆ ಮುಂಚೆಯೇ ಏಳುತ್ತಿದ್ದನು. ಪ್ರಾತಃಕರ್ಮಗಳನ್ನು ತೀರಿಸಿಕೊಂಡು ಭಿಕ್ಷಾಟನೆಗೆ ಹೋಗುವವರೆಗೂ ಏಕಾಂತವಾದ ಸ್ಥಳದಲ್ಲಿ ಕುಳಿತು ಧ್ಯಾನವನ್ನು ಮಾಡುತ್ತಿದ್ದನು. ಆಮೇಲೆ ಭಿಕ್ಷೆಗಾಗಿ ಪಕ್ಕದ ಗ್ರಾಮಕ್ಕೋ ಪಟ್ಟಣಕ್ಕೋ ಹೋಗುತ್ತಿದ್ದನು. ಯಾರಾದರೂ ಊಟಕ್ಕೆ ಆಹ್ವಾನಿಸಿದ್ದರೆ ಅವರ ಮನೆಗೆ ಹೋಗುತ್ತಿದ್ದನು. ಊಟವಾದ ಮೇಲೆ ಅವರವರ ಪ್ರಕೃತಿಗಳಿಗನುಸಾರವಾಗಿ ಉಪದೇಶವನ್ನು ಮಾಡುತ್ತಿದ್ದನು. ತರುವಾಯ ವಿಹಾರಕ್ಕೆ ಹಿಂತಿರುಗುತ್ತಿದ್ದನು. ಭಿಕ್ಷುಗಳು ಊಟವನ್ನು ಮುಗಿಸಿಕೊಂಡು ಬಂದಮೇಲೆ ಸ್ವಲ್ಪಕಾಲ ಅವರೊಡನೆ ಚರ್ಚಿಸುತ್ತಿದ್ದನು. ನಂತರ ಅಕ್ಕಪಕ್ಕದ ಊರುಗಳಿಂದ ಬಂದ ಜನರಿಗೆ ಬೋಧನೆಯನ್ನು ಮಾಡುತ್ತಿದ್ದನು. ಸಂಜೆಯಾದ ಮೇಲೆ ತನ್ನ ಶಿಷ್ಯರಿಗೆ ಧರ್ಮೋಪದೇಶವನ್ನು ಮಾಡುತ್ತಿದ್ದನು. ತರುವಾಯ ಏಕಾಂತವಾಗಿ ಧ್ಯಾನಮಾಡಿ ಮಲಗುತ್ತಿದ್ದನು! ಮಳೆಗಾಲದ ಮೂರು ತಿಂಗಳನ್ನು ಯಾವುದಾದರೂ ವಿಹಾರದಲ್ಲಿ ಕಳೆಯುತ್ತಿದ್ದನು. ಆಗ ಒಂದೆಡೆ ಸೇರುತ್ತಿದ್ದ ತನ್ನ ಶಿಷ್ಯರಲ್ಲಿ ಉದ್ಭವಿಸಿದ

ಸಂದೇಹಗಳನ್ನು ಪರಿಹಾರ ಮಾಡುತ್ತಿದ್ದನು. ಮಳೆಗಾಲ ಕಳೆದಮೇಲೆ ಊರು ಊರುಗಳನ್ನು ಸುತ್ತಿ ಧರ್ಮ ಜ್ಞಾನಗಳನ್ನು ಬೋಧಿಸುತ್ತಿದ್ದನು.

ನಿರ್ಗಮನ

ಬುದ್ಧನು ಸುಮಾರು ನಾಲ್ವತ್ತೈದು ವರ್ಷಗಳ ಕಾಲ ಸಂತತವಾದ ಧರ್ಮಬೋಧನೆಯನ್ನು ಮಾಡಿದನು. ಅಲ್ಲಿಗೆ ಆತನಿಗೆ ಎಂಬತ್ತು ವರ್ಷಗಳಾಗಿದ್ದುವು. ಆತನ ದೇಹಶಕ್ತಿ ಕುಂದುತ್ತಾ ಬಂದಿತು. ಆದುದರಿಂದ ತನ್ನ ಶಿಷ್ಯರಲ್ಲಿ ಮುಖ್ಯನಾದ ಆನಂದನನ್ನು ತನ್ನ ಸೇವೆಗೆ ನಿಲ್ಲಿಸಿಕೊಂಡನು.

ಆ ಇಳಿಯ ವಯಸ್ಸಿನಲ್ಲಿಯೂ ಬುದ್ಧನು ತನ್ನ ಉಪದೇಶವನ್ನು ನಿಲ್ಲಿಸಲಿಲ್ಲ. ವೈಶಾಲಿಯಿಂದ ಹೊರಟ ಆತನು ಕೂತಗಾರಕ್ಕೆ ಬಂದನು. ಭಿಕ್ಷುಗಳನ್ನೆಲ್ಲ ಅಲ್ಲಿಗೆ ಬರಮಾಡಿಕೊಂಡು ತಾನು ಉಪದೇಶಿಸಿದ ಧರ್ಮವನ್ನು ಶ್ರದ್ಧೆಯಿಂದಲೂ ವಿಶ್ವಾಸದಿಂದಲೂ ನಡೆಸಿಕೊಂಡು ಬರಬೇಕೆಂದು ಅವರಿಗೆ ತಿಳಿಸಿದನು. ಆಮೇಲೆ ಕೂತಾಗಾರದಿಂದ ಪಾವ ಎಂಬ ಊರಿಗೆ ಬಂದನು. ಆ ಊರಿನ ಚುಂದ ಎಂಬ ಕಮ್ಮಾರನು ಬುದ್ಧನನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದನು. ಆ ದಿನ ಊಟವಾದ ಮೇಲೆ ಬುದ್ಧನಲ್ಲಿ ಅಸ್ವಸ್ಥತೆ ತಲೆದೋರಿತು. ತನ್ನ ಅಂತ್ಯವು ಸಮೀಪಿಸಿತೆಂದು ಬುದ್ಧನು ಮನಗಂಡನು. ಪಾವದಿಂದ ಕುಶೀನಾರ ಗ್ರಾಮಕ್ಕೆ ಹೊರಟನು. ದಾರಿಯಲ್ಲಿ ಸಿಕ್ಕಿದ ಕಕುತ್ಥ ತೀರ್ಥದಲ್ಲಿ ಸ್ನಾನಮಾಡಿ ಕುಶೀನಾರವನ್ನು ತಲುಪಿದನು. ಅಷ್ಟು ಹೊತ್ತಿಗೆ ಆಯಾಸವು ಬಹಳವಾಗಿತ್ತು. ಆನಂದನು ಬುದ್ಧನನ್ನು ಬಹಳ ಎಚ್ಚರಿಕೆಯಿಂದ ಉಪಚರಿಸುತ್ತಿದ್ದನು.

ಬುದ್ಧನ ದೇಹ ಕುಗ್ಗಿದುದನ್ನು ಕಂಡು ಆತನ ಅಂತ್ಯ ಸಮೀಪಿಸಿತೆಂದು ಶಿಷ್ಯರಿಗೆಲ್ಲ ಮನವರಿಕೆಯಾಯಿತು. ಅವರೆಲ್ಲ ವ್ಯಸನಕ್ಕೀಡಾದರು. ಬುದ್ಧನು ಅವರನ್ನು ಕುರಿತು, "ಹುಟ್ಟಿದ್ದೆಲ್ಲ ಒಂದುದಿನ ಸಾಯಬೇಕು. ಅದಕ್ಕಾಗಿ ವ್ಯಸನಪಡಬೇಡಿ. ಪ್ರಮಾದರಹಿತರಾಗಿ ನಡೆದು ಮುಕ್ತಿಯನ್ನು ಪಡೆಯಿರಿ. ನಾನು ಪರಿನಿರ್ವಾಣ ಹೊಂದಿದ ಮೇಲೆ ಗುರುವಿಲ್ಲವೆಂದು ವ್ಯಥೆಪಡಬೇಡಿ. ಧರ್ಮಸಂಘಗಳೇ ಗುರುವಿನ ಪ್ರತಿನಿಧಿಗಳು. ಇಂದಿನಿಂದ ಎಂದೆಂದಿಗೂ ಎಲ್ಲರಲ್ಲೂ ಸೋದರಭಾವದಿಂದ ನಡೆಯಿರಿ" ಎಂದು ಹೇಳಿ

ದನು. ಬುದ್ಧನ ಶುಶ್ರೂಷೆಯನ್ನು ಮಾಡುತ್ತಿದ್ದ ಆನಂದನಿಗಂತೂ ಅಪಾರ ವಾದ ದುಖಃವುಂಟಾಯಿತು. ಅದನ್ನರಿತ ಬುದ್ಧನು ಆನಂದನನ್ನು ಕುರಿತು, "ಆನಂದ! ನಿನಗೆ ನಾನಿನ್ನೇನೂ ಹೇಳಬೇಕಾಗಿಲ್ಲ. ಮುಚ್ಚುಮರೆಯಿಲ್ಲದೆ ಎಲ್ಲರಿಗೂ ಸತ್ಯವನ್ನು ತಿಳಿಸಿದ್ದೇನೆ. ಸಂಘಕ್ಕೂ ನಾನು ಏನನ್ನೂ ತಿಳಿಸಬೇಕಾಗಿಲ್ಲ. ಏಕೆಂದರೆ ನಿಮಗೆ ನೀವೇ ಆಸರೆ. ಸತ್ಯದ ಕೈದೀವಿಗೆಯ ಬೆಳಕಿನಲ್ಲಿ ನಡೆಯಿರಿ. ಅದರಿಂದ ನೀವು ಉತ್ಕೃಷ್ಟ ಪದವಿಗೇರುತ್ತೀರಿ" ಎಂದು ಹೇಳಿದನು. ಅದನ್ನು ಕೇಳಿದ ಆನಂದನಿಗೆ ದುಃಖ ಮರುಕಳಿಸಿತು. ಆಗ ಬುದ್ಧನು, "ಆನಂದ ! ನೀನು ಹೀಗೆಲ್ಲ ದುಖಃಪಡಬಾರದು. ಎಲ್ಲರೂ ತಮ್ಮ ಪ್ರಿಯ ವಸ್ತುಗಳನ್ನು ಒಂದಲ್ಲ ಒಂದು ದಿನ ಕಳೆದುಕೊಳ್ಳಲೇಬೇಕೆಂದು ನಾನು ನಿನಗೆ ಹೇಳಿಲ್ಲವೆ? ಹುಟ್ಟಿದಮೇಲೆ ಸಾಯಲೇಬೇಕು. ನನಗೆ ಈಗ ಎಂಬತ್ತು ವರ್ಷಗಳಾಗಿವೆ. ನೀನು ವೃಥಾ ವ್ಯಸನಪಡಬೇಡ. ನೀನು ನನ್ನನ್ನು ಪ್ರೀತಿಯಿಂದ ಉಪಚರಿಸಿರುವಿ. ನಿನಗೆ ಮಂಗಳವಾಗಲಿ" ಎಂದು ಆಶೀರ್ವದಿಸಿ ಸಮಾಧಾನಪಡಿಸಿದನು.

ಬುದ್ಧನು ಅಷ್ಟು ಆಯಾಸಗೊಂಡಿದ್ದರೂ ತನ್ನಲ್ಲಿಗೆ ಬಂದವರಿಗೆ ಉಪದೇಶ ಮಾಡುವುದನ್ನು ನಿಲ್ಲಿಸಲಿಲ್ಲ. ತಾನು ಬೋಧಿಸಿದ ಧರ್ಮವನ್ನು ನಿಷ್ಠೆಯಿಂದ ಅನುಷ್ಠಾನಕ್ಕೆ ತರಬೇಕೆಂದು ಮತ್ತೆ ಮತ್ತೆ ತನ್ನ ಶಿಷ್ಯರಿಗೆ ಒತ್ತಿ ಹೇಳುತ್ತಾ ಶಾಂತಿಯಿಂದಲೂ ಸಂತೋಷದಿಂದಲೂ ತನ್ನ ಎಂಬತ್ತನೆಯ ವರ್ಷದಲ್ಲಿ ಮರಣ ಹೊಂದಿದನು. ಬುದ್ಧನು ಸತ್ತದ್ದು ವೈಶಾಖ ಶುಕ್ಲ ಪೂರ್ಣಿಮಾ ದಿನ. ಇಂದಿಗೆ ಸುಮಾರು ಎರಡು ಸಾವಿರದ ಐನೂರು ವರ್ಷಗಳ ಹಿಂದೆ. ಬುದ್ಧನ ಮರಣವಾರ್ತೆ ಕಾಳ್ಗಿಚ್ಚಿನಂತೆ ಹಬ್ಬಿತು. ಸುತ್ತಮುತ್ತಲಿನ ರಾಜರೂ ಪ್ರಜೆಗಳೂ ಕುಶೀನಾರಕ್ಕೆ ಧಾವಿಸಿದರು. ಆತನ ಅಂತ್ಯದರ್ಶನ ಭಾಗ್ಯವನ್ನು ಪಡೆದರು. ಆತನ ಅವಶೇಷಗಳನ್ನು ಕೊಂಡುಹೋಗಿ ಭಕ್ತಿ ಗೌರವಗಳಿಂದ ತಮ್ಮ ತಮ್ಮ ದೇಶಗಳಲ್ಲಿ ಸ್ಥಾಪಿಸಿದರು. ಆತನ ಸ್ಮಾರಕಕ್ಕಾಗಿ ಗುಡಿಗೋಪುರಗಳನ್ನು ಕಟ್ಟಿಸಿದರು. ಅವು ಈಗ ಸ್ತೂಪಗಳೆಂದು ಪವಿತ್ರ ಯಾತ್ರಾಸ್ಥಳಗಳಾಗಿವೆ. ಬುದ್ಧನ ಭೌತಿಕದೇಹ ಇಂದು ಮರೆಯಾಗಿದ್ದರೂ ಆತನ ತತ್ತ್ವಗಳು ಅಮರವಾಗಿವೆ. ಶತಶತಮಾನಗಳು ಕಳೆದು ಹೋದರೂ ಆತನ ಉದಾತ್ತ ಧರ್ಮಜ್ಞಾನಗಳಿಂದ ಜನರಿಗೆ ದೂರವಾಗದೆ

ಇನ್ನೂ ಸಮೀಪವಾಗುತ್ತಿದ್ದಾನೆ. ಆತನು ಬೋಧಿಸಿದ ಧರ್ಮ ಇಂದಿಗೂ ಜೀವಂತವಾಗಿದೆ; ಆತನ ಹೆಸರು ಅಮರವಾಗಿದೆ.

ಹಿಂದೂಗಳು ತಮ್ಮ ಪ್ರಮಾಣಗ್ರಂಥಗಳಾದ ವೇದಗಳನ್ನು ಅಪೌರುಷೇಯವೆಂದು ನಂಬಿರುವಂತೆಯೇ ಬೌದ್ಧರು 'ತ್ರಿಪಿಟಕ' ಅಥವಾ 'ಬುದ್ಧವಚನ' ಗಳಲ್ಲಿ ಪ್ರತಿಯೊಂದು ವರ್ಣವೂ ಬುದ್ಧದೇವನ ಮುಖದಿಂದ ಬಂದುದೆಂದು ನಂಬಿದ್ದಾರೆ. ಅವರ ಅಚಲವಾದ ಈ ನಂಬಿಕೆಗೆ ಬುದ್ಧದೇವನ ಹಿರಿಯ ಆದರ್ಶತತ್ತ್ವಗಳೇ ಕಾರಣವಾಗಿವೆ. ಬುದ್ಧನು ಸಾರಿದ ವಿಶ್ವಪ್ರೇಮ, ಸದಾಚಾರ, ಸಮಭಾವನೆಗಳು ಇಡೀ ಮಾನವ ಜಗತ್ತಿಗೇ ಮಾನ್ಯವಾಗಿವೆ. ಶೀಲಶುದ್ಧತೆಗಳಿಂದ ಕೂಡಿದ ಪ್ರೇಮ ದಯೆಗಳ ಆದರ್ಶ ನೀತಿಯೇ ವಿಶ್ವನೀತಿಯೆಂದು ಸಾರಿ ಜಗತ್ತಿನ ದೃಷ್ಟಿಯನ್ನೇ ತನ್ನತ್ತ ಕೇಂದ್ರೀಕರಿಸಿಕೊಂಡ ಬುದ್ಧದೇವನು ಧರ್ಮದಾನಿಯಾಗಿ ರಾರಾಜಿಸುತ್ತಿದ್ದಾನೆ.



ವಿಶ್ವಬಂಧು ಬಸವಣ್ಣ

ವಿಶ್ವಬಂಧು ಬಸವಣ್ಣ

ಪ್ರಸ್ತಾವನೆ

ಪ್ರಾಚೀನಕಾಲದಿಂದಲೂ ಭರತ ಖಂಡವು ಧರ್ಮಪ್ರಧಾನವಾದ ನಾಡೆಂದೂ ಪುಣ್ಯಭೂಮಿಯೆಂದೂ ಖ್ಯಾತಿವೆತ್ತಿದೆ. ನಮ್ಮ ಈ ದೇಶದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಸುಧಾರಕರಿಗೂ ಜ್ಞಾನಿಗಳಿಗೂ ಎಂದೂ ಕೊರತೆಯಿಲ್ಲ. ಆಗಿಂದಾಗ್ಗೆ ಒಬ್ಬೊಬ್ಬ ಮಹಾತ್ಮರು ಜನ್ಮವೆತ್ತಿ ತಮ್ಮ ನಿಷ್ಕಾಮ ಸೇವೆಯಿಂದಲೂ ಸರ್ವೋದಯ ದೃಷ್ಟಿಯಿಂದಲೂ ಜನಪ್ರಿಯರಾಗಿ ಬಾಳಿ ಬೆಳಗಿದ್ದಾರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ವಿಭೂತಿ ಪುರುಷರು ಲೋಕಕಲ್ಯಾಣಕ್ಕಾಗಿ, ಜನತೆಯ ಏಳಿಗೆಗಾಗಿ ತಮ್ಮ ತನುಮನ ಧನಗಳನ್ನು ಧಾರೆಯೆರೆದಿದ್ದಾರೆ. ಇಂತಹ ಸ್ವಾರ್ಥತ್ಯಾಗಿಗಳ, ಅನುಭಾವಿಗಳ ಜ್ಞಾನಿಗಳ ಪವಿತ್ರಜೀವನವನ್ನು ಆದರ್ಶವಾಗಿಟ್ಟುಕೊಂಡು ಅವರು ನಡೆದ ದಾರಿಯಲ್ಲಿ ನಡೆದು ಜನತೆ ತಮ್ಮ ಬಾಳನ್ನು ಹಸನುಮಾಡಿಕೊಂಡಿತು ; ಕಲ್ಯಾಣವನ್ನು ಸಾಧಿಸಿಕೊಂಡಿತು.

ಹೀಗೆಯೇ ಮತಧರ್ಮಗಳ ಬೆಳವಣಿಗೆಯ ಕ್ರಮದಲ್ಲೂ ಲೋಪ ದೋಷಗಳು ತಲೆದೋರಿದಾಗ ಆ ಮಹಾತ್ಮರು ಅವುಗಳ ಮಾಲಿನ್ಯವನ್ನು ತೊಳೆದು ಧರ್ಮೋದ್ಧಾರವನ್ನು ಮಾಡಿದ್ದಾರೆ. ಪುರಾತನ ಸಂಪ್ರದಾಯ ಗಳನ್ನು ಸಂಸ್ಕರಿಸಿ ಜೀವನ ತತ್ತ್ವಗಳಿಗೆ ನವಚೈತನ್ಯವನ್ನು ತುಂಬಿದ್ದಾರೆ. ಅಂತಹ ಧುರೀಣರಲ್ಲಿ ಬಸವಣ್ಣನವರೂ ಒಬ್ಬರು. ಅವರ ಉದಾತ್ತ ಜೀವನ, ಚಿರವಿನೂತನ ತತ್ತ್ವಗಳು, ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿನ ದುಡಿಮೆ ಮುಂತಾದುವುಗಳಿಂದ ಲೋಕಪೂಜ್ಯತೆಯನ್ನು ಪಡೆದಿದ್ದಾರೆ. ಬಸವಣ್ಣನವರಂತೆ ಹಲವಾರು ಕ್ಷೇತ್ರಗಳಲ್ಲಿ ಶ್ರಮಿಸಿ ಲೋಕಕಲ್ಯಾಣವನ್ನು ಸಾಧಿಸಿರುವವರು ವಿಶ್ವದಲ್ಲೇ ಅತಿ ವಿರಳ.

ಧರ್ಮವು ಪ್ರಗತಿಗಾಮಿ. ಆಯಾಕಾಲದ ಜನಜೀವನದ ಆಶೋತ್ತರ ಗಳಿಗನುಗುಣವಾಗಿ ಅದು ಹೊಸ ರೂಪವನ್ನು ತಳೆಯುವುದು ಅನಿವಾರ್ಯ ವಾಗುತ್ತದೆ. ಈ ಬದಲಾವಣೆ ಕಾಲಾಂತರದಿಂದ ಬಂದಿರುವ ಲೋಕ ನಿಯಮವಾಗಿದೆ. ಉದಾತ್ತಧ್ಯೇಯದಿಂದ ಕೂಡಿರುವ ಧರ್ಮವು ಸಾಮಾನ್ಯ ವಾಗಿ ಸ್ಥಿರಸಿದ್ಧಾಂತಗಳ ಮೇಲೆ ಏಕರೂಪಿತವಾಗಿರುವುದಿಲ್ಲ. ಕಾಲಧರ್ಮ ಕ್ಕನುಸಾರವಾಗಿ ಅದು ಪರಿವರ್ತನೆ ಹೊಂದುತ್ತಾ ಪ್ರಗತಿಯನ್ನು ಸಾಧಿಸಿರು ವುದೇ ಅದರ ವೈಶಿಷ್ಟ್ಯವಾಗಿದೆ. ಈ ದಿಸೆಯಲ್ಲಿ ದುಡಿದು ಮತಧರ್ಮ ಗಳನ್ನು ಪುನರುಜ್ಜೀವನಗೊಳಿಸಿ ಪುನಃ ಪ್ರತಿಷ್ಠಾಪಿಸಿದ ಮಹನೀಯರು ಬಹಳ ಹಿಂದಿನ ಕಾಲದಿಂದಲೂ ಕಂಡುಬರುತ್ತಾರೆ. ಇವರ ನಿರಂತರ ಶ್ರಮದ ಫಲವಾಗಿಯೇ ಧರ್ಮೋದ್ಧಾರಕಾರ್ಯ ಸಂತತವಾಗಿ ಬೆಳೆ ಯುತ್ತಾ ಬಂದಿದೆ. ಈ ಜ್ಞಾನಿಗಳ ವಿಚಾರಪೂರ್ಣವಾದ ಪ್ರಯತ್ನಗಳಿಂದ ನಮ್ಮ ಧರ್ಮದಲ್ಲಿ ವಿಶ್ವದ ಅನ್ಯಮತಗಳ ಸಾರವನ್ನೂ ಕಾಣಬಹುದಾಗಿದೆ.

ಬಸವಣ್ಣನವರು ಜೀವಿಸಿದ್ದ ಹನ್ನೆರಡನೆಯ ಶತಮಾನವು ಧಾರ್ಮಿಕ ದೃಷ್ಟಿಯಿಂದ ಬಹುಮುಖ್ಯವಾದುದು. ಪ್ರಪಂಚದಲ್ಲೆಲ್ಲಾ ನವಚೇತನವೂ ಜಾಗೃತಿಯೂ ತಲೆದೋರಿದ ಮಹಾಕಾಲವು ಅದೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಭರತಖಂಡದಲ್ಲೂ ಹನ್ನೆರಡನೆಯ ಶತಮಾನವು ತುಂಬ ಪ್ರಾಮುಖ್ಯವನ್ನು ಪಡೆದಿದೆ. ಆ ಕಾಲದಲ್ಲಿ ಕನ್ನಡನಾಡು ಸರ್ವತೋ ಮುಖವಾದ ಪ್ರಗತಿಯನ್ನು ಸಾಧಿಸಿತು; ಕ್ರಾಂತಿಯ ರೂಪದಲ್ಲಿ ನವೋ ದಯವು ತಲೆದೋರಿತು. ಈ ನವೋದಯಕ್ಕೆ ಬಸವಣ್ಣನವರೇ ಕಾರಣ ಪುರುಷರು. ಕಿರಿಯ ವಯಸ್ಸಿನವರಾದರೂ ತಮ್ಮ ಹಿರಿಯ ಗುಣಗಳಿಂದಲೂ ಉನ್ನತ ಧ್ಯೇಯಸಾಧನೆಗಳಿಂದಲೂ ಅಗ್ರಗಣ್ಯರಾಗಿ ಅಂದಿನ ಜನತೆಗೆ ಮಾರ್ಗದರ್ಶಕರಾದರು.

ಬಸವಣ್ಣನವರ ಜೀವನ ಚರಿತ್ರೆಯನ್ನು ತಿಳಿಯುವುದಕ್ಕಿಂತ ಮುನ್ನ ಆ ಕಾಲದ ಸ್ಥಿತಿಗತಿಗಳನ್ನು ತಿಳಿಯುವುದು ಅತ್ಯಗತ್ಯ. ಏಕೆಂದರೆ ಆ ಹಿನ್ನೆಲೆಯ ಪರಿಸ್ಥಿತಿಗಳಿಂದ ಬಸವಣ್ಣನವರ ಜೀವನ ಸಾಧನೆಗಳ ಮೇಲೆ ವಿಶೇಷ ಪರಿಣಾಮವಾಯಿತು. ಅವರು ಹುಟ್ಟುವುದಕ್ಕಿಂತ ಮುಂಚೆ ನಮ್ಮ ದೇಶದ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳು ಬಹಳ ಶೋಚ

ನೀಯುವಾಗಿದ್ದುವು. ವೇದೋಪನಿಷತ್ತುಗಳ ಕಾಲದ ಆರ್ಯಧರ್ಮವು ಸ್ವಾಭಾವಿಕವಾದ ಏರಿಳಿತಗಳಿಗೆ ಸಿಕ್ಕಿ ಕ್ಷೀಣದೆಸೆಗೆ ಬಂದಿದ್ದಿತು. ಪೌರಾಣಿಕ ಕಾಲದಲ್ಲಿ ಪ್ರಚಾರಕ್ಕೆ ಬಂದ ಚಾತುರ್ವರ್ಣ್ಯಗಳು ಬಹಳ ಕಾಲದವರೆಗೆ ತಮ್ಮ ಜನಾನುರಾಗವನ್ನು ಉಳಿಸಿಕೊಳ್ಳಲಾಗಲಿಲ್ಲ. ಶ್ರಮವಿಭಾಗತತ್ತ್ವದ ಮೇಲೆ ನೈವೆತ್ತಿದ್ದ ವರ್ಣಾಶ್ರಮಧರ್ಮಗಳು ಅಂದಿನ ಕೆಲವು ಸ್ವಾರ್ಥಿಗಳ ಬುದ್ಧಿಯ ದೋಷದಿಂದ ವೈಪರೀತ್ಯವನ್ನು ಮುಟ್ಟಿದ್ದುವು. ಮತಧರ್ಮಗಳು ಹೆಚ್ಚು ಗ್ರಾಂಥಿಕವಾಗಿದ್ದುವು. ತತ್ತ್ವಜ್ಞಾನವು ಜನಸಾಮಾನ್ಯಕ್ಕೆ ತಿಳಿಯದ ಸಂಸ್ಕೃತ ಭಾಷೆಯ 'ಮಡಿಯಲ್ಲಿ' ಪ್ರಚಾರಕ್ಕೆ ಬಂದಿತ್ತು. ಉಚ್ಚವರ್ಣದವರು ಮತಧರ್ಮಗಳ ಮೇಲೆ ತಮಗೇ ಪೂರ್ಣಸ್ವಾಮ್ಯವಿದೆಯೆಂದು ಹೇಳಿಕೊಂಡು ಇತರರನ್ನು ದೂರೀಕರಿಸಿದರು. ಅದರ ಪರಿಣಾಮವಾಗಿ ಧರ್ಮವು ಸಾರ್ವಜನಿಕವಾಗದೆ ಕೆಲವು ಪ್ರತಿಷ್ಠಿತ ಮನೆತನಗಳ ಅಥವಾ ಪಂಗಡಗಳ ಸ್ವತ್ತಾಗಿತ್ತು. ಅವರು ಯಜ್ಞಯಾಗಾದಿಗಳಿಗೆ ವಿಶೇಷ ಮನ್ನಣೆಯನ್ನು ಕೊಡುತ್ತಿದ್ದರು. ತಾವೇ ಶ್ರೇಷ್ಠಕುಲಜರೆಂದು ಇತರರ ಮೇಲೆ ಅಧಿಕಾರವನ್ನು ನಡೆಸಲು ಮೊದಲುಮಾಡಿದ್ದರು. ಈ ಅಧಿಕಾರದ ಅಮಲಿನಿಂದ ಅವರಲ್ಲಿ ಮಾನವಸಹಜವಾದ ದಯೆ, ಕರುಣೆ, ಮಮತೆಗಳಿಗೂ ಅವಕಾಶವಿರಲಿಲ್ಲ. ಈ ಬಗೆಯ ಸಂಕುಚಿತ ದೃಷ್ಟಿಯಿಂದ ಸಮಾಜಕ್ಕೆ ಒಳ್ಳಿತಾಗಲಿಲ್ಲ.

ವೈದಿಕಧರ್ಮವು ಕಾಲಕ್ರಮದಲ್ಲಿ ಅಂಧಶ್ರದ್ಧೆಯಿಂದ ವಿಕಾರರೂಪವನ್ನು ಪಡೆದಿತ್ತು. ವರ್ಣಾಶ್ರಮ ಪದ್ಧತಿಯಿಂದ ಸಮಾಜದಲ್ಲಿ ಮೇಲುಕೀಳೆಂಬ ಭಾವನೆಗಳು ತಲೆದೋರಿದ್ದುವು. ಚಾತುರ್ವರ್ಣ್ಯಗಳಲ್ಲಿ ಕೀಳೆಂದು ಪರಿಗಣಿಸಲ್ಪಟ್ಟಿದ್ದ ಶೂದ್ರರೂ ಅವರಿಗಿಂತಲೂ ಕಡೆಯಾದ ಅಸ್ಪೃಶ್ಯರೂ ಸಾರ್ವಜನಿಕವಾದ ಸಾಮಾಜಿಕ ಸೌಲಭ್ಯಗಳಿಂದ ವಂಚಿತರಾಗಿ ಅನೇಕ ಕಷ್ಟನಷ್ಟಗಳಿಗೆ ಗುರಿಯಾಗಿದ್ದರು. ವಿಭಿನ್ನ ಧರ್ಮ ಮತಪಂಥಗಳ ಅಂತಃಕಲಹಗಳಿಂದ ಪರಿಸ್ಥಿತಿ ಹದಗೆಟ್ಟು ಜನರು ಅಸಮಾಧಾನಗೊಂಡಿದ್ದರು. ಅವರು ವೈದಿಕಧರ್ಮದ ವರ್ಣಾಶ್ರಮಪದ್ಧತಿಯನ್ನೂ ಯಜ್ಞ ಯಾಗಾದಿಗಳನ್ನೂ ಪಶುವಧೆಯೇ ಮುಂತಾದ ಆಚರಣೆಗಳನ್ನೂ ಉಗ್ರವಾಗಿ ಖಂಡಿಸುವುದಕ್ಕೆ ಪ್ರಾರಂಭಿಸಿದರು.

ಹೀಗೆ ವೈದಿಕಧರ್ಮವು ಖಿಲವಾಗುತ್ತಿದ್ದ ಕಾಲದಲ್ಲಿ ಜೈನ ಬೌದ್ಧ ಮತಗಳು ತಲೆದೋರಿದವು. ಅಹಿಂಸಾಪ್ರಧಾನವಾದ ಜೈನಮತವು ಸ್ವಲ್ಪ ಕಾಲ ಪ್ರಬುದ್ಧಮಾನವಾಗಿದ್ದರೂ ಕ್ರಮೇಣ ಅದು ವೈದಿಕಧರ್ಮದ ಮುಂದೆ ಸ್ಪರ್ಧಿಸಲಾರದೆ ಹೋಯಿತು. ಬೌದ್ಧಮತ ಸ್ಥಾಪಕನಾದ ಬುದ್ಧನು ಸತ್ಯ ಅಹಿಂಸೆಗಳ ಆಧಾರದ ಮೇಲೆ ಸಮತಾಭಾವದ ಒಂದು ನಿರ್ದಿಷ್ಟ ನೀತಿಯನ್ನು ಪ್ರತಿಪಾದಿಸಿ, ವರ್ಣಾಶ್ರಮಪದ್ಧತಿಯನ್ನು ಖಂಡಿಸಿ ಗುಣ ಶೀಲಗಳ ಮೇಲ್ಮೆಯನ್ನು ಎತ್ತಿಹಿಡಿದನು. ಆದರೆ ಜ್ಞಾನಪ್ರಧಾನವಾದ ಬೌದ್ಧಮತವು ನಮ್ಮ ದೇಶದಲ್ಲಿ ನೆಲೆಯಾಗಿ ನಿಲ್ಲಲಿಲ್ಲ. ಹೀಗೆ ಜೈನಬೌದ್ಧ ಮತಗಳು ಹಿಂದೂಧರ್ಮದ ಹಲವಾರು ಕುಂದುಕೊರತೆಗಳನ್ನು ಹೋಗಲಾಡಿಸಿದ್ದರೂ ಅವು ಜನಾನುರಾಗದ ಪಂಥಗಳಾಗಿ ಉಳಿಯಲಾಗಲಿಲ್ಲ.

ಜೈನ ಬೌದ್ಧಮತಗಳ ಪ್ರಭಾವ ಕಡಿಮೆಯಾಗಿ ವೈದಿಕಮತವು ಜನರಲ್ಲಿ ಅಪ್ರಿಯವಾಗಿದ್ದಾಗ ವಿಚಾರಪರರಾದ ಬಸವಣ್ಣನವರು ತಮ್ಮ ಪ್ರತಿಭೆಯಿಂದಲೂ ಪ್ರಗತಿಪರ ಮನೋಭಾವನೆಯಿಂದಲೂ ಪ್ರವರ್ಧಮಾನಕ್ಕೆ ಬಂದರು. ವರ್ಣಾಶ್ರಮ ಧರ್ಮಗಳ ಸಂಕೋಲೆಗಳಿಗೆ ಸಿಲುಕದಿದ್ದ ವೀರಶೈವ ಮತವನ್ನು ಪುನರುಜ್ಜೀವನಗೊಳಿಸಿ, ಸಮತಾಭಾವದ ಉನ್ನತ ಸಾಮಾಜಿಕ ನೀತಿಯನ್ನು ಪ್ರತಿಪಾದಿಸಿ, ಅಂಧಕಾರದಲ್ಲಿ ತೊಳಲುತ್ತಿದ್ದ ಜನತೆಗೆ ಮಾರ್ಗವನ್ನು ತೋರಿಸಿದರು. ಗುಣ, ಶೀಲ ಮತ್ತು ಆಚರಣೆಗಳಿಗೆ ಪ್ರಾಮುಖ್ಯವನ್ನು ಕೊಟ್ಟು ಲೋಕನೀತಿಯನ್ನು ಸಾರಿ ಜನತೆಯನ್ನು ಜಾಗೃತಗೊಳಿಸಿದರು. ಅಂದಿನ ಜನಜೀವನವನ್ನೂ ಮನೋಗತಿಯನ್ನೂ ಅರಿತು ವೀರಶೈವಮತವನ್ನು ಸುಧಾರಿಸಿ ಒಂದು ಹೊಸ ಸಮಾಜವನ್ನೇ ರೂಪಿಸುವುದಕ್ಕೆ ಕಾರಣರಾದರು.

ಬಸವಣ್ಣನವರದು ಮುಖ್ಯವಾಗಿ ಸರ್ವೋದಯ ದೃಷ್ಟಿ. ಸಮಾಜದಲ್ಲಿನ ವರ್ಣಭೇದಗಳು ಅಳಿಯಬೇಕು; ಕೀಳು ಮೇಲೆಂಬ ಭಾವನೆ ನಿರ್ಮೂಲವಾಗಬೇಕು. ಕೇವಲ ಹುಟ್ಟಿನಿಂದಲೇ ಮನುಷ್ಯನ ಯೋಗ್ಯತೆಯನ್ನು ಅಳೆಯದೆ ಗುಣದಿಂದ ನಿರ್ಧರಿಸುವುದು ಉತ್ತಮವಾದ ಮಾರ್ಗ. ಧರ್ಮ ತತ್ತ್ವಗಳು ಸರ್ವರಿಗೂ ಸಮವಾಗಿ ಸೇರಿರುತ್ತವೆ. ಅವು ಕೆಲವಾರು ಪಂಡಿತರ ಅಥವಾ ಮನೆತನಗಳ ಸ್ವತ್ತಲ್ಲ. ಸ್ವಪ್ರತಿಷ್ಠೆಗೂ ಸ್ವಾರ್ಥಕ್ಕೂ

ಆಚರಿಸುವ ಯಜ್ಞಯಾಗಾದಿಗಳನ್ನೂ ಹಿಂಸಾತ್ಮಕವಾದ ಪಶುವಧೆಯನ್ನೂ ನಿಲ್ಲಿಸಬೇಕು. ಜನತೆಯು ಅರ್ಥವಿಲ್ಲದ ಸಂಪ್ರದಾಯಗಳನ್ನೂ ಆಚಾರಗಳನ್ನೂ ತ್ಯಜಿಸಬೇಕು. ಸ್ವಚ್ಛವಾದ ಆಚಾರ ವಿಚಾರಗಳಿಗೆ ಗಮನ ಕೊಡಬೇಕು. ಇಂತಹ ಕ್ರಾಂತಿದಾಯಕವಾದ ಸಮಾಜೋದ್ಧಾರ ಮಾರ್ಗವನ್ನು ಎತ್ತಿಹಿಡಿದ ಬಸವಣ್ಣನವರು ಜನಪ್ರಿಯತೆಯನ್ನು ಗಳಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಹಿಂದೂ ಸಮಾಜದ ಅವನತಿಗೆ ಕಾರಣವಾಗಿದ್ದ ಜಾತಿವಾದ ಮತ್ತು ಅಸ್ಪೃಶ್ಯತೆಯ ಕಳಂಕವನ್ನು ಹೋಗಲಾಡಿಸಿ ಸರ್ವಸಮಾನತೆಯ ಬುನಾದಿಯ ಮೇಲೆ ವೀರಶೈವ ಸಮಾಜವನ್ನು ಪ್ರಪ್ರಥಮವಾಗಿ ಸುಧಾರಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲಬೇಕಾಗಿದೆ. 'ವಿಪ್ರ ಮೊದಲು ಅಂತ್ಯಜ ಕಡೆಯಾಗಿ ಶಿವಭಕ್ತರಾದವರನೆಲ್ಲ ಒಂದೇ ಎಂಬೆ' ಎಂಬ ಸಮತವಾದದ ತತ್ತ್ವವನ್ನು ಸಾರಿದರು. ಕಲ್ಯಾಣ ಪಟ್ಟಣದಲ್ಲಿ ಇತಿಹಾಸ ಪ್ರಸಿದ್ಧವಾದ 'ಅನುಭವ ಮಂಟಪ' ಎಂಬ ವಿದ್ಯಾಪೀಠವನ್ನು ಸ್ಥಾಪಿಸಿ ವೇದೋಪನಿಷತ್ತುಗಳ ರಹಸ್ಯಗಳನ್ನೂ ಧರ್ಮಬೋಧನೆಯನ್ನೂ ತಿಳಿಗನ್ನಡದಲ್ಲಿ ಸಾಮಾನ್ಯರಿಗೂ ಅರ್ಥವಾಗುವಂತೆ ಉಪದೇಶಿಸಿದರು. 'ಕಾಯಕವೇ ಕೈಲಾಸ' ಎಂಬುದನ್ನು ಸಾರಿ ತೋರಿ ಎಲ್ಲ ಕಾಯಕಗಳಿಗೂ ಸಮಾನವಾದ ಸ್ಥಾನವನ್ನು ಕಲ್ಪಿಸಿಕೊಟ್ಟರು. ಅಂತರ್ಜಾತಿಗಳೆಂಬ ಭೇದಭಾವನೆಗಳನ್ನು ಖಂಡಿಸಿದರು. ಸ್ವಾವಲಂಬನೆ ಸ್ವತಂತ್ರಮನೋಭಾವನೆಗಳನ್ನು ಬೆಳೆಸುವುದಕ್ಕೆ ಪ್ರೇರಕರಾದರು. ಹಿಂದೂಸಮಾಜದಲ್ಲಿ ಸ್ತ್ರೀಯರಿಗಿದ್ದ ಅಡಚಣೆಗಳನ್ನು ತೊಡೆದುಹಾಕಿ ಸಮಾಜದ ಅರ್ಧ ಅಂಗವಾದ ಮಹಿಳಾವರ್ಗಕ್ಕೂ ಸಮಾನಸ್ಥಾನವನ್ನು ಕೊಟ್ಟು ಗೌರವಿಸಿದರು. ನಿತ್ಯಜೀವನದಲ್ಲಿ ಸತ್ಯ ಶೀಲಗಳ ಮಹತ್ವವನ್ನು ಒತ್ತಿಹೇಳಿ, ನುಡಿದಂತೆ ನಡೆದು ಹಿಂದೂಧರ್ಮದ ಶ್ರೇಷ್ಠತೆಯನ್ನು ಎತ್ತಿಹಿಡಿದರು. 'ಸಕಲಜೀವಾತ್ಮರಿಗೆ ಲೇಸ ಬಯಸುವರೆಲ್ಲ ಕುಲಜರು' ಎಂಬ ಮಹೋನ್ನತ ಲೋಕನೀತಿಯನ್ನು ಘೋಷಿಸಿ ವಿಶ್ವಬಂಧುತ್ವಕ್ಕೆ ಮಾರ್ಗವನ್ನು ತೋರಿದರು.

ಬಸವಣ್ಣನವರ ಜೀವನ ಚರಿತ್ರೆ

ಬಸವಣ್ಣನವರು ಈಗ್ಗೆ ಸುಮಾರು ಎಂಟುನೂರು ವರ್ಷಗಳ ಹಿಂದೆ ಹನ್ನೆರಡನೆಯ ಶತಮಾನದ ಆದಿಭಾಗದಲ್ಲಿ ಜನ್ಮವೆತ್ತಿದರು. ಕನ್ನಡನಾಡಿನ ಬಿಜಾಪುರಜಿಲ್ಲೆಯ 'ಬಾಗೇವಾಡಿ' ಎಂಬುದು ಅವರ ಜನ್ಮಸ್ಥಳ. 'ಮಾದರಸ' 'ಮಾದಲಾಂಬಿಕೆ' ಎಂಬ ಶೈವಬ್ರಾಹ್ಮಣ ದಂಪತಿಗಳೇ ಅವರ ತಂದೆ ತಾಯಿಗಳು. ಸಾತ್ವಿಕರಾದ ಈ ದಂಪತಿಗಳಿಗೆ ಬಹಳಕಾಲ ಮಕ್ಕಳಾಗಲಿಲ್ಲ. ಪುತ್ರಾರ್ಥವಾಗಿ ಅನೇಕ ಹರಕೆಗಳನ್ನು ಹೊತ್ತು ನಂದಿಯ ವ್ರತವನ್ನು ಕೈಗೊಂಡರು. ಕೊನೆಗೆ ದೈವಕೃಪೆಯಿಂದ ಮಾದಲಾಂಬಿಕೆಯು ಗರ್ಭವತಿಯಾದಳು. ದಂಪತಿಗಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಕ್ರಮೇಣ ನವಮಾಸಗಳು ತುಂಬಿದ ಮೇಲೆ ಮಾದಲಾಂಬಿಕೆಯು ವೈಶಾಖ ಶುದ್ಧ ಚತುರ್ದಶಿ ಸೋಮವಾರ ಶುಭದಿನದಲ್ಲಿ ಪುತ್ರರತ್ನವನ್ನು ಹಡೆದಳು. ಹಿರಿಯರೆಲ್ಲರೂ ಕೂಡಿ ಮಗುವಿಗೆ ಜಾತಕರ್ಮವನ್ನು ಮಾಡಿ ಬಸವನೆಂಬ ಅಭಿದಾನವನ್ನು ಇಟ್ಟರು. ಶುಕ್ಲಪಕ್ಷದ ಚಂದ್ರನಂತೆ ಶಿಶುವು ದಿನೇ ದಿನೇ ಬೆಳೆಯಿತು. ತನ್ನ ಬಾಲಲೀಲೆಗಳಿಂದ ತಂದೆತಾಯಿಗಳನ್ನು ಸಂತೋಷಪಡಿಸಿತು. ಆ ಮಗುವಿನ ಉಜ್ಜ್ವಲವಾದ ವದನಾರವಿಂದವನ್ನು ಮತ್ತೆಮತ್ತೆ ನೋಡಿ ತಂದೆ ತಾಯಿಗಳು ಹಿರಿಹಿರಿ ಹಿಗ್ಗಿದರು. ಬಾಲಕನಿಗೆ ಐದು ವರ್ಷಗಳಾಗುತ್ತಲೇ ಶಿಕ್ಷಣ ವ್ಯವಸ್ಥೆಯನ್ನು ಮಾಡಿದರು. ಎಳವಯಸ್ಸಿನಲ್ಲಿಯೇ ಆ ಹುಡುಗನ ಅಸಾಧಾರಣ ಬುದ್ಧಿಶಕ್ತಿಯೂ, ಶೀಲ ಸ್ವಭಾವವೂ ಅವರಿಗೆ ಗೋಚರವಾದುವು. ಆತನಲ್ಲಿ ಹುದುಗಿದ್ದ ಪ್ರತಿಭೆ, ದೈವಭಕ್ತಿ, ವಿಚಾರಪರತೆಯನ್ನು ಕಂಡವರೆಲ್ಲರೂ ವಿಸ್ಮಯಗೊಂಡರು.

ಹೀಗೆ ವಿವೇಕದಿಂದ ವರ್ತಿಸುತ್ತಿದ್ದ ಬಸವಣ್ಣನವರನ್ನು ಕಂಡು ಕೆಲವರು ಸಂತೋಷಗೊಂಡರೂ ಮತ್ತೆ ಕೆಲವರು ಅವರ ವಿಚಾರಪರತೆಯನ್ನು ಅಪಾರ್ಥಮಾಡಿಕೊಂಡು ಅಸಮಾಧಾನಗೊಂಡರು. ಉಚ್ಚಮತವೆಂದು ಪರಿಗಣಿಸಲ್ಪಟ್ಟಿದ್ದ ಬ್ರಾಹ್ಮಣಮತದಲ್ಲೇ ಹುಟ್ಟಿದ್ದ ಬಸವಣ್ಣನವರು ವೈದಿಕಮತದ ಲೋಪದೋಷಗಳನ್ನು ಖಂಡಿಸಿದ್ದು ಅವರಿಗೆ ಸರಿಗಾಣಲಿಲ್ಲ. ಅದರಿಂದ ಆ ಸಂಪ್ರದಾಯಶರಣರಿಗೆ ಬಸವಣ್ಣನವರ ಮೇಲೆ ಕೋಪ ಉಂಟಾಯಿತು. ಸಮಾಜದಲ್ಲಿನ ದುಃಸ್ಥಿತಿ ಅಜ್ಞಾನಗಳನ್ನು ಕಂಡ

ಬಸವಣ್ಣನವರ ಮನಸ್ಸು ಅತೃಪ್ತಿ ಅಸಮಾಧಾನಗಳಿಂದ ಬೇಗುದಿಗೊಳ್ಳ ಲಾರಂಭಿಸಿತು. ಇದೇ ಸಮಯದಲ್ಲಿ ಮಾದರಸ ಮಾದಲಾಂಬಿಕೆಯರು ತಮ್ಮ ಕುಲಪದ್ಧತಿಯಂತೆ ಬಸವಣ್ಣನವರಿಗೆ ಉಪನಯನವನ್ನು ಮಾಡು ವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡರು. ವರ್ಣಾಶ್ರಮದೋಷಗಳಿಂದ ಬೇಸತ್ತಿದ್ದ ಬಸವಣ್ಣನವರಿಗೆ ಉಪನಯನ ಸರಿತೋರಲಿಲ್ಲ. ಆದರೂ ತಂದೆತಾಯಿಗಳ ಬಲವಂತಕ್ಕಾಗಿ ಅವರ ಮನನೋಯಿಸಲು ಇಷ್ಟವಿಲ್ಲದೆ ಉಪನಯನಕ್ಕೆ ಒಪ್ಪಿಗೆಯನ್ನಿತ್ತರು. ಯಥಾಕ್ರಮವಾಗಿ ಮೌಂಜಿಯನ್ನೂ ಯಜ್ಞಸೂತ್ರವನ್ನೂ ಸ್ವಲ್ಪಕಾಲ ಧರಿಸಿದರು.

ಬಸವಣ್ಣನವರ ಮನಸ್ಸಿನಲ್ಲಿ ಬೇರೂರಿದ್ದ ಅಸಮಾಧಾನವು ಮೊಳೆತು ಹೆಮ್ಮರವಾಗಿ ಬೆಳೆಯಲಾರಂಭಿಸಿತು. ಸಮಾಜದ ದುಃಸ್ಥಿತಿಯನ್ನು ಕಂಡು ಹಗಲಿರುಳೂ ಯೋಚಿಸುತ್ತಿದ್ದರು. ಎಷ್ಟು ಯೋಚಿಸಿದರೂ ಮನಸ್ಸಿಗೆ ಸಮಾಧಾನವಾಗಲಿಲ್ಲ. ಕೊನೆಗೆ ಬರೀ ಯೋಚನೆಯಿಂದ ಏನೂ ಪ್ರಯೋ ಜನವಿಲ್ಲವೆಂದು ಒಂದು ನಿರ್ಧಾರಕ್ಕೆ ಬಂದರು. ಮೇಲುಕೀಳೆಂಬ ಭಾವನೆ ಯನ್ನು ದೂರೀಕರಿಸಿದ್ದ ವೀರಶೈವಮತವು ಅವರನ್ನು ಆಕರ್ಷಿಸಿತು; ಆಪ್ಯಾಯಮಾನವಾಯಿತು. ಪ್ರಗತಿಪರ ಮನೋಭಾವನೆಯಿಂದಲೂ ದಿಟ್ಟ ತನದಿಂದಲೂ ಕರ್ಮಲತೆಯಂತಿದ್ದ ಜನಿವಾರವನ್ನು ಕಳೆದುಬಿಟ್ಟು, ಬಂಧು ಬಾಂಧವರನ್ನು ತ್ಯಜಿಸಿ ವೀರಶೈವಮತವನ್ನು ಸೇರಿದರು. ಬಸವಣ್ಣನವರ ಈ ಸೇರುವಿಕೆಯಿಂದ ಖಿಲವಾಗುತ್ತಿದ್ದ ವೀರಶೈವಮತಕ್ಕೆ ಜೀವಕಳೆ ಬಂದಂತಾಯಿತು.

ಕ್ರಾಂತಿದಾಯಕವಾದ ಬಸವಣ್ಣನವರ ಈ ವರ್ತನೆಯಿಂದ ಅವರ ತಂದೆತಾಯಿಗಳು ಕೋಪಗೊಂಡರು. ಸಂಪ್ರದಾಯಶರಣರೂ ಬಂಧುಗಳೂ ಅದನ್ನು ಪ್ರತಿಭಟಿಸಿದರು. ಆದರೆ ಬಸವಣ್ಣನವರು ಇದಾವುದನ್ನೂ ಲೆಕ್ಕಿಸಲಿಲ್ಲ. ತನ್ನನ್ನು ಸರಿಯಾಗಿ ಗ್ರಹಿಸದ ಜನರಿಂದ ದೂರವಿರುವುದೇ ಲೇಸೆಂದು ಭಾವಿಸಿದರು. ತಮ್ಮ ದೆಸೆಯಿಂದ ತಂದೆತಾಯಿಗಳು ಕಷ್ಟನಷ್ಟ ಗಳಿಗೊಳಗಾಗಬಾರದೆಂದೂ ಅವರಿಂದ ಒತ್ತಟ್ಟಿಗಿರುವುದೇ ಉತ್ತಮವೆಂದೂ ಯೋಚಿಸಿ ಬಾಗೇವಾಡಿಯನ್ನು ಬಿಟ್ಟು ಸಂಗಮಕ್ಷೇತ್ರಕ್ಕೆ ಬಂದರು. ಪ್ರಶಾಂತವಾದ ಸಂಗಮಕ್ಷೇತ್ರದ ವಾತಾವರಣ ಬಸವಣ್ಣನವರ ಮನಸ್ಸಿಗೆ

ಬಹಳವಾಗಿ ಹಿಡಿಸಿತು. ಬಾಗೇವಾಡಿಯ ಭಾಗ್ಯ ಸಂಗಮಕ್ಷೇತ್ರವನ್ನು ಸೇರಿತು.

ಬಾಗಿಲುಕೋಟೆಗೆ ಮೂವತ್ತು ಮೈಲಿಗಳ ದೂರದಲ್ಲಿ ಹನಗುಂದದಿಂದ ಎಂಟುಮೈಲಿಗಳಾಚೆ ಸಂಗಮಕ್ಷೇತ್ರವು ಕಂಗೊಳಿಸುತ್ತಿದೆ. ಅಲ್ಲಿ ಕೃಷ್ಣಾ ನದಿಯು ಮಂದಗಮನೆಯಾಗಿ ಹರಿದು ಸಂಗಮನಾಥನ ಪಾದೋದಕವಾಗಿ ಪವಿತ್ರಗೊಂಡು, ಮಲಪ್ರಹಾರಿಯೊಡನೆ ಬೆರೆತು ಮುಂದೆ ಸಾಗುತ್ತದೆ. ಈ ನದಿಗಳ ನೀರಿನಿಂದ ಸುತ್ತಮುತ್ತಲಿನ ಪ್ರದೇಶವು ಸಂಮೃದ್ಧವಾಗಿ ಸದಾ ಹಚ್ಚಹಸುರಾಗಿ ಗಿಡ ಮರ ಬಳ್ಳಿಗಳಿಂದ ವಿರಾಜಿಸುತ್ತಿದೆ. ಸಂಗಮಕ್ಷೇತ್ರವು ಸುತ್ತಲೂ ಫಲವತ್ತಾದ ಭೂಮಿಯಿಂದಲೂ ವನಪರ್ವತಗಳ ಸಾಲಿನಿಂದಲೂ ಕೂಡಿ ನಿಸರ್ಗ ಸೌಂದರ್ಯಕ್ಕೇ ಕಳಸವಿಟ್ಟಂತೆ ಕಂಡುಬರುತ್ತದೆ. ಇಂತಹ ಪ್ರಶಾಂತವಾದ ವಾತಾವರಣ ಬಸವಣ್ಣನವರನ್ನು ಸಹಜವಾಗಿಯೇ ಆಕರ್ಷಿಸಿತು. ಈ ಪವಿತ್ರಕ್ಷೇತ್ರದಲ್ಲಿ ಜಾತಿವೇದಮುನಿಗಳೆಂಬ ವೀರಶೈವ ಮಹರ್ಷಿಗಳೊಬ್ಬರು ಸಂಗಮನಾಥನ ದಿವ್ಯಸನ್ನಿಧಿಯಲ್ಲಿ ನೆಲಸಿದ್ದರು. ಅವರು ಉಚ್ಚಜ್ಞಾನಿಗಳೆಂದೂ ಪರಿಶುದ್ಧಮನಸ್ಕರೆಂದೂ ಆ ಪ್ರಾಂತದಲ್ಲೆಲ್ಲಾ ಹೆಸರುವಾಸಿಯಾಗಿದ್ದರು. ಬಸವಣ್ಣನವರು ಆ ಮಹಾಮಹಿಮರನ್ನೇ ತನ್ನ ಗುರುವನ್ನಾಗಿ ಪರಿಗ್ರಹಿಸಿದರು. ಸಂಗಮನಾಥನನ್ನು ತನ್ನ ಇಷ್ಟದೈವವನ್ನಾಗಿ ಸ್ವೀಕರಿಸಿದರು. ಜಾತಿವೇದಮುನಿಗಳಿಂದ ಬಸವಣ್ಣನವರು ದೀಕ್ಷೆಯನ್ನು ಪಡೆದು ಅವರಲ್ಲಿ ಶಿಷ್ಯವೃತ್ತಿಯನ್ನವಲಂಬಿಸಿದರು. ಪ್ರತಿನಿತ್ಯವೂ ಸಂಗಮನಾಥನ ಪೂಜೆಯನ್ನು ಅತಿಶಯವಾದ ಭಕ್ತಿಯಿಂದಲೂ ಮಗ್ನತೆಯಿಂದಲೂ ಮಾಡುತ್ತಿದ್ದರು. ಸೂರ್ಯೋದಯಕ್ಕೆ ಮುಂಚೆಯೇ ಎದ್ದು ನದಿಯಲ್ಲಿ ಮಿಂದು ಹೂದೋಟಕ್ಕೆ ಹೋಗಿ ಅಳಿಯೆರಗದ, ಅರುಣಕಿರಣ ಪುಗದ, ಪುಷ್ಪಗಳನ್ನು ತಿರಿದು ತಂದು ಸಂಗಮನಾಥನ ಪೂಜೆಯನ್ನು ತಮ್ಮದೇ ಆದ ವಿಶಿಷ್ಟರೀತಿಯಲ್ಲಿ ಮಾಡುತ್ತಾ ತನ್ಮಯತೆಯನ್ನು ಹೊಂದುತ್ತಿದ್ದರು. ಕ್ರಮೇಣ ಅವರ ವಿದ್ಯೆ ಜ್ಞಾನ ಮತ್ತು ಭಕ್ತಿಭಾವನೆಗಳು ಬೆಳೆಯಲಾರಂಭಿಸಿದವು. ಜಾತಿವೇದಮುನಿಗಳ ಸಹವಾಸದಿಂದ ಬಸವಣ್ಣನವರಿಗೆ ಹಲವಾರು ವಿಷಯಗಳು ತಿಳಿದುವು.

ಬಸವಣ್ಣನವರ ಅಸಾಧಾರಣ ವ್ಯಕ್ತಿತ್ವದ ವಿಚಾರ ಕ್ಷಿಪ್ರದಲ್ಲಿಯೇ

ಸುತ್ತ ಮುತ್ತಲಿನ ಪ್ರದೇಶಗಳಲ್ಲೆಲ್ಲಾ ಹರಡಿತು. ಕಲ್ಯಾಣಪಟ್ಟಣದ ರಾಜ ಬಿಜ್ಜಳರಾಯನ ಮಂತ್ರಿಯೂ ಬಸವಣ್ಣನವರ ಸೋದರಮಾವನೂ ಆದ ಬಲದೇವನ ಕಿವಿಗೂ ಈ ವಿಚಾರ ಮುಟ್ಟಿತು. ಬಸವಣ್ಣನವರ ವಿನಯ ಶೀಲಗಳನ್ನೂ ವಿದ್ಯಾಪ್ರೌಢಿಮೆಯನ್ನೂ ದೈವಭಕ್ತಿಯನ್ನೂ ಕೇಳಿ ಬಲದೇವ ಮಂತ್ರಿ ಬಹಳವಾಗಿ ಮೆಚ್ಚಿಕೊಂಡನು. ಅವರ ಪ್ರಗತಿಪರ ಮನೋಭಾವನೆಗಳಿಗೆ ತಲೆದೂಗಿದನು. ಸಂತೋಷದಿಂದ ತನ್ನ ಮಗಳಾದ ಗಂಗಾಂಬಿಕೆಯನ್ನು ಮದುವೆಮಾಡಿಕೊಡುವುದಕ್ಕಾಗಿ ಅವರಿಗೆ ಹೇಳಿಕಳುಹಿಸಿದನು. ಬಸವಣ್ಣನವರು ಹಿರಿಯರ ಮಾತಿಗೆ ಬೆಲೆಕೊಟ್ಟು ಭಗವಂತನ ಸಂಕಲ್ಪವಿದ್ದಂತಾಗಲೆಂದು ಮದುವೆಗೆ ಒಪ್ಪಿಗೆಯನ್ನಿತ್ತರು. ತರುವಾಯ ಇಷ್ಟ ದೈವವಾದ ಸಂಗಮನಾಥನಿಗೆ ನಮಿಸಿ, ಗುರುಗಳ ಆಶೀರ್ವಾದವನ್ನು ಪಡೆದು ಕಲ್ಯಾಣಪಟ್ಟಣಕ್ಕೆ ಪ್ರಯಾಣವನ್ನು ಬೆಳೆಸಿದರು. ಇತ್ತ ಬಲದೇವ ಮಂತ್ರಿಯು ತನ್ನ ಮಗಳ ವಿವಾಹಕ್ಕೆ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡನು. ಗಂಗಾಂಬಿಕೆಗೆ ಶಾಸ್ತ್ರೋಕ್ತವಾಗಿ ದೀಕ್ಷಾವಿಧಿಯನ್ನು ಮಾಡಿಸಿದರು. ಶುಭಮುಹೂರ್ತದಲ್ಲಿ ಗಂಗಾಂಬಿಕೆಯನ್ನು ಬಸವಣ್ಣನವರಿಗೆ ಧಾರೆಯೆರೆದುಕೊಟ್ಟರು. ಎಳ್ಳಷ್ಟು ಕೊರತೆಯೂ ಇಲ್ಲದೆ ವಿವಾಹವು ವಿಜೃಂಭಣೆಯಿಂದ ನೆರವೇರಿತು. ಬಲದೇವ ಮಂತ್ರಿಯು ಮಗಳಿಗೆ ಬಳುವಳಿಯಾಗಿ ಬೇಕಾದಷ್ಟು ಆಸ್ತಿಯನ್ನು ಕೊಟ್ಟನು.

ಮದುವೆಯಾದ ಮೇಲೆ ಬಸವಣ್ಣನವರು ಆತ್ಮೀಯಾವಂದಿರ ಅಭಿಲಾಷೆಯಂತೆ ಹೆಂಡತಿಯೊಡನೆ ಕಲ್ಯಾಣಪಟ್ಟಣದಲ್ಲೇ ಉಳಿದುಕೊಂಡರು. ಬಾಚಿರಾಜನೇ ಮುಂತಾದ ಸಜ್ಜನರ ಸಹವಾಸದಲ್ಲಿ ಶಿವಪೂಜೆ, ಶಿವಧ್ಯಾನ ಮತ್ತು ದಾಸೋಹಗಳಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರು. ತಮ್ಮ ಸದಾಚಾರ ಸದ್ವರ್ತನೆಗಳಿಂದ ಎಲ್ಲರಿಗೂ ಬೇಕಾದವರಾದರು. ಆದರೆ ಇಷ್ಟರಿಂದಲೇ ತೃಪ್ತರಾಗಲಿಲ್ಲ. ಸಮಾಜದ ನ್ಯೂನತೆಗಳಿಗೆ ಪರಿಹಾರಮಾರ್ಗವನ್ನು ಹುಡುಕುವುದಕ್ಕೆ ಪ್ರಯತ್ನಿಸಿದರು. ಧರ್ಮದ ಬೆಳವಣಿಗೆಗೆ ಬೇಕಾದ ಸಹಾಯ ಸಂಪತ್ತುಗಳನ್ನು ಕುರಿತು ಆಲೋಚಿಸುತ್ತಿದ್ದರು. ಅವರ ಈ ಆಲೋಚನೆ ಸಾಧನೆಗಳಿಗೆ ಕಲ್ಯಾಣಪಟ್ಟಣವೇ ಪ್ರಯೋಗ ಕ್ಷೇತ್ರವಾಯಿತು.

ಸ್ವಾವಲಂಬನ ದೃಷ್ಟಿ-ಕರಣಿಕ ವೃತ್ತಿ

ಕನ್ನಡನಾಡಿನ ಚರಿತ್ರೆಯಲ್ಲಿ ಕಲ್ಯಾಣಪಟ್ಟಣದ ಖ್ಯಾತಿಯು ಅಪೂರ್ವವಾದುದು. ಅದು ಮೊದಲು ಚಾಲುಕ್ಯವಂಶದ ಸೋಮೇಶ್ವರ, ವಿಕ್ರಮಾದಿತ್ಯ ಮುಂತಾದ ಪ್ರಖ್ಯಾತ ಅರಸುಗಳ ರಾಜಧಾನಿಯಾಗಿ ಬೆಳಗಿತ್ತು. ಕಲಚೂರಿಯ ಬಿಜ್ಜಳಭೂಪಾಲನು ಚಾಲುಕ್ಯಸಿಂಹಾಸನವನ್ನು ಆಕ್ರಮಿಸಿಕೊಂಡ ಮೇಲೆ ಕಲ್ಯಾಣಪಟ್ಟಣಕ್ಕೆ ಒಂದು ಹೊಸ ಶೋಭೆ ಬಂದಂತಾಯಿತು. ಅದರ ಕೀರ್ತಿಯು ಅತ್ಯುನ್ನತ ಶಿಖರವನ್ನೇರಿದ್ದು ಬಸವಣ್ಣನವರ ಕಾಲದಲ್ಲೇ. ಬಸವಣ್ಣನವರ ಮತ್ತು ಇತರ ಶಿವಶರಣರ ಪ್ರಭಾವದಿಂದಲೂ ಪ್ರಸಿದ್ಧವಾದ 'ಅನುಭವ ಮಂಟಪ'ದ ಸ್ಥಾಪನೆಯಿಂದಲೂ ಕನ್ನಡನಾಡಿನ ಸಾಹಿತ್ಯ ಚರಿತ್ರೆಯಲ್ಲಿ ಕಲ್ಯಾಣಪಟ್ಟಣ ಒಂದು ಅಮರ ಸ್ಥಾನವನ್ನು ಪಡೆಯಿತು; ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿತು; ಕ್ರಾಂತಿಯ ರೂಪದಲ್ಲಿ ತೋರಿದ ನವೋದಯಕ್ಕೆ ನೆಲೆಯಾಯಿತು; ಕನ್ನಡಿಗರ ಸಂಸ್ಕೃತಿಯ ಕೇಂದ್ರವಾಯಿತು.

ಈ ಇತಿಹಾಸ ಪ್ರಸಿದ್ಧವಾದ ಕಲ್ಯಾಣಪಟ್ಟಣದಲ್ಲಿ ನೆಲಸಿದ ಬಸವಣ್ಣನವರು ತಮ್ಮ ಕಾರ್ಯಸಾಧನೆಯನ್ನು ಮುಂದುವರಿಸಿದರು. ಅವರ ಭಕ್ತಿ ಶಿವಪೂಜಾಮಗ್ನತೆ, ದಾಸೋಹಕ್ರಮಗಳನ್ನು ಎಲ್ಲರೂ ಮೆಚ್ಚಿಕೊಂಡರು. ಆದರೆ ಬಸವಣ್ಣನವರಿಗೆ ಶಿವಪೂಜೆ, ಶಿವಧ್ಯಾನ, ದಾಸೋಹಕ್ರಮಗಳಲ್ಲಿಯೇ ಕಾಲವನ್ನೆಲ್ಲ ಕಳೆಯುವುದು ಸರಿದೋರಲಿಲ್ಲ. ಸ್ವತಂತ್ರಕಾಯಕವನ್ನು ಕೈಗೊಂಡು ಸ್ವಯಾರ್ಜಿತದಿಂದ ಬಾಳುವುದು ಉತ್ತಮವೆಂದು ಅವರು ಭಾವಿಸಿದರು. ಏಕೆಂದರೆ ಸ್ವಯಾರ್ಜಿತ ಉತ್ತಮವೆಂದೂ ಪಿತ್ರಾರ್ಜಿತ ಮಧ್ಯಮವೆಂದೂ ಪರಾರ್ಜಿತ ಕನಿಷ್ಠವೆಂದೂ ಬಲ್ಲವರು ಹೇಳುತ್ತಾರೆ. ವಿಚಾರಪರರಾದ ಬಸವಣ್ಣನವರಲ್ಲಿ ಈ ಅಭಿಪ್ರಾಯ ಮೂಡಿದೊಡನೆಯೇ ಅವರು ಕೆಲವು ಹಿರಿಯರ ಸಹಾಯದಿಂದ ಬಿಜ್ಜಳನ ಆಸ್ಥಾನದಲ್ಲಿ ಕರಣಿಕವೃತ್ತಿಯನ್ನು ಕೈಗೊಂಡರು.

ಮೇಧಾವಿಗಳೂ ವಿದ್ಯಾವಿನಯಸಂಪನ್ನರೂ ಆಗಿದ್ದ ಬಸವಣ್ಣನವರಿಗೆ ಯಾವ ವೃತ್ತಿಯಾದರೇನು? ಕರಣಿಕವೃತ್ತಿಯಲ್ಲಿಯೂ ಅವರು ಪ್ರಕಾಶಮಾನಕ್ಕೆ ಬಂದರು. ತಮ್ಮ ಪ್ರತಿಭೆಯಿಂದಲೂ ನಿಷ್ಠೆಯಿಂದಲೂ

ಪ್ರಾಮಾಣಿಕತೆಯಿಂದಲೂ ಬಹು ಬೇಗ ಉನ್ನತಾಧಿಕಾರಿಗಳ ಪ್ರೀತಿಗೌರವಗಳನ್ನು ಸಂಪಾದಿಸಿದರು ; ಎಲ್ಲರಿಗೂ ಅಚ್ಚುಮೆಚ್ಚಾದರು; ಕೊನೆಗೆ ಕಲಚೂರ್ಯರಾಜನ ಮನ್ನಣೆಗೂ ಪಾತ್ರರಾದರು. ತತ್ಪರಿಣಾಮವಾಗಿ ಅವರು ಕ್ರಮೇಣ ಉನ್ನತಪದವಿಯನ್ನೇರಿ ಧನಸಂಪತ್ತನ್ನೂ ಪಡೆದರು. ಹೀಗೆ ಪ್ರಬುದ್ಧಮಾನಕ್ಕೆ ಬಂದ ಬಸವಣ್ಣನವರ ಅಸಾಧಾರಣ ಬುದ್ಧಿಶಕ್ತಿಯನ್ನು ಕಂಡುಕೊಂಡ ಬಿಜ್ಜಳರಾಯನು ಅವರಿಗೆ ಮಂತ್ರಿಪದವಿಯನ್ನಿತ್ತು ಸನ್ಮಾನಿಸಿದನು.

ಕರಣಿಕ ಬಸವಣ್ಣನವರು ಮಂತ್ರಿಗಳಾದ ಮೇಲೂ ಅವರ ಗುಣಶೀಲ ನಡತೆಗಳಲ್ಲಿ ಯಾವ ಬದಲಾವಣೆಗಳೂ ಆಗಲಿಲ್ಲ. ಅವರಿಗೆ ಅಷ್ಟು ಉನ್ನತ ಪದವಿ ದೊರೆತಿದ್ದರೂ ಅವರಲ್ಲಿ ಲವಲೇಶವಾದರೂ ಅಹಂಭಾವವಾಗಲಿ ಸ್ವಪ್ರತಿಷ್ಠೆಯಾಗಲಿ ಇರಲಿಲ್ಲ. ತನ್ನನ್ನು ಮೊದಲು ದೂರಿದ ಸಮಾಜವನ್ನು ಮತ್ತಷ್ಟು ಆದರದಿಂದ ಕಾಣಲು ಪ್ರಾರಂಭಿಸಿದರು. ಸಮಾಜದವರನ್ನೆಲ್ಲ ಒಂದೆಡೆ ಸೇರಿಸಿ ‘ನಿಮ್ಮವನು ನಾನು, ನೀವೊಲಿದು ಪಾಲಿಪುದೆನ್ನ. ನಿಮ್ಮ ದಾಸರ ದಾಸನೆಂದೆನಗೆ ನೀವೆಲ್ಲ ನಿಮ್ಮೊಕ್ಕುದಂ ಇಕ್ಕಿ ರಕ್ಷಿಪುದು’ ಎಂದು ನಮ್ರವಾಗಿ ಕೇಳಿಕೊಂಡರು. ಬಸವಣ್ಣನವರಿಗೆ ದೊರೆತ ಉನ್ನತ ಸ್ಥಾನ, ಸಂಪತ್ತಿನಿಂದ ಸಮಾಜಸುಧಾರಣೆಗೂ ಧಾರ್ಮಿಕ ಕಾರ್ಯಗಳಿಗೂ ತುಂಬ ನೆರವಾಯಿತು. ಅವರು ರಾಜಕೀಯದಲ್ಲಿದ್ದರೂ ಧರ್ಮವನ್ನು ಬಿಡದೆ ಬೆಳೆಸುತ್ತಿದ್ದರು.

ಸಾಮಾಜಿಕ ಸುಧಾರಣೆ–ವಚನಸಾರಾಮೃತ

ಬಸವಣ್ಣನವರಿಗೆ ಶಿವಭಕ್ತರಲ್ಲೂ ಜಂಗಮರಲ್ಲೂ ಅಪಾರವಾದ ಭಕ್ತಿ ವಿಶ್ವಾಸಗಳಿದ್ದುವು. ಶಿವಶರಣರೇ ಅವರ ಜೀವಾಳವೆಂದರೂ ತಪ್ಪಲ್ಲ. ಶಿವಶರಣರ ಶ್ರೇಯಸ್ಸಿಗಾಗಿ, ಸಂತೃಪ್ತಿಗಾಗಿ ಪ್ರಾಣವನ್ನಾದರೂ ಅರ್ಪಿಸಲು ಸಿದ್ಧರಿದ್ದರು. ಬಸವಣ್ಣನವರ ದೃಷ್ಟಿಯಲ್ಲಿ ಜಂಗಮರೆಂದರೆ ಆತ್ಮಪರಿಶುದ್ಧರೂ ನಡೆನುಡಿಗಳಲ್ಲಿ ಒಂದಾದವರೂ ಆದ ಸದಾಚಾರಿಗಳು. ಇಂತಹ ಆದರ್ಶ ಶಿವಶರಣರ ತಂಡವೊಂದನ್ನು ಸೇರಿಸಿ, ಸಮಾಜದ ಲೋಪದೋಷಗಳನ್ನು ತಿದ್ದಿ ಜನತೆಯ ಮೇಲ್ಮೆಯನ್ನು ಸಾಧಿಸಬೇಕೆಂದು ಬಸವಣ್ಣನವರು

ಯೋಚಿಸಿದರು. ಅವರ ಈ ಯೋಚನೆಯ ಫಲವಾಗಿ ತ್ರಿಕರಣಶುದ್ಧಿಯಿಂದ ಸಮಾಜೋದ್ಧಾರಕ್ಕೆ ಸಿದ್ಧರಾದ ಹಲವಾರು ಮಹಿಮಾಪುರುಷರು ಮುಂದೆ ಬಂದರು. ಹಿರಿಯ ಗುಣಗಳಿಂದ ಕೂಡಿದ ಆ ಆದರ್ಶ ಜಂಗಮರಿಗೆ ಬಸವಣ್ಣನವರು ಸಮಾಜದಲ್ಲಿ ಉನ್ನತಸ್ಥಾನವನ್ನು ಕೊಟ್ಟು ಗೌರವಿಸಿದರು. ಜಂಗಮರು ಈಶ್ವರರೂಪಿಗಳೆಂಬುದನ್ನು ತಾವೇ ಆಚಾರದಿಂದ ತೋರಿಸಿ ಕೊಟ್ಟರು. ಈ ಗುರುತರವಾದ ಹೊಣೆಯನ್ನು ಹೊತ್ತ ಜಂಗಮರು ಕೊಬ್ಬಿ, ದಾರಿಗೆಟ್ಟಿದ್ದರೆ ಅವರಿಗೆ ಸೂಕ್ತವಾದ ಎಚ್ಚರಿಕೆಯನ್ನು ಕೊಡುತ್ತಿದ್ದರು. ಜಂಗಮರು ಭಿಕ್ಷೆ ಬೇಡುತ್ತಾ ಕಾಲಯಾಪನೆ ಮಾಡುವುದಕ್ಕಿಂತ ಸ್ವಾವಲಂಬಿಗಳಾಗಿ ಬಾಳಬೇಕೆಂದು ತಿಳಿಯಹೇಳುತ್ತಿದ್ದರು. ಕಾಯಕವೇ ಕೈಲಾಸವೆಂದೂ ಗುರುವಾದರೂ ಕಾಯಕದಿಂದಲೇ ಜೀವನ್ಮುಕ್ತಿಯೆಂದೂ ಸಾರಿ ಹೇಳುತ್ತಿದ್ದರು.

ಬಸವಣ್ಣನವರ ಗುಣ ಹಿರಿದಾದದ್ದು. ಅವರ ಬೋಧನೆಗಳಲ್ಲಿ ಮಾಧುರ್ಯವಿರುವಂತೆಯೇ ಹಿತವಿದೆ; ಅನುಭವವಿರುವಂತೆಯೇ ಪ್ರೇಮವಿದೆ. ಜನತೆಯ ಅನ್ಯಾಯ ಪಾಪಗಳನ್ನು ಕಂಡು, ಅವರ ಅಜ್ಞಾನ ಮೌಢ್ಯಗಳಿಗಾಗಿ ಮರುಗಿ; 'ಅಪ್ಪಾ, ಅಣ್ಣಾ' ಎಂಬ ಮಮತೆಯ ವಚನಗಳಿಂದ ಕೈಹಿಡಿದು ಬುದ್ಧಿಯನ್ನು ಕಲಿಸಿದ ಬಸವಣ್ಣನವರ ಹೃದಯದ ಕೋಮಲತೆಯನ್ನೂ ವಿನಯವನ್ನೂ :

ಎನ್ನಿಂದ ಕಿರಿಯರಿಲ್ಲ; ಶಿವಭಕ್ತರಿಂದ ಹಿರಿಯರಿಲ್ಲ
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ !
ಕೂಡಲಸಂಗಮದೇವಾ, ಎನಗಿದೇ ದಿಬ್ಯ !

ಎಂಬ ವಚನದಲ್ಲಿ ಕಂಡುಕೊಳ್ಳಬಹುದಾಗಿದೆ. ಪ್ರತಿವ್ಯಕ್ತಿಯೂ ವಿನಯಶೀಲಗಳಿಂದ ನಡೆಯುವುದು ನಾಗರಿಕತೆಯ ಲಕ್ಷಣ. ಜನತೆಯ ರೀತಿನೀತಿಗಳನ್ನು ತಿದ್ದುವುದಕ್ಕಾಗಿ ಧಾರ್ಮಿಕಭಾವನೆಯ ಹಿನ್ನೆಲೆಯಮೇಲೆ ಲೋಕನೀತಿಯನ್ನು ಪ್ರತಿಪಾದಿಸಿ ಅಹಂಕಾರ ಮದದಿಂದ ಕೊಬ್ಬಿದ್ದವರನ್ನು ಎಚ್ಚರಿಸಿದ್ದಾರೆ. ಸದಾಶಿವನ ಒಲುಮೆಯನ್ನು ಸಂಪಾದಿಸಬೇಕಾದರೆ ಮೃದುವಚನವೂ ಸದುವಿನಯವೂ ಬೇಕೆಂಬುದನ್ನು :

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ ;
ಮೃದುವಚನವೇ ಸಕಲ ಜಪಂಗಳಯ್ಯಾ,
ಮೃದುವಚನವೇ ಸಕಲ ತಪಂಗಳಯ್ಯಾ,
ಸದುವಿನಯವೇ ಸದಾಶಿವನೊಲಿಮೆಯಯ್ಯಾ,
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ.

ಎಂಬ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಮಾನವರ ನಿತ್ಯಜೀವನದಲ್ಲಿ ದಯೆಯ ಮಹತ್ವವೆಷ್ಟೆಂಬುದನ್ನು ಹೇಳಲಗತ್ಯವಿಲ್ಲ. ಧಾರ್ಮಿಕಜೀವನಕ್ಕೆ ದಯೆಯೇ ಮೂಲವೆಂದು ಜಗತ್ತಿನ ಹಿರಿಯ ಮಹಾತ್ಮರೆಲ್ಲ ಸಾರಿದ್ದಾರೆ. ದಯಾಳುವಾದ ಬಸವಣ್ಣನವರು ಸಕಲ ಜೀವರಾಶಿಗಳ ವಿಚಾರದಲ್ಲೂ ಅತ್ಯಂತ ಕರುಣೆಯಿಂದ ವರ್ತಿಸುತ್ತಿದ್ದರು. ಪ್ರಾಣಿಗಳನ್ನು ಹಿಂಸಿಸುವುದಾಗಲಿ, ಜನರನ್ನು ಕ್ರೂರತೆಯಿಂದ ಕಾಣುವುದಾಗಲಿ, ಅಹಂಭಾವವನ್ನು ಪ್ರದರ್ಶಿಸುವುದಾಗಲಿ ಬಸವಣ್ಣನವರಿಗೆ ಸೇರುತ್ತಿರಲಿಲ್ಲ. ಅದಕ್ಕೆ ಬದಲಾಗಿ ಪರರ ಕಷ್ಟಗಳಲ್ಲಿ ಭಾಗಿಗಳಾಗಿ, ಸಕಲ ಪ್ರಾಣಿಗಳಲ್ಲಿಯೂ ದಯೆತೋರಿ ಸನ್ಮಾರ್ಗದಲ್ಲಿ ನಡೆಯುವುದೇ ಶರಣರ ಲಕ್ಷಣವೆಂದು ಅವರು ಬೋಧಿಸಿದ್ದಾರೆ. ಈ ಲೋಕನೀತಿಯನ್ನು ಸಾರುವ ಅವರ ನುಡಿ ಸರ್ವರಿಗೂ ಸರ್ವಕಾಲದಲ್ಲೂ ಮಾರ್ಗದರ್ಶಕವಾಗಿದೆ ಎಂಬುದು ಈ ವಚನದಲ್ಲಿ ವ್ಯಕ್ತಪಡುತ್ತದೆ:

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ !
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ !

ಮಾನವನ ಜೀವನದಲ್ಲಿ ನಡೆನುಡಿಗಳ ಸಮನ್ವಯಕ್ಕೆ ಬಸವಣ್ಣನವರು ವಿಶೇಷ ಗಮನವನ್ನು ಕೊಟ್ಟಿದ್ದಾರೆ. ತಾನು ತಿಳಿದುದನ್ನೂ ಬಾಯಲ್ಲಿ ಹೇಳುವುದನ್ನೂ ಕಾರ್ಯರೂಪಕ್ಕೆ ತರಬೇಕೆಂಬುದೇ ಅವರ ಅಭೀಷ್ಟ. ನಮ್ಮ ನಿತ್ಯಜೀವನದಲ್ಲಿ ನಡೆನುಡಿಗಳು ಒಂದಾಗಿರಬೇಕೆಂದೂ ಮನೋವಾಕ್ಕಾಯಗಳಿಂದ ಹಿಡಿದ ನೇಮವನ್ನು ಸಾಂಗಗೊಳಿಸಬೇಕೆಂದೂ ಅವರು ಒತ್ತಿ ಹೇಳಿದ್ದಾರೆ. ಒಳಗೊಂದು ಹೊರಗೊಂದು ನೀತಿಯನ್ನುಳ್ಳ ಡಂಭಾಚಾರಿಗಳನ್ನು ಕುರಿತು:

ಒಳಗೆ ಕುಟಿಲ ಹೊರಗೆ ವಿನಯವಾಗಿ ಭಕ್ತರೆನಿಸಿಕೊಂಬುವರ
ಬಲ್ಲನೊಲ್ಲನಯ್ಯಾ ಲಿಂಗವು !
ಅವರು ಸತ್‌ಪಥಕ್ಕೆ ಸಲ್ಲರು, ಸಲ್ಲರಯ್ಯಾ
ಒಳಹೊರಗೊಂದಾದವರಿಗೆ ಅಳಿಯಾಸೆದೋರಿ
ಬೀಸಾಡುವನವರ ಜಗದೀಶ ಕೂಡಲಸಂಗಮದೇವಾ !

ಎಂದು ಎಚ್ಚರಿಸಿದ್ದಾರೆ.

ನಿಷ್ಕಪಟಿಗಳಾದ ಬಸವಣ್ಣನವರು ಸ್ವಾರ್ಥತ್ಯಾಗಿಗಳಾಗಿ ದೀನ ಜನೋದ್ಧಾರಕರಾದರು; ಜಂಗಮಪ್ರೇಮಿಯಾದರು; ಉಜ್ಜ್ವಲಭಕ್ತರಾದರು. ಹಲವಾರು ಪ್ರಸಿದ್ಧ ವಿಶ್ವಾಚಾರ್ಯರಂತೆಯೇ ಅವರೂ ಸಹ 'ದೇವನೊಬ್ಬ, ನಾಮ ಹಲವು, ಪರಮಪತಿವ್ರತೆಗೆ ಗಂಡನೊಬ್ಬ ಕಾಣಿರೊ' ಎಂದು ಹೇಳಿದ್ದಾರೆ ಸತ್ಯ ಸರ್ವರಿಗೂ ಸರ್ವಕಾಲದಲ್ಲೂ ಒಂದೇ ಆಗಿರುತ್ತದೆ. ಆದರೆ ಅದರ ಅನ್ವೇಷಣೆಯ ಮಾರ್ಗಗಳು ಹಲವಾರು. ನದಿಗಳೆಲ್ಲವೂ ಸಮುದ್ರವನ್ನೇ ಸೇರುವಂತೆ ಈ ಎಲ್ಲ ಮಾರ್ಗಗಳ ಗುರಿಯೂ ಒಂದೇ ಆಗಿರುತ್ತದೆ. ಸರಳತೆ, ಸಜ್ಜನತೆ, ವಿನಯಶೀಲಗಳೇ ಮೂರ್ತಿವತ್ತಾದ ಬಸವಣ್ಣನವರು ಬಿಚ್ಚುಮನಸ್ಸಿನಿಂದ ತಮ್ಮ ಸಾಧನೆಗಳನ್ನು ವಚನಗಳ ರೂಪದಲ್ಲಿ ಹರಿಯಬಿಟ್ಟಿದ್ದಾರೆ. ಮಾನವರ ನಡತೆಯ ಬಗ್ಗೆ ಅದನ್ನು ಸಾಧಿಸುವ ಕಷ್ಟಸಾಧ್ಯತೆಯನ್ನು :

ಲೇಸ ಕಂಡು ಮನ ಬಯಸಿ ಬಯಸಿ
ಆಸೆ ಮಾಡಿದಡಿಲ್ಲ, ಕಂಡಯ್ಯಾ !
ತಾಳಮರಕ್ಕೆ ಕೈಯನೀಡಿ
ಮೇಲೆ ನೋಡಿ ಗೋಣು ನೊಂದುದಯ್ಯಾ !
ಕೂಡಲಸಂಗಮದೇವ, ಕೇಳಯ್ಯಾ,
ನೀನೀವ ಕಾಲಕ್ಕಲ್ಲದಿಲ್ಲ, ಕಂಡಯ್ಯಾ !

ಎಂದು ವರ್ಣಿಸಿದ್ದಾರೆ.

ಬಸವಣ್ಣನವರಿಗೆ ತಮ್ಮ ನಡತೆ ಎಷ್ಟು ಶುದ್ಧವಾಗಿದ್ದರೂ ಸಮಾಧಾನವಿರಲಿಲ್ಲ. ದೇವ ಮೆಚ್ಚುವಂತೆ ತಮ್ಮ ನಡತೆ ಚೆನ್ನಾಗಬೇಕು ಎಂಬುದನ್ನು:

ಎನ್ನ ನಡೆಯೊಂದು ಪರಿ : ಎನ್ನ ನುಡಿಯೊಂದು ಪರಿ
ಎನ್ನೊಳಗೇನೂ ಶುದ್ಧವಿಲ್ಲ, ನೋಡಯ್ಯಾ.
ನುಡಿಗೆ ತಕ್ಕ ನಡೆಯು ಕಂಡೊಡೆ
ಕೂಡಲಸಂಗಮದೇವನೊಳಗಿರ್ಪನಯ್ಯಾ

ಈ ಮೇಲಿನ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಸವಣ್ಣನವರ ಆಧ್ಯಾತ್ಮಿಕ ಸಾಧನೆಯಲ್ಲಿನ ಅನುಭವಗಳನ್ನು ಕೆಲವು ವಚನಗಳು ವಿವರಿಸುತ್ತವೆ. ಮಾನವನಿಗೆ ಭಕ್ತಿಯೇ ಶ್ರೇಷ್ಠವಾದುದೆಂಬುದನ್ನು ಮನಗಂಡಿದ್ದ ಬಸವಣ್ಣನವರು:

'ಅಯ್ಯಾ, ಅಯ್ಯಾ' ಎಂದು ಕರೆಯುತ್ತಲಿದ್ದೇನೆ;
'ಅಯ್ಯಾ, ಅಯ್ಯಾ' ಎಂದೊರಲುತ್ತಲಿದ್ದೇನೆ;
'ಓ' ಎನ್ನಲಾಗದೆ, ಅಯ್ಯಾ ?
ಆಗಳೂ ನಿಮ್ಮುವ ಕರೆಯುತ್ತಲಿದ್ದೇನೆ;
ಮೌನವೇ ಕೂಡಲಸಂಗಮದೇವಾ?

ಎಂದು ಕೂಡಲಸಂಗಮನನ್ನು ಅನನ್ಯಭಕ್ತಿಯಿಂದ ಪ್ರಾರ್ಥಿಸಿಕೊಂಡಿದ್ದಾರೆ. ಅಂತೆಯೇ ಮತ್ತೊಂದು ವಚನದಲ್ಲಿ ಮನಸ್ಸಿನ ಚಪಲತೆಯನ್ನು ಕುರಿತು:

ಮರವನೇರಿದ ಮರ್ಕಟನಂತೆ
ಹಲವು ಕೊಂಬಿಂಗೆ ಹಾಯುತಲಿದೆ—
ಬೆಂದ ಮನವ ನಾನೆಂತು ನಂಬುವೆನಯ್ಯಾ ?
ಎಂತು ನೆಚ್ಚುವೆನಯ್ಯಾ ?
ಎನ್ನ ತಂದೆ ಕೂಡಲಸಂಗಮದೇವನಲ್ಲಿಗೆ ಹೋಗಲೀಯದಯ್ಯಾ.

ಹೀಗೆಂದು ಸ್ವಾರಸ್ಯವಾಗಿ ಹೇಳಿದ್ದಾರೆ. ತನ್ನನ್ನು ದುಷ್ಟಾಚಾರಗಳಿಂದ ದೂರವಿರಿಸಿ ಲಿಂಗವ್ಯಸನಿ, ಜಂಗಮಪ್ರೇಮಿ ಮಾಡು ಎಂಬುದಾಗಿ :

ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ, ಎನ್ನ
ಲಿಂಗವ್ಯಸನಿ ಜಂಗಮಪ್ರೇಮಿಯೆಂದೆನಿಸಯ್ಯಾ ;
'ಅವಶ್ಯಮನುಭೋಕ್ತವ್ಯವೆಂ'ದೆನಿಸದಿರಯ್ಯ !
ಕೂಡಲ ಸಂಗಮದೇವಾ, ಸೆರಗೊಡ್ಡಿ ಬೇಡುವೆನು.

ಈ ವಚನದಲ್ಲಿ ಬೇಡಿಕೊಂಡಿದ್ದಾರೆ.

ಮಾನವರು ಸಂಸಾರಸುಖದಲ್ಲಿ ಮುಳುಗಿದಾಗ ದೈವವನ್ನು ಮರೆತು ಬಿಡುವುದು ಸ್ವಾಭಾವಿಕವಾದದ್ದು. ಅದು ಹೇಗೆಂದರೆ ಕತ್ತಿಯ ಅಲಗಿಗೆ ತುಪ್ಪವನ್ನು ಸವರಿದ್ದರೆ ನಾಯಿ ತುಪ್ಪದ ಆಸೆಗೆ ಅದನ್ನು ನೆಕ್ಕುತ್ತದೆ. ಅಲಗಿನಿಂದ ತನ್ನ ನಾಲಿಗೆಯು ಸೀಳಿಹೋಗುತ್ತದೆಯೆಂಬ ಪರಿವೆಯೇ ಅದಕ್ಕಿರುವುದಿಲ್ಲ. ಅದನ್ನು ಬಸವಣ್ಣನವರು :

ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ ಬಾಳುವೆ !
ಸಂಸಾರ ಸಂಗವ ಬಿಡದು ನೋಡೆನ್ನ ಮನವು.
ಈ ನಾಯಿತನವ ಮಾಣಿಸು,
ಕೂಡಲ ಸಂಗಮದೇವಾ, ನಿಮ್ಮ ಧರ್ಮ !

ಎಂದು ಹೇಳಿ ಈ ಸಂಸಾರಪಾರಾವಾರದಿಂದ ತಮ್ಮನ್ನು ಪಾರುಮಾಡುವಂತೆ ಕೂಡಲಸಂಗಮದೇವನನ್ನು ಕೇಳಿಕೊಂಡಿದ್ದಾರೆ. ತಮ್ಮ ಸ್ಥಿತಿ 'ಕಪ್ಪೆ ಸರ್ಪನ ನೆಳಲಲ್ಲಿಪ್ಪಂತೆ' ಆಗಿದೆಯೆಂದೂ, ತಾವು ಸಂಸಾರವೆಂಬ ಬಲೆಯಲ್ಲಿ ಸಿಲುಕಿರುವುದಾಗಿಯೂ, ಹುರುಳಿಲ್ಲದ ಈ ಸಂಸಾರದಿಂದ ತಮ್ಮನ್ನು ಕಾಯಬೇಕೆಂದೂ ಬೇಡಿಕೊಂಡಿದ್ದಾರೆ. ಇಹಲೋಕದುಃಖಿಯೂ ಪರಲೋಕದೂರನೂ ಆದ ತನಗೆ ಬದಲಾಗಿ ತರುಮರವನ್ನಾದರೂ ಹುಟ್ಟಿಸಬಾರದಾಗಿತ್ತೆ ಎಂದಿದ್ದಾರೆ. ಕೊನೆಗೆ ಭಕ್ತಿಯ ಪಾರವಶ್ಯದಿಂದ :

ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯಾ, ತಂದೆ;
ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ, ತಂದೆ ;
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ, ತಂದೆ;
ನಿಮ್ಮ ಶರಣರ ಪಾದವಲ್ಲದೆ
ಅನ್ಯವಿಷಯಕ್ಕೆಳಸದಂತೆ ಇರಿಸು, ಕೂಡಲಸಂಗಮದೇವಾ.

ಎಂದು ನಮ್ರವಾಗಿ ಪ್ರಾರ್ಥಿಸಿಕೊಂಡಿದ್ದಾರೆ. ಬಸವಣ್ಣನವರ ವ್ಯಕ್ತಿತ್ವವನ್ನು ಅರ್ಥಮಾಡಿಕೊಂಡ ಜನ ಅವರನ್ನು ನಾನಾ ಪರಿಯಾಗಿ ಹೊಗಳುವುದಕ್ಕೆ ಪ್ರಾರಂಭಿಸಿದರು. ಆದರೆ ಬಸವಣ್ಣನವರಿಗೆ ಈ ಹೊಗಳಿಕೆ ಹಿಡಿಸಲಿಲ್ಲ. ಎಂತಾದರೂ ಈ ಹೊಗಳಿಕೆಯನ್ನು ಮಾಣಿಸು ಎಂದು :

ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ, ಹೊಗಳಿ!
ಎನ್ನ ಹೊಗಳತೆ ಎನ್ನನಿಮ್ಮೆಯ್ದೊಂಡಿತಲ್ಲಾ!
ಅಯ್ಯೊ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ!
ಅಯ್ಯೋ ನೊಂದೆನು ಸೈರಿಸಲಾರೆನು
ಕೂಡಲ ಸಂಗಮದೇವಾ ನೀನೆನಗೊಳ್ಳಿದನಾದರೆ
ಎನ್ನ ಹೊಗಳತೆಗಡ್ಡಬಾರಾ ಧರ್ಮಿ.

ಈ ವಚನದಲ್ಲಿ ಹೇಳಿಕೊಂಡಿದ್ದಾರೆ.

ಬಸವಣ್ಣನವರು ಶಾಸ್ತ್ರಪುರಾಣಗಳಿಗಿಂತ ಪರಿಶುದ್ಧ ವ್ಯಕ್ತಿಯ ಅನುಭವವೇ ಹಿರಿದಾದುದೆಂದು ತಿಳಿದಿದ್ದರು. ಸತ್ಯಶೋಧನೆಯೇ ಅವರ ಜೀವನದ ಗೊತ್ತುಗುರಿಯಾಗಿದ್ದಿತು. ಆದುದರಿಂದಲೇ ಅವರು ಅಂಧಶ್ರದ್ಧೆಯಿಂದ ಹಿಂದಿನ ಯಾವ ಸಂಪ್ರದಾಯದ ಕಟ್ಟಿಗೂ ತಲೆಬಾಗಲಿಲ್ಲ. ಪ್ರಗತಿಪರವಾದ ವೀರಶೈವಮತವನ್ನು ಪರಿಷ್ಕರಿಸಿ ಜನಸಾಮಾನ್ಯದ ಮೇಲ್ಮೆಗೆ ನೆರವಾಗುವಂತೆ ಅದನ್ನು ಪುನರುಜ್ಜೀವನಗೊಳಿಸಿದರು. ಯಜ್ಞಯಾಗಾದಿಗಳಿಗೆ ಪ್ರಾಶಸ್ತ್ಯವಿಲ್ಲದ, ಸರ್ವಸಮನ್ವಯ ದೃಷ್ಟಿಯಿಂದ ಕೂಡಿದ ಮತ್ತು ಸುಲಭವಾಗಿ ಆಚರಿಸಬಹುದಾದ ಆ ಧರ್ಮವನ್ನು ಪ್ರಚಾರ ಮಾಡುವುದಕ್ಕೆ ಪ್ರಯತ್ನಿಸಿದರು. ಅದಕ್ಕಾಗಿ ಅವರು ಕೆಲವಾರು ಕ್ಷೇತ್ರಗಳಲ್ಲಿ ದುಡಿದರು. ಮಾನವಕಲ್ಯಾಣಕ್ಕಾಗಿ ತಮ್ಮ ಸರ್ವಸ್ವವನ್ನೂ ಧಾರೆಯೆರೆದರು; ಕಿಂಕರನಂತೆ ಸೇವೆಯನ್ನು ಸಲ್ಲಿಸಿದರು. ಅವರ ಅಪಾರವಾದ ಅನುಭವ, ಮಹತ್ವದ ಬೋಧನೆಗಳು ಸಾರ್ವಕಾಲಿಕವಾದ ನೀತಿಯನ್ನು ಪ್ರತಿಪಾದಿಸುತ್ತವೆ.

ಮಾನವರು ದೇವರ ನಾಮಸ್ಮರಣೆಯಿಂದಲೇ ಧನ್ಯರಾದೆವೆಂದು ಭಾವಿಸಿದರೆ ಅದು ಹೆಡ್ಡತನವಾಗುತ್ತದೆ. ಅಂತೆಯೇ ಪುರಾತನರನ್ನೂ ಹಿರಿಯರನ್ನೂ ಬಾಯಿಂದ ಉಚ್ಚರಿಸಿದಷ್ಟಕ್ಕೇ ಧನ್ಯರಾಗುವಂತಿಲ್ಲ. ಇಷ್ಟು ಮಾತ್ರದಿಂದಲೇ ಆ ಹಿರಿಯರ ಉದಾತ್ತಭಾವನೆಗಳೂ ಸದ್ವರ್ತನೆಗಳೂ ಕರಗತವಾಗುವುದಿಲ್ಲ. ಅವರಂತೆಯೇ ಪರಿಶುದ್ಧವಾದ ನಡೆನುಡಿಗಳನ್ನು ಹೊಂದಿ, ಸದ್ಗುಣ ಸದಾಚಾರಗಳಿಂದ ಬಾಳಬೇಕೆಂಬುದನ್ನು ಬಸವಣ್ಣನವರು ಹೇಳಿರುವ ರೀತಿ ಇದು:

ಕರಿಕ ಕೆಂಚನ ನೆನೆದಡೆ ಕೆಂಚನಾಗಬಲ್ಲನೆ?
ದರಿದ್ರ ಸಿರಿವಂತನಾಗಬಲ್ಲನೆ ? ಮುನ್ನಿನ
ಪುರಾತನರ ನೆನೆದು ಧನ್ಯನಾದೆನೆಂಬ ಮಾತಿನ
ರಂಜಕರನೇನೆಂಬೆ ಕೂಡಲಸಂಗಮದೇವಾ.

ಹೀಗೆ ಬರಿಯ ಮಾತಿನ ರಂಜಕತನದಿಂದ ಏನೂ ಪ್ರಯೋಜನವಿಲ್ಲ ವೆಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಬಸವಣ್ಣನವರು ಶೀಲಶುದ್ಧತೆಗೆ ವಿಶೇಷ ಪ್ರಾಮುಖ್ಯವನ್ನು ಕೊಟ್ಟಿ ದ್ದಾರೆ. ಬಾಹ್ಯಾಡಂಬರದಿಂದ ಏನೂ ಪ್ರಯೋಜನವಿಲ್ಲವೆಂದು ಅರಿತಿದ್ದ ಅವರು ಅಂತರಂಗ ಶುದ್ಧಿಯಿಲ್ಲದ ಅಲಂಕಾರ 'ಹೆಂಡದ ಮಡಕೆಯನ್ನು ಸಿಂಗರಿಸಿದಂತೆ' ಎಂದಿದ್ದಾರೆ. ಹುತ್ತವ ಬಡಿದೊಡೆ ಹಾವು ಹೇಗೆ ಸಾಯು ವುದಿಲ್ಲವೋ ಹಾಗೆ ಅಂತರಂಗ ಆತ್ಮಶುದ್ಧಿ ಇಲ್ಲದವರು ಅಘೋರ ತಪವನ್ನು ಮಾಡಿದೊಡೇನು? ಎಂದು ಪ್ರಶ್ನಿಸಿದ್ದಾರೆ. ಪರಧನ ಪರಸ್ತ್ರೀಯರಿಗೆ ಎಳಸದಂತೆ ವಿಷಯಲಂಪಟತ್ವದಿಂದ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡು ಸನ್ಮಾರ್ಗದಲ್ಲಿ ನಡೆದರೆ ಕೂಡಲಸಂಗಮದೇವನು ಒಲಿಯುವನು. ಈ ಅಂತರಂಗ ಬಹಿರಂಗ ಶುದ್ಧತೆಯನ್ನು ಕುರಿತು:

ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ;
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ;
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ,
ಇದೆ ಅಂತರಂಗಶುದ್ಧಿ ಇದೇ ಬಹಿರಂಗಶುದ್ಧಿ,
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ!

ಎಂದು ಅರ್ಥವತ್ತಾಗಿ ಹೇಳಿದ್ದಾರೆ. ಹೀಗೆ ಆಚರಿಸುವುದರಿಂದ ಜನ್ಮಾಂತರದ ಕೊಳಕು ಕರಗಿಹೋಗಿ ಮನಸ್ಸು ನಿರ್ಮಲವಾಗುತ್ತದೆ.

ದೇವರ ಏಕತ್ವ ಬಹುತ್ವಗಳ ಜಿಜ್ಞಾಸೆಯಲ್ಲಿ ತೊಡಗುವುದು ಬೇಡ. ಏಕೆಂದರೆ ದ್ವೈತ ಅದ್ವೈತ ವಿಶಿಷ್ಟಾದ್ವೈತಗಳ ಶ್ರೇಷ್ಠತೆಯ ಚರ್ಚೆಯಾಗಲಿ ವೇದಾಂತ ವಿಷಯಗಳನ್ನು ಬಿಡಿಸುವುದಾಗಲಿ ಜನಸಾಮಾನ್ಯದ ನಿಲುವಿಗೆ ಎಟುಕದಿರಬಹುದು. ಶಾಸ್ತ್ರವೇದ ಸ್ಮೃತಿಗಳಲ್ಲಿಯೂ ದೇವನು ಸ್ಪಷ್ಟವಾಗು ವುದಿಲ್ಲ. ಆತನನ್ನು ಕಾಣಬೇಕಾದರೆ ತ್ರಿವಿಧ ದಾಸೋಹದಿಂದಲೇ ಸಾಧ್ಯ ವೆಂಬುದನ್ನು ಬಸವಣ್ಣನವರು:

ಶಾಸ್ತ್ರ ಘನವೆಂಬೆನೆ ? ಕರ್ಮವ ಭಜಿಸುತ್ತಿದೆ !
ವೇದ ಘನವೆಂಬೆನೆ ? ಪ್ರಾಣವಧೆಯ ಹೇಳುತ್ತಿದೆ !
ಸ್ಮೃತಿ ಘನವೆಂಬೆನೆ ? ಮುಂದಿಟ್ಟರಸುತ್ತಿದೆ !
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ, ತ್ರಿವಿಧದಾಸೋಹದಲ್ಲಲ್ಲದೆ
ಕಾಣಬಾರದು ಕೂಡಲ ಸಂಗಮದೇವನ !

ಎಂಬ ವಚನದಲ್ಲಿ ತಿಳಿಯಪಡಿಸಿದ್ದಾರೆ. ಇದರಂತೆ ತನುವನ್ನು ಗುರುವಿಗೂ ಮನವನ್ನು ಲಿಂಗಕ್ಕೂ ಧನವನ್ನು ಜಂಗಮಕ್ಕೂ ಅರ್ಪಿಸಿದ ಈ ತ್ರಿವಿಧ ದಾಸೋಹದಿಂದಲೇ ದೇವನನ್ನು ಒಲಿಸಬೇಕು.

ಹಿಂಸಾಮಯವಾದ ಯಜ್ಞಯಾಗಾದಿಗಳಿಂದಲೂ ಈಶ್ವರನನ್ನು ಒಲಿಸಲಾಗುವುದಿಲ್ಲ. ಶಿವನು ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ, ಕೇವಲ ಭಕ್ತಿಪ್ರಿಯ. ಇಂತಹ ಭಕ್ತಿಪ್ರಿಯನನ್ನು ಸಾಕ್ಷಾತ್ಕರಿಸಿಕೊಂಡು ಮೋಕ್ಷವನ್ನು ಸಂಪಾದಿಸಬೇಕಾದರೆ ಭಕ್ತಿಮಾರ್ಗವೇ ಉತ್ತಮವಾದುದು. ಇದನ್ನು ಕೆಳಗಿನ ವಚನ ಸಾರುತ್ತದೆ :

ನಾದಪ್ರಿಯ ಶಿವನೆಂಬರು-ನಾದಪ್ರಿಯ ಶಿವನಲ್ಲವಯ್ಯಾ ;
ವೇದಪ್ರಿಯ ಶಿವನೆಂಬರು-ವೇದಪ್ರಿಯ ಶಿವನಲ್ಲವಯ್ಯಾ ;
ನಾದವ ಮಾಡಿದ ರಾವಣಂಗೆ ಅರೆಯಾಯುಷ್ಯವಾಯಿತ್ತು ;
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು !
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ ;
ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ.

ಲೋಕವನ್ನು ಮೆಚ್ಚಿಸುವುದಕ್ಕಾಗಿ ತೋರುವ ಬಾಹ್ಯಾಡಂಬರಗಳನ್ನೂ, ಕಪಟಭಕ್ತಿಯನ್ನೂ ಬಸವಣ್ಣನವರು ಖಂಡಿಸಿದ್ದಾರೆ. ಅಂದಿನ ಸಮಾಜದಲ್ಲಿದ್ದ ಬೂಟಾಟಿಕೆಯನ್ನೂ ಡಬಡ್ಡಾಳಿಕೆಯನ್ನೂ ಅಲ್ಲಗಳೆದಿದ್ದಾರೆ. ಉಂಬಜಂಗಮ ಬಂದರೆ ನಡೆ ಎನ್ನುವ ಉಣ್ಣದ ಲಿಂಗಕ್ಕೆ ಬೋನವ ಹಿಡಿವ ಕಪಟಿಗಳನ್ನು ಕಂಡು ಸಿಡಿಮಿಡಿಗೊಂಡು :

ಕಲ್ಲನಾಗರ ಕಂಡರೆ ಹಾಲನೆರೆಯೆಂಬರು ;
ದಿಟದ ನಾಗರ ಕಂಡರೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದರೆ ನಡೆಯೆಂಬರು :
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಕೂಡಲಸಂಗನ ಶರಣರ ಕಂಡುದಾಸೀನವ ಮಾಡಿದರೆ
ಕಲ್ಲತಾಗಿದ ಮಿಟ್ಟೆಯಂತಪ್ಪರಯ್ಯಾ !

ಎಂದು ಎಚ್ಚರಿಸಿದ್ದಾರೆ.

ಬಸವಣ್ಣನವರಿಗೆ ಶಿವದೀಕ್ಷೆ, ಆಚಾರವಿಚಾರಗಳಲ್ಲಿ ವಿಶೇಷವಾದ ಶ್ರದ್ಧೆಯಿತ್ತು. ಈ ಆಚಾರಗಳಲ್ಲಿ ಒಂದಾದ ವಿಭೂತಿಯ ಮಹತ್ವವನ್ನು ಹೀಗೆ ವಿವರಿಸಿದ್ದಾರೆ. ನೀರಿಂಗೆ ನೈದಿಲೆ ಹೇಗೆ ಶೃಂಗಾರವೋ, ನಾರಿಗೆ ಗುಣವು ಹೇಗೆ ಶೃಂಗಾರವೋ, ಗಗನಕ್ಕೆ ಚಂದ್ರನು ಹೇಗೆ ಶೃಂಗಾರವೋ ಹಾಗೆ ಶರಣರಿಗೆ ನೊಸಲ ವಿಭೂತಿಯೇ ಶೃಂಗಾರ. ಅದರ ಸತ್ವವನ್ನು ಅರಿಯದೆ ಕೇವಲ ತೋರಿಕೆಗಾಗಿ ಧರಿಸುತ್ತಿದ್ದವರನ್ನು ಕಂಡು ಕೆರಳಿ ನುಡಿದಿದ್ದಾರೆ. ಮನದಲ್ಲಿ ಲೇಸಿಲ್ಲದೆ ವಿಭೂತಿಯನ್ನು ಒಲೆಯ ಬೂದಿಯಂತೆ ಹೂಸಿಕೊಂಡರೆ ಏನು ಫಲ ? ಇಂತಹ ಒಂದನಾಡಲು ಹೋಗಿ ಒಂಬತ್ತ ನಾಡುವ ಡಂಭಕರನ್ನು ಕೂಡಲ ಸಂಗಮದೇವ ಮೆಚ್ಚನೆಂದು ಹೇಳಿದ್ದಾರೆ.

ಹೀಗೆ ಭಕ್ತಿ, ಪೂಜೆ, ತಪಸ್ಸುಗಳು ಸಿದ್ಧಿಸುವುದು ಅಂತರಂಗ ಶುದ್ಧಿಯಾದಮೇಲೆ. ಇಹಲೋಕದ ಜೀವನವು ಪರಿಶುದ್ಧವಾಗಿದ್ದರೆ, ಪರಲೋಕದಲ್ಲೂ ಉತ್ತಮ ಸ್ಥಾನವು ದೊರಕುತ್ತದೆ. ಬಸವಣ್ಣನವರು ತಿಳಿಯಪಡಿಸಿದ ಸರಳವಾದ ನಡತೆ ಸದಾಚಾರಗಳನ್ನು ಎಲ್ಲರೂ ಆಚರಿಸಬಹುದು. ಅವನ್ನು ಶಾಸ್ತ್ರಗ್ರಂಥಗಳಿಂದ ಓದಿ ಗ್ರಹಿಸಬೇಕಾದ ಅವಶ್ಯಕತೆಯಿಲ್ಲ. ನಿತ್ಯಜೀವನದಲ್ಲಿ ಅವು ಎಲ್ಲರಿಗೂ ಗೋಚರವಾಗುತ್ತವೆ. ಆದುದರಿಂದಲೇ ಜ್ಞಾನಕ್ಕಿಂತಲೂ ಆಚರಣೆಗೆ ಪ್ರಾಧಾನ್ಯವನ್ನು ಕೊಡಬೇಕು. ಗುರುಭಕ್ತಿ, ವಿನಯ, ಸದಾಚಾರಗಳುಳ್ಳ ಮನುಷ್ಯನು ಕೂಡಲ ಸಂಗಮದೇವನ ಪ್ರೇಮದ ಪುತ್ರನಾಗುವನೆಂದು ಅವರ ನಿಷ್ಕೃಷ್ಟವಾದ ಅಭಿಪ್ರಾಯ.

ದಿನನಿತ್ಯದ ನಮ್ಮ ನಡೆನುಡಿಗಳಲ್ಲಿ ವಿನಯವಿರಬೇಕು. ಕೋಪವನ್ನು ವರ್ಜಿಸಬೇಕು. ಶಾಂತರಾಗಿ ಬಾಳುವುದನ್ನು ಕಲಿಯಬೇಕು. ಇತರರು ನಮ್ಮ ಮೇಲೆ ಕೋಪಗೊಂಡರೂ ನಾವು ಮಾತ್ರ ಕೋಪಗೊಳ್ಳಬಾರದು. ಏಕೆಂದರೆ ಕೊಪಕ್ಕೆ ಪ್ರತಿಕೋಪ ಸಲ್ಲದು ; ಅದರಿಂದ ಏನೂ ಪ್ರಯೋಜನವಿಲ್ಲ. ಕೋಪದಿಂದ ಅನರ್ಥಗಳೂ ಸಂಭವಿಸುತ್ತವೆ. ಕೋಪದಿಂದ ಪರರಿಗೆ ಆಗುವ ಹಾನಿಗಿಂತ ತನಗೇ ಹೆಚ್ಚು ಹಾನಿಯಾಗುತ್ತದೆ. ಅದನ್ನೇ ಬಸವಣ್ಣನವರು ಎಂತಹ ನಮ್ರವಾದ ನುಡಿಗಳಲ್ಲಿ ತಿಳಿಯಪಡಿಸಿದ್ದಾರೆ !

ತನಗೆ ಮುನಿವವರಿಗೆ ತಾ ಮುನಿಯಲೇಕಯ್ಯಾ
ತನಗಾದ ಆಗೇನು? ಅವರಿಗಾದ ಚೇಗೇನು?
ತನುವಿನ ಕೋಪ ತನ್ನ ಹಿರಿಯತನದ ಕೇಡು;
ಮನದ ಕೋಪ ತನ್ನರುಹಿನ ಕೇಡು.
ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡುವುದೆ, ಕೂಡಲಸಂಗಮದೇವಾ?

ಕೋಪದಿಂದಾಗುವ ಅನರ್ಥಪರಂಪರೆಗಳನ್ನೇ ಈ ವಚನವು ಸಾರುತ್ತದೆ.

ಬಸವಣ್ಣನವರ ಇಂತಹ ಆದರ್ಶ ಸರಳ ಸ್ವಚ್ಛ ಜೀವನಮಾರ್ಗ ಎಲ್ಲರಿಗೂ ಮೆಚ್ಚುಗೆಯಾಯಿತು. ಅವರ ಪ್ರಗತಿಪರ ಸರ್ವೋದಯದೃಷ್ಟಿ ಎಲ್ಲರಿಗೂ ಹಿಡಿಸಿತು. ವಿಶಾಲ ಮನೋಭಾವನೆಯಿಂದ ಕೂಡಿದ ಅವರ ರೀತಿ ನೀತಿಗಳು ಜನಸಾಮಾನ್ಯರಿಗೂ ಆಚರಿಸಲು ಯೋಗ್ಯವಾಗಿರುವಂತೆ ವಾಸ್ತವಿಕತೆಯಿಂದಿರುವುದೇ ಒಂದು ವೈಶಿಷ್ಟ್ಯ. ಗೌತಮ ಬುದ್ಧನು ತನಗೆ ಒದಗಿದ್ದ ರಾಜ್ಯವನ್ನೂ ಗೃಹಸ್ಥಾಶ್ರಮವನ್ನೂ ತ್ಯಜಿಸಿ ಬ್ರಹ್ಮಚರ್ಯಪ್ರಧಾನವಾದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದನು. ಆದರೆ ಬಸವಣ್ಣನವರು ಆ ರೀತಿ ಮಾಡಲಿಲ್ಲ. ಆಜನ್ಮ ಬ್ರಹ್ಮಚಾರಿಗಳಾಗುವಷ್ಟು ಸಂಯಮ ಅವರಲ್ಲಿದ್ದರೂ ಅವರು ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಮಂತ್ರಿಪದವಿಯನ್ನೂ ಅಂಗೀಕರಿಸಿ ಸಮಾಜಸೇವೆಯನ್ನು ಮಾಡಿದರು. ತ್ರಿಕರಣ ಶುದ್ಧಿಯಿಂದ ಸರಳವಾದ ಧಾರ್ಮಿಕಜೀವನವನ್ನು ನಡೆಸಿದರು. ಐಹಿಕ, ಪಾರಲೌಕಿಕ ಜೀವನದ ಅಂತರವನ್ನು ಹೋಗಲಾಡಿಸಿ ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ವಿಶೇಷ ಲಕ್ಷ್ಯವನ್ನು ಕೊಟ್ಟರು. ಪ್ರಪಂಚದ ಮಾಯಾಪ್ರಲೋಭಗಳಿಗೆ ಒಳಗಾಗದೆ ಎಲೆಯಮೇಲಿನ ಹಿಮಮಣಿಯಂತೆ ಬಾಳಿ ಇತರರಿಗೆ ಮಾರ್ಗದರ್ಶಕರಾದರು. ವಿಭೂತಿಪುರುಷರಾದ ಅವರ ಪ್ರಯತ್ನದಿಂದ ಮರ್ತ್ಯಲೋಕವೇ ದೇವಲೋಕವಾಯಿತು. ಅವರ ದೃಷ್ಟಿಯಲ್ಲಿ ದೇವಲೋಕ ಮರ್ತ್ಯಲೋಕಗಳು ಬೇರೆಯಲ್ಲ, ಬೇರೆಯಿಲ್ಲ. ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ. ಹೀಗೆಯೇ ಪಾಪಪುಣ್ಯಗಳೂ ಸ್ವರ್ಗನರಕಗಳೂ ನಮ್ಮ ಕೈಯಲ್ಲಿಯೇ ಇವೆ. ಆಚಾರವೇ ಸ್ವರ್ಗ, ಅನಾಚಾರವೇ ನರಕ. ಇದನ್ನರಿತು ಆಚಾರವಂತರಾಗಿ ಬಾಳಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ. 'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ. ಇಲ್ಲಿ ಸಲ್ಲುವರು ಅಲ್ಲಿಯೂ

ಸಲ್ಲುವರು. ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರು' ಎಂದು ಜನತೆಯನ್ನು ಎಚ್ಚರಿಸಿದವರು ಅವರು.

ಪ್ರಪಂಚವು ಮಿಥ್ಯೆಯೆಂದು ತಿಳಿದು ಕಾಡಿಗೆ ಹೋಗಿ ಜಪ ತಪಸ್ಸುಗಳಿಂದಲೇ ಮೋಕ್ಷವನ್ನು ಸಂಪಾದಿಸಬೇಕೆಂಬ ವಾದವನ್ನು ಬಸವಣ್ಣನವರು ಒಪ್ಪಲಿಲ್ಲ. ಇಹಲೋಕದಲ್ಲಿ ನಮ್ಮ ಬಾಳನ್ನು ಹಸನುಮಾಡಿಕೊಳ್ಳಬೇಕು; ಸಂಸಾರದಲ್ಲಿದ್ದೂ ಇಲ್ಲದಂತೆ ರಾಗಾದಿಗಳಿಗೆ ಅಡಿಯಾಳಾಗದೆ ಮನಸ್ಸನ್ನು ಸನ್ಮಾರ್ಗದಲ್ಲಿ ಹರಿಯಿಸಬೇಕು. ಭೋಗಯೋಗಗಳೆರಡರ ಸಮನ್ವಯವೆ ನಮ್ಮ ಬಾಳಿನ ಹೆಗ್ಗುರಿಯಾಗಬೇಕು ಎಂಬುದನ್ನು ಬಸವಣ್ಣನವರು ತಿಳಿಯಪಡಿಸಿದರು. ಇದ್ದಲ್ಲಿಯೇ ಶೀಲಶುದ್ಧತೆಯನ್ನು ಸಾಧಿಸಿಕೊಂಡರೆ ಯೋಗಿಯಾಗಬಹುದೆಂಬುದನ್ನು ಅವರು ಸ್ಥಾಪಿಸಿದ 'ಅನುಭವ ಮಂಟಪ' ತೋರಿಸಿಕೊಟ್ಟಿತು. ಅದು ಗೃಹಸ್ಥಧರ್ಮವನ್ನು ನಿರೂಪಿಸಿದ್ದರಿಂದ ಹೆಚ್ಚು ವಾಸ್ತವಿಕವಾಗಿ ಜನಾದರಣೀಯವಾಯಿತು.

ಬಸವಣ್ಣನವರ ಕಾಲದಲ್ಲಿ ಕನ್ನಡನಾಡಿನ ಮೂರು ಮುಖ್ಯಕ್ಷೇತ್ರಗಳು ವೀರಶೈವಮತದ ಕೇಂದ್ರಗಳಾಗಿದ್ದುವು. ಮೈಸೂರಿನ ವಾಯವ್ಯಭಾಗದ ಬನವಾಸಿ ಪ್ರಾಂತದ ಬಳ್ಳಿಗಾವಿಯಲ್ಲಿ ಜ್ಞಾನಯೋಗಿಯಾದ ಪ್ರಭುದೇವರು ಪ್ರಸಿದ್ಧಿಯನ್ನು ಪಡೆದರು. ಸೊನ್ನಲಾಪುರದಲ್ಲಿ ಕರ್ಮಯೋಗಿಯಾದ ಸಿದ್ಧರಾಮನು ಖ್ಯಾತಿವೆತ್ತಿದ್ದನು. ಇವರಿಬ್ಬರೂ ಬಸವಣ್ಣನವರ ಭಕ್ತಿಪ್ರಭಾವಗಳಿಗೆ ಮಾರುಹೋಗಿ ಕಲ್ಯಾಣಪಟ್ಟಣನ್ನು ಸೇರಿದರು. ಕರ್ಣಾಟಕದಿಂದಲೇ ಅಲ್ಲದೆ ತಮಿಳು ತೆಲುಗು ಮುಂತಾದ ದೇಶಗಳಿಂದಲೂ ಭಕ್ತರೂ ಶರಣರೂ ಬಸವಣ್ಣನವರ ದರ್ಶನಾಕಾಂಕ್ಷಿಗಳಾಗಿ ಕಲ್ಯಾಣಪಟ್ಟಣಕ್ಕೆ ಧಾವಿಸುತ್ತಿದ್ದರು.

ಅನುಭವ ಮಂಟಪ

ಕನ್ನಡ ನಾಡಿನಲ್ಲಿ ವೀರಶೈವ ಮತವು ಖಿಲವಾಗುತ್ತಿದ್ದಾಗ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಸಿದ್ಧರಾಮ ಮುಂತಾದ ಮಹಾತ್ಮರೂ ಹಲವಾರುಜನ ವಿದ್ವಾಂಸರೂ, ವಿರಕ್ತರೂ, ಜಂಗಮರೂ ಸೇರಿ ಕಲ್ಯಾಣಪಟ್ಟಣದಲ್ಲಿ ಒಂದು ಧರ್ಮಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯೇ ಕನ್ನಡಿಗರ ಇತಿಹಾಸ ಪ್ರಸಿದ್ಧವಾದ 'ಅನುಭವ ಮಂಟಪ'. ಆ ಅನುಭವ

ಮಂಟಪವು ಜನಸಾಮಾನ್ಯಕ್ಕೆ ವೀರಶೈವ ಧರ್ಮವನ್ನು ಬೋಧಿಸುತ್ತ ಆತ್ಮದ ಅನುಭವವನ್ನುಂಟುಮಾಡಿ ಕೊಡುವುದಕ್ಕೆ ನೆರವಾಯಿತು. ಆದುದರಿಂದಲೇ ಪರಮಾತ್ಮನ ಅನುಭವವನ್ನುಂಟುಮಾಡಲು ಸ್ಥಾಪಿಸಿದ ಆ ಸಂಸ್ಥೆಗೆ 'ಅನುಭವ ಮಂಟಪ' ಎಂಬ ಅನ್ವರ್ಥನಾಮ ಸಂದಿತು.

ಅನುಭವ ಮಂಟಪದ ಮೂಲಸ್ಥಾಪನಾಚಾರ್ಯರು ಬಸವಣ್ಣನವರು. ಪ್ರಭುದೇವರು ಅದರ ನಿರ್ದೇಶಕರು. ಈ ಹಿರಿಯರೆಲ್ಲ ಸೇರಿ ಬೋಧಿಸಿದ ತತ್ತ್ವ ಜನಸಾಮಾನ್ಯರೂ ಆಚರಿಸಬಹುದಾದುದು. ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆಯಲು ಯಾರುಬೇಕಾದರೂ ವೀರಶೈವಧರ್ಮವನ್ನು ಅನುಸರಿಸಬಹುದು. ಈ ಧರ್ಮಕ್ಕೆ ಸೇರುವವರು ಲಿಂಗವನ್ನು ಧರಿಸಬೇಕು. ಏಕೆಂದರೆ ಈ ಬಾಹ್ಯಲಿಂಗದಿಂದಲೇ ಅಂತರ್ಲಿಂಗದ ದರ್ಶನ ಸಾಧ್ಯ. ಇದು ಕೇವಲ ನಿಮಿತ್ತಮಾತ್ರ. ಈ ಮತಕ್ಕೆ ಸೇರುವವರಿಗೆ ಜಾತಿ ಮತಗಳ ಬಂಧನವಿರಲಿಲ್ಲ. ಕಾಯಕಗಳ ಕಟ್ಟಳೆ ಇರಲಿಲ್ಲ. ಹೀಗೆ ಲಿಂಗವನ್ನು ಧರಿಸಿದವರು ಮೊದಲು ಗುರುಗಳಿಂದ ಉಪದೇಶವನ್ನು ಪಡೆಯಬೇಕು. ತದನಂತರ ಭಕ್ತಿಮಾರ್ಗದಲ್ಲಿ ತ್ರಿಕರಣಶುದ್ಧಿಯಿಂದ ನಡೆದುಕೊಳ್ಳಬೇಕು. ಆಗಮಾತ್ರ ಅವರು ಶಿವನನ್ನು ಸಾಕ್ಷಾತ್ಕರಿಸಿಕೊಳ್ಳಲು ಅರ್ಹರಾಗುತ್ತಾರೆ. ವೀರಶೈವರು ಈ ಸಾಧನೆಯ ಮಾರ್ಗವನ್ನು ಆರು ಹಂತಗಳನ್ನಾಗಿ ವಿಂಗಡಿಸಿದ್ದಾರೆ. ಇದೇ ಷಟ್‌ಸ್ಥಲ ಮಾರ್ಗ.

ಷಟ್‌ಸ್ಥಲವೆಂದರೆ ಆರು ಹಂತಗಳು. ಅವು ಯಾವುವೆಂದರೆ:– (೧) ಭಕ್ತಸ್ಥಲ (೨) ಮಹೇಶ್ವರಸ್ಥಲ (೩) ಪ್ರಸಾದಿಸ್ಥಲ (೪) ಪ್ರಾಣಲಿಂಗಿಸ್ಥಲ (೫) ಶರಣಸ್ಥಲ (೬) ಐಕ್ಯಸ್ಥಲ. ಈ ಆರು ಹಂತಗಳು ಆಧ್ಯಾತ್ಮಿಕ ಸಾಧನೆಯ ಸೋಪಾನಗಳು. ವೀರಶೈವಧರ್ಮವನ್ನನುಸರಿಸಿದವರು ಈ ಷಟ್‌ಸ್ಥಲ ಮಾರ್ಗದಲ್ಲಿ ಸಾಧನೆಯನ್ನು ಕೈಗೊಂಡು ಶಿವನನ್ನು ದರ್ಶಿಸಲು ಪ್ರಯತ್ನಿಸಬೇಕು. ಇದರ ಅನುಷ್ಠಾನಕ್ಕೆ ಯಜ್ಞ ಯಾಗಾದಿಗಳ ಅವಶ್ಯಕತೆಯಿಲ್ಲ. ಆದುದರಿಂದ ಇದು ಸುಲಭವಾದ ಮಾರ್ಗವೆಂದು ಜನಸಾಮಾನ್ಯಕ್ಕೂ ಮನವರಿಕೆಯಾಯಿತು. ಬಸವಣ್ಣನವರು ಈ ಷಟ್‌ಸ್ಥಲಗಳಲ್ಲಿ ಮೊದಲನೆಯದಾದ ಭಕ್ತಸ್ಥಲಕ್ಕೆ ವಿಶೇಷ ಪ್ರಾಮುಖ್ಯವನ್ನು ಕೊಟ್ಟರು. ತಾವು ಸ್ವತಃ ಅನನ್ಯಭಕ್ತಿಯಿಂದ ಆಚರಿಸುತ್ತ ಇತರರಿಗೆ ಮೇಲ್ಪಂಕ್ತಿಯಾದರು; ಮತ್ತು ಭಕ್ತನಾದವನು ಅಹಂಕಾರವನ್ನು ತ್ಯಜಿಸಿ ಇಷ್ಟಲಿಂಗಕ್ಕೆ ಸರ್ವಸ್ವವನ್ನೂ

ಅರ್ಪಿಸುವ ನಿವೇದನಾಭಾವದಿಂದಲೂ, ಪ್ರೇಮದಿಂದಲೂ, ಭಕ್ತಿಯಿಂದಲೂ ಸಂಯಮದಿಂದಲೂ ನಡೆದು ಅನಂತದಲ್ಲಿ ಐಕ್ಯಗೊಳ್ಳುವುದರಿಂದ ಜೀವನ ಯಾತ್ರೆ ಸುಗಮವಾಗಿ ಮುಕ್ತಾಯವಾಗುವುದೆಂದು ಬೋಧಿಸಿದರು. ಬಸವಣ್ಣನವರ ಭಕ್ತಿಯ ಆಧಿಕ್ಯವನ್ನೂ, ತಲ್ಲೀನತೆಯನ್ನೂ ಕಂಡ ಜನ ಅವರನ್ನು "ಭಕ್ತಿಭಾಂಡಾರಿ" ಎಂದು ಕರೆದರು. ಅವರು ತನು ಮನ ಧನವನ್ನು ಗುರುಲಿಂಗ ಜಂಗಮ ಸೇವೆಯಲ್ಲಿ ಅಂದರೆ ಸಮಾಜಸೇವೆಯಲ್ಲಿ ಸವೆಸುತ್ತಾ, ನುಡಿದಂತೆ ನಡೆಯುತ್ತಿದ್ದುದರಿಂದ ಕ್ಷಿಪ್ರದಲ್ಲೇ ಜನಾನುರಾಗವನ್ನು ಗಳಿಸಿದರು. ಅನುಭವ ಮಂಟಪದ ಮೂಲಕ ಅವರು ಬೋಧಿಸಿದ ಈ ಹೊಸಧರ್ಮ ಎಲ್ಲ ಧರ್ಮಗಳ ಸಾರವನ್ನೂ ಹೀರಿಕೊಂಡು ಪ್ರಾಪಂಚಿಕ ಮತ್ತು ವ್ಯಾವಹಾರಿಕ ದೃಷ್ಟಿಯಿಂದ ಪ್ರಗತಿಪರವಾಯಿತು.

ಅನುಭವ ಮಂಟಪವು ಜನಸಾಮಾನ್ಯದ ಆತ್ಮೋದ್ಧಾರಕ್ಕೆ ಕಾರಣವಾದುದರಿಂದ ಅದು ಜ್ಞಾನಾರ್ಜನೆಯ ಕೇಂದ್ರವೂ ಧರ್ಮಪೀಠವೂ ಆಗಿತ್ತು. ಈ ವಿದ್ಯಾಸಂಸ್ಥೆಯಲ್ಲಿ ಸ್ತ್ರೀಯರಿಗೂ ಪ್ರಾತಿನಿಧ್ಯವಿತ್ತು. ಅಕ್ಕಮಹಾದೇವಿ ಮುಕ್ತಾಯಕ್ಕ ಮೊದಲಾದವರು ಪ್ರಧಾನವ್ಯಕ್ತಿಗಳೆನಿಸಿಕೊಂಡಿದ್ದರು. ಇವರೆಲ್ಲರೂ ಸೇರಿ ವೀರಶೈವಮತದ ಉದಾತ್ತ ತತ್ತ್ವಗಳಿಗೆ ಸಾರ್ವತ್ರಿಕ ಸ್ವರೂಪವನ್ನು ನಿರ್ಧರಿಸುತ್ತಿದ್ದರು. ಆ ಮಹಾಮನೆಯಲ್ಲಿ ಸಮಾವೇಶಗೊಳ್ಳುತ್ತಿದ್ದ ವಿದ್ವಾಂಸರೂ ಜ್ಞಾನಿಗಳೂ ಅನುಭಾವಿಗಳೂ ವೀರಶೈವಧರ್ಮದ ರೂಪರೇಖೆಗಳನ್ನು ರಚಿಸಿ ಅವುಗಳನ್ನು ಆಚರಣೆಗೆ ತಂದು ಪ್ರಚಾರಮಾಡುತ್ತಿದ್ದರು. ಅಲ್ಲಿ ವೇದೋಪನಿಷತ್ತುಗಳ ಮತ್ತು ಮತಸಿದ್ಧಾಂತಗಳ ಧರ್ಮವಿಚಾರಗಳು ಬಿಚ್ಚುಮನಸ್ಸಿನಿಂದ ಚರ್ಚಿಸಲ್ಪಡುತ್ತಿದ್ದವು. ಮಾನವಕಲ್ಯಾಣಕ್ಕೆ ಸಂಬಂಧಿಸಿದ ಗಹನವಾದ ವಿಷಯಗಳನ್ನು ಕೂಲಂಕಷವಾಗಿ ವಿಮರ್ಶಿಸಿ ಸುಧಾರಣೆಯ ಮಾರ್ಗವನ್ನು ಆ ಹಿರಿಯರು ನಿರ್ಧರಿಸುತ್ತಿದ್ದರು. ಈ ಸುಧಾರಣೆಯಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳಿಗೆ ಪ್ರಾಶಸ್ತ್ಯವನ್ನು ಕೊಡಲಾಗುತ್ತಿತ್ತು. ಈ ಮಹಾಮಥನದಿಂದ ಅಮೃತಸದೃಶವಾದ ಸಾಹಿತ್ಯಸೃಷ್ಟಿಯಾಯಿತು. ಜನತೆಗೆ ಭಕ್ತಿ ಜ್ಞಾನ ವೈರಾಗ್ಯಗಳ ಪರಿಚಯವಾಯಿತು.

ಬಸವಣ್ಣನವರು ಅಂತರಂಗ ಬಹಿರಂಗಗಳ ಪರಸ್ಪರ ಸಂಬಂಧವನ್ನು

ವಿಶಾಲದೃಷ್ಟಿಯಿಂದ ಪರಿಣಾಮಕಾರಿಯಾಗುವಂತೆ ವಿವರಿಸಿದ್ದಾರೆ. ವ್ಯಕ್ತಿಯ ಅಂತರಂಗಕ್ಕೆ ಸಂಬಂಧಪಟ್ಟ ಧರ್ಮ, ಸಮಾಜದಲ್ಲಿ ಬೇರೊಂದು ರೂಪದಲ್ಲಿ ತೋರಿ ಬಹಿರಂಗವಾಗುತ್ತದೆ. ಈ ಸಮಾಜದ ಬೆಳವಣಿಗೆಗೆ ಸಮಾನತೆ ಸ್ವಾತಂತ್ರ್ಯ ಸೌಹಾರ್ದಗಳನ್ನು ಬೋಧಿಸಿದವರು ಅವರು. ಮನುಷ್ಯನ ಯೋಗ್ಯತೆಯನ್ನು ಆತನ ಹುಟ್ಟು ಕುಲಗಳಿಂದ ಅಳೆಯಬಾರದು. ಆತನ ಮನೋವೃತ್ತಿಯಿಂದ ಅದನ್ನು ನಿರ್ಧರಿಸಬೇಕು. ಈ ಉಚ್ಚನೀತಿಯನ್ನು ಪ್ರತಿಪಾದಿಸಿದ ಬಸವಣ್ಣನವರು ವಿಶ್ವಸಮಾಜಕ್ಕೆ ಒಂದು ತಳಪಾಯವನ್ನು ಹಾಕಿದರು.

ಸರ್ವೋದಯ ದೃಷ್ಟಿ

ಹೀಗೆ ಸರ್ವೋದಯ ದೃಷ್ಟಿಯಿಂದ ಸಮತಾವಾದದ ಬುನಾದಿಯ ಮೇಲೆ ಪುನರುಜ್ಜೀವನಗೊಂಡ ವೀರಶೈವಮತವನ್ನು ಅನೇಕರು ಸ್ವಾಗತಿಸಿದರು. ವೈದಿಕ ಬೌದ್ಧ ಜೈನಮತಗಳಲ್ಲಿ ಅಸಮಾಧಾನಗೊಂಡಿದ್ದವರಿಗೆ ಇದರಿಂದ ಒಂದು ಸುಯೋಗ ದೊರೆತಂತಾಯಿತು. ಲಕ್ಷಾಂತರ ಜನರು ಈ ಹೊಸಪಂಥವನ್ನು ಸೇರಿದರು. ಅಂದಿನ ಜಾತಿಮತಗಳ ತಿಕ್ಕಾಟದಿಂದ ನೊಂದು ಬೆಂದಿದ್ದವರಿಗೆ ಅಮೃತದ ಮಳೆಗರೆದಂತಾಯಿತು. ಭರತಖಂಡದ ಪಾಂಡ್ಯ, ಚೇರ, ಚೋಳ, ಗುರ್ಜರ, ಒರಿಸ್ಸ, ನೇಪಾಲ, ಕಾಶ್ಮೀರ, ಬಂಗಾಳ ಮುಂತಾದ ಭಾಗಗಳಿಂದ ಜನರು ತಂಡೋಪತಂಡವಾಗಿ ಕಲ್ಯಾಣಪಟ್ಟಣವನ್ನು ಸೇರಿ ಶರಣರಾದರು. ಕಾಲಕ್ರಮದಲ್ಲಿ ಕಲ್ಯಾಣಪಟ್ಟಣವು ಪುಣ್ಯಕ್ಷೇತ್ರವಾಯಿತು.

ಅನುಭವಮಂಟಪದ ಸಾಧನೆಯ ಫಲವಾಗಿ ವೀರಶೈವ ಸಮಾಜವು ತುಂಬ ಸುಧಾರಿಸಿತು. ಸಮತಾಭಾವನೆ, ಅಹಿಂಸಾತತ್ತ್ವ, ಜಾತಿಬೇಧ ನಿರಾಕರಣೆ, ಸ್ತ್ರೀ ಪುರುಷ ಸಮಾನತೆ ಮುಂತಾದ ಉಚ್ಚ ಗುಣಗಳಿಂದ ಪ್ರಗತಿಯನ್ನು ಸಾಧಿಸುವುದಕ್ಕೆ ಅವಕಾಶವಾಯಿತು. 'ಕಾಯಕವೇ ಕೈಲಾಸ: ಗುರುವಾದರೂ ಕಾಯಕದಿಂದಲೇ ಮುಕ್ತಿ' ಎಂಬ ಸದ್ಬೋಧನೆಯಿಂದಲೂ, ಸದಾಚಾರ ಸದ್ವರ್ತನೆಗಳಿಗೆ ಕೊಟ್ಟ ಪ್ರಾಮುಖ್ಯದಿಂದಲೂ ಜನರು ಸ್ವತಂತ್ರರಾಗಿಯೂ, ಶೀಲವಂತರಾಗಿಯೂ ಬಾಳುವುದಕ್ಕೆ ಮಾರ್ಗ ತೋರಿಸಿದಂತಾಯಿತು: ಮತ್ತು ಮಾನವರೆಲ್ಲರೂ ಸಮಾನರು ಎಂಬ

ಶ್ರೇಷ್ಠ ನೀತಿಯನ್ನು ಸಾರಿದ್ದರಿಂದ ಈ ಧರ್ಮವು ಬಹುಜನಪ್ರಿಯವಾಯಿತು.

ಬಸವಣ್ಣನವರು ಅಂದಿನ ಹಿಂದೂಸಮಾಜದ ಅವನತಿಗೆ ಕಾರಣವಾಗಿದ್ದ ಜಾತಿವಾದವನ್ನು ಅಲ್ಲಗಳೆದರು. ಹಿಂದಿನಿಂದ ಬೆಳೆದು ಬಂದಿದ್ದ ವರ್ಣಾಶ್ರಮಗಳ ದುಷ್ಪರಿಣಾಮಗಳಿಂದ ಸೊರಗಿದ್ದ ಜನತೆಯ ಮೇಲ್ಮೆಯನ್ನು ಸಾಧಿಸುವುದಕ್ಕೆ ಗಮನಕೊಟ್ಟರು. ವೀರಶೈವ ಮತದ ತತ್ತ್ವಗಳನ್ನು ಬಹುಜನರ ಕಲ್ಯಾಣಕ್ಕಾಗಿ ಸುಧಾರಿಸಿದರು. ಅದಕ್ಕಾಗಿ ಒಂದು ದೊಡ್ಡ ಕ್ರಾಂತಿಯನ್ನೇ ನಡೆಸಿದರು. ತತ್ಪರಿಣಾಮವಾಗಿ ಸಂಪ್ರದಾಯ ಶರಣರ ಕೋಪಕ್ಕೂ ಪಕ್ಕಾದರು. ಆದರೂ ಧೃತಿಗೆಡದೆ ಕಾರ್ಯವನ್ನು ಮುಂದುವರಿಸಿದರು. ಯಾವ ದೇಶದವರಾಗಲಿ, ಯಾವ ಜಾತಿಯವರಾಗಲಿ, ಯಾವ ಭಾಷೆಯವರಾಗಲಿ ಎಲ್ಲರೂ ಒಂದೇ ಸಂಸ್ಕಾರವನ್ನು ಪಡೆದು ಒಂದೇ ಸಿದ್ಧಾಂತವನ್ನು ಅನುಸರಿಸಿ, ಸರ್ವಸಮಾನಭಾವದಿಂದಲೂ, ಪ್ರೇಮದಿಂದಲೂ ನಡೆದು ಅಂತಿಮ ಗುರಿಯನ್ನು ಸಾಧಿಸುವಂತಾಗಬೇಕೆಂಬುದೇ ಬಸವಣ್ಣನವರ ಹಿರಿಯಾಸೆಯಾಗಿತ್ತು. ಜಗತ್ತಿನಲ್ಲಿ ಎಲ್ಲರಿಗೂ ಬಾಳುವ ಬದುಕುವ ಅಧಿಕಾರವಿದೆ. ಮನುಷ್ಯಜಾತಿ ಒಂದೇ. ಅಂತೆಯೇ ಭಗವಂತನಿಗೆ ಎಲ್ಲರೂ ಒಂದೇ. ಆದರೆ ಯಾವ ವ್ಯಕ್ತಿಯಾಗಲಿ ತನ್ನ ನಡತೆಯಿಂದ ಗುಣದಿಂದ ಪ್ರಸಿದ್ಧಿಗೆ ಬರಬೇಕು. ಇದನ್ನೇ ಬಸವಣ್ಣನವರು:

ಆವಕುಲವಾದರೇನು ? ಶಿವಲಿಂಗವಿದ್ದವನೆ ಕುಲಜನು.
ಕುಲವನೆಸುವರೆ ಶರಣರಲ್ಲಿ ಜಾತಿಸಂಕರನಾದ ಬಳಿಕ ?
ಶಿವೇ ಜಾತ ಕುಲೇ ಧರ್ಮ । ಪೂರ್ವಜನ್ಮ ವಿವರ್ಜಿತಃ
ಉಮಾ ಮಾತಾ ರುದ್ರಃ । ಈಶ್ವರಃ ಕುಲಮೇವ ಚ
ಎಂಬುದಾಗಿ, ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ,
ಕೂಡಲ ಸಂಗಮದೇವಾ, ನಂಬುವೆ ನಿಮ್ಮ ಶರಣರನು.

ಹಾಗೆಯೇ ಮತ್ತೊಂದು ವಚದದಲ್ಲಿ :

ನೆಲನೊಂದೆ ಹೊಲೆಗೇರಿ-ಶಿವಾಲಯಕ್ಕೆ,
ಜಲವೊಂದೆ ಶೌಚಾಚಮನಕ್ಕೆ ;
ಕುಲವೊಂದೆ ತನ್ನ ತಾನರಿದವಂಗೆ :
ಫಲವೊಂದೆ ಷಡುದರುಶನ ಮುಕ್ತಿಗೆ ;
ನಿಲವೊಂದೆ, ಕೂಡಲ ಸಂಗಮದೇವಾ ನಿಮ್ಮನರಿದವಂಗೆ.

ಎಂದು ನುಡಿದು ಕುಲಭೇದವನ್ನೆಣಿಸುವ ಜನರಿಗೆ ಅವರ ಮೌಢ್ಯವನ್ನು ಎತ್ತಿ ತೋರಿಸಿದ್ದಾರೆ. ಹಲವಾರು ಜಾತಿಮತಗಳ ತೌರೂರಾದ ನಮ್ಮ ಭರತಖಂಡದಲ್ಲಿ ಎಲ್ಲರೂ ಸಮಾನ ಸ್ಥಾನವನ್ನು ಪಡೆಯುವುದಕ್ಕೆ ಅವಕಾಶವನ್ನಿತ್ತ ಬಸವಣ್ಣನವರ ಈ ಸರ್ವೋದಯದೃಷ್ಟಿ ಸರ್ವಜನಪ್ರಿಯವಾದುದರಲ್ಲಿ ಅಚ್ಚರಿಯಾದರೂ ಏನು?

ಅಂದಿನ ಧಾರ್ಮಿಕ ಮತ್ತು ಸಾಮಾಜಿಕ ಸ್ಥಿತಿ

ಹಿಂದೂಗಳಲ್ಲಿ ಉತ್ತಮವರ್ಣದವರೆಂದು ಹೇಳಿಕೊಳ್ಳುತ್ತಿದ್ದವರು ಕೀಳುವರ್ಗದವರೆಂದು ಪರಿಗಣಿಸಲ್ಪಟ್ಟಿದ್ದವರಿಗೆ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಸಮಾನ ಸ್ಥಾನಮಾನಗಳನ್ನು ಕೊಡಲಿಲ್ಲ. ಜಾತಿವಾದಿಗಳ ಪ್ರಭಾವ ಬಹಳವಾಗಿತ್ತು. ಈ ಉಚ್ಚನೀಚ ವಿಭೇದದಿಂದ ಸಮಾಜವು ಛಿದ್ರಛಿದ್ರವಾಗಿತ್ತು. ಶೂದ್ರರೂ ಅವರಿಗಿಂತ ಕಡೆಯಾದವರೂ ಉತ್ತಮವರ್ಣದವರ ಸೇವಕರಾದರು. ಸಾರ್ವಜನಿಕವಾದ ಸಾಮಾಜಿಕ ಸೌಲಭ್ಯಗಳೂ ಅವರಿಗೆ ದೊರಕದಂತಾದುವು. ಮೇಲುಕುಲದವರು ಕೀಳುಕುಲದವರನ್ನು ಹತ್ತಿರಕ್ಕೂ ಬರಗೊಡದೆ ಅಸ್ಪೃಶ್ಯರನ್ನಾಗಿ ಮಾಡಿದರು. ಹೀಗೆ ಮಾನವಕುಲದಲ್ಲೇ ಭೇದಭಾವವು ಬೆಳೆಯಿತು; ಅದು ಪರಮಾವಧಿಯನ್ನೂ ಮುಟ್ಟಿತು. ಧರ್ಮದ ಅರಮನೆಯಲ್ಲಿನ ಒಂದು ವಿಶಿಷ್ಟವರ್ಗವು ತನ್ನ ಸ್ವಾರ್ಥಕ್ಕಾಗಿ ಬಹುಜನ ಸಮಾಜವನ್ನು ವಿದ್ಯಾಬುದ್ಧಿ ಸಂಸ್ಕೃತಿಗಳಿಂದ ದೂರಮಾಡಿತು. ಹೀಗೆ ಮೇಲು ಕೀಳೆಂಬ ದುರ್ಭಾವನೆಯ ಸಂಕೋಲೆಯನ್ನು ತೊಡಿಸಿ, 'ದೇವರು ನಿಮಗೆ ದೂರ, ನಿಮಗೆ ಯಾವುದಕ್ಕೂ ಅಧಿಕಾರವಿಲ್ಲ' ಎಂದು ಅವರ ಮನವನ್ನು ಕುಗ್ಗಿಸಿ, ಆತ್ಮವಿಕಾಸಕ್ಕೆ ಅವಕಾಶವನ್ನು ಕೊಡದೆ ಅಧಃಪಾತಾಳಕ್ಕೆ ತುಳಿದಿದ್ದರು. ಬಸವಣ್ಣನವರು ಅಂತಹವರ ಬಂಧವಿಮೋಚನೆಗಾಗಿ ಒಂದು ಸಾಮಾಜಿಕ ಕ್ರಾಂತಿಯನ್ನೇ ಉಂಟುಮಾಡಿದರು. ಅದರಿಂದ ಸರ್ವರಿಗೂ ಸಮಾನಸ್ಥಾನ ಸಿಕ್ಕಿ ಸರ್ವೋದಯ ತಲೆದೋರಿತು.

ಈಶ್ವರನ ಸರ್ವವ್ಯಾಪಕತೆಯನ್ನು ಅರಿಯಬೇಕಾದರೆ ಮನಸ್ಸಿನ ಅಜ್ಞಾನವು ಅಳಿಯಬೇಕು; ದೃಢತೆ ನೆಲೆಗೊಳ್ಳಬೇಕು. ಇಲ್ಲದಿದ್ದಲ್ಲಿ 'ಎನಿಸು

ಕಾಲ ಕಲ್ಲು ನೀರೊಳಗಿರ್ದರೇನು ನೆನೆದು ಮೃದುವಾಗಬಲ್ಲುದೆ?' ಹಾಗೆಯೇ 'ಎನಿಸುಕಾಲ ನಿಮ್ಮ ಪೂಜಿಸಿ ಏವೆನಯ್ಯಾ, ಮನದಲ್ಲಿ ದೃಢವಿಲ್ಲದನ್ನಕ್ಕ? ನಿಧಾನವ ಕಾಯ್ದಿರ್ದ ಬೆಂತರನ ವಿಧಿಯಾಗುತ್ತದೆ' ಎಂದಿದ್ದಾರೆ. ತಾನು ಹಿರಿಯ ತನ್ನ ಜಾತಿ ಉತ್ತಮವಾದದ್ದು ಎಂಬ ಅಹಂಭಾವವಾಗಲಿ ವ್ಯಾಮೋಹವಾಗಲಿ ಇರಕೂಡದು. ಏಕೆಂದರೆ ಜಾತಿಮತಗಳ ಹಿರಿಮೆ ಹುಟ್ಟನಿಂದಾಗುವುದಿಲ್ಲ. ವ್ಯಕ್ತಿಯ ಆಚಾರ ಚಿತ್ತಶುದ್ಧಿಗಳಿಂದ ಉಂಟಾಗುತ್ತದೆ. ಆದುದರಿಂದ ಹೊಲೆಯನಾಗಲಿ ಹಾರುವನಾಗಲಿ ಶಿವಭಕ್ತನಾಗಿ ಪೂಜ್ಯತೆಯನ್ನೂ ಸಮಾನತೆಯನ್ನೂ ಪಡೆಯಬಹುದು. ಇಂತಹ ವರ್ಣಾತೀತವಾದ ಸಮಾಜವನ್ನು ನಿರ್ಮಿಸಿ ಸರ್ವೋದಯವನ್ನುಂಟುಮಾಡಬೇಕೆಂಬುದೇ ಬಸವಣ್ಣನವರ ಮಹದಭಿಲಾಷೆಯಾಗಿತ್ತು.

ಮಾನವನಿಗೆ ನಮ್ರತೆ, ವಿಧೇಯತೆ ಬಹು ಮುಖ್ಯವಾದುವು. ಪುಣ್ಯಪಾಪಗಳು ನಮ್ಮಿಷ್ಟಕ್ಕೇ ಸೇರಿವೆ. ಮೃದುವಾದ ನುಡಿಯೇ ಸ್ವರ್ಗ; ಕಠಿನವಾದ ನುಡಿಯೇ ನರಕ. ಇದನ್ನೇ ಬಸವಣ್ಣನವರು:

ಪುಣ್ಯಪಾಪವೆಂಬುದು ತಮ್ಮಿಷ್ಟ ಕಂಡಿರೇ:
'ಅಯ್ಯಾ' ಎಂದಡೆ ಸ್ವರ್ಗ: ಎಲವೋ ಎಂದಡೆ ನರಕ!
'ದೇವಾ, ಭಕ್ತ ಜಯಾ, ಜೀಯಾ' ಎಂಬ ನುಡಿಯೊಳಗೆ
ಕೈಲಾಸವಿದ್ದುದೇ, ಕೂಡಲಸಂಗಮದೇವಾ.

ಎಂದು ನಿರೂಪಿಸಿದ್ದಾರೆ.

ಉತ್ತಮಕುಲಸಂಜಾತನಾದರೂ ಅವನು ನೀಚವೃತ್ತಿಯಲ್ಲಿ ಪ್ರವೃತ್ತನಾಗಿದ್ದರೆ ಅವನನ್ನು ಹೀನನೆಂದೇ ಭಾವಿಸಬೇಕು. ಹೀನಕುಲದಲ್ಲಿ ಹುಟ್ಟಿದ್ದರೂ ಉತ್ತಮ ಆಚಾರವಿಚಾರಗಳಿಂದ ಕೂಡಿದ್ದರೆ ಅವನನ್ನು ಉತ್ತಮನೆಂದೇ ಭಾವಿಸಬೇಕು. ಒಟ್ಟಿನಲ್ಲಿ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವವನೇ ಕುಲಜ. ಈ ಅಭಿಪ್ರಾಯವನ್ನು ಬಸವಣ್ಣನವರು ವ್ಯಕ್ತಪಡಿಸಿರುವ ರೀತಿಯಾದರೂ ಎಂತಹುದು!

ಕೊಲುವವನೇ ಮಾದಿಗ, ಹೊಲಸು ತಿಂಬುವನೇ ಹೊಲೆಯ!
ಕುಲವೇನೋ ಆವಂದಿರ ಕುಲವೇನೋ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು.

ಬಸವಣ್ಣನವರ ಈ ಜಾತಿವಿಭೇದ ನೀತಿಯನ್ನು ಕಂಡು ಸಂಪ್ರದಾಯ ಶರಣರು ರೊಚ್ಚಿಗೆದ್ದರು. ಹೊಲೆಯರನ್ನೂ ಹಾರುವರನ್ನೂ ಶಿವಭಕ್ತರನ್ನೂ ಒಂದೇ ಮಾಡಿದ ಬಸವಣ್ಣನವರ ಸರ್ವಸಮಾನದೃಷ್ಟಿ, ಸರ್ವೋದಯದೃಷ್ಟಿ ಅವರಿಗೆ ಹಿಡಿಸಲಿಲ್ಲ. ಅದನ್ನು ಅರಿತ ಬಸವಣ್ಣನವರು ಆ ಸಂಪ್ರದಾಯ ಶರಣರನ್ನು ಕುರಿತು :

ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ,
ಮಂಡೋದರಿ ಕಪ್ಪೆಯ ಮಗಳು !
ಕುಲವನರಸದಿರಿಂ ಭೋ, ಕುಲದಿಂದ ಮುನ್ನೇನಾದಿರಿಂ ಭೋ ?
ಸಾಕ್ಷಾತ್ ಆಗಸ್ತ್ಯ ಕಬ್ಬಿಲ, ದೂರ್ವಾಸ ಮುಚ್ಚಿಗ,
ಕಶ್ಯಪ ಕಮ್ಮಾರ, ಕೌಂಡಿಲ್ಯನೆಂಬ ಋಷಿ
ಮೂರು ಭುವನವರಿಯೆ ನಾವಿದ ಕಾಣಿಂ ಭೋ ?
ನಮ್ಮ ಕೂಡಲಸಂಗನ ವಚನವಿಂತೆಂದುದು ;
'ಶ್ವಪಚೋಪಿ........' ಯಾದರೇನು, ಶಿವಭಕ್ತನೇ ಕುಲಜನು.

ಎಂದು ಮಾರ್ಮಿಕವಾಗಿ ನುಡಿದು, ಹಲವಾರು ದೃಷ್ಟಾಂತಗಳನ್ನು ಕೊಟ್ಟು ಆ ಸಂಪ್ರದಾಯ ಶರಣರನ್ನು ತುಟಿಮಿಸುಕದಂತೆ ಮಾಡಿದರು.

ಆದುದರಿಂದಲೇ ಜಾತಿಮತಗಳ ಬಂಧನವಿಲ್ಲದ ವೀರಶೈವಮತವನ್ನು ಅನೇಕರು ಸೇರಿದರು. ಅಸ್ಪೃಶ್ಯರೂ ಲಿಂಗಧಾರಿಗಳಾಗಿ ಪುನೀತರಾದರು. ಅವರಲ್ಲಿ ಮಾದರ ಚೆನ್ನಯ್ಯ, ಡೋಹರ ಕಕ್ಕಯ್ಯ, ಹರಳಯ್ಯ, ಶಿವ ನಾಗಮಯ್ಯ, ಮಹಾಕಾಳಯ್ಯ, ದುಂಡಯ್ಯ, ಮರುಳಸಿದ್ಧ, ಕಲ್ಯಾಣಮ್ಮ ಗುಡ್ಡಮ್ಮ ಮುಂತಾದವರು ಹೆಸರಿಸತಕ್ಕವರು. ಅಸ್ಪೃಶ್ಯರಿಗೆ ಸಮಾಜದಲ್ಲಿ ಸಮಾನಸ್ಥಾನವನ್ನು ದೊರಕಿಸಿದ್ದೇ ಅಲ್ಲದೆ ಬಂಧುತ್ವವನ್ನು ಬಸವಣ್ಣನವರು ಏರ್ಪಡಿಸಿಕೊಟ್ಟರು. ಈ ರೀತಿ ಅಂತರ್ಬಾಂಧವ್ಯವೇರ್ಪಟ್ಟದ್ದು ಮತ್ತಾವ ಧರ್ಮದಲ್ಲೂ ಕಂಡುಬರುವಂತಿಲ್ಲ. ಇದರಿಂದ ಹಿಂದೂಸಮಾಜದಲ್ಲಿನ ಒಂದು ದೊಡ್ಡ ಕಳಂಕವನ್ನೇ ತೊಡೆದುಹಾಕಿದಂತಾಯಿತು. ಈಗಲೂ ಸುಸಂಸ್ಕೃತ ಭಾರತೀಯರನ್ನು ಬಾಧಿಸುತ್ತಿರುವ ಈ ಜಟಿಲಸಮಸ್ಯೆಗೆ ಎಂಟು ನೂರುವರ್ಷಗಳ ಹಿಂದೆಯೇ ಬಸವಣ್ಣನವರು ಪರಿಹಾರವನ್ನೊದಗಿಸಿದ್ದಾರೆ!

ಮತಪಂಥಗಳಾದಿಯಾದ ವರ್ಣಭೇದಗಳನ್ನು ದೂರಮಾಡಿದಂತೆಯೇ ಕಾಯಕಗಳಲ್ಲಿ ಉಚ್ಚನೀಚ ಭಾವನೆಗಳನ್ನೂ ಬಸವಣ್ಣನವರು ದೂರಮಾಡಿ

ದರು. ಅವರ ಕಾಲಕ್ಕೆ ಮುಂಚೆ ಕಸಬುಗಳು ಜಾತಿಗೋತ್ರಗಳನ್ನೂ ವಂಶಪಾರಂಪರ್ಯವನ್ನೂ ಅವಲಂಬಿಸಿದ್ದುವು. ವಿಶಿಷ್ಟವಾದ ಕಸಬುಗಳು ಕೆಲವು ವರ್ಣದವರಿಗೆ ಮಾತ್ರವೇ ಮೀಸಲಾಗಿದ್ದುವು. ಅದರಿಂದ ಸಮಾಜದ ಆವಶ್ಯಕತೆಗಳಿಗೆ ತಕ್ಕಂತೆ ಉದ್ಯೋಗಗಳು ಬೆಳೆಯಲಾಗಲಿಲ್ಲ. ಬಸವಣ್ಣನವರು ಈ ಅಸಮಂಜಸತೆಯನ್ನು ಹೋಗಲಾಡಿಸುವುದಕ್ಕಾಗಿ ಬಹಳ ಪ್ರಯತ್ನಪಟ್ಟರು. ಸಮಾಜದಲ್ಲಿ ಎಲ್ಲ ಕಾಯಕದವರಿಗೂ ಸಮಾನಸ್ಥಾನವನ್ನು ಕಲ್ಪಿಸಿದರು. ಮನುಷ್ಯನು ಯಾವ ಕಾಯಕವನ್ನಾದರೂ ಕೈಗೊಳ್ಳಬಹುದು. ಆದರೆ ಪ್ರತಿಯೊಬ್ಬರೂ ಸ್ವತಃ ದುಡಿದು ಸ್ವಾವಲಂಬಿಗಳಾಗಬೇಕು-ಇದೇ ಉತ್ತಮಮಾರ್ಗವೆಂದು ಬಸವಣ್ಣನವರು ಬೋಧಿಸಿದರು. ಗುರುವಾದವನೂ ಸಹ ಯಾವುದಾದರೊಂದು ಕಾಯಕವನ್ನು ಕೈಗೊಳ್ಳಬೇಕು. ಏಕೆಂದರೆ ಕಾಯಕವೇ ಕೈಲಾಸ. ಕಸಬುಗಳು ಜಾತಿಮತಗಳನ್ನು ಅವಲಂಬಿಸಿರಬೇಕಾಗಿಲ್ಲ. ಅವು ಅವರವರ ಅಭಿರುಚಿಗೆ ತಕ್ಕಂತಿರಬಹುದು. ಯಾರು ಯಾವ ಕಸಬನ್ನಾದರೂ ಮಾಡಬಹುದು. ಬಸವಣ್ಣನವರು ಈ ರೀತಿ ಸಾರಿದ್ದರಿಂದ ಜನರಲ್ಲಿ ವೃತ್ತಿಗೌರವವು ಬೆಳೆಯಿತು. ಸಮಾಜದ ಆವಶ್ಯಕತೆಗಳಿಗೆ ತಕ್ಕಂತೆ ಉದ್ಯೋಗಗಳು ಬೆಳೆಯಲಾರಂಭಿಸಿದವು. ಜನರಲ್ಲಿನ ಸ್ವಾವಲಂಬನ ದೃಷ್ಟಿಯೂ ಶಕ್ತಿಯೂ ವೃದ್ಧಿಯಾಯಿತು. ಈ ಧಾರ್ಮಿಕ ಹಿನ್ನೆಲೆಯ ಪರಿಣಾಮವಾಗಿ ಆರ್ಥಿಕ ಸಮಸ್ಯೆಯನ್ನು ಬಿಡಿಸಿದಂತಾಯಿತು. ಅನುಭವಮಂಟಪದಲ್ಲಿ ವಿವಿಧವೃತ್ತಿಯ, ವಿವಿಧಜಾತಿಯವರಿದ್ದುದೇ ಇದಕ್ಕೆ ಹಿರಿಯ ನಿದರ್ಶನವಾಗಿದೆ. ವಂಶಪಾರಂಪರ್ಯವಾಗಿ ಬಂದ ಕಸಬುಗಳನ್ನೇ ಮಾಡಬೇಕೆಂಬ ಸಂಕುಚಿತದೃಷ್ಟಿ ಸಡಿಲವಾಯಿತು. ಎಲ್ಲರೂ ತಮ್ಮ ಮನೋಧರ್ಮ ಸಾಮರ್ಥ್ಯಗಳಿಗನುಸಾರವಾಗಿ ಕಾಯಕಗಳನ್ನು ಕೈಗೊಳ್ಳುತ್ತಿದ್ದುದರಿಂದ ಭಾರತೀಯರ ಉದ್ಯೋಗಾವಲಂಬನೆಯನ್ನು ವಿಶಾಲಗೊಳಿಸಿದಂತಾಯಿತು. ಸಮಾಜದ ಸಂಪತ್ತು ಸರ್ವತೋಮುಖವಾಗಿ ಬೆಳೆಯಲವಕಾಶವಾಯಿತು. ಈ ವೃತ್ತಿಗೌರವದಿಂದ ಜನರಲ್ಲಿ ಸ್ನೇಹ ಸೌಹಾರ್ದಭಾವನೆಗಳು ತಲೆದೋರಿ ಐಕಮತ್ಯಕ್ಕೂ ಸಮಾಜಸಂಘಟನೆಗೂ ನೆರವಾಯಿತು.

ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳು

ಬಸವಣ್ಣನವರು ಮೇಲುಕೀಳೆಂಬ ಭಾವನೆಯನ್ನು ಕಿತ್ತೊಗೆದಂತೆಯೇ ಸ್ತ್ರೀಯರ ವಿಚಾರದಲ್ಲಿ ಅಂದಿನ ಮಂದಿಯಲ್ಲಿದ್ದ ಭಾವನೆಗಳನ್ನು ಬಹು ಮಟ್ಟಿಗೆ ಬದಲಾಯಿಸಿದರು. ವೈದಿಕಧರ್ಮದಲ್ಲಿ ಸ್ತ್ರೀಯರಿಗೆ ಸಮಾನ ಸ್ಥಾನ ವಿರಲಿಲ್ಲ. ಜೈನಧರ್ಮವಂತೂ ಸ್ತ್ರೀಯರಿಗೆ ಮೋಕ್ಷವೇ ಇಲ್ಲವೆಂದು ಸಾರಿ ಬಿಟ್ಟಿದ್ದಿತು. ಸ್ತ್ರೀಯು ವಿಚಾರಹೀನಳೆಂದೂ, ಸದಾ ಯಾರೊಬ್ಬರ ಆಶ್ರಯ ವನ್ನು ಅವಲಂಬಿಸಿರತಕ್ಕವಳೆಂದೂ, ಅಬಲೆಯೆಂದೂ ಕಡೆಗಣಿಸಿದ್ದರು. ಸ್ತ್ರೀಯರನ್ನು ಈ ರೀತಿ ತೃಣೀಕರಿಸಿದ್ದುದು ಬಸವಣ್ಣನವರಿಗೆ ಸರಿಗಾಣಲಿಲ್ಲ. ಸಮಾಜದಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನಸ್ಥಾನವಿರಬೇಕಾದುದು ಅತ್ಯಾ ವಶ್ಯಕ. ಮಹಿಳೆಯು ಸಮಾಜದಲ್ಲಿ ತಾಯಿಯಂತೆ, ಸತಿಯಂತೆ, ತಂಗಿ ಯಂತೆ ನಿರ್ವಹಿಸುವ ಪಾತ್ರ ಮಹತ್ತರವಾದುದು. ಏಕೆಂದರೆ ಮಹಿಳೆಯೇ ಸಮಾಜದ ಜೀವಪೋಷಕಳು ಮತ್ತು ಹಿತರಕ್ಷಕಳು. ಸಾಮಾನ್ಯವಾಗಿ ಸ್ತ್ರೀಯು ಶಾಂತಿ ತಾಳ್ಮೆಗಳ ಪ್ರತೀಕ. ಪ್ರೇಮತ್ಯಾಗಗಳು ಆಕೆಯ ಸಹಜ ಗುಣಗಳು. ಆದುದರಿಂದಲೇ ಸಮಾಜದಲ್ಲಿ ಮಹಿಳೆಯರ ಸ್ಥಾನ ಪುರುಷರ ಸ್ಥಾನಕ್ಕಿಂತ ಎಂದಿಗೂ ಕೀಳಲ್ಲ. ಸ್ತ್ರೀಯರ ಸ್ಥಾನಮಾನಗಳನ್ನು ಸರಿಯಾಗಿ ಅರಿತಿದ್ದ ಬಸವಣ್ಣನವರು ಸಮಾಜದಲ್ಲಿಯೂ ಅವರಿಗೆ ಸಮಾನ ಸ್ಥಾನ ಮಾನಗಳನ್ನು ದೊರಕಿಸಲು ಬಹಳವಾಗಿ ಹೋರಾಡಿದರು. ಪುರುಷರಂ ತೆಯೇ ಅವರಿಗೂ ಸ್ವಾತಂತ್ರ್ಯವನ್ನು ದೊರಕಿಸಿ, ಆಧ್ಯಾತ್ಮಿಕಸಾಧನೆ ಯಲ್ಲಿಯೂ ಸಮಾನ ಸ್ಥಾನವನ್ನು ಕಲ್ಪಿಸಿಕೊಟ್ಟರು. ಸುಭದ್ರವಾದ ಸಮಾಜ ನಿರ್ಮಾಣವಾಗಬೇಕಾದರೆ ಸ್ತ್ರೀಯರ ಪ್ರಾಶಸ್ತ್ಯವೆಷ್ಟರಮಟ್ಟಿಗಿರಬೇಕೆಂಬು ದನ್ನು ಅರಿತಿದ್ದ ಬಸವಣ್ಣನವರು ಅವರಿಗೂ ಉಚಿತವಾದ ಸ್ಥಾನವನ್ನು ಕೊ ಟ್ಟು ಗೌರವಿಸಿದರು. ಅನುಭವ ಮಂಟಪದಲ್ಲಿ ಪುರುಷರಂತೆಯೇ ಸ್ತ್ರೀಯ ರಿಗೂ ಸಮಾನ ಪದವಿಯನ್ನು ಕೊಟ್ಟಿದ್ದುದೇ ಇವಕ್ಕೆ ನಿದರ್ಶನವಾಗಿದೆ.

ಬಸವಣ್ಣನವರ ಕಾಲಕ್ಕಿಂತ ಮುಂಚೆ ಸಾಮೂಹಿಕವಾಗಿ ಮಹಿಳೆ ಯರಿಗೆ ಪುರುಷರೊಡನೆ ಸಮಾನವಾದ ಸ್ಥಾನವಿರಲಿಲ್ಲ. ಗಾರ್ಗಿ, ಮೈತ್ರೇಯಿ, ಮೀರಾ, ರೆಬಿಯಾ ಮುಂತಾದ ಕೆಲವು ಸ್ತ್ರೀಯರು ಅತ್ಯುನ್ನತ ಸ್ಥಾನವನ್ನು ಪಡೆದಿದ್ದರೂ ಸಾಮೂಹಿಕವಾಗಿ ಸ್ತ್ರೀಯರಿಗೆ ಸರಿಯಾದ ಗೌರವವು ರೂಪು

ಗೊಂಡಿರಲಿಲ್ಲ. ಮಹಿಳೆಯರು ಸಂಸಾರನಿರ್ವಹಣೆಗೆ ಮಾತ್ರ ಯೋಗ್ಯರೆಂಬುದನ್ನು ಬಸವಣ್ಣನವರೂ ಅವರ ಅನುಯಾಯಿಗಳೂ ಅಲ್ಲಗಳೆದರು. ಏಕೆಂದರೆ ದೈವಸೃಷ್ಟಿಯಲ್ಲಿ ಗುಣಕ್ಕೆ ಸ್ತ್ರೀಪುರುಷರೆಂಬ ತಾರತಮ್ಯವಿಲ್ಲ. ಆದುದರಿಂದಲೆ ಸತಿಪತಿಗಳಿಬ್ಬರೂ ಅನ್ಯೋನ್ಯವಾಗಿ ಸಂಸಾರನಿರ್ವಹಣೆಯನ್ನೂ ಧರ್ಮಕಾರ್ಯಗಳನ್ನೂ ಮಾಡಬೇಕೆಂಬುದು ಅವರ ಅಭಿಮತವಾಗಿತ್ತು.

ಬಸವಣ್ಣನವರ ಪ್ರಭಾವದಿಂದ ಪರಿಪ್ಲುತಗೊಂಡ ಮಹದೇವಿಯಕ್ಕ ತನಗೆ ಅಹಿತವಾದ ಸಂಸಾರವನ್ನು ತೊರೆದು ಪಾರಮಾರ್ಥಿಕ ಸಾಧನೆಯಲ್ಲಿ ನಿರತಳಾದಳು. ನಿಷ್ಠೆ ಮತ್ತು ಆತ್ಮಶುದ್ಧಿಯಿಂದ ತನ್ನ ಸಾಧನೆಯಲ್ಲಿ ಜಯಶೀಲಳಾಗಿ ಮಹಾಶರಣೆಯೆನಿಸಿಕೊಂಡಳು. ತನಗೆ ಮಾರ್ಗತೋರಿದ ಬಸವಣ್ಣನವರನ್ನು ಅತ್ಯಂತ ಕೃತಜ್ಞತೆಯಿಂದ:

> ಕಾಮನ ಗೆಲಿದೆನು ಬಸವಾ, ನಿಮ್ಮ ದಯದಿಂದ ;
> ಸೋಮಧರನ ಹಿಡಿತಪ್ಪೆನು ಬಸವಾ, ನಿಮ್ಮ ಕೃಪೆಯಿಂದ ;
> ನಾಮದಲ್ಲಿ ಹೆಂಗುಸೆಂಬ ಹೆಸರಾದರೇನು ? ಭಾವಿಸಲು ಗಂಡುರೂಪು.
> ಅತಿಕಾಮಿ ಚೆನ್ನಮಲ್ಲಿಕಾರ್ಜುನಯ್ಯಂಗೆ ತೊಡರನಿಕ್ಕಿ,
> ಎರಡರಿಯದೆ ಕೂಡಿದೆನು ಬಸವಾ, ನಿಮ್ಮ ಕೃಪೆಯಿಂದ.

ಹೀಗೆ ಸ್ಮರಿಸಿಕೊಂಡಿದ್ದಾಳೆ. ಬಸವಣ್ಣನವರು ಮಹಿಳೆಯರಿಗೆ ಸ್ವಾತಂತ್ರ್ಯವನ್ನೂ ಪುರುಷರೊಡನೆ ಸಮಾನಗೌರವವನ್ನೂ ಕಲ್ಪಿಸಿಕೊಟ್ಟದ್ದರಿಂದ ಸ್ತ್ರೀಯರ ಅಭ್ಯುದಯಕ್ಕೆ ಅವಕಾಶವುಂಟಾಯಿತು. ಅವರಲ್ಲಿ ಅಕ್ಕಮಹಾದೇವಿ, ನೀಲಮ್ಮ, ರೆಮ್ಮವ್ವೆ, ಬಿಜ್ಜವ್ವೆ ಮೊದಲಾದವರು ಶರಣೆಯರಾದರು; ಜ್ಞಾನಿಗಳಾದರು. ತಮ್ಮ ಅನುಭವಾಮೃತವನ್ನು ವಚನರೂಪದಲ್ಲಿ ಹರಿಯಬಿಟ್ಟರು. ಕನ್ನಡ ಸಾಹಿತ್ಯದಲ್ಲಿ ಕವಯಿತ್ರಿಯರು ಅಪೂರ್ವವಾಗಿದ್ದ ಆ ಸಂಧಿಕಾಲದಲ್ಲಿ ಕೆಲವಾರು ಸ್ತ್ರೀಯರು ವಚನಗಳನ್ನು ಬರೆದರು. ಅವರಲ್ಲಿ ಅಕ್ಕಮಹಾದೇವಿ, ಮುಕ್ತಾಯಕ್ಕ ಮೊದಲಾದವರ ವಚನಗಳು ಅತ್ಯುನ್ನತ ಮಟ್ಟಕ್ಕೆ ಸೇರಿದವುಗಳಾಗಿವೆ. ಹೀಗೆ ಬಸವಣ್ಣನವರು ಒಂದು ಸ್ವತಂತ್ರ ಆದರ್ಶ ಸಮಾಜದ ರಚನೆಗೆ ಕಾರಣರಾದರು.

ಬಸವಣ್ಣನವರು ಜನತೆಯಿಂದ ಬಹಳ ಎತ್ತರದಲ್ಲಿ ನಿಂತು ಅವರನ್ನು ಕಡೆಗಣ್ಣಿನಿಂದ ನೋಡಲಿಲ್ಲ. ಸರ್ವೋದಯವೇ ಮುಖ್ಯಗುರಿಯಾಗಿದ್ದ

ಅವರಿಗೆ ಅಂತಹ 'ಆಡಂಬರದ ಮಹಾಪದವಿ' ಬೇಕಾಗಿರಲಿಲ್ಲ. 'ಎನಗಿಂತ ಕಿರಿಯರಿಲ್ಲ; ಶಿವಭಕ್ತರಿಗಿಂತ ಹಿರಿಯರಿಲ್ಲ' ಎಂದು ಸಾರಿದ ಬಸವಣ್ಣನವರು ಆಧ್ಯಾತ್ಮಿಕ ಸಾಧನೆಯಿಂದ ಪಡೆದ ತುಷ್ಟಿಪುಷ್ಟಿಗಳನ್ನು ಸಮಾಜದಲ್ಲಿನ ಪ್ರತಿಯೊಬ್ಬರಿಗೂ ದೊರೆಯುವಂತೆ ಮಾಡಲು ಬಹಳವಾಗಿ ಪ್ರಯತ್ನಿಸಿದರು. ತಮ್ಮ ಬಾಳು ಹಸನಾದಂತೆಯೇ ಇತರರ ಬಾಳೂ ಹಸನಾಗಬೇಕು ಎಂಬುದೇ ಅವರ ಮುಖ್ಯಧ್ಯೇಯವಾಗಿದ್ದಿತು. ಸಮಾಜದಲ್ಲಿ ಐಶ್ವರ್ಯ ಅಹಂಕಾರ ಮದಗಳಿಂದ ಬೀಗಿಹೋಗಿದ್ದವರನ್ನು ಕಂಡು ಮರುಗಿದರು. ಅವರ ಎಗ್ಗತನಕ್ಕಾಗಿ ಕನಿಕರಗೊಂಡು :

ಆನೆಯನೇರಿಕೊಂಡು ಹೋದಿರೆ ನೀವು,
ಕುದುರೆಯನೇರಿಕೊಂಡು ಹೋದಿರೆ ನೀವು,
ಕುಂಕುಮ ಕಸ್ತೂರಿಯ ಪೂಸಿಕೊಂಡು ಹೋದಿರೆ, ಅಣ್ಣಾ !
ಸತ್ಯದ ನಿಲವನರಿಯದೆ ಹೋದಿರಲ್ಲಾ !
ಸದ್ಗುಣವೆಂಬ ಫಲವ ಬಿತ್ತಿ ಬೆಳೆಯದೆ ಹೋದಿರಲ್ಲಾ !
ಅಹಂಕಾರವೆಂಬ ಸದ ಮದಗಜವೇರಿ
ವಿಧಿಗೆ ಗುರಿಯಾಗಿ ನೀವು ಹೋದಿರಲ್ಲಾ !
ನಮ್ಮ ಕೂಡಲ ಸಂಗಮದೇವರನರಿಯದೆ
ನರಕಕ್ಕೆ ಭಾಜನವಾದಿರಲ್ಲಾ !

ಎಂದು ನಮ್ರವಾಗಿ ನುಡಿದು ಅವರ ರೀತಿನೀತಿಗಳನ್ನು ತಿದ್ದುವುದಕ್ಕೆ ಪ್ರಯತ್ನಿಸಿದರು. ವ್ಯರ್ಥವಾಗಿ ವಿಧಿಗೆ ಗುರಿಯಾಗುವುದನ್ನೂ, ನರಕಕ್ಕೆ ಭಾಜನವಾಗುವುದನ್ನೂ ತಪ್ಪಿಸಿಕೊಂಡು ಸತ್ಯದ ನಿಲವನ್ನರಿಯಬೇಕೆಂದು ಅವರಿಗೆ ಬೋಧಿಸಿದರು.

ಹಾಗೆಯೇ ಪರನಿಂದೆ ಮಾಡುವವರನ್ನೂ ಎಚ್ಚರಿಸಿದ್ದಾರೆ. ಏಕೆಂದರೆ ಪರನಿಂದೆ ಆವಾಗಲೂ ಪಾಪಕರ. ಮನುಷ್ಯರು ಮೊದಲು ತಮ್ಮ ತಪ್ಪುಗಳನ್ನು, ಡೊಂಕನ್ನು ತಿದ್ದಿಕೊಳ್ಳಬೇಕು. ಆಮೇಲೆ ಇತರರ ಡೊಂಕನ್ನು ಸರಿಪಡಿಸುವುದಕ್ಕೆ ಪ್ರಯತ್ನಿಸಬೇಕು. ಅಂತೆಯೇ ಮೊದಲು ತನ್ನ ಮನೋವಿಕಾರಗಳನ್ನು ಗೆಲ್ಲಬೇಕು. ಆಮೇಲೆ ಇತರರಿಗೆ ಬೋಧಿಸಬೇಕು. ಹಾಗಲ್ಲದೆ ಮತ್ತೊಬ್ಬರ ಡೊಂಕನ್ನು ತಿದ್ದುವುದಕ್ಕೆ ಹೋಗುವವರನ್ನು ಕಂಡ ಬಸವಣ್ಣನವರು ಹೀಗೆ ಹೇಳಿದ್ದಾರೆ :

ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ;
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ.
ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ.

ನಿತ್ಯವೂ ನೂರಾರು ತಪ್ಪುಗಳನ್ನು ಮಾಡುವ ಮಾನವ ಇತರರಿಗೆ ಧರ್ಮ ಬೋಧನೆ ಮಾಡುವುದಕ್ಕೆ ಮೊದಲು ತನ್ನ ಡೊಂಕನ್ನು ಸರಿಪಡಿಸಿಕೊಳ್ಳ ಬೇಕು.

ಪ್ರಪಂಚದಲ್ಲಿ ಹುಟ್ಟಿದ ಮಾನವರಿಗೆ ಸುಖದುಃಖಗಳು ಒದಗುತ್ತವೆ. ಸುಖದಲ್ಲಿ ಹಿಗ್ಗದೆ ದುಃಖದಲ್ಲಿ ಕುಗ್ಗದೆ ಸಮಾಧಾನಚಿತ್ತದಿಂದಿರುವುದನ್ನು ಮನುಷ್ಯರು ಕಲಿಯಬೇಕು. ಎಂತಹ ಕಷ್ಟನಷ್ಟಗಳು ಸಂಭವಿಸಿದಾಗ್ಯೂ ನಿರುತ್ಸಾಹಿಗಳಾಗದೆ ಅವನ್ನು ಧೈರ್ಯವಾಗಿ ಎದುರಿಸಬೇಕೆಂಬುದನ್ನು ಬಸವಣ್ಣನವರು :

ಹುಟ್ಟಿದ ಬಳಿಕ ಕೊಟ್ಟ ಭೋಗಂಗಳ ತಪ್ಪಿಸಿಹೆನೆಂದರೆ
ತಪ್ಪದು ನೋಡಯ್ಯಾ.
'ಎನಗಿನ್ನೆಂತೊ, ಎನಗಿನ್ನೆಂತೊ, ಎನಗಿನ್ನೆಂತೋ ' ಎಂದೆನಬೇಡ.
'ನಾ ಭೋಕ್ತಾ ಕ್ರಿಯತೇ ಕರ್ಮ' ಎಂಬ ಶ್ರುತಿ ತಪ್ಪದು,
ಕೂಡಲ ಸಂಗಮದೇವಾ.

ಹೀಗೆ ಸ್ಪಷ್ಟಪಡಿಸಿದ್ದಾರೆ. ಮನುಷ್ಯನು ಸಾವುನೋವುಗಳಿಗಾಗಲಿ ದಾರಿದ್ರ್ಯಕ್ಕಾಗಲಿ ಲೋಕದ ವಿಗುರ್ಬಣೆಗಾಗಲಿ ಅಂಜಬೇಕಾಗಿಲ್ಲ. ಏಕೆಂದರೆ ಆಯುಷ್ಯ ತೀರದ ಹೊರತು ಮರಣವಿಲ್ಲ. ಈ ಅಭಿಪ್ರಾಯವನ್ನು ಕುರಿತು :

ಆಯುಷ್ಯ ತೀರಿದಲ್ಲದೆ ಮರಣವಿಲ್ಲ;
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ.
ಅಂಜಲದೇಕೋ ಲೋಕದ ವಿಗುರ್ಬಣೆಗೆ,
ಅಂಜಲದೇಕೋ ಕೂಡಲ ಸಂಗಮದೇವಾ, ನಿಮ್ಮಾಳಾಗಿ ?

ಎಂಬುದಾಗಿ ಹೇಳಿದ್ದಾರೆ. ಕೂಡಲ ಸಂಗಮದೇವನ ಭಕ್ತನಾದಮೇಲೆ, ಭೃತ್ಯನಾದಮೇಲೆ, ಯಾವುದಕ್ಕೂ ಅಂಜಬೇಕಾಗಿಲ್ಲ; ಅಳುಕಬೇಕಾಗಿಲ್ಲ.

ಬಸವಣ್ಣನವರೂ ಇತರ ವಿಶ್ವಾಚಾರ್ಯರಂತೆ 'ದೇವನೊಬ್ಬ ನಾಮ ಹಲವು' ಎಂಬ ತತ್ತ್ವವನ್ನು ಒಪ್ಪಿದರು. ದೇವರನ್ನು ಯಾರು ಯಾವ ಹೆಸರಿನಿಂದ ಬೇಕಾದರೂ ಪೂಜಿಸಬಹುದು. ಆದರೆ ಮೂಢಭಕ್ತಿಯಿಂದ ಜನರು ಕಂಡಕಂಡದ್ದನ್ನೆಲ್ಲ ಪೂಜಿಸುವುದನ್ನೂ, ಬಹಿರಾಡಂಬರವನ್ನೂ ಬಸವಣ್ಣನವರು ಒಪ್ಪಲಿಲ್ಲ. ಹಾಗೆಯೇ ಮಾನವರು ತಾವು ಮಾಡಿದ ಪಾಪ ಪರಿಹಾರಕ್ಕಾಗಿ ತೀರ್ಥಯಾತ್ರೆ ಕೈಗೊಳ್ಳುವುದನ್ನು ಅವರು ಒಪ್ಪದೆ ಖಂಡಿಸಿದರು. ಕಂಡ ಕಂಡ ದೇವರಿಗೆಲ್ಲಾ ಕೈಮುಗಿಯುತ್ತಿದ್ದವರನ್ನು ಕಂಡು ತುಸು ನಿಷ್ಠುರವಾಗಿಯೇ ನುಡಿದಿದ್ದಾರೆ:

ದೇವನೊಬ್ಬ, ನಾಮ ಹಲವು;
ಪರಮ ಪತಿವ್ರತೆಗೆ ಗಂಡನೊಬ್ಬ;
ಮತ್ತೊಂದಕ್ಕೆರಗಿದರೆ ಕಿವಿ–ಮೂಗ ಕೊಯ್ವನು!
ಹಲವು ದೈವದ ಎಂಜಲ ತಿಂಬವರನೇನೆಂಬೆ
ಕೂಡಲ ಸಂಗಮದೇವಾ?

ಹಾಗೆಯೇ ಮತ್ತೊಂದು ವಚನದಲ್ಲಿ :

ನಂಬಿದ ಹೆಂಡತಿಗೆ ಗಂಡನೊಬ್ಬ, ಕಾಣಿರೋ:
ನಂಬಬಲ್ಲ ಭಕ್ತರಿಗೆ ದೇವನೊಬ್ಬ, ಕಾಣಿರೋ!
ಬೇಡ ಬೇಡ! ಅನ್ಯದೈವದ ಸಂಗ ಹೊಲ್ಲ!
ಕೂಡಲ ಸಂಗಮದೇವ ಕಂಡರೆ ಮೂಗ ಕೊಯ್ವ, ಕಾಣಿರೋ!

ಹೀಗೆ ಹೇಳಿದ್ದಾರೆ. ತಾವು ನಂಬಿದ ದೈವದಲ್ಲಿ ತಮಗಿದ್ದ ಅಚಲಭಕ್ತಿ, ನಿಷ್ಠೆ, ಸಂಯಮಗಳನ್ನು ಸ್ಪಷ್ಟಪಡಿಸಿದ್ದಾರೆ. ಅಂತೆಯೇ ಇತರರೂ ಕೂಡ ತಾವು ನಂಬಿದ ದೇವರಲ್ಲಿ ದೃಢಭಕ್ತಿಯನ್ನು ಇಟ್ಟಿರಬೇಕೆಂದು ತಿಳಿಸಿದ್ದಾರೆ. ತಮ್ಮ ದಿಟ್ಟನುಡಿಗಳಿಂದ ಜನರಲ್ಲಿ ಧೈರ್ಯ ತಿಳಿವಳಿಕೆ ನಂಬಿಕೆಗಳನ್ನು ತುಂಬಿದರು. ಆದರಿಂದ ಸ್ಫೂರ್ತಿಗೊಂಡ ಅನೇಕರು ಮೂಢನಂಬಿಕೆಗಳಿಂದಲೂ ಕರ್ಮಪಾಶಗಳಿಂದಲೂ ಬಿಡುಗಡೆಯಾದರು. ಹೀಗೆ ಬಿಡುಗಡೆ ಹೊಂದಿದವರು ಇತರರನ್ನೂ ಸನ್ಮಾರ್ಗಕ್ಕೆ ಒಯ್ಯಲು ಕಾರಣರಾದರು.

ಕನ್ನಡ ಸಾಹಿತ್ಯವೂ—ಬಸವಣ್ಣನವರೂ

ಬಸವಣ್ಣನವರ ಕಾಲದಲ್ಲಿ ಕನ್ನಡ ಸಾಹಿತ್ಯವು ಮಹತ್ತರವಾದ ಪ್ರಗತಿಯನ್ನು ಸಾಧಿಸಿತು. ಆ ಕಾಲಕ್ಕೆ ಮೊದಲು ಅದು ಬಹುಮಟ್ಟಿಗೆ ಸಂಸ್ಕೃತ ಸಾಹಿತ್ಯದ ಪಡಿಯಚ್ಚಿನಂತೆ ಇದ್ದಿತು. ಅಂದಿನ ಕನ್ನಡ ಸಾಹಿತ್ಯವು ಸಂಸ್ಕೃತಮಯವಾಗಿ ಪ್ರೌಢವಾಗಿ ರಾಜಾಸ್ಥಾನಕ್ಕೂ ಪಂಡಿತ ಮಂಡಲಿಗೂ ಮೀಸಲಾಗಿತ್ತು. ಜನಸಾಮಾನ್ಯದ ನಿಲುವಿಗೆ ಅದು ಎಟುಕುತ್ತಿರಲಿಲ್ಲ. ಸಂಸ್ಕೃತ ಸಾಹಿತ್ಯದ ಛಾಯೆಯಲ್ಲಿಯೇ ಕನ್ನಡ ಸಾಹಿತ್ಯವೂ ಬಾಳುತ್ತಿತ್ತು ಎಂದರೂ ಬಹುಶಃ ತಪ್ಪಾಗಲಾರದು. ಅಂದಿನ ಕವಿಗಳು ಚಂಪೂಶೈಲಿಯಲ್ಲಿ ಸಂಸ್ಕೃತ ಸಾಹಿತ್ಯದ ಸಂಪ್ರದಾಯಕ್ಕನುಸಾರವಾಗಿಯೇ ಕಾವ್ಯಗಳನ್ನು ರಚಿಸುತ್ತಿದ್ದರು. ಅದರಿಂದ ಅವರು ರಾಜಾಸ್ಥಾನದಲ್ಲಿ ಪಂಡಿತ ಮಂಡಲಿಯ ಮುಂದೆ ಗೌರವವನ್ನೇನೋ ಪಡೆದರು. ಆದರೆ ಜನಸಾಮಾನ್ಯಕ್ಕೆ ಆ ಪ್ರೌಢ ಕಾವ್ಯಗಳಿಂದ ಏನೂ ಪ್ರಯೋಜನವಾಗಲಿಲ್ಲ. ಇಂತಹ ಸಂದಿಗ್ಧ ಸಮಯದಲ್ಲಿ ಬಸವಣ್ಣನವರೇ ಮೊದಲಾದ ವಚನಕಾರರು ಹಿಂದಿನ ಸಂಪ್ರದಾಯಗಳನ್ನು ಬದಿಗೊತ್ತಿ ಅಚ್ಚಗನ್ನಡದಲ್ಲಿ ಸಾಮಾನ್ಯಜನಕ್ಕೂ ಅರ್ಥವಾಗುವ ಧಾಟಿಯಲ್ಲಿ ತಮ್ಮ ವಚನಗಳನ್ನೂ ಕಾವ್ಯಗಳನ್ನೂ ರಚಿಸಿದರು.

ಅರಸೊತ್ತಿಗೆಗೇ ಮೀಸಲಾಗಿದ್ದ ಕನ್ನಡ ಸಾಹಿತ್ಯವನ್ನು ಜನಸಾಮಾನ್ಯದ ನಿಲುವಿಗೆ ಎಟಕುವಂತೆ ಮಾಡಲು ಬಸವಣ್ಣನವರು ಒಂದು ಕ್ರಾಂತಿಯನ್ನೇ ಎಬ್ಬಿಸಬೇಕಾಯಿತು. ಆದ್ದರಿಂದಲೇ ಬಸವಣ್ಣ, ಹರಿಹರ, ರಾಘವಾಂಕರು ಕ್ರಾಂತಿಕಾರಕ ಕವಿಗಳೆಂದೇ ಹೆಸರಾಂತಿದ್ದಾರೆ. ಧರ್ಮ ಪ್ರಚಾರಕ್ಕಾಗಿ ಅತ್ಯಂತಸರಳವಾದ ಭಾಷೆಯಲ್ಲಿ ಸಾಮಾನ್ಯಜನಕ್ಕೂ ಆಸಕ್ತಿಯನ್ನು ಹುಟ್ಟಿಸುವಂತಹ ಪರಿಣಾಮಕಾರಿಯಾದ ಸಾಹಿತ್ಯದ ಆವಶ್ಯಕತೆಯನ್ನು ಬಸವಣ್ಣನವರು ಚೆನ್ನಾಗಿ ಅರಿತಿದ್ದರು. ನೀರಿಳಿಯದ ಗಂಟಲಲ್ಲಿ ಕಡುಬನ್ನು ತುರುಕುವ ಸಾಹಸಕ್ಕೆ ಕೈಹಾಕದೆ, ರಾಜಾಧಿರಾಜರ ಮನ್ನಣೆಯನ್ನೂ ಲೆಕ್ಕಿಸದೆ ಬಹುಜನರ ಕಲ್ಯಾಣಕ್ಕಾಗಿ ತಿಳಿಗನ್ನಡದಲ್ಲಿ ತಮ್ಮ ಧರ್ಮವನ್ನು ಪ್ರಚುರಪಡಿಸಿದರು. ಬಸವಣ್ಣನವರ ವಚನಗಳು ಸೂಕ್ತಿಗಳಂತಿದ್ದುದರಿಂದ ಅಂದಿನ ಜನಸಾಮಾನ್ಯದ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿದುವು; ಅತ್ಯಂತ ಜನಪ್ರಿಯವಾದುವು. ಇಂದಿಗೂ ಅವು

ಜನರ ಬಾಯಲ್ಲಿ ಜೀವಂತವಾಗಿರುವುದೇ ಅವುಗಳ ಜನಪ್ರಿಯತೆಗೆ ಹೆಗ್ಗುರುತಾಗಿದೆ.

ವಚನಕಾರರಿಂದ ಕನ್ನಡ ಸಾಹಿತ್ಯಕ್ಕೇ ಜೀವಕಳೆ ಬಂದಂತಾಯಿತು; ಹೊಸಶಕ್ತಿ ತಲೆದೋರಿತು. ಸಾಮಾನ್ಯಜನಕ್ಕೆ ಅರ್ಥವಾಗದ ಪಂಡಿತ ಭಾಷೆಯ ಮೋಹ ಅಳಿಯಿತು. ಬಸವಣ್ಣನವರು ಧರ್ಮಗಳಲ್ಲಿ ಅಡಗಿದ್ದ ಭಾವಗಳನ್ನು ಸುಲಭವಾದ ವಚನಗಳಲ್ಲಿ ನಿರೂಪಿಸಿ ಪ್ರಚಾರಕ್ಕೆ ತಂದರು. ಅದರಿಂದ ವೇದೋಪನಿಷತ್ತುಗಳಲ್ಲೂ ಆಗಮುಗಳಲ್ಲೂ ಅಡಗಿದ್ದ ಗಹನವಾದ ವಿಷಯುಗಳು ಜನಸಾಮಾನ್ಯಕ್ಕೂ ಅರ್ಥವಾಗುವಂತಾದುವು. ಈ ಧರ್ಮ ಬೋಧನೆಗಾಗಿ ಹಲವರು ಹೊಸಶಬ್ದಗಳನ್ನೇ ಸೃಷ್ಟಿಸಿದರು; ಹೊಸ ಛಂದಸ್ಸನ್ನೇ ಬೆಳಕಿಗೆ ತಂದರು. ತತ್ಪರಿಣಾಮವಾಗಿ ಇಡೀ ಕರ್ಣಾಟಕ ದಲ್ಲೆಲ್ಲ ವಚನಗಳೂ ದೇವರನಾಮುಗಳೂ ಮನೆಮಾತುಗಳಾದುವು.

ಬುದ್ಧದೇವನು ತನ್ನ ಧರ್ಮೋಪದೇಶಕ್ಕಾಗಿ ಅಂದಿನ ಜನರಿಗೆ ಅರ್ಥ ವಾಗುವ ಪಾಳೀಭಾಷೆಯನ್ನು ಬಳಸಿದಂತೆ ಬಸವಣ್ಣನವರೂ ಜನರಿಗೆ ಸುಲಭವಾಗಿ ತಿಳಿಯುವ ತಿಳಿಗನ್ನಡದಲ್ಲೇ ತತ್ತ್ವಬೋಧನೆಯನ್ನು ಮಾಡಿದರು. ಮಾನವ ಕಲ್ಯಾಣವೇ ತಮ್ಮ ಗುರಿಯಾಗಿದ್ದ ಈ ವಚನ ಕಾರರು ರಾಜರ ಮನ್ನಣೆಗಾಗಲಿ, ಪಂಡಿತರ ಪ್ರತಿಷ್ಠೆಗಾಗಲಿ ತಮ್ಮ ಮನ ವನ್ನು ತೆರಲಿಲ್ಲ. ಬಸವಣ್ಣನವರೂ ಅವರ ಅನುಯಾಯಿಗಳೂ ಜನಪದ ರೂಢಿಯ ಛಂದಸ್ಸುಗಳಾದ ರಗಳೆ, ತ್ರಿಪದಿ, ಷಟ್ಪದಿ, ಸಾಂಗತ್ಯಗಳನ್ನೇ ವಿಶೇಷವಾಗಿ ಬಳಸಿಕೊಂಡರು. ಅದರಿಂದ ವೇದಾಂತ ತತ್ತ್ವಗಳೂ ಮನೆ ಮಾತುಗಳಾಗಿ ಜನಸಾಮಾನ್ಯರಲ್ಲಿಯೂ ಶ್ರೇಷ್ಠವಾದ ಸಂಸ್ಕೃತಿಯು ಬೆಳೆಯುವಂತಾಯಿತು. ತರ್ಕಪ್ರಧಾನವಾಗಿದ್ದ ವೇದಾಂತವು ತತ್ತ್ವಪ್ರಧಾನ ವಾಯಿತು. ಈ ವಚನಸಾಹಿತ್ಯದ ಉಗಮ ಯಾವಕಾಲದಲ್ಲಾದರೂ ಆಗಿರಲಿ; ವಚನಗಳು ಜನಪ್ರಿಯವಾದದ್ದು ಮಾತ್ರ ಬಸವಣ್ಣನವರ ಕಾಲ ದಲ್ಲಿಯೇ. ಬಸವಣ್ಣನವರ ದಿಟ್ಟತನದ ಮುನ್ನಡೆಯಿಂದ ಹಲವಾರು ವಚನ ಕಾರರು ಪ್ರೋತ್ಸಾಹಗೊಂಡರು; ತಲೆಯೆತ್ತಿದರು. ಗಂಡಸರ ಮಾತಂತಿರಲಿ; ಹೆಂಗಸರೂ ಕೂಡ ವಚನಗಳನ್ನು ರಚಿಸಿದರು. ಇವರೆಲ್ಲರ ವಚನಗಳೂ ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯಕಾಣಿಕೆಗಳಾಗಿವೆ. ಆದುದರಿಂದಲೇ

ಬಸವಣ್ಣನವರನ್ನು ವಚನಸಾಹಿತ್ಯದ ಆಚಾರ್ಯಪುರುಷರೆಂದೂ ಕರೆಯುತ್ತಾರೆ. ಈ ವಚನಕಾರರ ವಚನಸಾಹಿತ್ಯ ಜಗತ್ತಿನ ಅನುಭವಸಾಹಿತ್ಯದಲ್ಲಿ ಉನ್ನತಸ್ಥಾನವನ್ನು ಪಡೆಯಲರ್ಹವಾಗಿದೆ. ಬಸವಣ್ಣನವರ ವಚನವಾಹಿನಿ ಕನ್ನಡನಾಡಿನಮೇಲೆ ಅಮೃತದ ಹೊಳೆಯಂತೆ ಹರಿದಾಗ ಕನ್ನಡಸಾಹಿತ್ಯದಲ್ಲಿ ಒಂದು ಹೊಸ ಯುಗವೇ ಆರಂಭವಾಯಿತು. ಈ ನವಶಕ್ತಿಯಿಂದ ಸ್ಫೂರ್ತಿಗೊಂಡು ಸಾಹಿತ್ಯರಂಗದಲ್ಲಿ ಕ್ರಾಂತಿಯನ್ನು ಎಬ್ಬಿಸಿದವರಲ್ಲಿ ಹರಿಹರ ರಾಘವಾಂಕರು ಮುಖ್ಯರಾದವರು. ಇವರೂ ಬಸವಣ್ಣನವರಂತೆಯೇ ಒಂದು ಹೊಸ ಜಾಡನ್ನೇ ತೆರೆದರು.

ಕೊನೆಯ ದಿನಗಳು

ಬಸವಣ್ಣನವರ ಭಕ್ತಿ, ನಿಷ್ಠೆ, ನಿರ್ವ್ಯಾಕುಲತೆ ,ನಿಸ್ಪೃಹತೆ, ಸರಳತೆ, ಸಜ್ಜನತೆಗಳನ್ನು ಕಂಡು ಕೆಲವರು ಕರುಬಿದರು. ಅವರನ್ನು ಮೋಸಗೊಳಿಸಬೇಕೆಂದೂ, ತೇಜೋವಧೆ ಮಾಡಬೇಕೆಂದೂ ಬಂದ ಕುಹಕಿಗಳೂ ಪರವಾದಿಗಳೂ ಅವರೊಡನೆ ವಾದಮಾಡಿ, ಅವರ ಪ್ರಭಾವಕ್ಕೆ ತಲೆಬಾಗಿ, ತಮ್ಮ ಸಣ್ಣತನಕ್ಕೆ ತಾವೇ ನಾಚಿ ಅವರ ಅನುಯಾಯಿಗಳಾಗುತ್ತಿದ್ದರು. ದುಷ್ಟರು ಕೂಡ ಬಸವಣ್ಣನವರ ಸೌಮ್ಯಮುಖಮುದ್ರೆಯನ್ನು ಕಂಡು ನಮಿಸುತ್ತಿದ್ದರು. ಬಸವಣ್ಣನವರು ಅಂತಹ ದುಷ್ಟರನ್ನೂ ದುರ್ಜನರನ್ನೂ ಕೂಡ ದೂರಮಾಡದೆ ಅವರ ಅಜ್ಞಾನಕ್ಕಾಗಿ ಮರುಗಿ, ಕರುಣೆಯಿಂದ ಅವರಿಗೆ ಉಪದೇಶವನ್ನು ಮಾಡುತ್ತಿದ್ದರು. ಹೀಗೆ ಧಾರ್ಮಿಕ ಮತ್ತು ಲೌಕಿಕ ಜೀವನಗಳೆರಡರಲ್ಲೂ ಸಾಮರಸ್ಯವನ್ನು ಸ್ಥಾಪಿಸುವುದಕ್ಕೆ ಬಹಳವಾಗಿ ಪ್ರಯತ್ನಿಸಿದವರು ಅವರು. ಈ ಶತಮಾನದಲ್ಲಿ ಬಹುಜನರ ಮನಸ್ಸನ್ನು ಸೆಳೆದಿರುವ ವಿಶ್ವಸಮಾಜ ಅಥವಾ ವಿಶ್ವಕೌಟುಂಬಿಕ ಭಾವನೆಯು ಇಂದು ಹುಟ್ಟಿ ಬೆಳೆದದ್ದಲ್ಲ. ಹಲವಾರು ಶತಮಾನಗಳಿಂದ ನಮ್ಮ ಹಿರಿಯರನೇಕರ ಅಪಾರವಾದ ಸೇವೆ ತ್ಯಾಗಗಳ ಫಲವಾಗಿ ಅದು ಇಂದು ಈ ರೂಪವನ್ನು ತಳೆದಿದೆ.

ಬಸವಣ್ಣನವರ ದಿವ್ಯಸಂದೇಶ ಅಮರವಾಣಿಯಾಗಿ ಕನ್ನಡನಾಡಿನ ಮೂಲೆ ಮೂಲೆಗಳಲ್ಲೂ ಪಸರಿಸಿತು. ಆದರೆ ಅವರ ಆದರ್ಶ, ಪ್ರಗತಿಪರ ಉಪದೇಶಗಳನ್ನು ಅವರ ಸಮಕಾಲೀನರಲ್ಲಿ ಅನೇಕರು ಅರ್ಥಮಾಡಿಕೊಳ್ಳ

ವಷ್ಟು ಸಮರ್ಥರಾಗಿರಲ್ಲಿಲ್ಲ. ಸಂಪ್ರದಾಯಶರಣರಾದ ಕೆಲವು ವೀರಶೈವರು ಕೂಡ ಬಸವಣ್ಣನವರ ಸರ್ವೋದಯದೃಷ್ಟಿಯನ್ನರಿಯದೆ ಪ್ರತಿಭಟನೆಗೆ ಪ್ರಾರಂಭಿಸಿದರು. ಅದೂ ಅಲ್ಲದೆ ಬಸವಣ್ಣನವರಿಂದ ವೀರಶೈವಮತವು ಪ್ರವರ್ಧಮಾನಕ್ಕೆ ಬಂದುದನ್ನು ಕಂಡು ಅನ್ಯಮತೀಯರಿಗೆ ಅಸೂಯೆ ಹುಟ್ಟಿತು. ಈ ವಿರೋಧಿಗಳೆಲ್ಲರೂ ಬಸವಣ್ಣನವರಿಗೆ ಕಿರುಕುಳವನ್ನು ಕೊಡ ಲಾರಂಭಿಸಿದರು ; ಅವರ ಕೀರ್ತಿಗೌರವಗಳನ್ನು ಸಹಿಸದ ಕೆಲವರು ಬಿಜ್ಜಳನಲ್ಲಿ ಚಾಡಿಯನ್ನೂ ಹೇಳಿದರು. ಆ ಚಾಡಿಕೋರರ ಮಾತನ್ನು ನಂಬಿದ ಬಿಜ್ಜಳನೂ ಕೂಡ ಬಸವಣ್ಣನವರನ್ನು ತನ್ನ ಪ್ರತಿಸ್ಪರ್ಧಿಯೆಂದೇ ತಿಳಿದನು. ಅದರಿಂದ ಬಸವಣ್ಣನವರೂ ಅವರ ಅನುಯಾಯಿಗಳೂ ಪರ ಪೀಡನೆಗೆ ಒಳಗಾದರು. ಬಸವಣ್ಣನವರು ಬಹಳವಾಗಿ ಬೇಸತ್ತರು. ಆದರೂ ಸತ್ಯಪರರಾದ ಅವರಿಗೆ ಯಾರಿಂದ ಏನಾಗಬೇಕಾಗಿತ್ತು ?

ಆರು ಮುನಿದು ನಮ್ಮನೇನ ಮಾಡುವರು ?
ಊರು ಮುನಿದು ನಮ್ಮನೆಂತು ಮಾಡುವರು ?
ನಮ್ಮ ಕುನ್ನಿಗೆ ಕೂಸ ಕೊಡಬೇಡ ;
ನಮ್ಮ ಸೊಣಕಂಗೆ ತಳಿಗೆಯನಿಕ್ಕಬೇಡ !
ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ,
ನಮಗೆ ನಮ್ಮ ಕೂಡಲ ಸಂಗಯ್ಯನುಳ್ಳನ್ನಕ್ಕ?

ಎಂದು ಧೈರ್ಯದಿಂದ ನುಡಿದು, ಕೆಚ್ಚೆದೆಯ ವೀರರಂತೆ ತಮ್ಮ ಕಾರ್ಯ ಸಾಧನೆಯನ್ನು ಮುಂದುವರಿಸಿದರು.

ಕ್ರಮೇಣ ಒಳ ಮತ್ತು ಹೊರ ಬೇಗುದಿಯ ಮಹಾಜ್ವಾಲೆ ಬಸವಣ್ಣ ನವರಿಗೆ ಚುಚ್ಚುಮುಳ್ಳಾಗಿ ಪರಿಣಮಿಸಿತು. ಪಿಸುಣರ ನುಡಿಗೆ ಓಗೊಟ್ಟ ಬಿಜ್ಜಳನು, ಬಸವಣ್ಣನವರಿಗೆ ಏನೂ ಮಾಡಲಾಗದೆ ದುರುದುಂಬಿತನದಿಂದ ಶಿವಶರಣರ ಹಿಂಸೆಗೆ ಪ್ರಾರಂಭಿಸಿದನು. ಶಿವಶರಣರಿಗಾದ ಈ ಅನ್ಯಾಯ ಅಪಚಾರಗಳಿಗಾಗಿ ಬಸವಣ್ಣನವರು ಬಹುವಾಗಿ ನೊಂದರು. ಶಿವಭಕ್ತರಲ್ಲ ದವರ ಕೂಡ ನುಡಿಯಲೂಬಾರದು ಎಂದು ನಿರ್ಧರಿಸಿ, ಅನ್ಯಮತೀಯರು ಶಿವಶರಣರಿಗೆ ಕೊಟ್ಟ ಕಿರುಕುಳದಿಂದ ಬೇಸತ್ತು :

ಬೇವಿನ ಬೀಜವ ಬಿತ್ತಿ, ಬೆಲ್ಲದ ಕಟ್ಟೆಯ ಕಟ್ಟಿ,
ಆಕಳ ಹಾಲನೆರೆದು, ಜೇನುತುಪ್ಪವ ಹೊಯ್ದರೆ,
ಸಿಹಿಯಾಗಬಲ್ಲುದೆ, ಕಹಿಯಹುದಲ್ಲದೆ ?
ಶಿವಭಕ್ತರಲ್ಲದವರ ಕೂಡೆ ನುಡಿಯಲಾಗದು,
ಕೂಡಲ ಸಂಗಮದೇವಾ.


ಎಂದು ಹೇಳಿದ್ದಾರೆ. ರಾಜನಾದ ಬಿಜ್ಜಳನು ಸತ್ಯಾಸತ್ಯಗಳನ್ನು ವಿಚಾರಿಸದೆ ಅಕಾರಣವಾಗಿ ತಮ್ಮ ಮೇಲೆ ಕೋಪಗೊಂಡದ್ದಕ್ಕಾಗಿ ಬಸವಣ್ಣನವರಿಗೆ ತುಂಬ ವ್ಯಸನವುಂಟಾಯಿತು. ಬರಬರುತ್ತ ಅವರಿಬ್ಬರ ವೈಮನಸ್ಯ ಹೆಚ್ಚಿತು. ಶಿವಶರಣರಿಗಾಗುತ್ತಿದ್ದ ಅನ್ಯಾಯ, ದ್ರೋಹಗಳಿಗಾಗಿ ಮರುಗಿದರು. ಬಸವಣ್ಣನವರು ಮಂತ್ರಿಪದವಿಯ ವ್ಯಾಮೋಹದಿಂದ ಧರ್ಮಚ್ಯುತರಾದರೆಂದು ಕೆಲವು ಶಿವಶರಣರೇ ಆಕ್ಷೇಪಿಸಿದಾಗ :

ಕಾಯದ ಕಳವಳಕ್ಕಂಜಿ 'ಕಾಯಯ್ಯಾ' ಎನ್ನೆನು ;
ಜೀವನೋಪಾಯಕ್ಕಂಜಿ 'ಈಯಯ್ಯಾ' ಎನ್ನೆನು,
"ಯದ್ ಭಾವಂ ತದ್ ಭವತಿ"; ಉರಿಬರಲಿ, ಸಿರಿಬರಲಿ–
'ಬೇಕು ಬೇಡೆ'ನ್ನೆನಯ್ಯಾ.
ಆ ನಿಮ್ಮ ಹಾರೆನು, ಮಾನವರ ಬೇಡೆನು ;
ಆಣೆ, ನಿಮ್ಮಾಣೆ, ಕೂಡಲ ಸಂಗಮದೇವಾ.

ಎಂದು ಆಣೆಯಿಟ್ಟು ನುಡಿದಿದ್ದಾರೆ. ಹೀಗೆ ಎತ್ತೆತ್ತಲೂ ಅನ್ಯಾಯ, ಹಿಂಸೆಗಳೇ ಆವರಿಸಿಕೊಳ್ಳುತ್ತಾ ಬಂದುದನ್ನು ಕಂಡು ಬಸವಣ್ಣನವರು ನಿರುಪಾಯರಾಗಿ ಮಂತ್ರಿಪದವಿಯನ್ನೇ ತ್ಯಜಿಸಿ ಕಪ್ಪಡಿಸಂಗಮೇಶ್ವರ ಕ್ಷೇತ್ರಕ್ಕೆ ಹೊರಟು ಹೋದರು. ಅತ್ತ ಬಸವಣ್ಣನವರು ಹೋದಮೇಲೆ ಇತ್ತ ಬಿಜ್ಜಳನ ದಬ್ಬಾಳಿಕೆಯನ್ನು ಪ್ರತಿಭಟಿಸಿದ ಕೆಲವರು ಅವನ ಮೇಲೆ ತಿರುಗಿಬಿದ್ದರು. ಶಾಂತಿಯ ನೆಲೆವೀಡಾಗಿದ್ದ ಕಲ್ಯಾಣಪಟ್ಟಣವು ಅಶಾಂತಿಯ ಮಹಾಜ್ವಾಲೆಯಲ್ಲಿ ಉರಿಯಲಾರಂಭಿಸಿತು. ಹಿಂಸೆ ಪ್ರತಿಹಿಂಸೆಗಳು ಪ್ರಾರಂಭವಾದುವು ; ಉಗ್ರಸ್ವರೂಪವನ್ನೂ ತಾಳಿದುವು. ಕೊನೆಗೆ ಬಿಜ್ಜಳನ ವಧೆಯಿಂದ ಪರ್ಯವಸಾನವಾದುವು. ಬಿಜ್ಜಳನ ವಧೆ ಎಂತಾಯಿತು, ಎಲ್ಲಾಯಿತು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಬಿಜ್ಜಳನ ವಧೆಯನ್ನು ಕೇಳಿದ ಬಸವಣ್ಣನವರು ಅಪಾರವಾದ ಶೋಕಕ್ಕೀಡಾದರು. ತಮ್ಮ ಜೀವಿತಕಾಲ

ದಲ್ಲೇ ನಡೆದುಹೋದ ಈ ಅನಿರೀಕ್ಷಿತ ಘಟನೆಗಳಿಗಾಗಿ ಮರುಗಿ ಕೊರಗಿದರು. ಈ ಕೊರಗಿನಲ್ಲೇ ಶಿವಸಾಯುಜ್ಯವನ್ನು ಸೇರಿದರು.

ಬಸವಣ್ಣನವರ ಅನಿರೀಕ್ಷಿತವಾದ ಅಕಾಲಮರಣದಿಂದ ಅವರ ಮಹೋದ್ದೇಶ ಅವರ ಜೀವಿತಕಾಲದಲ್ಲಿ ಪೂರ್ಣಫಲಕಾರಿಯಾಗಲಿಲ್ಲ. ಆದರೂ ಅವರು ನೆಟ್ಟ ಸಸಿ ಹೆಮ್ಮರವಾಗಿ ಬೆಳೆದು ನಿರೀಕ್ಷಣೆಗಿಂತಲೂ ಅಧಿಕವಾದ ಫಲವನ್ನು ಇಂದು ಕೊಡುತ್ತಿದೆ. ಅವರ ವಿಶ್ವಾನ್ವಯವಾದ ಸಂದೇಶ ಇಂದಿಗೂ ಜೀವಂತವಾಗಿ ಪ್ರಜ್ವಲಿಸುತ್ತಿದೆ. ಸ್ವಪರಿಪೂರ್ಣ ಆದರ್ಶ ಸಮಾಜವನ್ನು ರಚಿಸಿದ ಬಸವಣ್ಣನವರು ಇಂದಿನ ಸಮಾಜ ಸುಧಾರಕರಿಗೂ, ರಾಷ್ಟ್ರನಿರ್ಮಾಪಕರಿಗೂ ಆರಾಧ್ಯಮೂರ್ತಿಗಳಾಗಿದ್ದಾರೆ. ಬಸವಣ್ಣನವರ ಭೌತಿಕದೇಹ ಕಣ್ಮರೆಯಾಗಿ ಇಂದಿಗೆ ಎಂಟನೂರು ವರ್ಷಗಳು ಸಂದಿದ್ದರೂ ಅವರ ಪ್ರಭಾವಮುದ್ರೆ ಇನ್ನೂ ಅಚ್ಚಳಿಯದೆ ಮಿನುಗುತ್ತಿರುವುದು ಅವರ ಮಹೋನ್ನತ ವ್ಯಕ್ತಿತ್ವಕ್ಕೆ ಹಿರಿಯ ನಿದರ್ಶನವಾಗಿದೆ. ಅವರು ಧರ್ಮ ಪ್ರಚಾರಕರಾಗಿ, ತತ್ತ್ವಬೋಧಕರಾಗಿ, ಮೇಲಾಗಿ ಭಕ್ತರಾಗಿ ಅಮರಸ್ಥಾನವನ್ನು ಪಡೆದಿದ್ದಾರೆ. ಸಮಾಜಸುಧಾರಣೆಯಲ್ಲೂ, ಸಮತಾಭಾವದ ರಾಷ್ಟ್ರನಿರ್ಮಾಣ ಕಾರ್ಯದಲ್ಲೂ ಬಸವಣ್ಣನವರ ಆದರ್ಶ ಪ್ರಗತಿಪರ ಮಾರ್ಗವೇ ನಮಗೆ ಮೇಲ್ಪಂಕ್ತಿಯಾಗಿದೆ. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸಾಧನೆಗಳಿಂದ ಬಸವಣ್ಣನವರು ಯುಗಪುರುಷರಾಗಿ, ಕನ್ನಡನಾಡಿಗೇ ಅಲ್ಲದೆ ಇಡೀ ಭರತಖಂಡಕ್ಕೇ ಜೀವಜ್ಯೋತಿಯಾಗಿ ಬೆಳಗಿದ್ದಾರೆ.



ಮಹಾತ್ಮ ಗಾಂಧೀಜಿ

ಮಹಾತ್ಮ ಗಾಂಧೀಜಿ

ಪ್ರವೇಶಿಕೆ

ಮಹಾತ್ಮ ಗಾಂಧೀಜಿಯವರು ಇಪ್ಪತ್ತನೆಯ ಶತಮಾನದ ಯುಗ ಪುರುಷರು. ಪ್ರಂಪಚದ ಇತಿಹಾಸದಲ್ಲಿ ಗಾಂಧೀಜಿ ಒಂದು ಚಿರಸ್ಮರಣೀಯ ವಾದ ಮಹೋನ್ನತಸ್ಥಾನವನ್ನು ಪಡೆದಿದ್ದಾರೆ. ಅವರು ಇಡೀ ಜಗತ್ತಿಗೇ ಆದರ್ಶಪ್ರಾಯರಾಗಿ ಒಂದು ಹೊಸಯುಗವನ್ನೇ ಪ್ರಾರಂಭಿಸಿದರು. ವಿಶ್ವದ ಚರಿತ್ರೆಯಲ್ಲಿ ಇಂತಹ ವ್ಯಕ್ತಿಯನ್ನು ಹಿಂದೆಂದೂ ಕಾಣುವುದು ದುರ್ಲಭ ವಾಗಿದೆ. ಸತ್ಯ ಅಹಿಂಸೆಗಳೇ ಗಾಂಧೀಜಿಯವರ ಮಹಾಸ್ತ್ರಗಳು. ಈ ಶಾಂತಿ ಅಸ್ತ್ರಗಳಿಂದಲೇ ಸತ್ಯಾಗ್ರಹಿಗಳ ಸೈನ್ಯವನ್ನು ಸೇರಿಸಿ, ಯೋಧರಂತೆ ಹೋರಾಡಿ ಜಗತ್ಕಲ್ಯಾಣದ ಮಾರ್ಗವನ್ನು ತೋರಿಸಿದರು ; ವ್ಯಕ್ತಿ, ದೇಶ, ರಾಷ್ಟ್ರಗಳ ಕಲ್ಪನೆಗಳನ್ನೂ ಮೀರಿ ಮಾನವಕೋಟಿಯ ಸುಖಶಾಂತಿಗಳಿಗಾಗಿ ಶ್ರಮಿಸಿದರು. ಸತ್ಯ ಪ್ರೇಮ ದಯೆಗಳಿಂದ ಕೂಡಿದ ಸರಳವಾದ ಅಹಿಂಸಾ ಮಾರ್ಗದಲ್ಲಿ ನಡೆದು ಜಗತ್ತಿನ ದೃಷ್ಟಿಯನ್ನೇ ತಮ್ಮತ್ತ ಕೇಂದ್ರೀಕರಿಸಿ ಕೊಂಡು ವಿಶ್ವಬಂಧುಗಳಾದರು; ವಿಶ್ವವಿಭೂತಿಪುರುಷರಾದರು.

ಗಾಂಧೀಜಿ ಮಾನವತ್ವವನ್ನು ಮರೆತು ಪಶುಗಳಂತೆ ವರ್ತಿಸುತ್ತಿದ್ದ ಇಂದಿನ ಬಲಿಷ್ಠರ ಹೃದಯವನ್ನೂ ಸತ್ಯಪ್ರೇಮದಯೆಗಳಿಂದ ಪರಿವರ್ತಿಸಿ ದೇವತ್ವವನ್ನು ತೋರಿಸಿಕೊಟ್ಟ ಹಿರಿಯವ್ಯಕ್ತಿ. ಮಾನವರಾಗಿ ಹುಟ್ಟಿದ್ದರೂ ತಮ್ಮ ಅನುಪಮವಾದ ಸೇವೆ ಮತ್ತು ಅಪಾರವಾದ ತ್ಯಾಗಗಳಿಂದ ಅಮರತ್ವ ವನ್ನು ಪಡೆದರು. “ ಸತ್ಯಮೇವ ಜಯತೇ ” ಮತ್ತು “ ಅಹಿಂಸಾ ಪರಮೋ ಧರ್ಮಃ ” ಎಂಬ ಸೂತ್ರಗಳನ್ನು ಹಿಡಿದು ಜಗತ್ತಿಗೇ ಮಾರ್ಗದರ್ಶಕರಾದರು. ಇಂದು ಅವರ ಭೌತಿಕದೇಹ ನಮ್ಮ ಕಣ್ಮರೆಯಾಗಿದ್ದರೂ ಅವರ ಕೀರ್ತಿ ವಿಶ್ವದ ಮೂಲೆಮೂಲೆಯಲ್ಲೂ ಪಸರಿಸಿ ಹಿಮಾಲಯದಂತೆ ಅಚ್ಚಳಿಯದೆ ಪ್ರಜ್ವಲಿಸುತ್ತಿದೆ. ಗಾಂಧೀಜಿಯಂತೆ ತಮ್ಮ ಜೀವಿತಕಾಲದಲ್ಲೇ ವಿಶೇಷ ವಾದ ಪ್ರಖ್ಯಾತಿಯನ್ನು ಪಡೆದ ವ್ಯಕ್ತಿಯನ್ನು ಚರಿತ್ರೆಯಲ್ಲಿ ಸಂದರ್ಶಿಸು ವುದು ಕೂಡ ತೀರ ಅಪರೂಪ.

ಸುಮಾರು ಎರಡು ಶತಮಾನಗಳು ಪರದಾಸ್ಯದಲ್ಲಿ ತೊಳಲುತ್ತಿದ್ದ ನಮ್ಮ ಭರತಖಂಡವನ್ನು ಸ್ವತಂತ್ರಗೊಳಿಸುವುದಕ್ಕಾಗಿ ಗಾಂಧೀಜಿ ಅನುಸರಿಸಿದ ಅಹಿಂಸಾಮಾರ್ಗ ಪ್ರಪಂಚಕ್ಕೆ ಹೊಚ್ಚಹೊಸತಾದುದು ; ಆದರ್ಶವಾದುದು. ಆತ್ಮಶಕ್ತಿಯ ಹಿನ್ನೆಲೆಯಮೇಲೆ ಸತ್ಯ ಮತ್ತು ಅಹಿಂಸೆಗಳೆಂಬ ದಿವ್ಯಾಸ್ತ್ರಗಳಿಂದ ಒಂದು ಪ್ರಬಲ ಸಾಮ್ರಾಜ್ಯದ ವಿರುದ್ಧವಾಗಿ ಗಾಂಧೀಜಿ ಹೋರಾಡಿ ಜಯಗಳಿಸಿದರು. ಇಂತಹ ರಕ್ತಪಾತವಿಲ್ಲದ ಕ್ರಾಂತಿ ಹಿಂದೆ ಎಂದೂ ಎಲ್ಲಿಯೂ ನಡೆದಂತೆ ಚರಿತ್ರೆಯಿಂದ ಕಂಡುಬರುವುದಿಲ್ಲ. ಈ ಅಹಿಂಸಾತ್ಮಕವಾದ ಕ್ರಾಂತಿಯನ್ನು ಪ್ರಾಯೋಗಿಕವಾಗಿ ಮೊಟ್ಟಮೊದಲು ನಡೆಸಿ ಭಾರತದ ವೈಶಿಷ್ಟ್ಯವನ್ನು ಎತ್ತಿಹಿಡಿದು, ವಿಶ್ವಶಾಂತಿ ಸೌಹಾರ್ದದ ಹೆದ್ದಾರಿಯನ್ನು ರೂಪಿಸಿದ ಕೀರ್ತಿ ಗಾಂಧೀಜಿಗೆ ಸಲ್ಲಬೇಕಾಗಿದೆ.

ಗಾಂಧೀಜಿಯ ಕಾರ್ಯಕ್ಷೇತ್ರ ಬಹುಮುಖವಾದುದು. ಮಾನವರ ಉದ್ಧಾರಕ್ಕಾಗಿ ಅವರು ಕೈಗೊಂಡ ಮಾರ್ಗಗಳು ಜಗತ್ತಿಗೇ ಮೇಲ್ಪಂಕ್ತಿಯಾಗಿವೆ; ಸಾರ್ವಕಾಲಿಕವಾಗಿ ನಿಲ್ಲುವಂತಹವುಗಳಾಗಿವೆ. ಅವರು ರಾಜಕೀಯ ಕ್ಷೇತ್ರದಲ್ಲಿ ಮಾತ್ರವಲ್ಲದೆ ಜನಜೀವನಕ್ಕೆ ಸಂಬಂಧಿಸಿದ ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲೂ ದುಡಿದಿದ್ದಾರೆ. ನಮ್ಮ ಜನರಲ್ಲಿನ ಅಜ್ಞಾನ, ಅಂಧಕಾರ, ಮೌಢ್ಯಗಳನ್ನು ತೊಲಗಿಸಿ ಇತರ ಜನಾಂಗಗಳೊಡನೆ ತಲೆಯೆತ್ತಿ ಬಾಳುವಂತೆ ಮಾಡಲು ತಮ್ಮ ಜೀವನವನ್ನೇ ಮುಡುಪಾಗಿರಿಸಿದರು. ಗಾಂಧೀಜಿಯವರ ಸೇವೆ ತ್ಯಾಗಗಳ ಫಲವಾಗಿ ನಮ್ಮ ದೇಶ ಪ್ರತಿಭಾವಂತ ಮಹಾರಾಷ್ಟ್ರವಾಗಿ ಬೆಳೆಯುವುದಕ್ಕೆ ಅವಕಾಶವಾಯಿತು. ಮಾನವ ಕಲ್ಯಾಣಕ್ಕಾಗಿ ಗಾಂಧೀಜಿ ಸಾಧಿಸಿದ ಮೂಲತತ್ತ್ವಗಳನ್ನು ಪ್ರತಿಯೊಬ್ಬರೂ ಅನುಷ್ಠಾನಕ್ಕೆ ತಂದಲ್ಲಿ ಅವರು ಕಂಡ ರಾಮರಾಜ್ಯದ ಕನಸು ನನಸಾದೀತು; ನಮ್ಮ ನಾಡು ಸ್ವರ್ಗವಾದೀತು : ವಿಶ್ವವು ದ್ವೇಷ, ಅಸೂಯೆ, ಅಜ್ಞಾನ, ಅಂಧಕಾರಗಳಿಂದ ವಿಮುಕ್ತವಾಗಿ ಶಾಂತಿ ಸೌಹಾರ್ದಗಳ ನಿವಾಸವಾದೀತು.

ಜನನ—ಬಾಲ್ಯ—ವಿದ್ಯಾಭ್ಯಾಸ

ಭಾರತದ ಭಾಗ್ಯವಿಧಾತ ಗಾಂಧೀಜಿ ೧೮೬೯ ನೇ ಅಕ್ಟೋಬರ್ ೨ ನೇ ತಾರೀಖು ಗುಜರಾತು ಪ್ರಾಂತ್ಯದ ಕಾಠೆವಾಡ ಸಂಸ್ಥಾನಕ್ಕೆ ಸೇರಿದ ಪೋರ

ಬಂದರಿನಲ್ಲಿ ಜನ್ಮವೆತ್ತಿದರು. 'ಮೋಹನದಾಸ ಕರಮಚಂದ ಗಾಂಧಿ' ಎಂಬುದು ಅವರ ಪೂರ್ಣ ಹೆಸರು. ಬನಿಯ ಜಾತಿಯ ವೈಷ್ಣವ ಮನೆ ತನಕ್ಕೆ ಸೇರಿದ 'ಕರಮಚಂದ ಗಾಂಧಿ' ಮತ್ತು 'ಪುತಲೀಬಾಯಿ' ಎಂಬ ಸಾತ್ವಿಕ ದಂಪತಿಗಳೇ ಅವರ ತಂದೆತಾಯಿಗಳು. ತಂದೆ ಕರಮಚಂದ ಗಾಂಧಿಯವರು ಪೋರಬಂದರು ಮತ್ತು ರಾಜಕೋಟೆಗಳಲ್ಲಿ ದಿವಾನರಾಗಿದ್ದರು. ಸತ್ಯಶೀಲರೂ ಉದಾರಿಗಳೂ ಆದ ಆ ದಂಪತಿಗಳಿಗೆ ಗಾಂಧೀಜಿ ಕೊನೆಯ ಮಗನಾಗಿ ಹುಟ್ಟಿದರು. ಗಾಂಧೀಜಿಗೆ ಇಬ್ಬರು ಸೋದರರೂ ಒಬ್ಬ ಸೋದರಿಯೂ ಇದ್ದರು.

ಗಾಂಧೀಜಿ ಎಲ್ಲ ಮಕ್ಕಳಂತೆಯೇ ಪೋರಬಂದರು ಮತ್ತು ರಾಜಕೋಟೆಗಳಲ್ಲಿ ತಮ್ಮ ಬಾಲ್ಯವನ್ನು ಕಳೆದರು. ಶಾಲೆಯಲ್ಲಿ ಅಂತಹ ಪ್ರತಿಭಾವಂತ ವಿದ್ಯಾರ್ಥಿಯಾಗಿರದಿದ್ದರೂ ಮೊದಲಿನಿಂದ ಪ್ರಾಮಾಣಿಕ ವಿದ್ಯಾರ್ಥಿಯಾಗಿದ್ದರು. ತಮ್ಮ ನಡತೆ ಮತ್ತು ಅಭ್ಯಾಸಗಳಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಿದ್ದರು. ಅವರು ಎಂದೂ ಸುಳ್ಳು ಹೇಳಿದವರಲ್ಲ. ಬಾಲಕರಾಗಿದ್ದಾಗ ಸತ್ಯಹರಿಶ್ಚಂದ್ರನ ಕಥೆ ಗಾಂಧೀಜಿಗೆ ತುಂಬ ಮೆಚ್ಚುಗೆಯಾಗಿತ್ತು. ಸತ್ಯ ಪರಿಪಾಲನೆಗಾಗಿ ಹರಿಶ್ಚಂದ್ರಮಹಾರಾಜನು ಅನುಭವಿಸಿದ ಕಷ್ಟಪರಂಪರೆಗಳು ಅವರ ಮನಸ್ಸನ್ನು ಸೂರೆಗೊಂಡಿದ್ದುವು. ಸತ್ಯವಂತನಾಗಿ ಬಾಳುವುದೇ ತಮ್ಮ ಜೀವನದ ಆದರ್ಶವಾಗಿರಬೇಕೆಂದು ಗಾಂಧೀಜಿ ಆಗಲೇ ಮನಸ್ಸಿನಲ್ಲಿ ನಿರ್ಧರಿಸಿದರು. ಹರಿಶ್ಚಂದ್ರನ ಕಥೆಯಂತೆಯೇ 'ಶ್ರವಣಭಕ್ತಿ' ಎಂಬ ಕಥೆಯೂ ಅವರ ಮನಸ್ಸನ್ನು ಸೂರೆಗೊಂಡಿತ್ತು. ಶ್ರವಣನು ಅತ್ಯಂತ ಭಕ್ತಿಯಿಂದ ತನ್ನ ತಂದೆತಾಯಿಗಳನ್ನು ಜೋಳಿಗೆಯಲ್ಲಿ ಹೊತ್ತು ತೀರ್ಥಯಾತ್ರೆ ಮಾಡಿಸಿ, ಅವರ ಮನಸ್ಸನ್ನು ಸಂತೋಷಪಡಿಸಿದನು. ಅವನ ಭಕ್ತಿ ಮತ್ತು ಸೇವಾಸಕ್ತಿಗಳು ಗಾಂಧೀಜಿಯ ಮನಸ್ಸಿಗೆ ಬಹಳವಾಗಿ ಹಿಡಿಸಿದವು.

ಗಾಂಧೀಜಿ ತಮ್ಮ ಹದಿಮೂರನೆಯ ವಯಸ್ಸಿನಲ್ಲಿ ಪ್ರೌಢಶಾಲೆಯಲ್ಲಿ ಓದುತ್ತಿದ್ದರು. ಆಗಲೇ ಅವರ ತಂದೆತಾಯಿಗಳು ತಮ್ಮ ಸಂಪ್ರದಾಯದಂತೆ ಮಗನಿಗೆ ಮದುವೆಯನ್ನು ಮಾಡುವುದಕ್ಕೆ ನಿಶ್ಚಯಿಸಿದರು. ಅಂತೆಯೇ ಗಾಂಧೀಜಿ ಮತ್ತು ಕಸ್ತೂರಿಬಾಯಿಯವರ ಮದುವೆ ವಿಜೃಂಭಣೆಯಿಂದ

ನಡೆಯಿತು. ಆದರೆ ಆ ಬಾಲಕಬಾಲಕಿಯರಿಗೆ ಆಗ ಮದುವೆಯೆಂದರೆ ಏನೆಂಬುದೇ ತಿಳಿಯದು. ಅವರಿಗೆ ಆಗ ಅದೊಂದು ಮಕ್ಕಳಾಟವಾಗಿತ್ತು. ಆದರಿಂದ ಗಾಂಧೀಜಿಗೆ ಬುದ್ಧಿ ಬಂದಮೇಲೆ ಬಾಲ್ಯವಿವಾಹದ ಅನ್ಯಾಯ, ಅಪಘಾತಗಳು ಮನದಟ್ಟಾಗುವುದಕ್ಕೆ ಅವಕಾಶವಾಯಿತು.

ಗಾಂಧೀಜಿ ಮದುವೆಯಾದ ಮೇಲೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಿದರು. ವಿಧೇಯ ವಿದ್ಯಾರ್ಥಿಯಾಗಿದ್ದರೂ ತಮ್ಮ ನಾಚಿಕೆ ಮತ್ತು ಸಂಕೋಚಪ್ರಕೃತಿಗಳಿಂದ ಇತರ ವಿದ್ಯಾರ್ಥಿಗಳೊಡನೆ ವಿಶೇಷವಾಗಿ ಬೆರೆಯುತ್ತಿರಲಿಲ್ಲ. ಕಾಲಕ್ರಮೇಣ ಅವರು ಸಹಪಾಟಿಗಳೊಡನೆ ಸೇರ ತೊಡಗಿದರು. ಒಬ್ಬ ಕೆಟ್ಟ ಸ್ನೇಹಿತನ ಸಹವಾಸದಿಂದಾಗಿ ಇತರರಿಗೆ ತಿಳಿಯ ದಂತೆ ಬೀಡಿ ಸೇದುವುದನ್ನೂ ಮಾಂಸಭಕ್ಷಣೆ ಮಾಡುವುದನ್ನೂ ಕಲಿತರು. ಆದರೆ ಸ್ವಲ್ಪ ಕಾಲದಲ್ಲೇ ತಂದೆ ತಾಯಿಗಳಿಗೆ ಮೋಸಮಾಡಿ, ಮರೆಯಲ್ಲಿ ನಡೆಸುತ್ತಿದ್ದ ಈ ಅಕೃತ್ಯಗಳಿಗೆ ಬೇಸತ್ತರು. ಕಳ್ಳತನದ ಈ ಕೆಲಸಗಳಿಗಾಗಿ ಸಾಲವನ್ನೂ ಮಾಡಿದರು. ಸಾಲವನ್ನು ತೀರಿಸುವುದಕ್ಕಾಗಿ ಈ ದುರಭ್ಯಾಸ ಗಳಲ್ಲಿ ಭಾಗಿಯಾಗಿದ್ದ ಅಣ್ಣನ ಕೈಲಿದ್ದ ಚಿನ್ನದ ಬಳೆಯನ್ನು ಮಾರ ಬೇಕಾಯಿತು. ಈ ಹೇಯಕೃತ್ಯಗಳಿಂದ ಗಾಂಧೀಜಿಯ ಮನಸ್ಸಿಗೆ ತುಂಬ ನೋವಾಯಿತು. ತಾವು ಮಾಡಿದ ಪಾಪಗಳೇ ತಮ್ಮನ್ನು ತಿನ್ನುತ್ತಿವೆ ಯೆಂದು ಮನಗಂಡರು. ಪಶ್ಚಾತ್ತಾಪದಿಂದ ಮುಚ್ಚುಮರೆಯಿಲ್ಲದೆ ತಮ್ಮ ತಪ್ಪುಗಳನ್ನೆಲ್ಲಾ ಒಂದು ದೀರ್ಘವಾದ ಪತ್ರದಲ್ಲಿ ಬರೆದು ಅದನ್ನು ತಂದೆಗೆ ಒಪ್ಪಿಸಿ ಮುಂದೆ ಅಂತಹ ಅಪರಾಧಗಳನ್ನು ಮಾಡುವುದಿಲ್ಲವೆಂದು ಕ್ಷಮೆ ಯನ್ನು ಬೇಡಿದರು. ತಂದೆಗೆ ಇದರಿಂದ ಬಹಳ ವ್ಯಥೆಯಾದರೂ ಮಗನ ಈ ಪಶ್ಚಾತ್ತಾಪ ಮನೋಭಾವದಿಂದ ಸಮಾಧಾನವೂ ಆಯಿತು. ಕ್ರಮೇಣ ಮಗನ ಮೇಲಿನ ಪ್ರೇಮವೂ ಹೆಚ್ಚಾಯಿತು.

ಸಾತ್ವಿಕರೂ ದೈವಭಕ್ತರೂ ಆದ ತಂದೆತಾಯಿಗಳ ದೆಸೆಯಿಂದ ಗಾಂಧೀಜಿಯ ಮನಸ್ಸಿನಮೇಲೆ ಸತ್ಪರಿಣಾಮವಾಯಿತು. ತಂದೆಯ ಪುಸ್ತಕ ಭಂಡಾರದಲ್ಲಿದ್ದ ಪುಸ್ತಕಗಳನ್ನು ಓದಿ ಅನೇಕ ವಿಷಯಗಳನ್ನು ತಿಳಿದು ಕೊಳ್ಳುವ ಅವಕಾಶವೂ ದೊರೆಯಿತು. ಧಾರ್ಮಿಕ ಗ್ರಂಥಗಳ ಅಭ್ಯಾಸದಿಂದ ಹಲವಾರು ಗಹನ ವಿಚಾರಗಳೂ ತಿಳಿದುವು. ಅದರಿಂದ ವಿಚಾರವಿಸಿಮಯ

ಮಾಡಿಕೊಳ್ಳುವುದಕ್ಕೂ ಅವಕಾಶವಾಯಿತು. ಸರ್ವಮತಸಹಿಷ್ಣುವಾದ ತಂದೆಗೆ ಎಲ್ಲಾ ಮತಪಂಥಗಳ ಗೆಳೆಯರೂ ಇದ್ದರು. ಅವರು ಮನೆಯಲ್ಲಿ ಸೇರಿದಾಗ ಚರ್ಚಿಸುತ್ತಿದ್ದ ಧಾರ್ಮಿಕ ವಿಚಾರಗಳನ್ನು ಗಾಂಧೀಜಿ ಆಸಕ್ತಿಯಿಂದ ಕೇಳುತ್ತಿದ್ದರು. ಇವುಗಳಿಂದ ಅವರ ಮನಸ್ಸಿನಮೇಲೆ ವಿಶೇಷ ಪರಿಣಾಮವುಂಟಾಯಿತು ಹಿಂದೂಧರ್ಮದ ಮಹತ್ವವನ್ನು ಅರಿತರಲ್ಲದೆ ಇತರ ಧರ್ಮಗಳ ವಿಚಾರದಲ್ಲಿ ಸಹನೆಯಿಂದ, ಸಮಭಾವನೆಯಿಂದ ನಡೆಯುವುದನ್ನೂ ಕಲಿತರು. ಜೀವನದಲ್ಲಿ ಸತ್ಯಶೀಲಗಳ ಮಹತ್ವವೇನೆಂಬುದನ್ನು ಮನದಟ್ಟುಮಾಡಿಕೊಂಡರು.

ಗಾಂಧೀಜಿಯು ಪ್ರೌಢಶಾಲೆಯಲ್ಲಿ ವ್ಯಾಸಂಗಮಾಡುತ್ತಿದ್ದಾಗ ಅವರ ತಂದೆಯವರು ಕಾಲವಾದರು. ೧೮೮೭ರಲ್ಲಿ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆಯಾದಮೇಲೆ ಭಾವನಗರದ ಕಾಲೇಜಿಗೆ ಸೇರಿ ವ್ಯಾಸಂಗವನ್ನು ಮುಂದುವರಿಸಿದರು. ರಜದಲ್ಲಿ ಊರಿಗೆ ಬಂದಿದ್ದಾಗ ಒಮ್ಮೆ ತಮ್ಮ ಮನೆತನದ ಹಿತೈಷಿಗಳೊಬ್ಬರ ಸಲಹೆಯಂತೆ ಇಂಗ್ಲೆಂಡಿನಲ್ಲಿ ಕೇವಲ ಮೂರುವರ್ಷಗಳು ವ್ಯಾಸಂಗಮಾಡಿ ಬ್ಯಾರಿಸ್ಟರಾಗಿ ಬರುವುದಕ್ಕೆ ಮನಸ್ಸಾಯಿತು. ತಂದೆಯಂತೆ ತಮ್ಮನೂ ದಿವಾನಗಿರಿಯನ್ನು ಪಡೆಯಬಹುದೆಂದು ಗಾಂಧೀಜಿಯ ಅಣ್ಣ ಅದಕ್ಕೆ ಒಪ್ಪಿದರು. ಆದರೆ ಆ ಕಾಲದಲ್ಲಿ ಸೀಮೆಗೆ ಹೋಗುವುದು ತುಂಬ ಅಪರೂಪವಾಗಿದ್ದಿತು. ಬನಿಯ ಜಾತಿಯಲ್ಲಿ ಗಾಂಧೀಜಿಯೇ ಮೊಟ್ಟ ಮೊದಲು ಸೀಮೆಗೆ ಹೊರಟವರು. ಸೀಮೆಗೆ ಹೋದವರು ಮದ್ಯಮಾಂಸಗಳನ್ನು ಸೇವಿಸುವುದು ಅನಿವಾರ್ಯವೆಂದೂ ಆದುದರಿಂದ ಅವರು ನೀತಿಗೆಟ್ಟು, ಜಾತಿಗೆಟ್ಟು ಬಾಳುತ್ತಾರೆಂದೂ ಆಗಿನಕಾಲದಲ್ಲಿ ಜನರು ಭಾವಿಸಿದ್ದರು. ಆ ವಿಚಾರವನ್ನು ಕೇಳಿದ ಗಾಂಧೀಜಿಯ ತಾಯಿಗೆ ಮಗನನ್ನು ಸೀಮೆಗೆ ಕಳುಹಿಸುವುದಕ್ಕೆ ಭಯವಾಯಿತು. ಆದರೂ ಮಗನ ಹಿತದೃಷ್ಟಿಯಿಂದ ಆತನ ಭವಿಷ್ಯ ಉತ್ತಮವಾಗುವುದಾದರೆ ಅಡ್ಡಬರಬಾರದೆಂದು ಯೋಚಿಸಿದರು. ಮಗನಿಂದ ಮದ್ಯ ಮಾಂಸ ಮತ್ತು ಮಹಿಳೆಯರನ್ನು ಮುಟ್ಟುವುದಿಲ್ಲವೆಂಬ ವಚನವನ್ನು ತೆಗೆದುಕೊಂಡು, ಹೋಗಿಬರುವುದಕ್ಕೆ ಒಪ್ಪಿಗೆಯನ್ನಿತ್ತರು. ಅಣ್ಣ ಕಷ್ಟಪಟ್ಟು ಬೇಕಾದ ಹಣವನ್ನು ಒದಗಿಸಿಕೊಟ್ಟರು. ಸಮಾಜದವರ ಬೆದರಿಕೆಗೆ ಜಗ್ಗದೆ ಗಾಂಧೀಜಿಯು ತನ್ನ ತಾಯಿಯ,

ಅಣ್ಣಂದಿರ ಹಾಗೂ ಇತರ ಹಿರಿಯರ ಆಶೀರ್ವಾದವನ್ನು ಪಡೆದು, ತನ್ನ ಪತ್ನಿಯನ್ನು ಸಮಾಧಾನಪಡಿಸಿ ಇಂಗ್ಲೆಂಡಿಗೆ ಪ್ರಯಾಣವನ್ನು ಬೆಳೆಸಿದರು.

ಗಾಂಧೀಜಿಗೆ ಇಂಗ್ಲೀಷರ ಆಚಾರ ವಿಚಾರಗಳು ಆಗ ಅಷ್ಟಾಗಿ ತಿಳಿದಿರಲಿಲ್ಲ. ಇಂಗ್ಲೆಂಡನ್ನು ಸೇರಿದಮೇಲೆ ಅಲ್ಲಿ ವಾಸವಾಗಿದ್ದ ಅವರ ಮನೆತನದ ಗೆಳೆಯರಾದ ಡಾಕ್ಟರ್ 'ಮೆಹತಾ' ಎಂಬುವರಿಂದ ಸಾಕಷ್ಟು ವಿಚಾರಗಳನ್ನು ತಿಳಿದುಕೊಂಡರು. ಇಂಗ್ಲೆಂಡಿನ ಹೊಸ ವಾತಾವರಣದಲ್ಲಿ ಅಲ್ಲಿನ ಜನ ಮತ್ತು ಸಮಾಜದ ಪರಿಚಯವನ್ನು ಪಡೆಯುವುದಕ್ಕೆ ಸ್ವಲ್ಪಕಾಲ ಬೇಕಾಯಿತು. ಪ್ರಾರಂಭದಲ್ಲಿ ಮೆಹತಾರವರ ಸಲಹೆಯಂತೆ ಅವರ ಸ್ನೇಹಿತರೊಬ್ಬರ ಮನೆಯಲ್ಲಿದ್ದು ವ್ಯಾ ಸ ಂ ಗ ಮಾ ಡ ತೊ ಡ ಗಿ ದ ರು. ಆದರೆ ಗಾಂಧೀಜಿಯ ಮನಸ್ಸಿಗೆ ಅದು ತೃಪ್ತಿಕರವಾಗಿ ಕಾಣಲಿಲ್ಲ. ತುಂಬ ಸಭ್ಯ ಗೃಹಸ್ಥರ ಮನೆಯಲ್ಲಿದ್ದರೂ ಗಾಂಧೀಜಿಗೆ ಅವರ ಮನೆಯಲ್ಲಿನ ಆಹಾರ ಸೇರಲಿಲ್ಲ. ಶಾಕಾಹಾರಿಗಳಾಗಿದ್ದ ಅವರಿಗೆ ಮಾಂಸಾಹಾರವನ್ನು ತೆಗೆದುಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ಅವರ ಮನೆಯನ್ನು ಬಿಟ್ಟು ಒಬ್ಬ ಆಂಗ್ಲೊ ಇಂಡಿಯನ್ನರ ಮನೆಯಲ್ಲಿ ಕೆಲವು ದಿನಗಳನ್ನು ಕಳೆದರು. ಅಲ್ಲೂ ಆಹಾರ ಸರಿಬೀಳಲಿಲ್ಲ. ಕೊನೆಗೆ ಒಂದು ಕೊಠಡಿಯನ್ನು ಬಾಡಿಗೆಗೆ ತೆಗೆದುಕೊಂಡು ತಾವೇ ಅಡಿಗೆಯನ್ನು ಮಾಡಿಕೊಳ್ಳುವುದಕ್ಕೆ ಪ್ರಾರಂಭಿಸಿದರು. ಅದರಿಂದ ಅವರ ಖರ್ಚೂ ಕಡಿಮೆಯಾಯಿತು.

ಇಂಗ್ಲೆಂಡಿಗೆ ಬಂದ ಹೊಸದರಲ್ಲಿ ಇಂಗ್ಲಿಷ್ ಸಮಾಜಕ್ಕೆತಕ್ಕಂತೆ ವೇಷ ಭೂಷಣಗಳನ್ನು ಧರಿಸುವುದಕ್ಕಾಗಿ ಗಾಂಧೀಜಿ ತುಂಬ ಹಣವನ್ನು ವೆಚ್ಚ ಮಾಡಿದರು. ಸಂಗೀತ ನರ್ತನಾದಿಗಳನ್ನು ಕಲಿಯುವುದಕ್ಕೂ ಪ್ರಾರಂಭಿಸಿದರು. ಆದರೆ ಕೆಲವು ದಿನಗಳಲ್ಲೇ ಎಚ್ಚತ್ತು ಆಡಂಬರದ ಆ ಜೀವನವನ್ನು ಕೊನೆಗಾಣಿಸಿದರು. ಮಿತವ್ಯಯದಿಂದ ಸನ್ಮಾರ್ಗದಲ್ಲಿ ನಡೆಯಬೇಕೆಂಬುದನ್ನು ಅರಿತುಕೊಂಡರು. ಆಡಂಬರದ ಕೃ ತ ಕ ಜೀ ವ ನ ವು ಸಂಸ್ಕೃತಿಯ ಲಕ್ಷಣವಲ್ಲವೆಂದೂ ಉತ್ತಮ ನಡತೆಯಿಂದ ನಾಗರಿಕರಾಗಿ ಬಾಳುವುದು ಮುಖ್ಯವೆಂದೂ ಅವರಿಗೆ ಮನದಟ್ಟಾಯಿತು. ಅದರಂತೆ ತಮ್ಮ ಮುಂದಿನ ಜೀವನವನ್ನು ಪ್ರಾರಂಭಿಸಿದರು. ಗಾಂಧೀಜಿ ತಾವು ಖರ್ಚುಮಾಡಿದ ಪ್ರತಿಕಾಸಿಗೂ ಲೆಕ್ಕವನ್ನಿಡುತ್ತಿದ್ದರು. ಅದನ್ನು ಅವರು

ಮೊದಲಿನಿಂದಲೂ ಅಭ್ಯಾಸಮಾಡಿದ್ದರು. ಮಿತವ್ಯಯವಾಗಿ ಜೀವನ ನಡೆಸುವುದೇ ಅಲ್ಲದೆ ಜೀವನದ ಕ್ರಮ ಮತ್ತು ರೀತಿಗಳಲ್ಲೂ ಒಂದು ನಿಯಮವನ್ನು ಪಾಲಿಸಬೇಕೆಂದೂ, ಸತ್ಯಮಾರ್ಗದಲ್ಲಿ ಮುಂದುವರಿಯಬೇಕೆಂದೂ ನಿಶ್ಚಯಿಸಿದರು. ಗಾಂಧೀಜಿಯ ಜೀವನಕ್ರಮವು ಈ ರೀತಿ ಮಾರ್ಪಾಡಾದಂತೆ ಅವರ ಆಹಾರದ ಕ್ರಮವೂ ಬದಲಾವಣೆಯಾಗುತ್ತಾ ಬಂದಿತು. ಶಾಕಾಹಾರವು ಧಾರ್ಮಿಕವಾಗಿಯೂ ವೈಜ್ಞಾನಿಕವಾಗಿಯೂ ಸರಿಯಾದುದೆಂದು ಅವರಿಗೆ ಮನದಟ್ಟಾಯಿತು.

ಇಂಗ್ಲೆಂಡಿನಲ್ಲಿ ಗಾಂಧೀಜಿ ಅನೇಕ ಧಾರ್ಮಿಕ ವ್ಯಕ್ತಿಗಳ ಪರಿಚಯವನ್ನು ಪಡೆದರು. ನಾನಾ ಮತಧರ್ಮಗಳ ವಿಚಾರಗಳನ್ನೂ ಅರಿತರು. ಸಮಯ ಸಿಕ್ಕಿದಾಗ ಭಗವದ್ಗೀತೆ, ಕೊರಾನ್, ಬೈಬಲ್ ಹಾಗೂ ಬೌದ್ಧ ಧರ್ಮದ ತತ್ತ್ವಗಳನ್ನು ಆಸಕ್ತಿಯಿಂದ ಅಧ್ಯಯನ ಮಾಡುತ್ತಿದ್ದರು. ಭಗವದ್ಗೀತೆಯು ಅಮೂಲ್ಯ ಗ್ರಂಥವೆಂದು ಆಗ ಅವರಿಗೆ ವ್ಯಕ್ತವಾಯಿತು. ಆ ಧಾರ್ಮಿಕ ವ್ಯಾಸಂಗದಿಂದ ಅವರ ಮನೋವಿಕಾಸಕ್ಕೆ ಅವಕಾಶ ದೊರೆಯಿತು. ಗಾಂಧೀಜಿಯು ಅಪಾರವಾದ ಜ್ಞಾನ ಅನುಭವಗಳನ್ನು ಪಡೆದು, ಪರೀಕ್ಷೆಯನ್ನು ಮುಗಿಸಿಕೊಂಡು ಬ್ಯಾರಿಸ್ಟರಾಗಿ ೧೮೯೧ರಲ್ಲಿ ಸ್ವದೇಶಕ್ಕೆ ಹಿಂತಿರುಗಿದರು.

ಗಾಂಧೀಜಿ ಇಂಗ್ಲೆಂಡಿನಲ್ಲಿದ್ದಾಗಲೇ ಅವರ ಪ್ರೀತಿಯ ತಾಯಿಯು ಮರಣಹೊಂದಿದ್ದರು. ವಿದ್ಯಾಭ್ಯಾಸಕ್ಕೆ ತೊಂದರೆಯಾದೀತೆಂದು ಆ ವಿಚಾರವನ್ನು ಅವರ ಅಣ್ಣ ಅವರಿಗೆ ಮೊದಲು ತಿಳಿಸಿರಲಿಲ್ಲ. ಸ್ವದೇಶಕ್ಕೆ ಬಂದ ಮೇಲೆ ಆ ದಾರುಣವಾರ್ತೆ ತಿಳಿಯಿತು. ಅವರಿಗೆ ಅತ್ಯಂತ ವ್ಯಥೆಯಾಯಿತು. ಆ ದುಃಖಪ್ರಸಂಗದಲ್ಲಿಯೇ ಮತ್ತೆ ಕೆಲವು ತೊಂದರೆಗಳೂ ಎದುರಾದವು. ಅವರು ಸೀಮೆಗೆ ಹೋದ ವಿಷಯದಲ್ಲಿ ಅವರ ಕುಲದಲ್ಲಿ ಉಂಟಾಗಿದ್ದ ಅಸಮಾಧಾನವು ಇನ್ನೂ ಕೊನೆಗೊಂಡಿರಲಿಲ್ಲ. ಅದರಿಂದ ಎರಡು ಪಂಗಡಗಳಾಗಿ ಒಂದು ಪಂಗಡವು ಅವರನ್ನು ಜಾತಿಗೆ ಸೇರಿಸಿಕೊಂಡಿತು; ಮತ್ತೊಂದು ಪಂಗಡವು ಅವರನ್ನು ಬಹಿಷ್ಕರಿಸಿತು. ಆದರೆ ಗಾಂಧೀಜಿ ಈ ವಿವಾದಕ್ಕೆ ಗಮನವನ್ನು ಕೊಡಲೇ ಇಲ್ಲ.

ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ

ಬ್ಯಾರಿಸ್ಟರಾದಮೇಲೆ ಗಾಂಧೀಜಿಯು ಬೊಂಬಾಯಿನಲ್ಲಿ ವಕೀಲವೃತ್ತಿಯನ್ನು ಪ್ರಾರಂಭಿಸಿದರು. ಆದರೆ ತಮ್ಮ ಮೊದಲನೆಯ ಮೊಕದ್ದಮೆಯಲ್ಲೇ ಪರಾಜಿತರಾದರು. ಆದರಿಂದ ನಿರಾಶೆಗೊಂಡು ರಾಜಕೋಟೆಯಲ್ಲೇ ತಮ್ಮ ಸ್ವಂತ ಕಛೇರಿಯನ್ನು ತೆರೆದು, ವಕೀಲವೃತ್ತಿಯನ್ನಾರಂಭಿಸಿದರು. ಸ್ವಲ್ಪ ಕಾಲದಲ್ಲೇ ಹೆಚ್ಚು ಉದ್ಯೋಗವೂ ಉತ್ಪತ್ತಿಯೂ ದೊರೆಯುವಂತಾಯಿತು. ಅಷ್ಟರಲ್ಲೇ ಆಫ್ರಿಕದಲ್ಲಿ ವ್ಯಾಪಾರಮಾಡುತ್ತಿದ್ದ 'ದಾದಾ ಅಬ್ದುಲ್ಲಾ' ಎಂಬ ಒಂದು ಸಂಸ್ಥೆಯವರು ಭಾರಿ ಮೊಕದ್ದಮೆಯೊಂದರಲ್ಲಿ ತಮ್ಮ ಪರವಾಗಿ ವಾದ ನಡೆಸುವುದಕ್ಕಾಗಿ ಗಾಂಧೀಜಿಯ ನೆರವನ್ನು ಕೇಳಿದರು. ಖರ್ಚೆಲ್ಲವನ್ನೂ ತಾವೇ ವಹಿಸಿಕೊಂಡು ಮೇಲೆ ೧೫೭೫ ರೂಪಾಯಿಗಳ ಸಂಬಳ ಕೊಡುವುದಕ್ಕೆ ಕಂಪನಿಯವರು ಒಪ್ಪಿದರು. ಗಾಂಧೀಜಿಗೆ ಅದು ಅನುಕೂಲವಾಗಿ ಕಂಡಿತು. ಬೇರೆ ದೇಶವನ್ನು ನೋಡಿ ಅನುಭವ ಪಡೆಯಬೇಕೆಂಬ ತಮ್ಮ ಆಕಾಂಕ್ಷೆಯನ್ನು ಪೂರೈಸಿಕೊಳ್ಳುವುದಕ್ಕೆ ಒಂದು ಮಾರ್ಗವೂ ತಾನಾಗಿ ದೊರೆಯಿತು. ಗಾಂಧೀಜಿ ಕೂಡಲೆ ಒಪ್ಪಿಕೊಂಡರು. ದಕ್ಷಿಣ ಆಫ್ರಿಕಕ್ಕೆ ಹೋಗುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡು ಹಡಗನ್ನು ಹತ್ತಿ ಪ್ರಯಾಣ ಬೆಳೆಸಿದರು.

ಗಾಂಧೀಜಿ ಮೊದಲು ದಕ್ಷಿಣ ಆಫ್ರಿಕದ ನೇಟಾಲನ್ನು ಸೇರಿದರು. ಅಲ್ಲಿ ಅನೇಕ ಭಾರತೀಯರಿದ್ದರು. ಅಲ್ಲಿಯ ಬಿಳಿಯ ಜನರು ಭಾರತೀಯರನ್ನು ಕೀಳಾಗಿ ಕಾಣುತ್ತಿದ್ದುದು ಅವರಿಗೆ ತಿಳಿಯಿತು. ಅಲ್ಲಿ ಹೋಗಿ ನೆಲೆಸಿದ್ದ ಭಾರತೀಯರ ಸ್ಥಿತಿಗತಿಗಳು ತುಂಬ ಶೋಚನೀಯವಾಗಿದ್ದುವು. ದಕ್ಷಿಣ ಆಫ್ರಿಕದಲ್ಲಿ ಕಾರ್ಮಿಕರ ಕೊರತೆಯಿದ್ದಾಗ ಅಲ್ಲಿನ ಜನರ ಹಾಗೂ ಮುಖ್ಯವಾಗಿ ಆಡಳಿತ ನಡೆಸುತ್ತಿದ್ದ ಇಂಗ್ಲಿಷರ ಕೋರಿಕೆಯಂತೆ ಕೆಲವು ಭಾರತೀಯರು ಅಲ್ಲಿಗೆ ಹೋಗಿ ನೆಲೆಸಿದ್ದರು. ಅವರೊಡನೆ ಕೆಲವು ವರ್ತಕರೂ ಹೋಗಿ ಅಲ್ಲಿ ನೆಲೆಸಿ, ಕ್ರಮೇಣ ಐಶ್ವರ್ಯವಂತರಾದರು. ಅದು ಅಲ್ಲಿದ್ದ ಯೂರೋಪಿಯನ್ನರಿಗೆ ಸಹಿಸಲಾಗಲಿಲ್ಲ. ಆಗಾಗಲೇ ಬೋಅರ್ ರಿಪಬ್ಲಿಕ್ ಮುಂತಾದ ಕಡೆ ವರ್ಣದ್ವೇಷ ಬೆಳೆಯತೊಡಗಿತ್ತು. ಅಲ್ಲಿದ್ದ ಡಚ್ ಜನಾಂಗದವರು ಭಾರತೀಯರಿಗೆ ವಿಶೇಷ ಕಿರುಕುಳ ಕೊಡಲಾರಂಭಿಸಿದ್ದರು. ಪರಿ

ಣಾಮವಾಗಿ ಭಾರತೀಯ ಕಾರ್ಮಿಕರೂ ವರ್ತಕರೂ ಅನೇಕ ತೊಂದರೆಗಳಿಗೊಳಗಾದರು. ಅವರಲ್ಲಿ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮುಂತಾದವರೆಲ್ಲ ಇದ್ದರು. ೧೮೯೩ ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ಹೋದಾಗ ವರ್ಣದ್ವೇಷದ ಪರಿಣಾಮದಿಂದ ತಮ್ಮ ದೇಶೀಯರು ಅನುಭವಿಸುತ್ತಿದ್ದ ಕಷ್ಟನಷ್ಟಗಳನ್ನು ಕಣ್ಣಾರೆ ಕಂಡರು.

ಗಾಂಧೀಜಿ ತಾವು ವಹಿಸಿಕೊಂಡಿದ್ದ ವ್ಯವಹಾರವನ್ನು ನಡೆಸುವುದಕ್ಕಾಗಿ ಫ್ರಾಕ್‌ಕೋಟು ಮತ್ತು ರುಮಾಲು ಹಾಕಿಕೊಂಡು ನ್ಯಾಯಾಸ್ಥಾನವನ್ನು ಪ್ರವೇಶಿಸಿದರು. ನ್ಯಾಯಾಧೀಶರು ಐರೋಪ್ಯಪದ್ಧತಿಗನುಸಾರವಾಗಿ ರುಮಾಲನ್ನು ತೆಗೆಯಬೇಕೆಂದು ಹೇಳಿದರು. ಆದರೆ ಗಾಂಧೀಜಿ ಅದನ್ನು ಪ್ರತಿಭಟಿಸಿದರು. ರುಮಾಲು ತೆಗೆಯುವುದು ಭಾರತದ ಸಂಪ್ರದಾಯಕ್ಕೆ ವಿರುದ್ಧವೆಂದೂ ಅದರಿಂದ ಭಾರತೀಯರಿಗೆ ಅಪಮಾನ ಮಾಡಿದಂತಾಗುವುದೆಂದೂ ವಾದಿಸಿದರು. ಈ ಪ್ರಸಂಗದಿಂದ ವೃತ್ತಪತ್ರಿಕೆಗಳ ಮೂಲಕ ಗಾಂಧೀಜಿಯ ಹೆಸರು ದಕ್ಷಿಣ ಆಫ್ರಿಕದಲ್ಲೆಲ್ಲಾ ಪ್ರಸಿದ್ಧವಾಯಿತು. ಕೊನೆಗೆ ಗಾಂಧೀಜಿಯ ವಾದವನ್ನು ವಿಮರ್ಶಿಸಿ, ದಕ್ಷಿಣ ಆಫ್ರಿಕದ ನ್ಯಾಯಾಲಯಗಳಲ್ಲೂ ಭಾರತೀಯರು ರುಮಾಲುಗಳನ್ನು ಧರಿಸಿಕೊಂಡಿರುವುದಕ್ಕೆ ಸಮ್ಮತಿ ದೊರೆಯಿತು.

ವ್ಯವಹಾರನಿಮಿತ್ತವಾಗಿ ಗಾಂಧೀಜಿ ಒಂದುದಿನ ಪ್ರಿಟೋರಿಯಾಕ್ಕೆ ಹೋಗಬೇಕಾಗಿ ಬಂದಿತು. ಮೊದಲನೇ ತರಗತಿಯ ಟಿಕೆಟ್ಟನ್ನು ಕೊಂಡುಕೊಂಡು ರೈಲುಗಾಡಿಯನ್ನು ಹತ್ತಿದರು. ರೈಲು ಮ್ಯಾರಿಟ್ಸ್‌ಬರ್ಗನ್ನು ತಲಪಿದಾಗ ರಾತ್ರಿ ಒಂಬತ್ತು ಗಂಟೆಯಾಗಿತ್ತು. ಅಲ್ಲಿ ಒಬ್ಬ ಯೂರೋಪಿಯನ್ ಪ್ರಯಾಣಿಕನು ಗಾಂಧೀಜಿ ಕುಳಿತಿದ್ದ ಗಾಡಿಯನ್ನೇ ಹತ್ತಿದನು. ಗಾಂಧೀಜಿಯನ್ನು ನೋಡಿದಕೂಡಲೇ ಹೊರಗೆ ಹೋಗಿ ರೈಲ್ವೆ ಅಧಿಕಾರಿಗಳಿಬ್ಬರನ್ನು ಕರೆದುಕೊಂಡು ಬಂದನು. ಆ ರೈಲ್ವೆ ಅಧಿಕಾರಿಗಳು ಗಾಂಧೀಜಿಯನ್ನು ಕೊನೆಯ ಗಾಡಿಗೆ ಹೋಗುವಂತೆ ಹೇಳಿದರು. ಆದರೆ ತಾವು ಮೊದಲನೇ ತರಗತಿಯ ಟಿಕೆಟ್ಟನ್ನು ಕೊಂಡಿರುವುದರಿಂದ ಅದು ಸಾಧ್ಯವಿಲ್ಲವೆಂದು ಗಾಂಧೀಜಿಯು ಪ್ರತಿಭಟಿಸಿದರು. ಆದರೆ ಆ ಅಧಿಕಾರಿಗಳು ಇದಾವುದನ್ನೂ ಕೇಳದೆ ಪೋಲೀಸರ ಸಹಾಯದಿಂದ ಗಾಂಧೀಜಿಯನ್ನು ಬಲವಂತವಾಗಿ ಕೆಳಗಿಳಿಸಿದರು. ಗಾಂಧೀಜಿಯು ಕೊನೆಯ ಗಾಡಿಯಲ್ಲಿ ಹೋಗಿ ಕುಳಿತು

ಕೊಳ್ಳಲು ನಿರಾಕರಿಸಿದರು. ರೈಲ್ವೆಯ ಮುಖ್ಯಾಧಿಕಾರಿಗಳಿಗೆ ತಂತಿಮೂಲಕ ದೂರು ಕೊಟ್ಟರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಅಲ್ಲಿನ ಹೋಟೆಲುಗಳಲ್ಲಿಯೂ ಇದೇ ಧೋರಣೆಯು ಕಂಡುಬಂದಿತು. ದಕ್ಷಿಣ ಆಫ್ರಿಕದಲ್ಲಿ ವರ್ಣಭೇದ ನೀತಿ ತುಂಬ ಕ್ರೂರವಾಗಿದ್ದಿತು. ಗಾಂಧೀಜಿ ಭಾರತೀಯರಿಗಾಗುತ್ತಿದ್ದ ಈ ಅನ್ಯಾಯ ಅಪಮಾನಗಳನ್ನು ಕಂಡು ಅವನ್ನು ಎದುರಿಸಬೇಕೆಂದು ನಿರ್ಧರಿಸಿದರು. ಭಾರತೀಯರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟವನ್ನು ಪ್ರಾರಂಭಿಸಿದರು.

ದಕ್ಷಿಣ ಆಫ್ರಿಕದಲ್ಲಿ ನೆಲಸಿದ್ದ ಭಾರತೀಯರನೇಕರನ್ನು ಕಂಡು ವಿಚಾರಗಳನ್ನು ಗ್ರಹಿಸಿದರು. ಅವರ ಸ್ಥಿತಿಗತಿಗಳನ್ನೂ ಅವರಿಗಿದ್ದ ಪ್ರತಿಕೂಲಗಳನ್ನೂ ತಿಳಿದು ಮರುಗಿದರು. ಮಾನವ ಜನಾಂಗಕ್ಕಿರುವ ಮೂಲಭೂತ ಹಕ್ಕುಗಳಿಗೂ ಭಾರತೀಯರಿಗೆ ದಕ್ಷಿಣಆಫ್ರಿಕದಲ್ಲಿ ಅವಕಾಶವಿರಲಿಲ್ಲ. ಭಾರತೀಯರ ಈ ಅಸಹಾಯಕ ಸ್ಥಿತಿಯನ್ನೂ, ಅನ್ಯಾಯ ಅವಮಾನಗಳನ್ನೂ ಕಂಡು ಸಾತ್ವಿಕ ಸ್ವಭಾವದ ಗಾಂಧೀಜಿಯೂ ಕ್ರೋಧಗೊಂಡರು. ಅವನ್ನು ಎದುರಿಸಬೇಕಾದರೆ ಅಲ್ಲಿ ನೆಲಸಿದ್ದ ಎಲ್ಲಾ ಭಾರತೀಯರು ಒಗ್ಗಟ್ಟಿನಿಂದ ವರ್ತಿಸುವ ಆವಶ್ಯಕತೆಯನ್ನು ಅರಿತರು. ಪ್ರಿಟೋರಿಯಾಕ್ಕೆ ಬಂದಮೇಲೆ ಅಲ್ಲಿನ ಭಾರತೀಯರನ್ನೆಲ್ಲ ಒಂದೆಡೆ ಸೇರಿಸಿ ಐಕಮತ್ಯ, ಪ್ರಾಮಾಣಿಕತೆ, ನಿತ್ಯಜೀವನದಲ್ಲಿ ನೈರ್ಮಲ್ಯಾದಿಗಳ ಮಹತ್ವವನ್ನು ಅವರಿಗೆ ವಿವರಿಸಿದರು. ಹಿಂದು, ಮುಸಲ್ಮಾನ, ಕ್ರೈಸ್ತ ಎಂಬ ಭೇದಭಾವನೆಗಳನ್ನು ತೊರೆದು ತಾವೆಲ್ಲರೂ ಒಂದೇ ದೇಶದವರು, ಒಂದೇ ಮಾತೃಭೂಮಿಯ ಅಣ್ಣತಮ್ಮಂದಿರು ಎಂಬ ಭಾವನೆಯಿಂದ ಒಗಟ್ಟಾಗಿ ತಮಗಾಗುವ ಅನ್ಯಾಯ ತೊಂದರೆಗಳನ್ನು ಪರಿಹರಿಸಿಕೊಳ್ಳಬೇಕೆಂದು ಬುದ್ಧಿವಾದವನ್ನು ಹೇಳಿದರು. ವ್ಯಾಪಾರಿಗಳು ಸತ್ಯದಿಂದ, ಧರ್ಮಮಾರ್ಗವನ್ನು ಬಿಡದೆ, ಕರ್ತವ್ಯಪರರಾಗಿ ನಡೆಯಬೇಕೆಂದು ತಿಳಿಯಪಡಿಸಿದರು. ಮುಖ್ಯವಾಗಿ ಪರದೇಶಗಳಲ್ಲಿರುವ ಭಾರತೀಯರ ಜವಾಬ್ದಾರಿ ಹೆಚ್ಚೆಂದೂ ಅವರನ್ನು ನೋಡಿಯೇ ಪರದೇಶೀಯರು ಭಾರತೀಯರೆಲ್ಲರ ಯೋಗ್ಯತೆಯನ್ನು ಅಳೆಯುತ್ತಾರೆಂದೂ ವಿಶದಪಡಿಸಿದರು. ಸುತ್ತಮುತ್ತಲೂ ವಾಸಿಸುತ್ತಿದ್ದ ಆಂಗ್ಲೇಯರೊಡನೆ ಹೋಲಿಸಿದರೆ ಅಲ್ಲಿ ನೆಲೆಸಿದ್ದ ಭಾರತೀಯರು ಸಾಮಾನ್ಯವಾಗಿ ಶುಚಿ, ಶುಭ್ರತೆಗಳಿಗೆ

ಸಾಕಷ್ಟು ಗಮನ ಕೊಡುತ್ತಿರಲಿಲ್ಲವೆಂಬುದು ಅವರ ಗಮನಕ್ಕೆ ಬಂದಿತು. ಆ ಸಭೆಯನ್ನು ಸೇರಿಸಿದ್ದರಿಂದ ಅಲ್ಲಿ ನೆಲೆಸಿದ್ಧ ಭಾರತೀಯರ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಹಿನ್ನೆಲೆಯನ್ನು ತಿಳಿದಂತಾಯಿತು.

ದಕ್ಷಿಣ ಆಫ್ರಿಕದಲ್ಲಿ ಭಾರತೀಯ ನಿವಾಸಿಗಳು ಅನೇಕ ವರ್ಷಗಳು ದುಡಿದಿದ್ದರೂ ಅವರು ಅಲ್ಲಿ ನೆಲೆಸುವುದಕ್ಕೆ ಅವಕಾಶವಿಲ್ಲವಾಯಿತು. ಕೆಲವು ಗೊತ್ತಾದ ಪ್ರದೇಶಗಳಲ್ಲಲ್ಲದೆ ಇತರ ಭಾಗಗಳಲ್ಲಿ ಭೂಮಿಯನ್ನು ಕೊಳ್ಳಲಾಗದಂತೆ ಕಾನೂನುಗಳು ಜಾರಿಗೆ ಬಂದವು. ಅಷ್ಟೇ ಸಾಲದೆಂದು ನೀಗ್ರೋ ಮುಂತಾದ ಕಪ್ಪು ಜನಾಂಗಗಳನ್ನು ತುಳಿದಿದ್ದಂತೆಯೇ ಭಾರತೀಯರನ್ನೂ ತುಳಿಯುವುದಕ್ಕೆ ಪ್ರಯತ್ನಗಳಾದುವು. ನೀಗ್ರೋ ಮುಂತಾದ ಕಪ್ಪು ಜನಾಂಗಗಳಿಗೆ ಮಾಡಿದ್ದ ಕಾಯಿದೆಗಳನ್ನು ಭಾರತೀಯರೂ ಪಾಲಿಸಬೇಕೆಂದು ಒತ್ತಾಯಪಡಿಸಿದರು. ಅದರಿಂದ ಭಾರತೀಯರು ಕಾಲುದಾರಿಯಲ್ಲಿ ನಡೆಯುವುದಕ್ಕೂ, ರಾತ್ರಿ ಒಂಬತ್ತು ಗಂಟೆಯಮೇಲೆ ಅಪ್ಪಣೆ ಚೀಟಿಯಿಲ್ಲದೆ ಹೊರಗೆ ಬರುವುದಕ್ಕೂ ಅವಕಾಶವಿಲ್ಲದಂತಾಯಿತು. ಹೀಗೆ ದಿನೇ ದಿನೇ ಭಾರತೀಯರ ಮೇಲೆ ಅಪಮಾನಕರವಾದ ಕಾನೂನುಗಳು ಜಾರಿಗೆ ಬಂದುವು. ಅವನ್ನೆಲ್ಲ ಕಣ್ಣಾರೆ ಕಂಡ ಗಾಂಧೀಜಿಗೆ ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯರು ಆತ್ಮಗೌರವವನ್ನು ಉಳಿಸಿಕೊಂಡು ಬಾಳುವುದು ಅಸಾಧ್ಯವೆಂದು ಮನದಟ್ಟಾಯಿತು.

ಗಾಂಧೀಜಿಯವರಿಗೆ ಅಸಹಾಯಕರಾದ ಭಾರತೀಯರ ವಿಷಯದಲ್ಲಿ ತುಂಬ ಸಹಾನುಭೂತಿಯುಂಟಾಯಿತು. ಅವರ ತೊಂದರೆಗಳನ್ನೆಲ್ಲ ಪಾರು ಮಾಡುವುದಕ್ಕೆ ಪ್ರಯತ್ನಿಸಿದರು. ರೈಲ್ವೆ ಅಧಿಕಾರಿಗಳೊಡನೆ ವ್ಯವಹರಿಸಿ, ರೈಲ್ವೆ ಪ್ರಯಾಣದಲ್ಲಿ ಒದಗುತ್ತಿದ್ದ ತೊಂದರೆಗಳನ್ನು ವಿವರಿಸಿ, ಭಾರತೀಯರ ಮೇಲೆ ಹೊರಿಸಿದ್ದ ನಿಬಂಧನೆಗಳು ಅನ್ಯಾಯವಾದುವೆಂದು ವಾದಿಸಿದರು. ಗಾಂಧೀಜಿಯವರ ಸತತ ಪ್ರಯತ್ನಗಳಿಂದಾಗಿ ನಾಜೂಕಾಗಿ ಬಟ್ಟೆ ಹಾಕಿಕೊಂಡಿರುವ ಭಾರತೀಯರಿಗೂ ಮೇಲ್ತರಗತಿಯ ಟಿಕೆಟ್ಟುಗಳನ್ನು ಕೊಡಲಾಗುವುದೆಂದು ಅವರಿಂದ ಉತ್ತರ ಬಂದಿತು. ಕಾಲುದಾರಿಯ ಕಾನೂನಿನ ವಿಚಾರದಲ್ಲೂ ಬ್ರಿಟಿಷ್ ಏಜಂಟರೊಂದಿಗೆ ಚರ್ಚೆಯನ್ನು ನಡೆಸಿದರು.

ಗಾಂಧೀಜಿಯವರು ವಹಿಸಿಕೊಂಡಿದ್ದ ದಾದಾ ಅಬ್ದುಲ್ಲಾ ಸಂಸ್ಥೆಯ

ಮೊಕದ್ದಮೆ ಆರುಲಕ್ಷ ರೂಪಾಯಿಗಳ ದಾವವಾಗಿದ್ದಿತು. ವಿಷಯಗಳನ್ನು ಪರಿಶೀಲಿಸಿ ಮೊಕದ್ದಮೆಯ ಪೂರ್ಣವಿವರಗಳನ್ನು ಗಾಂಧೀಜಿ ಅರಿತರು. ನೈಜವಾದ ಆಧಾರದಮೇಲೆ ವಿಚಾರಮಾಡಿದಲ್ಲಿ ನ್ಯಾಯವು ದಾದಾಅಬ್ದುಲ್ಲಾ ಅವರ ಕಡೆಗಿರುವುದು ಅವರಿಗೆ ಸ್ಪಷ್ಟವಾಯಿತು. ಅದೂ ಅಲ್ಲದೆ ಆ ಮೊಕದ್ದಮೆಯ ಕಕ್ಷಿ ಪ್ರತಿಕಕ್ಷಿಗಳಿಬ್ಬರೂ ಒಂದೇ ಊರಿನ ಬಂಧುಗಳಾಗಿದ್ದರು. ಆ ಮೊಕದ್ದಮೆಯು ಸಾಮಾನ್ಯವಾದುದಾಗಿರಲಿಲ್ಲ. ಆದುದರಿಂದ ಅದು ತೀರ್ಮಾನವಾಗುವುದಕ್ಕೆ ಬಹಳ ಕಾಲ ಹಿಡಿಸುವುದಲ್ಲದೆ ಇಬ್ಬರೂ ಅಧಿಕ ನಷ್ಟವನ್ನು ಅನುಭವಿಸಬೇಕಾಗುವುದೆಂದೂ ಗಾಂಧೀಜಿ ಮನಗಂಡರು. ಕಕ್ಷಿ ಪ್ರತಿಕಕ್ಷಿಗಳಿಬ್ಬರೂ ದೊಡ್ಡ ವ್ಯಾಪಾರಿಗಳಾಗಿದ್ದರೂ ಆ ಮೊಕದ್ದಮೆಯ ವಕೀಲರಿಗೆ ಫೀಜು ಕೊಡುವುದೂ ಅವರ ವರಮಾನದಿಂದ ಸಾಧ್ಯವಿರಲಿಲ್ಲ. ಈ ವಿಚಾರಗಳನ್ನು ತಿಳಿದ ಗಾಂಧೀಜಿಗೆ ಆ ವರ್ತಕರ ವಿಚಾರದಲ್ಲಿ ಕನಿಕರ ವುಂಟಾಯಿತು. ಆ ಮೊಕದ್ದಮೆಯಿಂದ ಬಂಧುಗಳಿಬ್ಬರೂ ಅನವಶ್ಯ ಚಿಂತೆ ನಷ್ಟಗಳನ್ನು ಅನುಭವಿಸುತ್ತಿದ್ದರು. ಮತ್ತು ಪರಸ್ಪರ ವೈಮನಸ್ಯವೂ ಬೆಳೆಯುತ್ತಿತ್ತು. ಆದುದರಿಂದಲೇ ಆ ಬಂಧುಗಳಿಬ್ಬರನ್ನೂ ಒಟ್ಟಿಗೆ ಸೇರಿಸಿ, ರಾಜಿ ಮಾಡಿಸುವುದು ಧರ್ಮವೆಂದು ಗಾಂಧೀಜಿಗೆ ತೋರಿತು. ಅದಕ್ಕಾಗಿ ತಮ್ಮ ಸಾಹಸವನ್ನೆಲ್ಲ ಉಪಯೋಗಿಸಿದರು. ಎರಡು ಪಕ್ಷಗಳ ಸಮ್ಮತಿಯನ್ನೂ ಪಡೆದು ಪಂಚಾಯಿತಿಯವರನ್ನು ಗೊತ್ತುಮಾಡಿ, ಚರ್ಚೆ ನಡೆಸಿ ರಾಜಿ ಮಾಡಿಸಿದರು. ನ್ಯಾಯದಂತೆ ಅಬ್ದುಲ್ಲಾ ಸೇಠರು ಗೆದ್ದರು. ತಯಾಬ್ ಸೇಠರು ಕಂತುಗಳ ಮೂಲಕ ಹಣವನ್ನು ಕೊಡುವುದಕ್ಕೆ ಒಪ್ಪಿಕೊಂಡರು. ಅದರಿಂದ ಎರಡು ಪಕ್ಷಗಳಿಗೂ ತುಂಬ ಸಂತೋಷವಾಯಿತು. ಆ ಕಾರ್ಯಸಾಧನೆಯಿಂದ ಗಾಂಧೀಜಿಯೂ ತೃಪ್ತಿಗೊಂಡರು.

ಗಾಂಧೀಜಿ ವಕೀಲರಾಗಿದ್ದರೂ ಸತ್ಯಧರ್ಮಗಳನ್ನು ತಪ್ಪದೆ ಪಾಲಿಸುತ್ತಿದ್ದರು. ಸುಳ್ಳುಮೊಕದ್ದಮೆಗಳನ್ನು ತೆಗೆದುಕೊಳ್ಳದೆ, ಸುಳ್ಳುಸಾಕ್ಷಿಗಳನ್ನು ಹೇಳಿಸದೆ, ಸತ್ಯವ್ಯವಹಾರಗಳನ್ನೇ ವಹಿಸಿಕೊಳ್ಳುತ್ತಿದ್ದರು. ಇದರಿಂದ ವಕೀಲರೂ ಸಹ ಸತ್ಯವನ್ನು ಪಾಲಿಸುವುದು ಸಾಧ್ಯವೆಂಬುದನ್ನು ಸ್ವತಃ ತೋರಿಸಿಕೊಟ್ಟು, ಇತರರಿಗೆ ಮಾರ್ಗದರ್ಶಕರಾದರು. ತಮ್ಮ ಬಳಿಗೆ ಬಂದ ಹೊಸ ಕಕ್ಷಿದಾರರಿಗೆ ಸುಳ್ಳು ಕೇಸುಗಳನ್ನು ತೆಗೆದುಕೊಳುವುದಿಲ್ಲವೆಂದೂ

ಸಾಕ್ಷಿಗಳಿಗೆ ಸುಳ್ಳು ಹೇಳಿಕೊಡುವುದಿಲ್ಲವೆಂದೂ ಮೊದಲೇ ತಿಳಿಸುತ್ತಿದ್ದರು. ಪರಿಣಾಮವಾಗಿ ಸುಳ್ಳುಮೊಕದ್ದಮೆಗಳು ಅವರಲ್ಲಿಗೆ ಬರುತ್ತಲೇ ಇರಲಿಲ್ಲ. ಗಾಂಧೀಜಿಯ ಸತ್ಯಸಂಧತೆಯು ಒಂದೆರಡು ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ.

ಒಂದು ಮೊಕದ್ದಮೆಯಲ್ಲಿ ತನ್ನ ಒಬ್ಬ ಕಕ್ಷಿದಾರನ ಅನೇಕ ಸಮಸ್ಯೆಗಳನ್ನೊಳಗೊಂಡಿದ್ದ ದಾವೆಯು ಬಹಳ ಕಾಲದಿಂದಲೂ ನಡೆದುಬಂದಿತ್ತು. ಹರಕುಮುರುಕಾಗಿ ಹಲವು ನ್ಯಾಯಾಸ್ಥಾನಗಳಲ್ಲಿ ಅದರ ವಿಚಾರಣೆ ನಡೆದಿತ್ತು. ಆ ವ್ಯವಹಾರದ ಲೆಕ್ಕಾಚಾರದಲ್ಲಿ ಪಂಚಾಯಿತರು ಒಂದು ತಪ್ಪನ್ನು ಮಾಡಿದ್ದರು. ಜಮಾ ಲೆಕ್ಕದಲ್ಲಿರಬೇಕಾದದ್ದು ಸಾಲದ ಲೆಕ್ಕಕ್ಕೆ ಸೇರಿಸಲ್ಪಟ್ಟಿತ್ತು. ಪ್ರತಿಕಕ್ಷಿಯು ಬೇರೆ ಕಾರಣಗಳಿಂದ ತೀರ್ಮಾನವನ್ನು ಒಪ್ಪಿರಲಿಲ್ಲ. ಗಾಂಧೀಜಿಯು ಆ ಕೇಸಿನಲ್ಲಿ ಸಹಾಯಕ ವಕೀಲರಾಗಿದ್ದರು. ಹಿರಿಯ ಲಾಯರಿಗೆ ಆ ವಿಚಾರ ತಿಳಿಸಿದಾಗ ತಮ್ಮ ಕಕ್ಷಿ ಆ ತಪ್ಪಿಗೆ ಜವಾಬ್ದಾರರಲ್ಲವೆಂದೂ ತಮ್ಮ ಕಕ್ಷಿಗೆ ಪ್ರತಿಕೂಲವಾದುದನ್ನು ಒಪ್ಪಿಕೊಳ್ಳುವುದು ಸರಿಯಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಆದರೆ ಗಾಂಧೀಜಿಗೆ ಅದು ಸರಿದೋರಲಿಲ್ಲ. ಅದರಿಂದ ನ್ಯಾಯಾಸ್ಥಾನವು ಸಂಪೂರ್ಣ ತೀರ್ಮಾನವನ್ನೇ ತಳ್ಳಿಹಾಕುವ ಸಂಭವವಿದ್ದಿತು. ಹಿರಿಯಲಾಯರು ಮಾತ್ರ ಆ ತಪ್ಪನ್ನು ಒಪ್ಪಿಕೊಳ್ಳುವುದಕ್ಕೆ ಸಿದ್ಧರಿರಲಿಲ್ಲ. ಗಾಂಧೀಜಿಯು ನ್ಯಾಯಾಸ್ಥಾನವು ತಪ್ಪನ್ನು ಕಂಡುಹಿಡಿಯುವುದಿಲ್ಲವೆಂಬ ಭರವಸೆಯಿಲ್ಲವೆಂದೂ ತಪ್ಪಿಗಾಗಿ ತಾವೂ ತಮ್ಮ ಕಕ್ಷಿದಾರರೂ ಸ್ವಲ್ಪ ನಷ್ಟವನ್ನು ಅನುಭವಿಸಬೇಕೆಂದೂ, ಇಲ್ಲವಾದರೆ ತಮಗೆ ಈ ಕೇಸಿನ ಸಂಬಂಧವೇ ಬೇಡವೆಂದೂ ತಿಳಿಸಿದರು. ಅವೆಲ್ಲವನ್ನೂ ಅಲ್ಲೇ ಕೇಳುತ್ತಿದ್ದ ಕಕ್ಷಿದಾರನಿಗೆ ಗಾಬರಿಯಾಯಿತು. ಆತನು ಗಾಂಧೀಜಿ ಬಳಿ ತಪ್ಪನ್ನು ಒಪ್ಪಿಕೊಂಡು ಮೊಕದ್ದಮೆಯಲ್ಲಿ ವಾದಿಸುವಂತೆ ಕೇಳಿಕೊಂಡನು. ಮೊಕದ್ದಮೆಯನ್ನು ಕಳೆದುಕೊಂಡರೂ ಚಿಂತೆಯಿಲ್ಲವೆಂದು ಎಂದಾದರೂ ಸತ್ಯಕ್ಕೇ ಜಯವಿದೆಯೆಂದೂ ಆತನು ಹೇಳಿದ್ದನ್ನು ಕೇಳಿ ಗಾಂಧೀಜಿಗೆ ಸಂತೋಷವಾಯಿತು. ಹಿರಿಯಲಾಯರು ವಿಷಾದ ತೋರಿಸಿ ಎಚ್ಚರಿಕೆ ಕೊಟ್ಟರೂ ಕೇಳದೆ ಗಾಂಧೀಜಿ ತಪ್ಪನ್ನು ನ್ಯಾಯಸ್ಥಾನದಲ್ಲಿ ಒಪ್ಪಿಕೊಂಡರು. ಮೊಕದ್ದಮೆ ಪುನರ್ವಿಚಾರಣೆಗೆ ಹೋಗಲಿಲ್ಲ. ತಪ್ಪನ್ನು ತಿದ್ದಿ

ಪಂಚಾಯಿತರು ಕೊಟ್ಟ ತೀರ್ಮಾನವನ್ನು ನ್ಯಾಯಾಸ್ಥಾನವು ಒಪ್ಪಿಕೊಂಡಿತು. ಅದರಿಂದ ಗಾಂಧೀಜಿಗೂ ಅವರ ಕಕ್ಷಿದಾರರಿಗೂ ಹಿರಿಯ ಲಾಯರಿಗೂ ಬಹಳ ಸಂತೋಷವಾಯಿತು. ಇದರಿಂದ ಸತ್ಯಕ್ಕೆ ಚ್ಯುತಿ ಬಾರದಂತೆ ವಕೀಲರಾಗಿರುವುದು ಸಾಧ್ಯವೆಂದು ತೋರಿಸಿಕೊಟ್ಟಂತಾಯಿತು.

ಮತ್ತೊಂದು ಮೊಕದ್ದಮೆಯಲ್ಲಿ ಜೋಹಾನ್ಸ್‌ಬರ್ಗಿನ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ತಾವು ವಾದಿಸುತ್ತಿದ್ದಾಗ ತಮ್ಮ ಕಕ್ಷಿದಾರನು ತಮಗೆ ಮೋಸಮಾಡಿದ್ದ ವಿಚಾರ ತಿಳಿಯಿತು. ಸಾಕ್ಷಿ ಹೇಳುವಾಗ ತಪ್ಪು ಸ್ಪಷ್ಟವಾಯಿತು. ಕೂಡಲೆ ಗಾಂಧೀಜಿಯು ವಾದಮಾಡದೆ ಆ ಮೊಕದ್ದಮೆಯನ್ನು ವಜಾಮಾಡುವಂತೆ ಕೇಳಿಕೊಂಡರು. ಪ್ರತಿಕಕ್ಷಿಯ ಲಾಯರು ಆಶ್ಚರ್ಯಪಟ್ಟರು. ನ್ಯಾಯಾಧಿಪತಿಗಳು ಸಂತೋಷಪಟ್ಟರು. ಗಾಂಧೀಜಿ ತಮ್ಮ ಕಕ್ಷಿದಾರನು ಮಾಡಿದ ತಪ್ಪಿಗಾಗಿ ಅವನನ್ನು ನಿಂದಿಸಿದಾಗ ಅವನು ತಪ್ಪನ್ನು ಒಪ್ಪಿಕೊಂಡನು. ಹೀಗೆ ಗಾಂಧೀಜಿಯು ಸತ್ಯಮಾರ್ಗದಲ್ಲಿಯೇ ನಡೆಯುತ್ತಿದ್ದರೂ ಅವರ ಉದ್ಯೋಗಕ್ಕೆ ಬಾಧಕವಾಗಲಿಲ್ಲ. ಅದರಿಂದ ಅವರ ಕೀರ್ತಿ ಹಬ್ಬಿತು.

ಗಾಂಧೀಜಿಯು ತಮಗೆ ತಿಳಿಯದುದನ್ನು ಇತರ ಹಿರಿಯ ವಕೀಲರಿಂದ ಕೇಳಿ ತಿಳಿದುಕೊಳ್ಳುತ್ತಿದ್ದರು. ತಮಗೆ ಎಲ್ಲವೂ ತಿಳಿದಿದೆಯೆಂಬ ಗರ್ವವಾಗಲಿ ಪರರಮುಂದೆ ತಮಗೆ ತಿಳಿಯದುದನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ಯಾವ ಸಂಕೋಚವಾಗಲಿ ಅವರಿಗಿರಲಿಲ್ಲ. ಮುಚ್ಚುಮರೆಯಿಲ್ಲದೆ ಕಕ್ಷಿದಾರರಿಗೆ ವಿಚಾರಗಳನ್ನು ತಿಳಿಸುತ್ತಿದ್ದರು. ನ್ಯಾಯವಾಗಿ ತಮಗೆ ಸಲ್ಲಬೇಕಾದ ಹಣವನ್ನಲ್ಲದೆ ಒಂದು ಕಾಸನ್ನೂ ಹೆಚ್ಚಾಗಿ ಪಡೆಯುತ್ತಿರಲಿಲ್ಲ. ಯಾವ ರೀತಿಯಲ್ಲೂ ಮೋಸದ ಸುಳಿವೇ ಇಲ್ಲದೆ ಪ್ರಾಮಾಣಿಕರಾಗಿ, ನಿಸ್ಪೃಹರಾಗಿದ್ದುದರಿಂದ ಜನರಲ್ಲಿ ಪ್ರೀತಿ, ನಂಬಿಕೆಗಳನ್ನು ಗಳಿಸಿ, ಜನಪ್ರಿಯರಾಗುವುದಕ್ಕೆ ಬಹಳ ಕಾಲ ಬೇಕಾಗಲಿಲ್ಲ.

ನೇಟಾಲ್ ಇಂಡಿಯನ್ ಕಾಂಗ್ರೆಸ್

ದಕ್ಷಿಣ ಆಫ್ರಿಕಕ್ಕೆ ಬಂದಿದ್ದ ಕಾರ್ಯ ಮುಗಿದಿದ್ದರೂ ಗಾಂಧೀಜಿ ಸ್ವದೇಶಕ್ಕೆ ಕೂಡಲೇ ಹಿಂತಿರುಗಲಾಗಲಿಲ್ಲ. ಮುಖ್ಯವಾಗಿ ಅಲ್ಲಿನ ಜನತೆಯ ಸೇವೆಗಾಗಿ ವಕೀಲರಾಗಿ ನಿಲ್ಲಬೇಕಾಯಿತು. ತಮ್ಮ ಸತ್ಯ, ಸಾತ್ವಿಕಸ್ವಭಾವ

ದಿಂದ ಅನೇಕ ಕಕ್ಷಿದಾರರನ್ನು ಪಡೆದಂತೆಯೇ ಅನೇಕ ಗೆಳೆಯರನ್ನೂ ಪಡೆದರು. ಗಾಂಧೀಜಿಯ ಪ್ರಯತ್ನದಿಂದ ನೂರಾರು ಜನ ಕಕ್ಷಿದಾರರು ಸೇವಾಮನೋಭಾವನೆಯಿಂದ ಅವರ ಸಹೋದ್ಯೋಗಿಗಳಾಗಿ ಸೇವಾಕಾರ್ಯ ದಲ್ಲಿ ನಿರತರಾದರು. ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಸ್ಥಿತಿ ದಿನೇ ದಿನೇ ಕಠಿಣವಾಗುತ್ತ ಬಂದಿತು. ಅಲ್ಲಿ ನೆಲೆಸಿದ್ದ ಭಾರತೀಯರು ತಮಗಿದ್ದ ಕುಂದುಕೊರತೆಗಳನ್ನು ವಿವರಿಸಿ, ತಮಗಾಗಿ ಗಾಂಧೀಜಿ ಅಲ್ಲಿಯೇ ಸ್ವಲಕಾಲ ನಿಲ್ಲಬೇಕೆಂದು ಕೇಳಿಕೊಂಡರು. ನೇಟಾಲ್ ಮತ್ತು ಟ್ರಾನ್ಸ್‌ವಾಲ್‌ಗಳಲ್ಲಿ ಭಾರತೀಯ ನಿವಾಸಿಗಳು ತಮ್ಮ ಮತಾಧಿಕಾರವನ್ನೂ ಚಲಾಯಿಸದಂತೆ ನಾಗರಿಕ ಹಕ್ಕನ್ನು ಕಸಿದುಕೊಳ್ಳುವುದಕ್ಕೆ ಹೊಸ ಕಾನೂನುಗಳು ಜಾರಿಗೆ ಬರುತ್ತವೆ ಎಂಬ ಸುಳಿವು ತಿಳಿಯಿತು. ಅದನ್ನು ಪ್ರತಿಭಟಿಸಿ, ಭಾರತೀಯರ ಹಕ್ಕುಬಾಧ್ಯತೆಗಳನ್ನು ಉಳಿಸುವುದಕ್ಕೆ ಗಾಂಧೀಜಿಯ ನೆರವು ಆಗತ್ಯವಾ ಗಿತ್ತು. ಗಾಂಧೀಜಿ ಸ್ವದೇಶೀಯರ ಅಭಿಮತದಂತೆ ಅಲ್ಲೇ ನಿಂತು "ನೇಟಾಲ್ ಇಂಡಿಯನ್ ಕಾಂಗ್ರೆಸ್" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಆಶ್ರಯದಲ್ಲಿ ಅಲ್ಲಿದ್ದ ಭಾರತಿಯರೆಲ್ಲ ಒಂದಾದರು. ತಮಗೆ ಸರ್ಕಾರ ದಿಂದಾಗುತ್ತಿದ್ದ ಅನ್ಯಾಯ, ಕಷ್ಟ, ನಷ್ಟಗಳನ್ನು ಜಗತ್ತಿಗೆಲ್ಲ ಎತ್ತಿಹಿಡಿದು ತೋರಿಸುವುದಕ್ಕೆ ಆ ಸಂಸ್ಥೆ ನೆರವಾಯಿತು. ಗಾಂಧೀಜಿಯ ಪ್ರಯತ್ನದ ಫಲವಾಗಿ ಜನರಲ್ಲಿ ಸ್ವಾಭಿಮಾನ, ಸ್ವದೇಶಾಭಿಮಾನವು ಜಾಗೃತಗೊಂಡಿತು. ಭಾರತೀಯರೆಲ್ಲ ಒಗ್ಗಟ್ಟಾಗಿ ತಮಗಾಗುತ್ತಿದ್ದ ಆ ಅನ್ಯಾಯಗಳನ್ನು ಎದುರಿಸುವುದಕ್ಕಾಗಿ ಗಾಂಧೀಜಿಯ ನಾಯಕತ್ವದಲ್ಲಿ ಒಂದು ಚಳವಳಿ ಯನ್ನೇ ಪ್ರಾರಂಭಿಸಿದರು.

ನಾಗರಿಕ ಹಕ್ಕುಬಾಧ್ಯತೆಗಳಿಗೆ ವಿರುದ್ಧವಾಗಿ ಹೊಸ ಶಾಸನವನ್ನು ಜಾರಿಗೆ ತರಬಾರದೆಂದು ಭಾರತೀಯರು ಅಲ್ಲಿನ ಸರ್ಕಾರಕ್ಕೆ ಒಂದು ಮನವಿ ಯನ್ನು ಸಲ್ಲಿಸಿದರು. ಹಲವಾರು ಬಹಿರಂಗ ಸಭೆಗಳಲ್ಲಿ ಪ್ರತಿಭಟನೆಗಳನ್ನೂ ವ್ಯಕ್ತಪಡಿಸಿದರು. ವರ್ತಮಾನ ಪತ್ರಿಕೆಗಳಲ್ಲಿ ಉಗ್ರಲೇಖನಗಳನ್ನು ಬರೆದರು. ಆದರೂ ಸರ್ಕಾರವು ಅದಾವುದನ್ನೂ ಲೆಕ್ಕಿಸದೆ ಕಾನೂನನ್ನು ಜಾರಿಗೆ ತಂದಿತು. ಕೂಡಲೆ ಅಲ್ಲಿ ನೆಲೆಸಿದ್ದ ಭಾರತೀಯರೆಲ್ಲ ಮೇಲು ಕೀಳು, ಹಿರಿಯ ಕಿರಿಯ, ಹಿಂದೂ ಮುಸಲ್ಮಾನ, ಮದರಾಸಿ ಗುಜರಾತಿ ಎಂಬ ಭೇದಭಾವ

ವಿಲ್ಲದೆ ಎಲ್ಲರೂ ತಾಯ್ನಾಡಿನ ಸೇವಕರೆಂಬ ಮನೋಭಾವನೆಯಿಂದ ಒಂದಾದರು. ಅವರಲ್ಲಿ ಒಂದು ಹೊಸ ಚೈತನ್ಯವುಂಟಾಯಿತು. ರಾಜಕೀಯ ಹಕ್ಕುಗಳಿಗಾಗಿ ಹೋರಾಡುವುದು ತಮ್ಮ ಧರ್ಮವೆಂದು ತಿಳಿದರು. ಸಾವಿರಾರು ಭಾರತೀಯರುರು ಸಹಿಮಾಡಿದ ಅರ್ಜಿಯೊಂದನ್ನು ಇಂಗ್ಲೆಂಡಿನ ಪಾರ್ಲಿಮೆಂಟಿಗೂ ಕಳುಹಿಸಿದರು. ಅನೇಕ ಪಾಶ್ಚಾತ್ಯ ಪತ್ರಿಕೆಗಳಲ್ಲೂ ಸಾಕಷ್ಟು ಪ್ರಚಾರಮಾಡಲಾಯಿತು. ಅವುಗಳಿಂದ ಕಾನೂನು ರದ್ದಾಗ ಬಹುದೆಂಬ ಭರವಸೆಯುಂಟಾಯಿತು ಅಷ್ಟಾದಮೇಲೂ ಅಲ್ಲಿನ ಭಾರತೀಯರು ಗಾಂಧೀಜಿಯು ಭಾರತಕ್ಕೆ ಹಿಂತಿರುಗಲು ಸಮ್ಮತಿಯನ್ನುಕೊಡಲಿಲ್ಲ. ಅದಕ್ಕೆ ಬದಲಾಗಿ ತಮ್ಮಮೊಕದ್ದಮೆಗಳನ್ನೆಲ್ಲ ಗಾಂಧೀಜಿಯವರಿಗೆ ಕೊಟ್ಟು, ಬ್ಯಾರಿಸ್ಟರ ಯೋಗ್ಯತೆಗೆ ತಕ್ಕಂತೆ ಭಾರತದ ಗೌರವವನ್ನುಳಿಸಿಕೊಂಡು ಬಾಳುವಂತೆ ಅವರಿಗೆ ಅಲ್ಲಿಯೇ ಅನುಕೂಲಗಳನ್ನು ಕಲ್ಪಿಸಿಕೊಟ್ಟರು.

ನೇಟಾಲ್ ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವುದಕ್ಕಾಗಿ ಗಾಂಧೀಜಿ ಬಹಳ ಶ್ರಮವನ್ನು ವಹಿಸಿದರು. ಕಾಂಗ್ರೆಸ್‌ಸದಸ್ಯರಿಂದ ಚಂದಾ ಹಣವನ್ನು ಶೇಖರಿಸಿ ಸಾರ್ವಜನಿಕ ಕಾರ್ಯಗಳು ನಡೆಯುವುದಕ್ಕೆ ಅನುಕೂಲ ಮಾಡಿದರು. ಚಂದಾಹಣದ ಆಯವ್ಯಯದ ಲೆಕ್ಕವನ್ನಿಟ್ಟು, ಸತ್ಯಕ್ಕೆ ದೂರವಾಗದಂತೆ ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದರು. ಕ್ರಮೇಣ ಸಾರ್ವಜನಿಕ ಕಾರ್ಯಗಳು ಬೆಳೆದವು. ಗಾಂಧೀಜಿ ತಮ್ಮ ವಕೀಲಿ ಕೆಲಸಗಳಿಗಿಂತ ಸಾರ್ವಜನಿಕ ವಿಚಾರಗಳಿಗೆ ಅಧಿಕ ಗಮನ ಕೊಡಬೇಕಾಗಿ ಬಂದಿತು. ಆಫ್ರಿಕದಲ್ಲಿನ ಭಾರತೀಯರ ಸ್ಥಿತಿಗತಿಗಳನ್ನು ಪ್ರಚಾರ ಮಾಡುವುದಕ್ಕಾಗಿ ವಿವರಗಳನ್ನೊಳಗೊಂಡ ಕೆಲವು ಚಿಕ್ಕ ಪ್ರಕಟನೆಗಳನ್ನುಬ್ರಿಟನ್ ಮತ್ತು ಭಾರತದೇಶಗಳಿಗೆ ಕಳುಹಿಸಿದರು. ಈ ಚಳವಳಿಯಿಂದ ದಕ್ಷಿಣ ಆಫ್ರಿಕದಲ್ಲೂ ಭಾರತದಲ್ಲೂ ಅನೇಕರ ಸಹಾನುಭೂತಿ ದೊರೆಯಿತು. ಕೆಲವರು ಬೆಂಬಲ ನೀಡುವುದಕ್ಕಾಗಿ ಮುಂದೆ ಬಂದರು. ಐದು ವರ್ಷಗಳ ಕರಾರಿನಮೇಲೆ ಬಂದಿದ್ದ ಕಾರ್ಮಿಕರು ತಮ್ಮ ಅವಧಿ ಮುಗಿದಮೇಲೆ ಸ್ವತಂತ್ರರಾಗಿ ವ್ಯಾಪಾರಾದಿಗಳಲ್ಲಿ ನಿರತರಾಗಿ ಐರೋಪ್ಯರನ್ನೂ ಮೀರಿಸಿದರು. ಅದನ್ನು ಕಂಡು ಆಂಗ್ಲೇಯರಿಗೆ ಭಯವಾಯಿತು. ಭಾರತೀಯರನ್ನು ಯಾವ ರೀತಿಯಲ್ಲೂ ಮುಂದುವರಿಯದಂತೆ ತಡೆಗಟ್ಟಬೇಕೆಂದು ಅವರ

ಮತಾಧಿಕಾರವನ್ನು ಕಿತ್ತುಕೊಳ್ಳುವ ಹಾಗೂ ಕೂಲಿಕಾರರ ಮೇಲೆ ತಲೆಗಂದಾಯವನ್ನು ವಿಧಿಸುವ ಕಾನೂನುಗಳನ್ನು ಜಾರಿಗೆ ತಂದರು. ನೇಟಾಲ್ ಕಾಂಗ್ರೆಸ್ ಸಂಸ್ಥೆಯು ಅದಕ್ಕಾಗಿ ಉಗ್ರ ಚಳವಳಿಯನ್ನು ಪ್ರಾರಂಭಿಸಿ ಭಾರತ ಸರ್ಕಾರಕ್ಕೂ ಮನವಿಯನ್ನು ಮಾಡಿಕೊಂಡಿತು. ಗಾಂಧೀಜಿಯ ಸಾಹಸ ಹಾಗೂ ನಾಯಕತ್ವದಿಂದ ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯರ ಸಮಸ್ಯೆಗಳು ಪರದೇಶೀಯರಿಗೂ ಪರಿಚಯವಾಗುವುದಕ್ಕೆ ಅವಕಾಶವಾಯಿತು. ಕೆಲವು ನ್ಯಾಯನಿಷ್ಠ ಪರದೇಶೀಯರೂ ನಿಜಸ್ಥಿತಿಗಳನ್ನರಿತು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಹೀಗೆ ಗಾಂಧೀಜಿ ಸಾರ್ವಜನಿಕ ಸೇವಕರಾಗಿ ದುಡಿದು ವಿಶೇಷ ಅನುಭವವನ್ನು ಪಡೆದರು. ಕ್ರಮೇಣ ಅವರಿಗೆ ಸೇವಾಕಾರ್ಯಗಳಲ್ಲಿ ಆಸಕ್ತಿ, ಉತ್ಸಾಹಗಳುಂಟಾದುವು. ಗಾಂಧೀಜಿಯ ಜೀವನದಲ್ಲಿ ದಕ್ಷಿಣ ಆಫ್ರಿಕವು ಸೇವಾದೀಕ್ಷೆಯ ಪ್ರಯೋಗಕ್ಷೇತ್ರವಾಯಿತು. ಅದರೊಡನೆ ಧಾರ್ಮಿಕ ಜೀವನದಲ್ಲೂ ಆಸಕ್ತಿಯುಂಟಾಯಿತು. ಬೈಬಲ್, ಕೊರಾನ್, ಉಪನಿಷತ್ತುಗಳನ್ನೇ ಅಲ್ಲದೆ ಟಾಲ್‌ಸ್ಟಾಯ್, ಮ್ಯಾಕ್ಸ್‌ಮುಲ್ಲರ್ ಮುಂತಾದವರ ಗ್ರಂಥಗಳನ್ನು ಅಭ್ಯಾಸಮಾಡಿ ಜ್ಞಾನವನ್ನು ಪಡೆದರು. ಸತ್ಯ ಪ್ರೇಮಗಳ ಅಂತರ್ಯವನ್ನರಿತರು. ವಿಶ್ವಪ್ರೇಮದ ಆವಶ್ಯಕತೆಯನ್ನೂ ವ್ಯಕ್ತಪಡಿಸಿದರು. ಹೀಗೆ ಗಾಂಧೀಜಿಯ ಸಾಮಾಜಿಕ ಮತ್ತು ಧಾರ್ಮಿಕ ಸಾಧನೆಗಳ ಕಾರ್ಯಕ್ಷೇತ್ರ ವಿಶಾಲಗೊಂಡು ಬೆಳೆಯತೊಡಗಿತು.

ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ಬಂದು ಮೂರು ವರ್ಷಗಳಾಗಿದ್ದುವು. ಆ ಅವಧಿಯಲ್ಲಿ ಅವರಿಗೆ ಅಲ್ಲಿನ ಜನತೆಯ ಪರಿಚಯ ಸಾಕಷ್ಟಾಗಿತ್ತು. ಅವರ ಉದ್ಯೋಗವೂ ಬೆಳೆದಿತ್ತು. ಅದಕ್ಕೂ ಹೆಚ್ಚಾಗಿ ಅವರ ಸಾರ್ವಜನಿಕ ಕಾರ್ಯಗಳು ವೃದ್ಧಿಯಾಗಿದ್ದುವು. ಅಲ್ಲಿನ ಜನರಿಗೆ ಗಾಂಧೀಜಿಯ ಆವಶ್ಯಕತೆ ಅನಿವಾರ್ಯವಾಗಿತ್ತು. ಅದನ್ನರಿತ ಗಾಂಧೀಜಿ ಅವರ ಬೇಡಿಕೆಯನ್ನು ಮನ್ನಿಸಿ, ಅಲ್ಲೇ ನೆಲೆಸುವುದಕ್ಕೆ ಒಪ್ಪಿದರು. ಆದರೆ ತಮ್ಮ ಹೆಂಡತಿ ಮಕ್ಕಳು ಭಾರತದಲ್ಲೇ ಉಳಿದುಕೊಂಡಿದ್ದರು. ಅವರನ್ನು ಕರೆತರುವುದಕ್ಕಾಗಿ ಸ್ವದೇಶಕ್ಕೆ ಪ್ರಯಾಣ ಬೆಳೆಸಿದರು. ಗಾಂಧೀಜಿ ಭಾರತವನ್ನು ತಲಪುತ್ತಲೇ ಕೆಲವು ಪತ್ರಿಕಾ ಸಂಪಾದಕರನ್ನು ಕಂಡು ಆಫ್ರಿಕದಲ್ಲಿನ ಭಾರತೀಯರ

ಸಮಸ್ಯೆಗಳನ್ನು ಪತ್ರಿಕೆಗಳ ಮೂಲಕ ಪ್ರಚುರಪಡಿಸುವುದಕ್ಕೆ ವ್ಯವಸ್ಥೆಯನ್ನು ಮಾಡಿದರು. ರಾಜಕೋಟೆಯನ್ನು ತಲಪಿದಮೇಲೆ ದಕ್ಷಿಣ ಆಫ್ರಿಕದಲ್ಲಿ ವರ್ಣದ್ವೇಷಗಳಿಂದಾಗುತ್ತಿದ್ದ ಅನ್ಯಾಯ, ಅನರ್ಥಗಳನ್ನು ವಿವರಿಸಿ ಒಂದು ಸಣ್ಣ ಪುಸ್ತಕವನ್ನು ಬರೆದು ಪ್ರಕಟಿಸಿದರು. ಫಿರೋಜ್‌ಷಾ ಮೆಹತ, ರಾನಡೆ, ತಿಲಕ್, ಗೋಖಲೆ ಮುಂತಾದ ನಾಯಕರೊಡನೆ ದಕ್ಷಿಣ ಆಫ್ರಿಕದ ಭಾರತೀಯರ ಸಮಸ್ಯೆಗಳನ್ನು ಚರ್ಚಿಸಿದರು. ಅವರ ಸಲಹೆಯಂತೆ ಬೊಂಬಾಯಿ, ಪೂನ, ಮದ್ರಾಸು ಮುಂತಾದ ಪ್ರಮುಖ ನಗರಗಳಲ್ಲಿ ಬಹಿರಂಗ ಸಭೆಗಳನ್ನು ಕೂಡಿಸಿ ದಕ್ಷಿಣ ಆಫ್ರಿಕದಲ್ಲಿ ಭಾರತೀಯರ ಕಷ್ಟ ಕಾರ್ಪಣ್ಯಗಳನ್ನೂ ಅವರಿಗಾಗುತ್ತಿದ್ದ ಅನ್ಯಾಯ ಅಪಮಾನಗಳನ್ನೂ ವಿವರಿಸಿದರು. ಕಲ್ಕತ್ತಾ ನಗರದಲ್ಲೂ ಅಂತಹ ಒಂದು ಸಾರ್ವಜನಿಕ ಸಭೆಯನ್ನು ಸೇರಿಸುತ್ತಿದ್ದಾಗಲೇ ದಕ್ಷಿಣ ಆಫ್ರಿಕದಿಂದ ಅವಸರದ ಕರೆ ಬಂದಿತು. ಕೂಡಲೇ ತಮ್ಮ ಹೆಂಡತಿ ಮಕ್ಕಳೊಡನೆ ಹಡಗಿನಲ್ಲಿ ಪ್ರಯಾಣ ಮಾಡಿದರು. ದಾರಿಯಲ್ಲಿ ಹಡಗು ಬಿರುಗಾಳಿಗೆ ಸಿಲುಕಿತು. ಗಾಂಧೀಜಿ ಇತರ ಎಂಟುನೂರು ಜನ ಪ್ರಯಾಣಿಕರೊಡನೆ ತದೇಕಮನದಿಂದ ಪ್ರಾರ್ಥನೆಯನ್ನು ಮಾಡಿದರು. ಜಾತಿಮತ, ಮೇಲುಕೀಳೆಂಬ ಭೇದಭಾವವಿಲ್ಲದೆ ಎಲ್ಲರೂ ದೇವರಲ್ಲಿ ಮೊರೆಯಿಟ್ಟರು. ದೇವರ ಕೃಪೆಯಿಂದ ಬಿರುಗಾಳಿ ನಿಂತಿತು. ಅದರಿಂದ ಗಾಂಧೀಜಿಯ ಪರಿಚಯ ಪ್ರಯಾಣಿಕರಿಗೆಲ್ಲ ತಾನಾಗಿಯೇ ಆಯಿತು. ಸ್ನೇಹಮಯರಾಗಿದ್ದ ಗಾಂಧೀಜಿಯಲ್ಲಿ ಎಲ್ಲರಿಗೂ ಗೌರವ ಭಾವನೆಯುಂಟಾಯಿತು. ಕೆಲವರಂತೂ ಅವರ ಪ್ರಿಯಸ್ನೇಹಿತರಾದರು.

ದಕ್ಷಿಣ ಆಫ್ರಿಕದಲ್ಲಿ ಮತ್ತೆ ಗಾಂಧೀಜಿ

ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಸಮಸ್ಯೆಗಳನ್ನು ಕುರಿತು ಸ್ವದೇಶದಲ್ಲಿ ಮಾಡಿದ್ದ ಭಾಷಣಗಳ ವಿಚಾರ ದಕ್ಷಿಣ ಆಫ್ರಿಕಕ್ಕೂ ತಿಳಿದಿತ್ತು. ಕೆಲವು ಸುದ್ದಿಗಾರರು ಗಾಂಧೀಜಿಯು ಭಾರತದಲ್ಲಿ ಬಿಳಿಯ ಜನರ ಮೇಲೆ ಅಪಪ್ರಚಾರಮಾಡಿ, ಮಸಿ ಬಳಿಯುವುದಕ್ಕೆ ಪ್ರಯತ್ನಿಸಿದ್ದಾರೆಂದೂ ವರದಿ ಮಾಡಿದ್ದರು. ಆ ಉತ್ಪ್ರೇಕ್ಷೆಯ ವರದಿಯಿಂದ ದಕ್ಷಿಣ ಆಫ್ರಿಕದಲ್ಲಿನ ಬಿಳಿಯ ಜನರು ಗಾಂಧೀಜಿಯ ಮೇಲೆ ತುಂಬ ಕೋಪಗೊಂಡಿದ್ದರು. ತಮ್ಮ ವಿಶೇಷಸೌಲಭ್ಯಗಳಿಗೆ ಸಂಚಕಾರ ಬರುವುದನ್ನು

ನೋಡಿ ಅವರು ಉದ್ರೇಕಗೊಂಡು ಗಾಂಧೀಜಿಯನ್ನು ಮತ್ತೆ ದಕ್ಷಿಣ ಆಫ್ರಿಕಕ್ಕೆ ಬರಗೊಡಬಾರದೆಂದು ಹವಣಿಸುತ್ತಿದ್ದರು. ಅಷ್ಟು ಹೊತ್ತಿಗಾಗಲೇ ಗಾಂಧೀಜಿ ದಕ್ಷಿಣ ಆಫ್ರಿಕವನ್ನು ಸಮೀಪಿಸಿದ್ದರು. ಅದೂ ಅಲ್ಲದೆ ಅವರ ಸಹಪ ಯಾಣಿಕರಾಗಿದ್ದ ಎಂಟುನೂರು ಜನರನ್ನೂ ಗಾಂಧೀಜಿಯೇ ನೇಟಾಲಿನಲ್ಲಿ ತುಂಬುವುದಕ್ಕಾಗಿ ಕರೆತಂದಿದ್ದಾರೆಂಬ ಸುಳ್ಳು ಸುದ್ದಿಯು ಆಫ್ರಿಕದಲ್ಲೆಲ್ಲ ಹರಡಿತ್ತು. ಹಡಗು ಆಫ್ರಿಕವನ್ನು ಸೇರಿದಕೂಡಲೇ ಅನೇಕ ಯೂರೋಪಿಯನ್ನರು ಬಂದರಿನಲ್ಲಿ ನಿಂತು, "ಗಾಂಧೀಜಿ! ಪ್ರಾಣ ಉಳಿಸಿಕೊಳ್ಳಬೇಕೆಂಬ ಆಸೆಯಿದ್ದರೆ ಕೂಡಲೆ ಹಿಂತಿರುಗಿ" ಎಂದು ಎಚ್ಚರಿಕೆಯನ್ನು-ಕೊಟ್ಟರು. ಆದರೆ ಗಾಂಧೀಜಿ ಅದಕ್ಕೆ ಹೆದರಲಿಲ್ಲ. ಹೆಂಡತಿ ಮಕ್ಕಳನ್ನು ಮೊದಲೇ ಸುರಕ್ಷಿತವಾದ ಸ್ಥಳಕ್ಕೆ ಕಳುಹಿಸಿ ಧೈರ್ಯದಿಂದ ಹಡಗನ್ನು ಇಳಿದರು. ಅವರ ಗುರುತನ್ನು ಹಿಡಿದ ಕೆಲವರು ಕಲ್ಲು, ಇಟ್ಟಿಗೆ ಮೊಟ್ಟೆ, ಮುಂತಾದುವುಗಳನ್ನು ಅವರ ಮೇಲೆ ಎಸೆದು ಹಿಂಸಿಸಿದರು. ಈ ಪ್ರತಿಭಟನೆಗೆ ಹೆದರದೆ ಗಾಂಧೀಜಿ ಮುಂದೆ ಹೋದರು. ಪುಂಡರು ಅವರ ರುಮಾಲನ್ನು ಕಿತ್ತೆಸೆದರು; ಬಟ್ಟೆಬರೆಗಳನ್ನೂ ಹರಿದರು; ಕೊನೆಗೆ ಚೆನ್ನಾಗಿ ಥಳಿಸಿದರು. ಆ ಹೊಡೆತಗಳಿಂದ ಬಳಲಿದ ಗಾಂಧೀಜಿ ಒಂದು ಮನೆಯ ಮುಂದೆ ಮೂರ್ಛೆಗೊಂಡಂತೆ ನಿಂತರು. ಅಲ್ಲಿಗೂ ಜನರು ಬಿಡಲಿಲ್ಲ. ಇನ್ನೂ ಅಧಿಕಸಂಖ್ಯೆಯಲ್ಲಿ ಸೇರಿ ಗಾಂಧೀಜಿಯಮೇಲೆ ಬಿದ್ದರು. ಅಷ್ಟರಲ್ಲಿ ದೈವವಶಾತ್ ಗಾಂಧೀಜಿಗೆ ಪರಿಚಯವಿದ್ದ ಪೋಲೀಸ್ ಅಧಿಕಾರಿಯೊಬ್ಬರ ಮಡದಿಯು ಗಾಂಧೀಜಿಯ ಅವಸ್ಥೆಯನ್ನು ನೋಡಿ, ಅಪಾಯದಿಂದ ಅವರನ್ನು ಪಾರುಮಾಡಿದರು.

ಗಾಂಧೀಜಿಯನ್ನು ಹಿಂಸಿಸಿದ ಪುಂಡರಮೇಲೆ ಮೊಕದ್ದಮೆಯನ್ನು ಹೂಡುವುದಕ್ಕೆ ಸರ್ಕಾರವೇ ಮುಂದೆ ಬಂದಿತು. ಆದರೆ ಗಾಂಧೀಜಿಯೇ ಅದಕ್ಕೆ ಒಪ್ಪಲಿಲ್ಲ. ತಪ್ಪು ತಿಳಿವಳಿಕೆಯಿಂದ ಆ ಜನ ಹೀಗೆ ವರ್ತಿಸಿದರೆಂದೂ ಸತ್ಯವನ್ನು ತಿಳಿದಮೇಲೆ ಅವರೇ ಪಶ್ಚಾತ್ತಾಪಪಡುವರೆಂದೂ ಗಾಂಧೀಜಿ ಸುಮ್ಮನಾದರು. ಅದರಿಂದ ಗಾಂಧೀಜಿಯ ದಯೆ ಕ್ಷಮಾಗುಣ ಅಹಿಂಸಾ ಪ್ರವೃತ್ತಿ ಜಗತ್ತನ್ನೇ ಆಶ್ಚರ್ಯಗೊಳಿಸಿತು. ಕೆಲವು ಪತ್ರಿಕೆಗಳು ದೊಂಬಿಯನ್ನು ಖಂಡಿಸಿ, ಗಾಂಧೀಜಿಯ ಗುಣವನ್ನು ಹೊಗಳಿದುವು. ಪರಿಣಾಮ

ವಾಗಿ ಗಾಂಧೀಜಿಯ ಗೌರವ ಬೆಳೆಯಿತು; ಉದ್ಯೋಗವೂ ವೃದ್ಧಿಯಾಯಿತು. ಆದರೆ ಸೇವಾಕಾಂಕ್ಷೆಯುಳ್ಳ ಗಾಂಧೀಜಿಗೆ ಅಷ್ಟರಿಂದಲೇ ತೃಪ್ತಿಯಾಗಲಿಲ್ಲ. ನಿಷ್ಕಾಮವಾದ ಸೇವಾಮನೋಧರ್ಮದಿಂದ ಅವರು ಒಂದು ಸಣ್ಣ ವೈದ್ಯಶಾಲೆಯನ್ನು ತೆರೆದರು. ಸರಳಜೀವನವನ್ನು ನಡೆಸುತ್ತ, ಉನ್ನತ ಭಾವನೆಯಿಂದ ಸತ್ಯಶೋಧಕರಾಗಿ ಕೆಲಸ ಮಾಡತೊಡಗಿದರು. ಸ್ವಾವಲಂಬಿಗಳಾಗಿ ಬಾಳಿನ ಮೇಲ್ಮೆಯನ್ನು ಸಾಧಿಸಿದರು.

ಆಫ್ರಿಕದಲ್ಲಿ ಅಷ್ಟರಲ್ಲೇ ಬೋಅರ್ ಯುದ್ಧ ತಲೆದೋರಿತು. ಹಾಲೆಂಡ್ ದೇಶದಿಂದ ಬಂದು ನೆಲೆಸಿದ್ದ ಬೋಅರ್ ಜನರಿಗೂ ಇಂಗ್ಲಿಷರಿಗೂ ನಡೆದ ಈ ಯುದ್ಧದಲ್ಲಿ ಗಾಂಧೀಜಿಯು ಬ್ರಿಟಿಷರ ಪರ ಸೇರಿದರು. ಬೋಅರ್ ಜನರಲ್ಲಿ ಸಹಾನುಭೂತಿಯಿದ್ದರೂ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳಾಗಿ ಬ್ರಿಟಿಷರಿಗೆ ಸಹಾಯ ಮಾಡುವುದು ತಮ್ಮ ಧರ್ಮವೆಂದು ತಿಳಿದರು. ಅನೇಕ ಭಾರತೀಯರ ಒಂದು ಸೇವಾದಳವನ್ನು ಸೇರಿಸಿ ಯುದ್ಧದಲ್ಲಿ ಗಾಯಗೊಂಡವರ ಪರಿಚರ್ಯೆಗೆ ನಿಂತರು. ಭಾರತೀಯ ದಳದ ಸೇವೆಯನ್ನು ಸರ್ಕಾರವು ಅಂಗೀಕರಿಸಿತು ; ಜನರು ಹೊಗಳಿದರು ; ಪತ್ರಿಕೆಗಳು ಶ್ಲಾಘಿಸಿದುವು.

ದರ್ಬಾನಿನಲ್ಲಿ ಪ್ಲೇಗು ಜಾಡ್ಯ ತಲೆದೋರಿತು. ಗಾಂಧೀಜಿ ಜನಸೇವೆಗೆ ಕೂಡಲೇ ಸಿದ್ಧರಾದರು. ಅಲ್ಲಿನ ಭಾರತೀಯರ ವಾಸಸ್ಥಾನಗಳು ಕೊಳಕಿನಿಂದ ಅನಾರೋಗ್ಯಕರವಾಗಿದ್ದವು. ಗಾಂಧೀಜಿ ಮನೆಮನೆಗೂ ಹೋಗಿ ಬೇಸರವಿಲ್ಲದೆ ತಾಳ್ಮೆಯಿಂದ ಶುಚಿಕಾರ್ಯಗಳಲ್ಲಿ ನಿರತರಾದರು. ನೈರ್ಮಲ್ಯದ ವಿಚಾರದಲ್ಲಿ ಅವರಿಗೆ ತಿಳಿವಳಿಕೆಯನ್ನು ಹೇಳಿದರು. ಸುಧಾರಕರಾಗಿ ಗಾಂಧೀಜಿ ಕೈಗೊಂಡ ನೈರ್ಮಲ್ಯ ಚಳವಳಿಯ ಫಲವಾಗಿ ಭಾರತೀಯರು ಮನೆಮಠಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದನ್ನು ಕಲಿತರು. ಗಾಂಧೀಜಿಯ ಪ್ರಯತ್ನದಿಂದ ಜನರಲ್ಲಿ ತಾಯ್ನಾಡಿನ ಅಭಿಮಾನ ಬೆಳೆಯಿತು. ೧೮೯೭ರಲ್ಲಿ ಭಾರತದಲ್ಲಿ ತಲೆದೋರಿದ ಕ್ಷಾಮಪರಿಹಾರಕ್ಕಾಗಿ ಅಲ್ಲಿದ್ದ ಭಾರತೀಯರು ಹೆಚ್ಚು ಹಣ ಕೂಡಿಸಿ ಕಳುಹಿಸಿದರು.

ಸ್ವದೇಶದಲ್ಲಿ ಗಾಂಧೀಜಿ

ಗಾಂಧೀಜಿಯು ನಾನಾರೀತಿಯಲ್ಲಿ ಜನಸೇವೆಯನ್ನು ಮಾಡಿ ಸರ್ವರಿಗೂ ಬೇಕಾದವರಾದರು. ಅಧಿಕಾರಿಗಳಿಗೂ ಗಾಂಧೀಜಿಯಲ್ಲಿ ಗೌರವ ಭಾವನೆಯುಂಟಾಯಿತು. ದಕ್ಷಿಣ ಆಫ್ರಿಕದಲ್ಲಿನ ಸದ್ಯದ ಕೆಲಸಕಾರ್ಯಗಳು ಮುಗಿದಿದ್ದುದರಿಂದ ತಮ್ಮ ಸ್ನೇಹಿತರ ಒತ್ತಾಯದಂತೆ ಗಾಂಧೀಜಿ ಸ್ವದೇಶಕ್ಕೆ ಹಿಂತಿರುಗುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡರು. ಅವರು ಸೇವಾಕಾಂಕ್ಷೆ, ಸಹಾಯ ಮತ್ತು ಸಹಕಾರ ಮನೋಭಾವನೆಗಳಿಂದ ಜನಾನುರಾಗಿಗಳಾಗಿದ್ದರು. ಆದುದರಿಂದ ಅಲ್ಲಿನ ಜನರಿಗೆ ಗಾಂಧೀಜಿಯನ್ನು ಅಗಲುವುದಕ್ಕೆ ಇಷ್ಟವಿರಲಿಲ್ಲ. ಕೊನೆಗೆ ಗಾಂಧೀಜಿಯೇ ಆವಶ್ಯಕತೆ ಬಿದ್ದಾಗ ಬರುವುದಾಗಿ ವಚನವನ್ನಿತ್ತು ಹೊರಡಬೇಕಾಯಿತು. ತಮ್ಮ ನೆಚ್ಚಿನ ನಾಯಕರನ್ನು ಬೀಳ್ಕೊಡುವುದಕ್ಕಾಗಿ ಅವರು ಒಂದು ದೊಡ್ಡ ಸತ್ಕಾರಸಮಾರಂಭವನ್ನೇ ಏರ್ಪಡಿಸಿದರು. ಬೆಲೆಬಾಳುವ ಹಲವಾರು ವಸ್ತುಗಳನ್ನು ಉಡುಗೊರೆಯಾಗಿ ಕೊಟ್ಟರು. ಆದರೆ ಗಾಂಧೀಜಿ ಬೆಲೆಯಾದ ಆ ಉಡುಗೊರೆಗಳನ್ನೆಲ್ಲ ಅವರಿಗೇ ಬಿಟ್ಟು, ಸಾರ್ವಜನಿಕ ಸೇವೆಗೆ ಬೇಕಾದಾಗ ಅವನ್ನು ಉಪಯೋಗಿಸಿಕೊಳ್ಳುವಂತೆ ಧರ್ಮದರ್ಶಿಗಳನ್ನು ನೇಮಿಸಿ ಬ್ಯಾಂಕಿನಲ್ಲಿಟ್ಟರು. ಸಾರ್ವಜನಿಕ ಸೇವಕ ಯಾವ ಬಹುಮಾನವನ್ನೂ ಆಶಿಸಬಾರದೆಂಬುದೇ ಗಾಂಧೀಜಿಯ ಅಭಿಪ್ರಾಯವಾಗಿದ್ದಿತು.

ಸ್ವದೇಶವನ್ನು ತಲಪಿದಮೇಲೆ ಗಾಂಧೀಜಿಯು ಕಲ್ಕತ್ತೆಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗಿಗಳಾದರು. ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿಗತಿಗಳ ಬಗ್ಗೆ ೧೯೦೧ ರಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಒಂದು ಠರಾವನ್ನು ಮಂಡಿಸಿದರು. ಅದು ಸರ್ವಾನುಮತದಿಂದ ಅಂಗೀಕಾರವಾಯಿತು. ಗಾಂಧೀಜಿ ಸ್ವಯಂಸೇವಕರಾಗಿ ಅನೇಕ ಕೆಲಸಗಳನ್ನು ಮಾಡಿದರು. ಕಸಗುಡಿಸುವುದು ಮೊದಲುಗೊಂಡು ಗುಮಾಸ್ತರ ಕೆಲಸವನ್ನೂ ಮಾಡಿದರು; ಪರಿಚಾರಕರಂತೆ ದುಡಿದರು. ಅವರ ಕಾರ್ಯತತ್ಪರತೆ ಮತ್ತು ಶ್ರದ್ಧೆಗಳನ್ನು ನೋಡಿ ಹಿರಿಯರೂ ನಾಯಕರೂ ಆಶ್ಚರ್ಯಪಟ್ಟರು.

ಗಾಂಧೀಜಿ ಗೋಖಲೆಯವರೊಡನೆ ಸ್ವಲ್ಪಕಾಲ ನಿಂತು ಅನೇಕ ರಾಜ

ಕೀಯ ವಿಚಾರಗಳನ್ನು ಗ್ರಹಿಸಿದರು. ಅಂತೆಯೇ ಹಲವಾರು ದೊಡ್ಡ ಮನುಷ್ಯರನ್ನೂ ಧಾರ್ಮಿಕ ವ್ಯಕ್ತಿಗಳನ್ನೂ ಕಂಡು ವಿಚಾರವಿನಿಮಯ ಮಾಡಿಕೊಂಡರು. ಹೋದಲ್ಲೆಲ್ಲ ದಕ್ಷಿಣ ಆಫ್ರಿಕದ ಭಾರತೀಯರ ಸ್ಥಿತಿ ಗತಿಗಳನ್ನು ವಿವರಿಸುತ್ತಿದ್ದರು. ಬರ್ಮಾದೇಶಕ್ಕೆ ಹೋಗಿ ಅಲ್ಲಿನ ವಿದ್ಯಮಾನಗಳನ್ನು ಕಣ್ಣಾರೆ ನೋಡಿ ಬಂದರು. ದೇಶಪರ್ಯಟನೆಗಾಗಿ ರೈಲಿನಲ್ಲಿ ಮೂರನೆಯ ತರಗತಿಯಲ್ಲಿ ಪ್ರಯಾಣಮಾಡುತ್ತ, ಧರ್ಮಛತ್ರಗಳಲ್ಲಿ ತಂಗುತ್ತ ಕಾಶಿ, ಆಗ್ರ, ಜಯಪುರ ಮುಂತಾದ ನಗರಗಳನ್ನು ನೋಡಿಕೊಂಡು ರಾಜಕೋಟೆಯನ್ನು ಸೇರಿದರು. ಹೀಗೆ ದೇಶದ ನಾನಾ ಭಾಗಗಳ ಪರಿಚಯ ಪಡೆದಮೇಲೆ ಬೊಂಬಾಯಿಯನ್ನು ಸೇರಿ ವಕೀಲಿಯನ್ನು ಪ್ರಾರಂಭಿಸಿದರು. ಅಷ್ಟರಲ್ಲೇ ದಕ್ಷಿಣ ಆಫ್ರಿಕದಿಂದ ಮತ್ತೆ ಕರೆ ಬಂದಿತು. ಕೂಡಲೆ ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ಹೋದರು.

ಬೋಅರ್ ಯುದ್ಧವಾದಮೇಲೂ ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ಸ್ಥಿತಿ ಉತ್ತಮವಾಗಲಿಲ್ಲ. ಭಾರತೀಯರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಯನ್ನು ತಡೆಗಟ್ಟುವುದಕ್ಕಾಗಿ ಗಾಂಧೀಜಿಯು ದೃಢಮನಸ್ಸಿನಿಂದ ಹೋರಾಟವನ್ನು ಪ್ರಾರಂಭಿಸಿದರು. ವಸಾಹತು ಶಾಖೆಯ ಕಾರ್ಯದರ್ಶಿ ಚೇಂಬರ್ಲೆನರು ದಕ್ಷಿಣ ಆಫ್ರಿಕಕ್ಕೆ ಭೇಟಿಕೊಟ್ಟಾಗ ಅಲ್ಲಿನ ಭಾರತೀಯರು ಗಾಂಧೀಜಿಯ ಮುಖಂಡತ್ವದಲ್ಲಿ ತಮ್ಮ ಕುಂದುಕೊರತೆಗಳನ್ನೆಲ್ಲ ವಿವರಿಸಿ, ಒಂದು ಮನವಿಯನ್ನು ತಯಾರಿಸಿ ಅವರಿಗೆ ಕೊಟ್ಟರು. ಆದರೆ ಆ ಮನವಿ ಪತ್ರದಿಂದ ಏನೂ ಪ್ರಯೋಜನವಾಗಲಿಲ್ಲ. ಅವರ ಸ್ಥಿತಿ ದಿನೇದಿನೇ ಶೋಚನೀಯವಾಗುತ್ತ ಬಂದಿತು. ಅವನ್ನೆಲ್ಲ ಎದುರಿಸುವುದಕ್ಕೆಂದು ಗಾಂಧೀಜಿ ಪುನಃ ವಕೀಲರಾಗಿ ಜೋಹಾನ್ಸ್‌ಬರ್ಗ್‌ನಲ್ಲಿ ತಮ್ಮ ಕಛೇರಿಯನ್ನು ತೆರೆದು ಅಲ್ಲೇ ನೆಲಸಿದರು. ಜೀವನೋಪಾಯಕ್ಕಾಗಿ ವಕೀಲಿಯನ್ನು ಮಾಡುತ್ತಿದ್ದರೂ ಸದಾ ಅವರು ಭಾರತೀಯರ ಉನ್ನತಿಗಾಗಿಯೇ ಶ್ರಮಿಸುತ್ತಿದ್ದರು. "ಇಂಡಿಯನ್ ಒಪಿನಿಯನ್" (Indian Opinion) ಎಂಬ ವರ್ತಮಾನ ಪತ್ರಿಕೆಯೊಂದನ್ನು ಪ್ರಕಟಿಸುವುದಕ್ಕೆ ಪ್ರಾರಂಭಿಸಿದರು. ಆ ಪತ್ರಿಕೆಯಲ್ಲಿ ಭಾರತೀಯರ ಕಷ್ಟಕಾರ್ಪಣ್ಯಗಳನ್ನೂ ಬಿಳಿಯ ಜನರ ದೌರ್ಜನ್ಯ ದಬ್ಬಾಳಿಕೆಗಳನ್ನೂ ಜಗತ್ತಿಗೆಲ್ಲ ತೋರಿಸಿಕೊಟ್ಟರು.

ತಮಿಳು, ಗುಜರಾತಿ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಪತ್ರಿಕೆಯನ್ನು ಪ್ರಕಟಿಸಿ ಎಲ್ಲರಿಗೂ ತಿಳಿಯುವಂತೆ ದೇಹನೈರ್ಮಲ್ಯ; ಆಹಾರ ಮುಂತಾದ ಆವಶ್ಯಕ ವಿಚಾರಗಳಲ್ಲಿ ಸೂಕ್ತಸಲಹೆಗಳನ್ನು ಕೊಟ್ಟರು. ತೊಡಕಾದ ಸಮಸ್ಯೆಗಳನ್ನೂ ಸಂಪಾದಕೀಯಗಳನ್ನೂ ಗಾಂಧೀಜಿಯವರೇ ಬರೆಯುತ್ತಿದ್ದರೂ ಅವರು ಆ ಪತ್ರಿಕೆಯ ಸಂಪಾದಕರಾಗಿರಲಿಲ್ಲ. ಆ ಪತ್ರಿಕೆಯಿಂದ ಅನೇಕ ಪರದೇಶೀಯರ ಸಹಾನುಭೂತಿಯೂ ಅವರಿಗೆ ದೊರೆಯಿತು.

ಗಾಂಧೀಜಿ ಜ್ಞಾನಾಭಿವೃದ್ಧಿಗಾಗಿ ಅನೇಕ ಗ್ರಂಥಗಳನ್ನು ಓದಿ ತಿಳಿದುಕೊಂಡರು. ರಸ್ಕಿನ್, ಟಾಲ್‌ಸ್ಟಾಯ್ ಮುಂತಾದವರ ಸಿದ್ಧಾಂತಗಳಲ್ಲಿ ಅವರಿಗೆ ನಂಬಿಕೆಯುಂಟಾಯಿತು. ಗೀತೆಯ ಗುಟ್ಟನ್ನರಿತ ಗಾಂಧೀಜಿಗೆ ಅಹಿಂಸಾತತ್ತ್ವವು ಮಾನವಜನಾಂಗವನ್ನು ಉದ್ಧಾರ ಮಾಡುವ ಮಹೋನ್ನತ ಶಕ್ತಿಯೆಂದು ಮನದಟ್ಟಾಯಿತು. ಸತ್ಯ ಅಹಿಂಸೆಗಳಿಂದ ಕೂಡಿದ ಸರಳ ಜೀವನವೇ ಅತ್ಯುತ್ತಮವಾದುದೆಂದು ತಿಳಿದರು. ಅದನ್ನು ಕಾರ್ಯತಃ ಆಚರಣೆಗೆ ತರುವುದಕ್ಕಾಗಿ ದರ್ಬಾನಿನ ಬಳಿ 'ಫೀನಿಕ್ಸ್' ಎಂಬಲ್ಲಿ ಜಮೀನನ್ನು ಕೊಂಡು ಒಂದು ಆಶ್ರಮವನ್ನು ಸ್ಥಾಪಿಸಿದರು. 'ಇಂಡಿಯನ್ ಒಪಿನಿಯನ್' ಮುದ್ರಣಾಲಯವನ್ನೂ ಕಛೇರಿಯನ್ನೂ ಅಲ್ಲಿಗೆ ಸಾಗಿಸಿದರು. ಮುದ್ರಣಾಲಯದಲ್ಲಿ ಕೆಲಸ ಮಾಡುವವರು ಜೀವನೋಪಾಯಕ್ಕೆ ಬೇಕಾಗುವಷ್ಟು ಸಂಬಳವನ್ನು ಮಾತ್ರ ತೆಗೆದುಕೊಳ್ಳಬೇಕೆಂದೂ ಮಿಕ್ಕವರು ವ್ಯವಸಾಯ ಮಾಡಬೇಕೆಂದೂ ನಿಯಮ ಮಾಡಿದರು. ಆಶ್ರಮವಾಸಿಗಳು ತಮ್ಮ ಪಾಲಿಗೆ ಬಂದ ಭೂಮಿಯಲ್ಲಿ ಹಣ್ಣುಹಂಪಲು, ತರಕಾರಿ, ಆಹಾರ ಧಾನ್ಯ ಮುಂತಾದುವನ್ನೂ ಬೆಳೆಯುತ್ತಿದ್ದರು. ಅಲ್ಲಿನ ನಿವಾಸಿಗಳು ವಾಸಮಾಡುವುದಕ್ಕೆ ತಮ್ಮ ಮನೆಗಳನ್ನು ತಾವೇ ಕಟ್ಟಿಕೊಂಡರು. ಪ್ರತಿಯೊಬ್ಬರೂ ತಿಂಗಳಿಗೆ ಮೂರು ಪೌಂಡುಗಳ ವೆಚ್ಚದಲ್ಲಿ ಜೀವನವನ್ನು ಸಾಗಿಸುತ್ತಿದ್ದರು. ತಿಂಗಳಿಗೆ 250 ಪೌಂಡುಗಳ ಹಣವನ್ನು ಸಂಪಾದಿಸುತ್ತಿದ್ದ ಬ್ಯಾರಿಸ್ಟರ್ ಗಾಂಧೀಜಿಯೂ ಸಹ ಚಡ್ಡಿ, ಜುಬ್ಬ ಧರಿಸಿ ಇತರರಂತೆಯೇ ದುಡಿಯುತ್ತಿದ್ದರು. ಆಶ್ರಮದ ಆದರ್ಶ ಸರಳಜೀವನಕ್ಕೆ ಮೆಚ್ಚಿ ಕ್ರಮೇಣ ಕೆಲವು ಐರೋಪ್ಯರೂ ಆಶ್ರಮವಾಸಿಗಳಾದರು. ಗಾಂಧೀಜಿ ಇನ್ನೂ ಸ್ವಲ್ಪ ಕಾಲ ದಕ್ಷಿಣ ಆಫ್ರಿಕದಲ್ಲೇ ಉಳಿಯಬೇಕೆಂದು ನಿಶ್ಚಯ

ವಾಯಿತು. ಆದುದರಿಂದ ಅವರು ತಮ್ಮ ಹೆಂಡತಿ ಮಕ್ಕಳನ್ನು ಅಲ್ಲಿಗೇ ಕರೆಸಿಕೊಂಡು, ನಿರಾಡಂಬರವಾಗಿ ಸಂಸಾರವನ್ನಾರಂಭಿಸಿದರು. ಮನೆಯಲ್ಲೇ ರೊಟ್ಟಿಯನ್ನು ತಯಾರಿಸುವುದನ್ನು ಕಲಿತರು. ಕಕ್ಕಸು ತೊಳೆಯುವುದು ಮೊದಲುಗೊಂಡು ಮನೆಯ ಎಲ್ಲ ಕೆಲಸಗಳನ್ನೂ ಮನೆಯವರೇ ಮಾಡುತ್ತಿದ್ದರು. ಆದರಿಂದ ಅವರು ಇತರರಿಗೆ ಮಾರ್ಗದರ್ಶಕರಾದರು.

ಅದೇ ಕಾಲದಲ್ಲಿ ದಕ್ಷಿಣ ಆಫ್ರಿಕದ ಜೂಲು ಜನರೆಂಬ ಮೂಲನಿವಾಸಿಗಳು ತಮ್ಮ ಮೇಲಿನ ಅನ್ಯಾಯದ ತೆರಿಗೆಯ ಹೊರೆಯನ್ನು ತಾಳಲಾರದೆ ಪ್ರತಿಭಟಿಸಿದರು. ಆದರೆ ಸರ್ಕಾರವು ದಬ್ಬಾಳಿಕೆಯಿಂದ ವರ್ತಿಸಿ ಅದನ್ನೇ ದಂಗೆಯೆಂದು ಆ ಬಡಪಾಯಿ ಜನರಮೇಲೆ ಬಿದ್ದು ಹಿಂಸಿಸಿತು. ಗುಂಡಿನೇಟಿನಿಂದ ಅವರನ್ನು ಕೊಲ್ಲುವುದಕ್ಕೂ ಹಿಂಜರಿಯಲಿಲ್ಲ. ಗಾಂಧೀಜಿ ಕೂಡಲೆ ಸೇವಾದಳವೊಂದನ್ನು ಕೂಡಿಸಿ ಸೈನಿಕರ ಗುಂಡಿನೇಟಿನಿಂದ ನೊಂದವರ ಸೇವೆಗೆ ಸಿದ್ಧರಾದರು. ಅಲ್ಲಿನ ಭಯಂಕರ ದೃಶ್ಯವನ್ನು ಕಂಡ ಗಾಂಧೀಜಿಗೆ ಯುದ್ಧಗಳಿಂದಾಗಬಹುದಾದ ಘೋರಪರಿಣಾಮಗಳ ಸ್ವರೂಪ ಗೋಚರವಾಯಿತು. ಬಿಳಿಯ ಜನರು ಅಸಡ್ಡೆಯಿಂದ ಕಪ್ಪುಜನರ ಗಾಯಗಳನ್ನು ತೊಳೆಯುತ್ತಿರಲಿಲ್ಲ. ಆಗ ವರ್ಣದ್ವೇಷ ಅಷ್ಟು ಉಗ್ರವಾಗಿ ಬೆಳೆದಿತ್ತು. ಆದರೆ ಗಾಂಧಿಜೀಯ ಸೇವಾಪಡೆ ಅವರ ಗಾಯಗಳನ್ನು ತೊಳೆದು ಉಪಚಾರವನ್ನು ಮಾಡಿತು.

ಗಾಂಧೀಜಿ ಸತ್ಯವಾದಿಯಾಗಿದ್ದುದರಿಂದ ಅವರಿಗೆ ಮೋಸ, ಸುಳ್ಳು ಎಂದರೆ ಆಗುತ್ತಿರಲಿಲ್ಲ. ಎಲ್ಲರೂ ಸತ್ಯಸಂಧರಾಗಿ ನಡೆಯಬೇಕೆಂಬುದೇ ಅವರ ಅಭಿಮತವಾಗಿತ್ತು. ಗಾಂಧೀಜಿಗೆ ಒಬ್ಬ ಭಾರತೀಯ ದೊಡ್ಡ ವ್ಯಾಪಾರಿಯ ಪರಿಚಯವಿದ್ದಿತು. ಭಾರತೀಯರಲ್ಲಿ ಪ್ರಮುಖನಾಗಿದ್ದರೂ ಆತನು ಸತ್ಯವಂತನಾಗಿರಲಿಲ್ಲ. ಅಧಿಕಾರಿಗಳ ಕಣ್ಣು ತಪ್ಪಿಸಿ ಮೋಸದಿಂದ ತೆರಿಗೆ ಕೊಡದೆ ಸಾಮಾನುಗಳನ್ನು ಸಾಗಿಸುತ್ತಿದ್ದನು. ಹಾಗೆ ಮಾಡುವಾಗ ಒಂದುಸಾರಿ ಸಿಕ್ಕಿಬಿದ್ದನು. ಮುಂದೇನಾಗುವುದೋ ಎಂಬ ಭಯದಿಂದ ಕೂಡಲೆ ಗಾಂಧಿಜೀಯ ಬಳಿಗೆ ಓಡಿಬಂದನು. ವಿದ್ಯಮಾನಗಳನ್ನರಿತ ಮೇಲೆ ತಪ್ಪನ್ನು ಒಪ್ಪಿಕೊಂಡು ಕ್ಷಮೆಯನ್ನು ಕೇಳುವಂತೆ ಗಾಂಧೀಜಿ ಆ ವ್ಯಾಪಾರಿಗೆ ಬುದ್ಧಿ ಹೇಳಿದರು. ಅವರ ಬಲವಂತಕ್ಕಾಗಿ ಆತನು ಹಾಗೇಯೇ ಮಾಡಿ

ದನು. ಗಾಂಧೀಜಿಯೂ ಅಧಿಕಾರಿಗಳಿಗೆ ವಿಚಾರವನ್ನು ಸ್ಪಷ್ಟಪಡಿಸಿದರು. ಕಳ್ಳತನದಿಂದ ಸಾಗಿಸಿದ ಸಾಮಾನಿನ ಬೆಲೆಯ ಎರಡರಷ್ಟು ಹಣವನ್ನು ತೆಗೆದುಕೊಂಡು ವ್ಯಾಪಾರಿಯನ್ನು ಕ್ಷಮಿಸಿದರು. ಈ ಪ್ರಸಂಗದಿಂದ ಗಾಂಧೀಜಿಯ ಬುದ್ಧಿವಾದ ಆ ವ್ಯಾಪಾರಿಯ ಮನಸ್ಸಿನ ಮೇಲೆ ವಿಶೇಷ ಪರಿಣಾಮವನ್ನುಂಟುಮಾಡಿತು. ಇತರರೂ ಅದರಿಂದ ಪಾಠ ಕಲಿಯಲೆಂದು ಆ ಕ್ಷಮಾಪಣೆಯ ಪತ್ರವನ್ನು ಗಾಂಧೀಜಿಯರು ತಮ್ಮ ಕಛೇರಿಯಲ್ಲಿ ಪ್ರದರ್ಶಿಸುವುದಕ್ಕೆ ವ್ಯವಸ್ಥೆಮಾಡಿದರು.

ಸತ್ಯಾಗ್ರಹದ ಅಸ್ತ್ರಪ್ರಯೋಗ

ದಕ್ಷಿಣ ಆಫ್ರಿಕದಲ್ಲಿದ್ದ ಭಾರತೀಯರಿಗೆ ಅಲ್ಲಿನ ಸರ್ಕಾರ ಸತತವಾಗಿ ತೊಂದರೆಯನ್ನು ಕೊಡಲಾರಂಭಿಸಿತು. ೧೯೦೬ರಲ್ಲಿ ದೇಶೀಯರ ವಿರುದ್ಧ ಅನೇಕ ಶಾಸನಗಳು ಜಾರಿಗೆ ಬಂದುವು. ಸರ್ಕಾರವು ದಬ್ಬಾಳಿಕೆಯಿಂದ ಮಾನವ ಹಕ್ಕುಗಳನ್ನೇ ಧಿಕ್ಕರಿಸುವ ನೀತಿಯನ್ನು ಅನುಸರಿಸಿತು. ಗಾಂಧೀಜಿಯು ದಕ್ಷಿಣ ಆಫ್ರಿಕ ಸರ್ಕಾರಕ್ಕೆ ಈ ಅನ್ಯಾಯದ ಕಾನೂನುಗಳಿಂದ ಭಾರತೀಯರಿಗಾಗುತ್ತಿದ್ದ ತೊಂದರೆಗಳನ್ನು ವ್ಯಕ್ತಪಡಿಸಿ ಪ್ರತಿಭಟನೆಯನ್ನು ಸಲ್ಲಿಸಿದರು. ದಕ್ಷಿಣ ಆಫ್ರಿಕದಲ್ಲೇ ಅಲ್ಲದೆ ಇಂಗ್ಲೆಂಡಿನಲ್ಲೂ ಚಳವಳಿ ಪ್ರಾರಂಭವಾಯಿತು. ಪಕ್ಷಪಾತದಿಂದ ಕೂಡಿದ್ದ ಸರ್ಕಾರವು ಭಾರತೀಯರನ್ನು ಸುಲಿಗೆಮಾಡಿ, ಅವರನ್ನು ಅಲ್ಲಿಂದ ಓಡಿಸುವುದಕ್ಕೆ ಹವಣಿಸಿತು. ಭಾರತೀಯರನ್ನು ಅಸ್ಪೃಶ್ಯರಂತೆ ಕಾಣುತ್ತ ಅವರ ಮೇಲೆ ವಿಶೇಷ ತೆರಿಗೆಗಳನ್ನು ವಿಧಿಸಿತು. ಕೂಲಿಯ ಕರಾರು ಮುಗಿದ ಮೇಲೆ ಅಲ್ಲಿಯೇ ನೆಲೆಸುವ ಪ್ರತಿಯೊಬ್ಬ ಭಾರತೀಯನೂ ೪೫ ಪೌಂಡು ತಲೆಗಂದಾಯವನ್ನು ಕೊಡಬೇಕೆಂದು ನಿಯಮಿಸಿತು. ಅನ್ಯಾಯವಾಗಿ ಹೊರಿಸಿದ್ದ ಆ ತಲೆಗಂದಾಯವನ್ನು ತೊಡೆದುಹಾಕಿಸುವುದಕ್ಕಾಗಿ ಭಾರತದಿಂದ ಗೋಪಾಲಕೃಷ್ಣ ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಹೋಗಿ ಸರ್ಕಾರದೊಡನೆ ಸಂಧಾನವನ್ನು ನಡೆಸಿದರು. ಗೋಖಲೆಯವರು ಮಾತುಕತೆ ನಡೆಸಿದ ಮೇಲೆ ಸರ್ಕಾರದವರು ತಲೆಗಂದಾಯವನ್ನು ತೆಗೆದುಹಾಕಬಹುದೆಂಬ ನಂಬಿಕೆಯಿಂದ ಅವರು ಸ್ವದೇಶಕ್ಕೆ ಹಿಂತಿರುಗಿದರು. ಆದರೆ ದಕ್ಷಿಣ ಆಫ್ರಿಕ ಸರ್ಕಾರವು ಈ ನಂಬಿಕೆಗೆ ದ್ರೋಹವೆಣಿಸಿತು. ತಲೆಗಂದಾಯವನ್ನು ತೆಗೆದು ಹಾಕದೆ ಭಾರತೀಯರಿಗೂ ಭಾರತಕ್ಕೂ ಅಪಮಾನವೆಸಗಿತು.

ಈ ಅಪಮಾನವು ಗಾಂಧೀಜಿಗೆ ಸಹಿಸಲಾಗಲಿಲ್ಲ. ತಲೆಗಂದಾಯವನ್ನು ವಜಾಮಾಡುವವರೆಗೆ ಹೊಸಮಾರ್ಗದಲ್ಲಿ ಹೋರಾಟ ಹೂಡುವುದೇ ಸೂಕ್ತವೆಂದು ತೀರ್ಮಾನಕ್ಕೆ ಬಂದರು. ಅವರ ಅನುಯಾಯಿಗಳೂ ಅದಕ್ಕೆ ಒಪ್ಪಿದಮೇಲೆ ಮೊದಲು ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ತಮ್ಮದೇ ಆದ ರೀತಿಯಲ್ಲಿ ಹೋರಾಟವನ್ನು ಪ್ರಾರಂಭಿಸಿದರು. ಅದೇ ಗಾಂಧೀಜಿಯ ಸತ್ಯಾಗ್ರಹ ಚಳವಳಿ ಅಥವಾ ಅಹಿಂಸಾತ್ಮಕವಾದ ಶಾಂತರೀತಿಯ ಪ್ರತಿಭಟನೆ. ಗಾಂಧೀಜಿಯೇ ಮುಂದೆ ನಿಂತು ಮೊದಲು ಕಾಯಿದೆ ಭಂಗವನ್ನು ಮಾಡುವುದಕ್ಕೆ ಸಿದ್ಧರಾದರು. ಅದರಿಂದ ಪ್ರಚೋದಿತರಾದ ಅನೇಕ ತರುಣರು ಉತ್ಸಾಹದಿಂದ ಗಾಂಧೀಜಿಯನ್ನನುಸರಿಸಿ ಸೆರೆಮನೆಯನ್ನು ಸೇರಿದರು. ಅನೇಕ ಕಷ್ಟನಷ್ಟಗಳನ್ನು ಅನುಭವಿಸಿದರು. ಶಾಂತರೀತಿಯ ಈ ಚಳವಳಿಯನ್ನು ನೋಡಿ ಸರ್ಕಾರವು ಮೂರು ತಿಂಗಳವರೆಗೂ ಸತತವಾಗಿ ದಬ್ಬಾಳಿಕೆಯನ್ನು ನಡೆಸಿತು. ಆದರೆ ಅದಾವುದಕ್ಕೂ ಜಗ್ಗದ ಚಳವಳಿಯನ್ನು ತಡೆಯುವುದಕ್ಕಾಗಿ ಸರ್ಕಾರವೇ ಸಂಧಾನಕ್ಕೆ ಮುಂದೆ ಬಂದಿತು. ಜನರಲ್ ಸ್ಮಟ್ಸನು ಗಾಂಧೀಜಿಯೊಡನೆ ವಿಚಾರವಿನಿಮಯ ಮಾಡಿಕೊಂಡು, ಭಾರತೀಯರ ತೊಂದರೆಗಳನ್ನು ನಿವಾರಿಸುವುದಾಗಿ ಭರವಸೆಯನ್ನು ಕೊಟ್ಟನು. ಉಭಯ ಪಕ್ಷಗಳಿಗೂ ರಾಜಿಯಾಯಿತು. ಸೆರೆಮನೆ ಸೇರಿದ್ದವರನ್ನೆಲ್ಲಾ ಬಿಡುಗಡೆ ಮಾಡಿದರು. ಆದರೆ ಕೆಲವು ಕುಚೋದ್ಯಗಾರರು ಬೇಜವಾಬ್ದಾರಿಯಿಂದ ಸರ್ಕಾರದವರೊಡನೆ ಗಾಂಧೀಜಿ ಕೂಡಿಕೊಂಡರೆಂಬ ಪೊಳ್ಳು ಸುದ್ದಿಯನ್ನು ಹರಡಿದರು. ಇದು ಬೇಜವಾಬ್ದಾರಿಯ ಮಾತಾದರೂ ಕೆಲವು ಅಜ್ಞಾನಿಗಳು ವಿಚಾರ ತಿಳಿಯದೆ ಉದ್ರೇಕಗೊಂಡರು. ಒಬ್ಬ ಪಠಾಣನೂ ಅವನ ಅನುಯಾಯಿಗಳೂ ಸೇರಿಕೊಂಡು ಗಾಂಧೀಜಿಯನ್ನು ಚೆನ್ನಾಗಿ ಹೊಡೆದರು. ಅಜ್ಞಾನದಿಂದ ಮಾಡಿದ ಕಾರ್ಯವೆಂದು ಆ ಪಠಾಣರನ್ನು ಗಾಂಧೀಜಿಯೇ ಪೋಲೀಸಿನವರಿಂದ ಬಿಡುಗಡೆ ಮಾಡಿಸಿದರು. ನಿಜವಾದ ಸಂಗತಿ ತಿಳಿದಮೇಲೆ ಆ ಪಠಾಣನು ಪಶ್ಚಾತ್ತಾಪದಿಂದ ಗಾಂಧೀಜಿಯ ಕ್ಷಮೆಯನ್ನು ಬೇಡಿದನಲ್ಲದೆ ಮುಂದೆ ಅವನೂ ಅವನ ಅನುಯಾಯಿಗಳೂ ಗಾಂಧೀಜಿಯ ಪರಮ ಶಿಷ್ಯರಾದರು.

ಇಷ್ಟೆಲ್ಲ ನಡೆದಮೇಲೂ ಸರ್ಕಾರ ಶಾಸನಗಳನ್ನು ರದ್ದುಗೊಳಿಸಲಿಲ್ಲ.

ಒತ್ತಾಯಪಡಿಸಿದಾಗ ತಾನು ಭರವಸೆಯನ್ನೇ ಕೊಡಲಿಲ್ಲವೆಂದು ಗಾಂಧೀಜಿಯ ಬಾಯಿ ಮುಚ್ಚಿಸಿತು. ಅದರಿಂದ ಗಾಂಧೀಜಿ ತಾವು ಮೋಸ ಹೋದದ್ದಲ್ಲದೆ ಜನರನ್ನೂ ಮೋಸಗೊಳಿಸಿದಂತಾಯಿತೆಂದು ತುಂಬ ವ್ಯಥೆಪಟ್ಟರು. ಆದರೆ ಇದರಿಂದ ಬ್ರಿಟಿಷರ ಕುಟಿಲನೀತಿಯನ್ನು ಬಹಿರಂಗಪಡಿಸಿದಂತಾಯಿತು. ಪುನಃ ಸತ್ಯಾಗ್ರಹವು ಪ್ರಾರಂಭವಾಯಿತು. ಸರ್ಕಾರದ ದಬ್ಬಾಳಿಕೆಯು ಹೆಚ್ಚಾದಂತೆ ಚಳವಳಿಯು ಉಗ್ರರೂಪವನ್ನು ತಾಳಿತು. ಸರ್ಕಾರವು ಅನೇಕ ರೀತಿಗಳಲ್ಲಿ ಭಾರತೀಯರಿಗೆ ಕಿರುಕುಳವನ್ನು ಕೊಡಲಾರಂಭಿಸಿತು. ಗಾಂಧೀಜಿ ರೊಚ್ಚಿಗೆದ್ದು ಈ ತಲೆಗಂದಾಯವನ್ನು ತೆಗೆದು ಹಾಕುವವರೆಗೂ ಸತ್ಯಾಗ್ರಹವನ್ನು ಮುಂದುವರಿಸುವುದಾಗಿ ಘೋಷಿಸಿದರು. ತಮ್ಮ ಜನರ ಸ್ಥಿತಿಯು ಸುಧಾರಿಸುವವರೆಗೂ ಅವರಿಗೆ ಸಮಾಧಾನವಾಗುವಂತಿರಲಿಲ್ಲ. ಆದರೆ ಸರ್ಕಾರವು ಭಾರತೀಯರ ವಿರುದ್ಧ ಅನೇಕ ಕಾನೂನುಗಳನ್ನು ಜಾರಿಗೆ ತಂದಿತು. ಭಾರತೀಯರ ಶೋಚನೀಯವಾದ ಸ್ಥಿತಿಯನ್ನು ನೋಡಿ ಅನೇಕ ನ್ಯಾಯಶೀಲ ಪಾಶ್ಚಾತ್ಯರೂ ಆ ಹೋರಾಟಕ್ಕೆ ಬೆಂಬಲವನ್ನು ಕೊಟ್ಟರು.

ಸತ್ಯಾಗ್ರಹ ಕದನದಲ್ಲಿ ಸೆರೆಮನೆಯನ್ನು ಸೇರಿದವರ ಕುಟುಂಬಗಳಿಗೆ ರಕ್ಷಣೆ ದೊರೆಯುವಂತೆ ಜೋಹಾನ್ಸ್‌ಬರ್ಗ್ ಬಳಿ 'ಕಾಲೆನ್‌ಬಾಕ್' ಎಂಬ ಜರ್ಮನ್ ಸ್ನೇಹಿತನು ಉದಾರವಾಗಿ ಕೊಟ್ಟ ನೂರಾರು ಎಕರೆಯ ವಿಸ್ತಾರವಾದ ಜಮೀನಿನಲ್ಲಿ ಗಾಂಧೀಜಿಯು "ಟಾಲ್‌ಸ್ಟಾಯ್ ಆಶ್ರಮ"ವನ್ನು ಸ್ಥಾಪಿಸಿದರು. ಆ ಆಶ್ರಮದಲ್ಲಿ ಹಿಂದು, ಮುಸ್ಲಿಂ, ಕ್ರಿಶ್ಚಿಯನ್, ಪಾರ್ಸಿ ಮುಂತಾದ ಎಲ್ಲಾ ಮತದವರೂ ಇದ್ದರು. ಸರಳಜೀವನ ನಡೆಸುತ್ತಿದ್ದ ಆಶ್ರಮವಾಸಿಗಳಿಗೆ ಗಾಂಧೀಜಿಯೇ ಯಜಮಾನರೂ ಪೋಷಕರೂ ಆದರು. ಆ ಆಶ್ರಮದ ಕುಟುಂಬಕ್ಕೆ ಸೇರಿದ ಮಕ್ಕಳಿಗೆ ಶಿಕ್ಷಣವ್ಯವಸ್ಥೆಯನ್ನು ಮಾಡುವ ಅಗತ್ಯವೂ ಕಂಡುಬಂದಿತು. ಗಾಂಧೀಜಿ ತುಂಬ ಯೋಚಿಸಿದರು. ಕೊನೆಗೆ ಮಕ್ಕಳಿಗೆ ಸೂಕ್ತವಾದ ತಿಳಿವಳಿಕೆ ಹಾಗೂ ಅಕ್ಷರಾಭ್ಯಾಸ ಮತ್ತು ನೈತಿಕ ಶಿಕ್ಷಣವನ್ನು ಕೊಡುವುದಕ್ಕೆ ತಾವೇ ಮುಂದಾದರು. ಕಾಲೆನ್‌ಬಾಕರೂ ಆ ಕಾರ್ಯದಲ್ಲಿ ಗಾಂಧೀಜಿಗೆ ನೆರವಾದರು. ಮಕ್ಕಳು ಕೇವಲ ಅಕ್ಷರಾಭ್ಯಾಸವನ್ನೇ ಅಲ್ಲದೆ ಕಾರ್ಯತಃ ಶ್ರಮಜೀವನದ ಪರಿಚಯವನ್ನೂ

ಪಡೆಯುವಂತೆ ವ್ಯವಸ್ಥೆಯನ್ನು ಮಾಡಿದರು. ಅನೇಕ ಕುಟುಂಬಗಳಿಂದ ಕೂಡಿ ದೊಡ್ಡದಾಗಿದ್ದರೂ ಆ ಆಶ್ರಮದ ಕೆಲಸಗಳಿಗೆ ಸೇವಕರಾರೂ ಇರಲಿಲ್ಲ. ಅಡಿಗೆ ಮೊದಲುಗೊಂಡು ಕಕ್ಕಸು ಬಳಿಯುವವರೆಗೂ ಪ್ರತಿಯೊಂದು ಕೆಲಸವನ್ನೂ ಆಶ್ರಮವಾಸಿಗಳೇ ಮಾಡಬೇಕಾಗಿತ್ತು. ಆಶ್ರಮದ ಉಪಯೋಗಕ್ಕಿದ್ದ ತೋಟ, ಹಣ್ಣಿನ ಗಿಡಗಳನ್ನು ನೋಡಿಕೊಳ್ಳಬೇಕಾಗಿತ್ತು. ಚರ್ಮದ ಕೆಲಸ ಮುಂತಾದ ಔದ್ಯೋಗಿಕ ಶಿಕ್ಷಣಕ್ಕೂ ವ್ಯವಸ್ಥೆಗಳಾದುವು. ಹೀಗೆ ಒಂದು ಉನ್ನತ ಆಧ್ಯಾತ್ಮಿಕ ಹಿನ್ನೆಲೆಯಮೇಲೆ ಮಕ್ಕಳಿಗೆ ಶಾರೀರಕ ಮತ್ತು ಮಾನಸಿಕ ಶಿಕ್ಷಣ ದೊರೆಯುವಂತಾಯಿತು. ಗಾಧೀಜಿಯು ಆಶ್ರಮದ ನಿಜವಾದ ಪೋಷಕರಾದರು; ಮಕ್ಕಳಿಗೆ ಗುರುಗಳಾದರು. ಆಶ್ರಮವಾಸಿಗಳಲ್ಲಿ ಯಾರಾದರೂ ಆಶ್ರಮದ ನೀತಿಗೆ ವಿರುದ್ಧವಾಗಿ ನಡೆದರೆ ಅದಕ್ಕೆ ಪ್ರಾಯಶ್ಚಿತ್ತವಾಗಿ ತಾವೇ ಉಪವಾಸವನ್ನು ಮಾಡುತ್ತಿದ್ದರು. ಒಮ್ಮೆ ಮೂರು ದಿನ, ಇನ್ನೊಮ್ಮೆ ಹದಿನೈದು ದಿನಗಳ ಉಪವಾಸಮಾಡಿ ಆಶ್ರಮವಾಸಿಗಳ ಪರಿಶುದ್ಧ ಜೀವನಕ್ಕೆ ಮಾರ್ಗ ತೋರಿಸಿದರು. ಹೀಗೆ ಸ್ವಾವಲಂಬನೆ, ಸರಳಜೀವನಗಳಿಗೆ ಹೆಸರಾದ ಟಾಲ್‌ಸ್ಟಾಯ್ ಆಶ್ರಮದಲ್ಲಿ ಹಿಂದೂಗಳು, ಮುಸ್ಲಿಮರು, ಯೂರೋಪಿಯನ್ನರು ಮುಂತಾದವರೆಲ್ಲ ಒಂದೇ ಕುಟುಂಬದವರಂತೆ ವಾಸಿಸತೊಡಗಿದರು.

ಆಶ್ರಮದ ಜೀವನ ತುಂಬ ಸರಳವಾಗಿತ್ತು. ಅಲ್ಲಿ ಮಾದಕ ಪಾನೀಯ ಮತ್ತು ಹೊಗೇಸೊಪ್ಪು ಸಂಪೂರ್ಣವಾಗಿ ವರ್ಜ್ಯವಾಗಿದ್ದವು. ಎಲ್ಲರಿಗೂ ಒಂದೇ ವಿಧದ ಸಸ್ಯಾಹಾರ; ಅನ್ನ, ಬೇಳೆಸಾರು, ಕಾಯಿಪಲ್ಯ, ಆಗಾಗ ರೊಟ್ಟಿ ಮತ್ತು ಅಂಬಲಿ—ಇವೇ ಆಶ್ರಮದ ಆಹಾರವಾಗಿದ್ದುವು. ದಿನಕ್ಕೆ ಮೂರು ಹೊತ್ತು ಊಟ. ಎಲ್ಲರಿಗೂ ಒಂದೇ ಅಡಿಗೆ ಮನೆ ಮತ್ತು ಒಂದೇ ಪಂಕ್ತಿಯಲ್ಲಿ ಊಟ. ಆಶ್ರಮದಲ್ಲಿ ಅಷ್ಟು ಜನರಿದ್ದರೂ ಎಲ್ಲೂ ಕೊಳೆಯಾಗಲಿ ಕಸವಾಗಲಿ ಕಾಣಿಸುತ್ತಿರಲಿಲ್ಲ. ಕಸವನ್ನು ಗೊಬ್ಬರಕ್ಕಾಗಿ ತೋಡಿದ್ದ ಗುಂಡಿಗಳಲ್ಲಿ ಹಾಕಿ ಮುಚ್ಚುತ್ತಿದ್ದರು. ಎಂಜಲು, ಕಾಯಿಪಲ್ಯದ ಚೂರುಗಳು ಮುಂತಾದುವುಗಳನ್ನೆಲ್ಲ ಗೊಬ್ಬರಕ್ಕಾಗಿ ಸೇರಿಸುತ್ತಿದ್ದರು. ಪ್ರತಿಮನೆಯಲ್ಲಿಯೂ ಮಲವಿಸರ್ಜನೆಗಾಗಿ ಒಂದೂವರೆ ಅಡಿ ಆಳದ ಚೌಕದ ಗುಂಡಿಯನ್ನು ತೋಡಿದ್ದರಲ್ಲದೆ ನಿತ್ಯವೂ ವಿಸರ್ಜನೆಯಾದೊಡನೆಯೇ ಮಣ್ಣಿ

ನಿಂದ ಮುಚುತ್ತಿದ್ದುದರಿಂದ ವಾಸನೆಯಾಗಲೀ ನೊಣಗಳ ಕಾಟವಾಗಲೀ ಇರಲಿಲ್ಲ. ಈ ವ್ಯವಸ್ಥೆಯಿಂದ ಉತ್ತಮ ಗೊಬ್ಬರವೂ ಆಯಿತು ಮತ್ತು ಕೊಳೆಯೂ ತಪ್ಪಿತು.

ಆಶ್ರಮವನ್ನು ಉದ್ಯೋಗದ ಕೇಂದ್ರವನ್ನಾಗಿ ಮಾಡಿ ಅಲ್ಲಿದ್ದ ಕುಟುಂಬಗಳನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕೆಂಬುದೇ ಗಾಂಧೀಜಿಯ ಉದ್ದೇಶವಾಗಿತ್ತು. ಅದರಿಂದ ತಾವೇ ಮೊದಲು ಚರ್ಮದ ಕೆಲಸವನ್ನು ಕಲಿತು, ಮೋಚಿಯ ಕೆಲಸವನ್ನೂ ಮಾಡಿ ಇತರರಿಗೂ ಕಲಿಸಿದರು. ಅದೂ ಅಲ್ಲದೆ ಆಶ್ರಮವಾಸಿಗಳು ಬಡಗಿಯ ಕೆಲಸವನ್ನು ಕಲಿತರು. ಗಾಂಧೀಜಿ ವಿದ್ಯಾರ್ಥಿಗಳಿಗೆ ಸೂಕ್ತವಾದ ಧಾರ್ಮಿಕ ಶಿಕ್ಷಣಕ್ಕೂ ವ್ಯವಸ್ಥೆಯನ್ನು ಮಾಡಿದರು. ಹಿಂದೂಧರ್ಮದ ಮೂಲತತ್ತ್ವಗಳನ್ನೊಳಗೊಂಡ ಒಂದು ಪುಸ್ತಕವನ್ನು ತಾವೇ ಬರೆದರು. ಕ್ರಿಶ್ಚಿಯನ್, ಇಸ್ಲಾಂ ಮತ್ತು ಜೊರಾಸ್ಟರ್ ಮುಂತಾದ ಮತಗ್ರಂಥಗಳನ್ನೂ ಶೇಖರಿಸಿದರು. ಈ ರೀತಿಯ ವಿದ್ಯಾಭ್ಯಾಸ ಕ್ರಮದಿಂದ ವಿದ್ಯಾರ್ಥಿಗಳಲ್ಲಿ ಪರಧರ್ಮದ ಬಗ್ಗೆ ಅಸಹಿಷ್ಣುತೆ ತಪ್ಪಿತು; ನಡೆನುಡಿಗಳಲ್ಲೂ ರೀತಿ ನೀತಿಗಳಲ್ಲೂ ಉದಾರ ಭಾವನೆ ಮೂಡಿತು. ಎಲ್ಲರೂ ಅಣ್ಣ ತಮ್ಮಂದಿರಂತೆ ಅನ್ಯೋನ್ಯರಾಗಿ ಬಾಳುವುದನ್ನು ಕಲಿತರು. ಅವರು ನಿತ್ಯವೂ ಸಂಧ್ಯಾಕಾಲದಲ್ಲಿ ಪ್ರಾರ್ಥನೆಯನ್ನು ನಡೆಸುತ್ತಿದ್ದರು. ಆ ಆಶ್ರಮವು ಮುಖ್ಯವಾಗಿ ಸತ್ಯಾಗ್ರಹಿಗಳಿಗೆ ನೆಲೆಯಾಗಿತ್ತು; ಐಕಮತ್ಯದ ಕೇಂದ್ರವಾಗಿತ್ತು.

ಸತ್ಯಾಗ್ರಹ ಚಳವಳಿಯಲ್ಲಿ ಮೊದಲು ಸ್ತ್ರೀಯರು ಭಾಗವಹಿಸಿರಲಿಲ್ಲ. ಅದಕ್ಕೆ ಒಂದು ಪ್ರಸಂಗ ಒದಗಿತು. ಸರ್ಕಾರದವರು ಕ್ರೈಸ್ತ ಸಮಾಜದ ರೀತಿಯಂತೆ ರಿಜಿಸ್ಟರ್‌ಮಾಡದ ಮದುವೆಗಳು ನ್ಯಾಯಬದ್ಧವಲ್ಲವೆಂದು ಘೋಷಿಸಿದರು. ಅದರಿಂದ ಹಿಂದೂ, ಮುಸ್ಲಿಂ ಮತ್ತು ಜೊರಾಸ್ಟ್ರಿಯನ್ ವಿವಾಹಗಳೆಲ್ಲ ಕಾನೂನಿನಂತೆ ನ್ಯಾಯಬದ್ಧವಲ್ಲವೆಂದಾಯಿತು. ಭಾರತದ ವಿವಾಹಿತ ಮಹಿಳೆಯರು ದಕ್ಷಿಣ ಆಫ್ರಿಕದ ಕಾನೂನಿನಂತೆ ಧರ್ಮಪತ್ನಿಯರಾಗಲಿಲ್ಲ. ಗಾಂಧೀಜಿ ಸರ್ಕಾರದೊಡನೆ ಆ ಬಗ್ಗೆ ಸಂಧಾನ ನಡೆಸಿದರೂ ಪ್ರಯೋಜನವಾಗಲಿಲ್ಲ. ಆದುದರಿಂದ ಸತ್ಯಾಗ್ರಹವನ್ನು ಹೂಡಿದರು. ಸಾವಿರಾರು ಮಂದಿ ಮಹಿಳೆಯರೂ ಸತ್ಯಾಗ್ರಹವನ್ನು ಸೇರಿದರು. ಮಾನವ

ಹಕ್ಕುಗಳನ್ನೇ ಧಿಕ್ಕರಿಸುವ ಸರ್ಕಾರದ ನೀತಿಯಿಂದ ಭಾರತೀಯರು ಕಷ್ಟ ನಷ್ಟಗಳಿಗೆ ಗುರಿಯಾಗಿ ಎಚ್ಚತ್ತರು. ಗಾಂಧೀಜಿಯು ನಾಯಕತ್ವದಲ್ಲಿ ಎಷ್ಟೇ ತೊಂದರೆಯಾದರೂ ಜಗ್ಗದೆ ಸತ್ಯಾಗ್ರಹವನ್ನು ಮುಂದುವರಿಸಿದರು.

ಸತ್ಯಾಗ್ರಹ ತಂಡವು ಟ್ರಾನ್ಸ್‌ವಾಲನ್ನು ಪ್ರವೇಶಿಸಿದಮೇಲೆ ಗಾಂಧೀಜಿಯನ್ನೂ ಕೆಲವು ಮುಖಂಡರನ್ನೂ ಸರ್ಕಾರವು ದಸ್ತಗಿರಿ ಮಾಡಿತು. ಆದರೂ ಗಾಂಧೀಜಿ ಹಾಕಿಕೊಟ್ಟಿದ್ದ ಮೇಲ್ಪಂಕ್ತಿಯನ್ನನುಸರಿಸಿ ಸತ್ಯಾಗ್ರಹ ಮುಂದುವರಿಯಿತು. ಸಾವಿರಾರು ಜನರು ಸೆರೆಮನೆಯನ್ನು ಸೇರಿದರು. ಸತ್ಯಾಗ್ರಹಿಗಳ ಸಂಖ್ಯೆ ದಿನೇ ದಿನೇ ವೃದ್ಧಿಯಾಯಿತು. ಕೊನೆಗೆ ಸೆರೆಮನೆಯಲ್ಲಿಯೇ ಜಾಗ ಸಾಲದಾಯಿತು. ಕಾರ್ಮಿಕರಿಲ್ಲದೆ ಕೆಲವು ಗಣಿಗಳನ್ನೂ ಇತರ ಕಾಮಗಾರಿ ಕೆಲಸಗಳನ್ನೂ ನಿಲ್ಲಿಸಬೇಕಾದ ಪರಿಸ್ಥಿತಿ ಒದಗಿತು. ಸರ್ಕಾದವರು ಗಣಿಯ ಪ್ರದೇಶಗಳ ಸುತ್ತಲೂ ಕಬ್ಬಿಣದ ಮುಳ್ಳು ಬೇಲಿಗಳ ತಡೆಯನ್ನು ಹಾಕಿ, ಗಣಿಪ್ರದೇಶಗಳನ್ನೇ ಜೈಲುಗಳನ್ನಾಗಿ ಮಾಡಿ ಕಾವಲು ಹಾಕಿದರು. ಸತ್ಯಾಗ್ರಹಿಗಳು ಗಣಿಗಳಲ್ಲೇ ಇದ್ದರೂ ಕೆಲಸಮಾಡದೆ ಮುಷ್ಕರವನ್ನು ಪ್ರಾರಂಭಿಸಿದರು. ಸರ್ಕಾರವು ಮುಷ್ಕರ ಹೂಡಿದ ಕಾರ್ಮಿಕರನ್ನು ಅಮಾನುಷ ರೀತಿಯಲ್ಲಿ ಹಿಂಸಿಸಿ, ದಬ್ಬಾಳಿಕೆಯನ್ನು ನಡೆಸಿತು. ಅದರಿಂದ ಭಾರತೀಯ ಕಾರ್ಮಿಕರೆಲ್ಲ ಉದ್ರೇಕಗೊಂಡು ಒಗ್ಗಟ್ಟಿನಿಂದ ಮುಷ್ಕರಕ್ಕೆ ಬೆಂಬಲವನ್ನು ಕೊಟ್ಟರು. ಆ ಮುಷ್ಕರವನ್ನು ಅಡಗಿಸುವುದಕ್ಕೆ ಆತುರಸರಾಗಿದ್ದ ಆಂಗ್ಲೇಯ ಸರ್ಕಾರದವರು ಉಗ್ರಕಾರ್ಯಕ್ರಮಗಳನ್ನು ಕೈಗೊಂಡರು. ಅನೇಕ ಭಾರತೀಯ ಬಂಧುಗಳ ರಕ್ತದ ಕೋಡಿ ಹರಿಯಿತು. ಆ ವಿಚಾರಗಳೆಲ್ಲ ಭಾರತ ಸರ್ಕಾರಕ್ಕೆ ತಿಳಿದಮೇಲೆ ಭಾರತದಿಂದ ದೀನ ಬಂಧು ಆಂಡ್ರೂಸನರು ದಕ್ಷಿಣ ಆಫ್ರಿಕಕ್ಕೆ ಹೋದರು. ಭಾರತೀಯರ ಮೇಲಿನ ಅನ್ಯಾಯ, ಅತ್ಯಾಚಾರಗಳಿಗಾಗಿ ಭಾರತದ ವೈಸರಾಯಿಯಾಗಿದ್ದ ಲಾರ್ಡ್ ಹಾರ್ಡಿಂಗ್‌ರವರೂ ದಕ್ಷಿಣ ಆಫ್ರಿಕದ ಸರ್ಕಾರವನ್ನು ಖಂಡಿಸಿದರು.

ಗಾಂಧೀಜಿಯ ಆತ್ಮಬಲದ ಮುಂದೆ ದಕ್ಷಿಣ ಆಫ್ರಿಕದ ಮಿಲಿಟರಿ ಸರ್ಕಾರವು ಸೋತು, ತಲೆ ತಗ್ಗಿಸಬೇಕಾಗಿ ಬಂದಿತು. ಅವರ ಅಪ್ರತಿಮ ಸಾಹಸ ಮತ್ತು ಧ್ಯೇಯಗಳು ಜಗತ್ತನ್ನೇ ಬೆರಗುಗೊಳಿಸಿದುವು. ಅಹಿಂಸಾತ್ಮಕವಾದ ಆತ್ಮಬಲದ ಮುಂದೆ ಸರ್ಕಾರದ ಶಕ್ತಿ ವ್ಯರ್ಥವಾಯಿತು. ಅನ್ಯಾ

ಯವು ಕೊನೆಯಾಗುವವರೆಗೂ ಸತ್ಯಾಗ್ರಹವನ್ನು ಮುಂದುವರಿಸುವಂತೆ ಗಾಂಧೀಜಿ ಸಂದೇಶವನ್ನು ಕೊಟ್ಟರು. ಜಗತ್ತಿನ ಅನೇಕ ರಾಷ್ಟ್ರಗಳ ಹಾಗೂ ರಾಜಮಹಾರಾಜರುಗಳ ಸಹಾನುಭೂತಿಯೂ ದೊರೆಯಿತು. ಬ್ರಿಟಿಷರ ಕುಟಿಲನೀತಿ ಮತ್ತು ದಬ್ಬಾಳಿಕೆ ಪ್ರಪಂಚಕ್ಕೆಲ್ಲ ತಿಳಿಯಿತು. ಕೊನೆಗೆ ಸರ್ಕಾರವು ಸೋಲನ್ನೊಪ್ಪಿಕೊಳ್ಳುವ ಕಾಲವೂ ಬಂದಿತು. ೧೯೧೪ರಲ್ಲಿ ಗಾಂಧೀಜಿಯವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು. ಸರ್ಕಾರವು ಒಪ್ಪಂದಕ್ಕೆ ಮುಂದೆ ಬಂದಿತು. ಅದರಿಂದ ಭಾರತೀಯರ ತೊಂದರೆಗಳು ಸ್ವಲ್ಪಮಟ್ಟಿಗೆ ನಿವಾರಣೆಯಾದವು. ಅಹಿಂಸಾತ್ಮಕ ಸತ್ಯಾಗ್ರಹದಿಂದ ಯಶಸ್ವಿಯಾದ ಗಾಂಧೀಜಿ ಪುಟವಿಟ್ಟ ಮಿಸುನಿಯಂತೆ ಅಪಾರವಾದ ಆತ್ಮಶಕ್ತಿ, ಸಂಯಮಗಳೊಡನೆ ಹೊರಕ್ಕೆ ಬಂದರು. ಅದರಿಂದ ರಾಜಕೀಯ ಕ್ಷೇತ್ರದಲ್ಲಿ ಒಂದು ಹೊಸ ಕ್ರಾಂತಿಯೇ ಉಂಟಾಯಿತು. ಗಾಂಧೀಜಿಯ ಈ ಅದ್ಭುತ ಪ್ರಯೋಗದಿಂದ ಜಗತ್ತಿನಲ್ಲಿ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಪರಿಹಾರಕ್ಕೆ ಒಂದು ಪರಿಣಾಮಕಾರಿಯಾದ ಮಹಾಸ್ತ್ರವನ್ನು ತೋರಿಸಿಕೊಟ್ಟಂತಾಯಿತು. ದಕ್ಷಿಣ ಆಫ್ರಿಕದಲ್ಲಿ ರೂಪುಗೊಂಡ ಈ ಶಾಂತಿಯುತ ಸತ್ಯಾಗ್ರಹ ಸಾಧನೆಯ ಅಸ್ತ್ರವು ಮುಂದೆ ಭಾರತದ ಸ್ವಾತಂತ್ರ್ಯಸಾಧನೆಯ ಮಹಾಸ್ತ್ರವಾಯಿತು.

ಸ್ವದೇಶದಲ್ಲಿ ಮತ್ತೆ ಗಾಂಧೀಜಿ

ದಕ್ಷಿಣ ಆಫ್ರಿಕದ ಸತ್ಯಾಗ್ರಹ ಕದನದಲ್ಲಿ ಜಯಗಳಿಸಿದ ಗಾಂಧೀಜಿ ಗೋಖಲೆಯವರ ಒತ್ತಾಯದಿಂದ ಇಂಗ್ಲೆಂಡಿನ ಮಾರ್ಗವಾಗಿ ಸ್ವದೇಶಕ್ಕೆ ಹಿಂತಿರುಗುವುದಕ್ಕೆ ಸಂಸಾರಸಮೇತ ಹೊರಟರು. ಅವರು ಇಂಗ್ಲೆಂಡು ಸೇರುವುದಕ್ಕೆ ಎರಡುಮೂರು ದಿನಗಳ ಮುಂಚೆ ಪ್ರಪಂಚದ ಮಹಾಯುದ್ಧವು ಪ್ರಾರಂಭವಾಗಿತ್ತು. ತಮ್ಮ ಅವನತಿಗೆ ಕಾರಣರಾದ ಬ್ರಿಟಿಷರಿಗೆ ಈ ಯುದ್ಧದಲ್ಲಿ ನೆರವು ನೀಡಬಾರದೆಂಬ ಭಾವನೆಯು ಭಾರತೀಯರಲ್ಲಿ ತಲೆದೋರಿತ್ತು. ಹಿಂಸಾತ್ಮಕವಾದ ಯುದ್ಧವೆಂಬ ಕೊಲೆಪಾತಕತನಕ್ಕೆ ಸಹಾಯ ಮಾಡುವುದು ಸೂಕ್ತವಲ್ಲವೆಂದು ಶಾಂತಿಮಾರ್ಗದ ಅಹಿಂಸಾವಾದಿಗಳಲ್ಲಿ ಕೆಲವರ ಅಭಿಪ್ರಾಯವಾಗಿತ್ತು. ಆದರೆ ಗಾಂಧೀಜಿ ಈ ವಿಚಾರದಲ್ಲಿ ಬಹಳವಾಗಿ ಆಲೋಚಿಸಿ, ಒಂದು ನಿರ್ಧಾರಕ್ಕೆ ಬಂದರು. ದೂರದೃಷ್ಟಿಯಿಂದ

ಬ್ರಿಟಿಷರ ಕಷ್ಟಸಮಯದಲ್ಲಿ ಅವರಿಗೆ ನೆರವಾದರೆ ಮುಂದೆ ಭಾರತದ ಸ್ವಾತಂತ್ರ್ಯಕ್ಕೆ ಅವಕಾಶ ಒದಗುವುದೆಂದು ಅವರು ಯೋಚಿಸಿದರು. ಬ್ರಿಟಿಷ್ ಪ್ರಭುತ್ವದಲ್ಲಿ ಗಾಂಧಿಜೀಗೆ ತುಂಬ ರಾಜಭಕ್ತಿ ಇದ್ದಿತು. ಆದುದರಿಂದ ಯುದ್ಧದಲ್ಲಿ ನೊಂದ ಬಡಪಾಯಿಗಳ ಪರಿಚರ್ಯೆಗಾಗಿ ಅವರು ಒಂದು ಸೇವಾದಳವನ್ನು ಅಲ್ಲಿಯೇ ಕೂಡಿಸಿದರು. ಅಷ್ಟರಲ್ಲೇ ಅವರು ರೋಗ ಗ್ರಸ್ಥರಾದುದರಿಂದ ಯುದ್ಧಕ್ಕೆ ಹೋಗಲಾಗಲಿಲ್ಲ. ಆದರೆ ಅವರು ಕೂಡಿಸಿದ್ದ ದಳದವರು ಹೋಗಿ ಸೇವೆಯನ್ನು ಸಲ್ಲಿಸಿದರು.

ಗಾಂಧೀಜಿಯ ಬೇನೆ ಬೇಗ ಗುಣವಾಗಲಿಲ್ಲ. ಸಂನ್ಯಾಸಿಯಂತೆ ಆಹಾರ ವಿಚಾರದಲ್ಲಿ ಅನುಸರಿಸುತ್ತಿದ್ದ ನಿಯಮವನ್ನು ಬದಲಾಯಿಸುವುದಕ್ಕೆ ಅವರು ಒಪ್ಪಲಿಲ್ಲ. ಅದರಿಂದಾಗಿ ಇಂಗ್ಲೆಂಡಿನಿಂದ ಸ್ವದೇಶಕ್ಕೆ ಹಿಂತಿರುಗಿದರು. ಅಹಿಂಸಾತ್ಮಕವಾದ ಸತ್ಯಾಗ್ರಹ ಕದನದಲ್ಲಿ ಜಯಗಳಿಸಿದ ಗಾಂಧೀಜಿಗೆ ಸ್ವದೇಶದಲ್ಲಿ ಸುಸ್ವಾಗತ ಕಾದಿದ್ದಿತು. ಅವರ ಸೇವೆ ಮತ್ತು ತ್ಯಾಗಗಳಿಂದ ಜನತೆ ಅವರ ಹಿರಿಮೆಯನ್ನು ಅರಿತು ಆನಂದದಿಂದ ಅಮೋಘ ಸ್ವಾಗತವನ್ನಿತ್ತು ಗೌರವಿಸಿತು. ಅವರು ಬೊಂಬಾಯಿನಲ್ಲಿ ಕೆಲವು ದಿನಗಳಿದ್ದು ಆಮೇಲೆ ಪುಣೆಗೆ ಹೋದರು. ಅಲ್ಲಿ ಗೋಖಲೆಯವರೂ ಭಾರತ ಸೇವಕ ಸಂಘದ ಸದಸ್ಯರೂ ಗಾಂಧೀಜಿಯನ್ನು ಗೌರವ, ವಿಶ್ವಾಸಗಳಿಂದ ಕಂಡು ವಿಚಾರವಿನಿಯಮ ಮಾಡಿಕೊಂಡರು. ಅಲ್ಲಿಂದ ಗಾಂಧೀಜಿ ರಾಜಕೋಟೆಯನ್ನು ತಲಪಿದಾಗ ಕಾಥೆವಾಡದ ವೀರಟ್ ಗ್ರಾಮದಲ್ಲಿ ಸುಂಕದ ಕಟ್ಟೆಯಿಂದ ಜನರು ತುಂಬ ಕಷ್ಟನಷ್ಟಗಳಿಗೊಳಗಾಗಿದ್ದುದು ತಿಳಿಯಿತು. ಗಾಂಧೀಜಿಗೆ ವಿಚಾರ ತಿಳಿದಕೂಡಲೇ ಸಂಪೂರ್ಣ ವಿವರಗಳನ್ನು ಸಂಗ್ರಹಿಸಿ ಬೊಂಬಾಯಿ ಸರ್ಕಾರದವರೊಡನೆ ವ್ಯವಹಾರ ನಡೆಸಿದರು. ಅಲ್ಲಿಯ ಗೌವರ್ನರರೊಡನೆ ಆ ಬಗ್ಗೆ ಮಾತನಾಡಿದರು. ಅದಕ್ಕೆ ಅವರು ಆ ವಿಷಯ ಇಂಡಿಯಾ ಸರ್ಕಾರಕ್ಕೆ ಸಂಬಂಧಪಟ್ಟದ್ದೆಂದೂ ತಮ್ಮ ಅಧಿಕಾರ ವ್ಯಾಪ್ತಿಗೆ ಸೇರಿಲ್ಲವೆಂದೂ ತಿಳಿಸಿದರು. ಗಾಂಧೀಜಿ ಇಂಡಿಯಾ ಸರ್ಕಾರದೊಡನೆ ಪತ್ರವ್ಯವಹಾರ ನಡೆಸಿದರು. ಆದರೆ ಏನೂ ಪ್ರಯೋಜನ ಕಂಡುಬರಲಿಲ್ಲ. ಅದನ್ನು ಅಷ್ಟಕ್ಕೇ ಬಿಡದೆ ವೈಸ್‌ರಾಯರನ್ನು ಕಂಡು ಮಾತನಾಡಿದ ಮೇಲೆ ಸುಂಕದ ಕಟ್ಟೆ ವಜಾ ಆಯಿತು. ಅಲ್ಲಿಂದ ಭಾರತದಲ್ಲಿ ಗಾಂಧೀಜಿಯ ಸೇವಾ ಕ್ಷೇತ್ರದ ಉದಯ ಪ್ರಾರಂಭವಾಯಿತು.

ಗಾಂಧೀಜಿ ತಮ್ಮ ಮುಂದಿನ ಧ್ಯೇಯ ಸಾಧನೆಗಾಗಿ ದೇಶದ ವಿವಿಧ ಭಾಗಗಳ ಜನರ ಸ್ಥಿತಿಗತಿಗಳ ಪರಿಚಯವನ್ನು ಪಡೆಯುವುದಕ್ಕಾಗಿ ಸಂಚಾರ ವನ್ನು ಕೈಗೊಂಡರು. ಮೊದಲು ಕಲ್ಕತ್ತೆಯ ಬಳಿ ಕವಿವರ್ಯ ರವೀಂದ್ರ ನಾಥ ಠಾಕೂರರು ಸ್ಥಾಪಿಸಿದ್ದ ಶಾಂತಿನಿಕೇತನಕ್ಕೆ ಹೋದರು. ಆಫ್ರಿಕದಲ್ಲಿ ಫೀನಿಕ್ಸ್ ಆಶ್ರಮದಲ್ಲಿ ತಮ್ಮೊಡನಿದ್ದು, ತಮಗೆ ಬಲಗೈಯಂತಿದ್ದ ಮಗನ ಲಾಲ ಗಾಂಧೀಜಿಯೂ ಅಲ್ಲಿಗೆ ಬಂದು ಸೇರಿ ಸೇವಾದಳವೊಂದನ್ನು ಕೂಡಿ ಸಿದ್ದರು. ಶಾಂತಿನಿಕೇತನದ ಶಿಕ್ಷಕರೂ ವಿದ್ಯಾರ್ಥಿಗಳೂ ಗಾಂಧೀಜಿಯನ್ನು ಅತ್ಯಂತ ಪ್ರೀತಿ ಗೌರವಗಳಿಂದ ಕಂಡರು. ಗಾಂಧೀಜಿಯು ಅಲ್ಲಿಯ ಆಶ್ರಮ ವಾಸಿಗಳಿಗೆ ಸ್ವಾವಲಂಬನೆಯ ಪ್ರಥಮ ಪಾಠವನ್ನು ಕಲಿಸಿದರು. ತಮ್ಮ ಆಹಾರವನ್ನು ತಾವೇ ಸಿದ್ಧಪಡಿಸಿಕೊಳ್ಳಬೇಕೆಂದೂ ಆಹಾರ ನಿಯಮವನ್ನು ಪಾಲಿಸುವುದು ಆರೋಗ್ಯದೃಷ್ಟಿಯಿಂದ ಉತ್ತಮವೆಂದೂ ಸಲಹೆ ಮಾಡಿ ದರು. ಅದರಂತೆ ಆಶ್ರಮವಾಸಿಗಳು ತಮ್ಮ ಎಲ್ಲಾ ಕೆಲಸಗಳನ್ನೂ ತಾವೇ ಮಾಡಿಕೊಳ್ಳುವಂತಾಯಿತು. ಸ್ವಾವಲಂಬನೆಯು ಸ್ವರಾಜ್ಯಸಾಧನೆಯ ಮೂಲವೆಂದು ರವೀಂದ್ರರೂ ಅದಕ್ಕೆ ಬೆಂಬಲವನ್ನು ಕೊಟ್ಟರು.

ಶಾಂತಿನಿಕೇತನದಲ್ಲಿದ್ದಾಗ ಗೋಖಲೆಯವರು ಕಾಲವಾದರೆಂಬ ದುಃಖದ ವಾರ್ತೆ ಗಾಂಧೀಜಿಗೆ ಮುಟ್ಟಿತು. ಅವರ ಮರಣದಿಂದ ಭಾರತ ದೇಶಕ್ಕೆ ಅಪಾರ ನಷ್ಟವಾಯಿತು. ಗೋಖಲೆಯವರ ಸೇವೆ ತ್ಯಾಗಗಳ ಫಲವಾಗಿ ನಮ್ಮ ಜನರು ದೇಶೋನ್ನತಿಯ ಮಾರ್ಗವನ್ನು ಕಂಡರು; ಸ್ವದೇಶಾಭಿಮಾನದ ಮಹತ್ವವನ್ನು ಅರಿತರು. ಅವರು ವಿಶಾಲದೃಷ್ಟಿ ಯಿಂದಲೂ ನಿರ್ಮಲ ಜ್ಞಾನದಿಂದಲೂ ರಾಜಕೀಯದ ಶ್ರೇಷ್ಠತಪಸ್ವಿಗಳಾಗಿ ಪ್ರಜಾಧರ್ಮವನ್ನು ಭಾರತೀಯರಿಗೆ ಪರಿಚಯ ಮಾಡಿಕೊಟ್ಟು, ರಾಷ್ಟ್ರೀ ಯತೆಯನ್ನು ಹರಡಿದ್ದರು. ಹೀಗೆ ಸತ್ಯವ್ರತರಾಗಿದ್ದ ಗೋಖಲೆಯವರನ್ನೇ ಗಾಂಧೀಜಿಯವರು ತಮ್ಮ ರಾಜಕೀಯದ ಗುರುವೆಂದೂ ದೇಶಕಾರ್ಯ ಪ್ರೇರಕರೆಂದೂ ಭಾವಿಸಿದ್ದರು. ಅಂತಹ ಗುರುಗಳನ್ನು ಕಳೆದುಕೊಂಡ ಗಾಂಧೀಜಿಗೆ ಅಪಾರ ದುಃಖವಾಯಿತು. ಕೂಡಲೆ ಅವರು ಪೂನಾ ನಗರಕ್ಕೆ ಧಾವಿಸಿ ಬಂದು ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಗೋಖಲೆಯವರು ಸ್ಥಾಪಿಸಿದ್ದ ಭಾರತಸೇವಕ ಸಂಘಕ್ಕೆ ಸದಸ್ಯರಾಗುವುದಕ್ಕೆ ಗಾಂಧೀಜಿ

ಪ್ರಯತ್ನಿಸಿದರೂ ಸಂಘದ ಮೂಲಧ್ಯೇಯಕ್ಕೂ ತಮ್ಮ ಧ್ಯೇಯಕ್ಕೂ ಭಿನ್ನಾಭಿಪ್ರಾಯವಿದ್ದುದರಿಂದ ಅದು ಸಾಧ್ಯವಾಗದೆ ಹೋಯಿತು.

ಪುಣೆಯಿಂದ ಗಾಂಧೀಜಿ ಸ್ವಾಮಿಶ್ರದ್ಧಾನಂದರನ್ನೂ ಅವರು ಸ್ಥಾಪಿಸಿದ್ದ ಗುರುಕುಲಾಶ್ರಮವನ್ನೂ ನೋಡುವುದಕ್ಕಾಗಿ ಹರಿದ್ವಾರಕ್ಕೆ ಪ್ರಯಾಣವನ್ನು ಬೆಳೆಸಿದರು. ಅದೇ ಕಾಲದಲ್ಲಿ ಹನ್ನೆರಡು ವರ್ಷಕ್ಕೊಮ್ಮೆ ನಡೆಯುವ ಕುಂಭಮೇಳವು ಸೇರಿದ್ದುದರಿಂದ ಗಾಂಧೀಜಿ ಅದನ್ನೂ ನೋಡಿದರು. ಅದರಿಂದ ಅವರಿಗೆ ಒಂದು ಹೊಸ ಅನುಭವ ಉಂಟಾಯಿತು. ಪ್ರಸಿದ್ಧವಾದ ಆ ಜಾತ್ರೆಯಲ್ಲಿ ಸೇರುತ್ತಿದ್ದ ಜನರ ವರ್ತನೆಯನ್ನು ನೋಡಿ ಅವರಿಗೆ ಬೇಸರವಾಯಿತು. ಸರ್ವಸ್ವವನ್ನೂ ತೊರೆದು ಸಾಧುಸಂನ್ಯಾಸಿಗಳೆನ್ನಿಸಿಕೊಂಡಿದ್ದವರ ಸುಖಜೀವನವನ್ನೂ ವಿಲಾಸವನ್ನೂ ಕಂಡು ವ್ಯಥೆಪಟ್ಟರು. ಅಂತಹ ಪವಿತ್ರ ಸ್ಥಳಗಳಲ್ಲೂ ಹಲವರು ಮೋಸ ತಕ್ಕುಗಳಿಂದ ಜನರ ಸುಲಿಗೆಯನ್ನು ಮಾಡುತ್ತಿದ್ದರು. ಜನರು ಅಜ್ಞಾನ ಅಂಧಕಾರಗಳಿಂದ ಎಚ್ಚರಗೊಳ್ಳದೆ, ಉನ್ನತಿಯ ಮಾರ್ಗಕ್ಕೆ ಬದಲಾಗಿ, ಅವನತಿಯ ಮಾರ್ಗವನ್ನನುಸರಿಸುತ್ತಿದ್ದುದನ್ನು ಕಂಡು ಗಾಂಧೀಜಿಯ ಮನಸ್ಸಿಗೆ ಬಹಳ ನೋವಾಯಿತು. ಹೀಗೆ ವ್ಯಾಕುಲಗೊಂಡ ಗಾಂಧೀಜಿ ಶ್ರದ್ಧಾನಂದರ ಗುರುಕುಲಾಶ್ರಮದ ಶಾಂತಿವಾತಾವರಣಕ್ಕೆ ಹೋದಾಗ ಅವರ ಮನಸ್ಸಿಗೆ ನೆಮ್ಮದಿಯಾಯಿತು.

ದೇಶಪರ್ಯಟನೆಯನ್ನು ಮುಗಿಸಿದ ಮೇಲೆ ಗಾಂಧೀಜಿ ಅಹಮದಾಬಾದಿನಲ್ಲಿ 'ಸತ್ಯಗ್ರಹಾಶ್ರಮ' ವೊಂದನ್ನು ಸ್ಥಾಪಿಸಿದರು. ಮಗನಲಾಲ ಗಾಂಧೀಜಿಯ ವ್ಯವಸ್ಥಾಕ್ರಮದಿಂದ ಆಫ್ರಿಕದಲ್ಲಿದ್ದ ಸ್ವಾವಲಂಬನೆಯ ಸರಳ ಜೀವನದ ಆಶ್ರಮ ಕ್ರಮವು ಇಲ್ಲಿಯೂ ಪ್ರಾರಂಭವಾಯತು. ಅಸ್ಪೃಶ್ಯರೆಂದು ಕಡೆಗಣಿಸಲ್ಪಟ್ಟಿದ್ದ ಹರಿಜನರ ಕುಟುಂಬವೊಂದನ್ನು ಆಶ್ರಮಕ್ಕೆ ಸೇರಿಸಿಕೊಂಡರು. ಮೊದಲು ಆಶ್ರಮವಾಸಿಗಳಲ್ಲಿ ಅದರಲ್ಲೂ ಹೆಂಗಸರಲ್ಲಿ ಸ್ವಲ್ಪ ಅಸಮಾಧಾನ ತಲೆದೋರಿದ್ದರೂ ಕ್ರಮೇಣ ಎಲ್ಲವೂ ಸರಿಹೋಯಿತು. ಆಶ್ರಮವಾಸಿಗಳಿಗೆ ಅದರಿಂದ ಒಳ್ಳೆಯ ಶಿಕ್ಷಣ ದೊರೆಯಿತು. ಈ ಆದರ್ಶ ಆಶ್ರಮದಲ್ಲಿ ಅಸ್ಪೃಶ್ಯತೆಗೆ ಅವಕಾಶವಿಲ್ಲವೆಂದು ಕಾರ್ಯತಃ ತೋರಿಸಿಕೊಟ್ಟಂತಾಯಿತು. ಆಶ್ರಮದ ರೀತಿನೀತಿಗಳು ಬರಬರುತ್ತ ಉತ್ತಮವಾಗಿ, ಕಾರ್ಯಕ್ರಮಗಳು ಸರಳವಾದವು. ಹೀಗೆ ಪ್ರಾರಂಭವಾದ ಆಶ್ರಮವನ್ನು

ಗಾಂಧೀಜಿಯವರು ಸ್ವಲ್ಪಕಾಲದಲ್ಲೇ ಸಬರ್ಮತಿ ಜೈಲಿನ, ಬಿಳಿಯ ನದಿಯ ದಂಡೆಯ ಮೇಲಿನ ವಿಶಾಲವೂ ಉತ್ತಮವೂ ಆದ ಪ್ರದೇಶಕ್ಕೆ ಬದಲಾಯಿಸಿದರು. ಈ ಸಬರ್ಮತಿ ಆಶ್ರಮದಲ್ಲಿದ್ದಾಗಲೇ ಗಾಂಧೀಜಿ ಚರಕದ ಮಹತ್ವವನ್ನೂ ಅದರಿಂದ ಸ್ವರಾಜ್ಯ ಸಾಧನೆಯ ಮಾರ್ಗವನ್ನೂ ತಿಳಿದುಕೊಂಡರು. ಸತ್ಯ ಮತ್ತು ಅಹಿಂಸೆಗಳಿಂದ ಸ್ವಾವಲಂಬಿಗಳಾಗಿ ಸರಳಜೀವನವನ್ನು ನಡೆಸುವುದೇ ಈ ಆಶ್ರಮದ ವೈಶಿಷ್ಟ್ಯವಾಗಿದ್ದುದರಿಂದ ಅನೇಕರು ಈ ತತ್ತ್ವಗಳನ್ನು ಒಪ್ಪಿ, ಆಶ್ರಮವನ್ನು ಸೇರಿದರು.

ಭಾರತದಲ್ಲಿ ಗಾಂಧೀಜಿಯ ಕಾರ್ಯಕ್ಷೇತ್ರ ವಿಸ್ತಾರವಾಯಿತು. ಆಶ್ರಮದ ಸ್ಥಿತಿ ಉತ್ತಮವಾದ ಮೇಲೆ ಅವರು ಆಫ್ರಿಕದ ಕರಾರುಕೂಲಿ ಪದ್ಧತಿಯನ್ನು ತೊಡೆದುಹಾಕುವುದಕ್ಕೆ ಪ್ರಯತ್ನಿಸಿದರು. ೧೯೧೭ ರಲ್ಲಿ ಪಂಡಿತ ಮದನಮೋಹನ ಮಾಳವೀಯ ಅವರು ಕೇಂದ್ರ ಮಂಡಲಿಯಲ್ಲಿ ಅದನ್ನು ಮಂಡಿಸುವುದಕ್ಕೆ ಪ್ರಯತ್ನಿಸಿದರೂ ವೈಸ್‌ರಾಯರು ಅವಕಾಶವನ್ನು ಕೊಡಲಿಲ್ಲ. ಅದಕ್ಕಾಗಿ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಮುಂಬಯಿ, ಕಲ್ಕತ್ತ, ಕರಾಚಿ ಮುಂತಾದ ಪ್ರಮುಖ ಭಾಗಗಳಲ್ಲೆಲ್ಲ ಸಂಚರಿಸಿ, ಸಭೆಗಳನ್ನು ಸೇರಿಸಿ ಪ್ರಚಾರ ಕಾರ್ಯವನ್ನು ಕೈಗೊಂಡರು. ವೈಸ್‌ರಾಯರನ್ನೂ ಕಂಡು ಮಾತನಾಡಿದರು. ಪರಿಣಾಮವಾಗಿ ದೇಶದ ಎಲ್ಲಾ ಭಾಗಗಳಲ್ಲಿ ನಡೆದ ಸಭೆಗಳಲ್ಲೂ ದಕ್ಷಿಣ ಆಫ್ರಿಕದಲ್ಲಿನ ಕರಾರುಕೂಲಿ ಪದ್ಧತಿಯನ್ನು ತೊಡೆದುಹಾಕಬೇಕೆಂದು ನಿರ್ಣಯಗಳಾದವು.

ಭಾರತದಲ್ಲಿ ಸಾರ್ವಜನಿಕ ಸೇವೆ

ರಾಜಕೀಯದಲ್ಲಿ ಗಾಂಧೀಜಿಗೆ ಅಷ್ಟಾಗಿ ಆಸಕ್ತಿಯಿಲ್ಲದಿದ್ದರೂ ದಕ್ಷಿಣ ಆಫ್ರಿಕದಲ್ಲಿ ಅವರು ಮಾಡಿದ ಜನಸೇವೆಯಿಂದ ೧೯೧೬ ರಲ್ಲಿ ಲಕ್ನೋನಗರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಅವರಿಗೆ ವಿಶೇಷ ಮಾನ್ಯತೆ ದೊರೆಯಿತು. ಆ ಅಧಿವೇಶನದಲ್ಲಿ ಬಿಹಾರಿನ ಚಂಪಾರಣ್ಯದ ರೈತರ ಗೋಳಿನ ವಿಚಾರ ಚರ್ಚೆಗೆ ಬಂದಿತು. ಅದರ ಪೂರ್ಣ ವಿಚಾರಣೆಗಾಗಿ ಗಾಂಧೀಜಿಯನ್ನೇ ನೇಮಿಸಲಾಯಿತು. ಕಷ್ಟಕ್ಕೆ ಸಿಕ್ಕಿದ ರಾಜಕುಮಾರ ಶುಕ್ಲ ಮುಂತಾದ ರೈತರ ಬೇಡಿಕೆಯಂತೆ ಗಾಂಧೀಜಿ ಚಂಪಾರಣ್ಯಕ್ಕೆ ಹೋದರು, ಜಮೀನ್ದಾರರಿಂದಲೂ ಪ್ರಾಂತಾಧಿಕಾರಿಗಳಿಂದಲೂ ವಿಚಾರಗಳನ್ನುತಿಳಿಯು

ವುದಕ್ಕೆ ಪ್ರಯತ್ನಿಸುತ್ತಿದ್ದಾಗಲೇ ೨೪ ಗಂಟೆಗಳಲ್ಲಿ ಗಾಂಧೀಜಿಯು ಆ ಪ್ರದೇಶವನ್ನು ಬಿಟ್ಟು ಹೋಗುವಂತೆ ಅಲ್ಲಿನ ಸರ್ಕಾರ ಆಜ್ಞೆಯನ್ನು ಮಾಡಿತು. ಆದರೆ ಗಾಂಧೀಜಿಯು ಅಲ್ಲಿನ ರೈತರ ಸ್ಥಿತಿಯನ್ನು ತಿಳಿಯುವ ವರೆಗೂ ಕದಲುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದರು. ಆಜ್ಞೆಯನ್ನು ಮುರಿದರೆಂದು ಗಾಂಧಿಜಿಯವರಮೇಲೆ ಪೋಲೀಸಿನವರು ಮೊಕದ್ದಮೆ ಯನ್ನು ಹೂಡಿದರು. ಆ ವಿಚಾರ ಸುತ್ತಮುತ್ತಲಿನ ಪ್ರದೇಶಗಳಲ್ಲೆಲ್ಲ ಹರಡಿ, ಜನರಲ್ಲಿ ಉತ್ಸಾಹವೂ ಆಸಕ್ತಿಯೂ ಹುಟ್ಟಿತು. ವಿಚಾರಣೆ ಪ್ರಾರಂಭವಾದ ಮೇಲೆ ಗಾಂಧೀಜಿ ಒಂದು ಹೇಳಿಕೆಯನ್ನು ಕೊಟ್ಟರು. ಅದರಲ್ಲಿ ಜನಸೇವೆ ಮತ್ತು ರಾಷ್ಟ್ರಸೇವೆಯ ಉದ್ದೇಶದಿಂದ ರೈತರ ಆ ಮಂತ್ರಣದ ಮೇಲೆ ತಾವು ಆ ಪ್ರದೇಶಕ್ಕೆ ಬಂದಿರುವುದಾಗಿಯೂ ನೀಲಿ ತೋಟದ ಜಮೀನ್ದಾರರು ಕೆಲಸಮಾಡುವ ರೈತರನ್ನು ಸರಿಯಾಗಿ ಕಾಣು ತ್ತಿಲ್ಲವೆಂದೂ, ಆ ಸಮಸ್ಯೆಯ ವಿಚಾರಗಳನ್ನು ಪೂರ್ಣವಾಗಿ ತಿಳಿಯುವುದ ಕ್ಕಾಗಿ ತಾವು ಬಂದಿರುವುದಾಗಿಯೂ, ಜನರನ್ನು ಉದ್ರೇಕಗೊಳಿಸುವುದಕ್ಕೆ ತಾವು ಬಂದಿಲ್ಲವೆಂದೂ, ಉನ್ನತ ಧ್ಯೇಯಸಾಧನೆಗಾಗಿ, ನಿಯಮಪಾಲನೆ ಗಾಗಿ ವಿಧಿಯಿಲ್ಲದೆ ಕಾನೂನನ್ನು ಉಲ್ಲಂಘಿಸುವ ಪ್ರಸಂಗ ಒದಗಿತೆಂದೂ ವಿಶದಪಡಿಸಿದ್ದರು. ಆ ಅಂಶವನ್ನರಿತ ನ್ಯಾಯಪರರಾದ ಅಧಿಕಾರಿಗಳು ಮೊಕದ್ದಮೆಯನ್ನು ವಜಾಮಾಡಿದ್ದಲ್ಲದೆ, ಅಧಿಕಾರಿಗಳಿಂದ ಗಾಂಧೀಜಿಗೆ ಬೇಕಾದ ನೆರವು ದೊರೆಯುವಂತೆಯೂ ವ್ಯವಸ್ಥೆಯನ್ನು ಮಾಡಿದರು. ಗಾಂಧೀಜಿಗೆ ಅಲ್ಲಿನ ಕೆಲವು ವಕೀಲರ ನೆರವೂ ದೊರೆಯಿತು. ರಾಜೇಂದ್ರ ಬಾಬು, ಆಚಾರ್ಯ ಕೃಪಲಾನಿ ಮುಂತಾದವರೂ ಸಹಾಯಕ್ಕೆ ಬಂದರು.

ವಿಚಾರ ಸಂಗ್ರಹಣೆ ಪ್ರಾರಂಭವಾಯಿತು. ರೈತರು ಹೇಳಿಕೆಯನ್ನು ಕೊಡುವುದಕ್ಕಾಗಿ ತಂಡೋಪತಂಡವಾಗಿ ಬಂದುಹೋಗುತ್ತಿದ್ದರು. ಅಲ್ಲಿನ ರೈತರ ಅಜ್ಞಾನ, ಬಡತನಗಳು ಕರುಣಾಜನಕವಾಗಿದ್ದವು. ಗಾಂಧೀಜಿ ಅವರ ದುಃಸ್ಥಿತಿಯನ್ನು ಕಂಡು ಅವರಿಗೆ ಸೂಕ್ತಶಿಕ್ಷಣ ಕೊಡಬೇಕೆಂದು ನಿರ್ಧರಿಸಿದರು. ಮೊದಲು ರೈತರ ಮಕ್ಕಳಿಗಾಗಿ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯನ್ನು ಮಾಡಿದರು. ಶಿಕ್ಷಕರಿಗೆ ಆಹಾರ ಮತ್ತು ವಸತಿ ಸೌಕರ್ಯ ಗಳನ್ನು ಗ್ರಾಮಸ್ಥರೇ ಒದಗಿಸುವಂತೆ ಗೊತ್ತುಮಾಡಿದರು. ಚಾರಿತ್ರ

ಸಂಪನ್ನರಾದ ಸ್ವಯಂಸೇವಕ ಶಿಕ್ಷಕರಿಗಾಗಿ ಬಿನ್ನಹವನ್ನು ಪ್ರಕಟಿಸಿದರು. ಮಹದೇವದೇಶಾಯಿ ಮುಂತಾದ ಸಚ್ಚಾರಿತ್ರ ಸಂಪನ್ನರೂ ಶಿಕ್ಷಣ ಪ್ರವೀಣರೂ ಸೇವಾಮನೋಭಾವನೆಯಿಂದ ಈ ಕಾರ್ಯಕ್ಕೆ ಮುಂದಾದರು. ಅವರು ಬಂದು ಸೇರಿದಮೇಲೆ ಶಿಕ್ಷಣಕಾರ್ಯ ಪ್ರಾರಂಭವಾಯಿತು. ಆದರೆ ಆ ಹಳ್ಳಿಗಳಿಗೆ ಅಷ್ಟೇ ಸಾಕಾಗಲಿಲ್ಲ. ಗ್ರಾಮವಾಸಿಗಳಿಗೆ ಶುಚಿತ್ವ ನಿರ್ಮಲೀಕರಣ ಮಂತಾದ ವಿಚಾರಗಳಲ್ಲಿ ಶಿಕ್ಷಣಕೊಡಬೇಕಾಯಿತು. ಅಲ್ಲಿನ ಜನರು ಹೊಲಸುವಾತಾವರಣಲ್ಲಿ ಜೀವಿಸುತ್ತ, ಅನೇಕ ರೋಗರುಜಿನಾದಿಗಳಿಗೆ ತುತ್ತಾಗಿದ್ದರು. ಗ್ರಾಮನೈರ್ಮಲ್ಯ ಮುಂತಾದುವುಗಳಿಗೇ ಅಲ್ಲದೆ ಜೀವನದ ಪ್ರತಿಯೊಂದು ವಿಚಾರದಲ್ಲೂ ಗಮನ ಕೊಡಬೇಕೆಂಬುದನ್ನು ಗಾಂಧೀಜಿ ಅರಿತರು. ಡಾಕ್ಟರ್ ದೇವ್ ಎಂಬುವರು ಅಗತ್ಯವಾಗಿದ್ದ ವೈದ್ಯಸಹಾಯ ನೀಡಲು ಮುಂದೆ ಬಂದರು. ಗ್ರಾಮಗಳಲ್ಲಿ ಶಾಲೆಯ ಆಡಳಿತನನ್ನು ಒಬ್ಬ ಗಂಡಸು ಮತ್ತು ಒಬ್ಬ ಹೆಂಗಸಿಗೆ ವಹಿಸುತ್ತಿದ್ದರು. ಅವರು ಔಷಧೋಪಚಾರ, ಗ್ರಾಮನೈರ್ಮಲ್ಯ ಮುಂತಾದ ಕೆಲಸಗಳಿಗೂ ಗಮನ ಕೊಡಬೇಕಾಗಿತ್ತು. ಗಾಂಧೀಜಿಯವರೇ ಮುಂದಾಳಾಗಿ ಡಾಕ್ಟರ್ ದೇವ್ ಮುಂತಾದವರೊಡನೆ ಸ್ವಯಂಸೇವಕರಿಂದ ಎಲ್ಲ ಕೆಲಸಗಳನ್ನೂ ಮಾಡಿಸಿ, ಜನರಿಗೆ ಮಾರ್ಗವನ್ನು ತೋರಿಸಿದರು. ಒಳ್ಳೆಯ ಮಾತಿನಿಂದ ರೈತರನ್ನು ಒಲಿಸಿಕೊಂಡು ಅವರ ಕೆಲಸಗಳನ್ನು ಅವರೇ ಶ್ರದ್ಧೆಯಿಂದ ಮಾಡುವಂತೆ ಕ್ರಮೇಣ ತಿಳಿವಳಿಕೆಯನ್ನು ಕೊಟ್ಟರು. ಆ ಎಲ್ಲ ಕಾರ್ಯಗಳಿಂದ ಗಾಂಧೀಜಿ ಜನರ ವಿಶ್ವಾಸ ಮನ್ನಣೆಯನ್ನು ಪಡೆದದ್ದೇ ಅಲ್ಲದೇ ಅವರ ಮೇಲೆ ಸತ್ಪ್ರಭಾವವನ್ನೂ ಬೀರಿದರು.

ಗಾಂಧೀಜಿಯ ಸೇವೆ ಹಾಗೂ ಶ್ರದ್ಧಾಸಕ್ತಿಗಳ ಫಲವಾಗಿ ರೈತರ ಕಷ್ಟ ಪರಿಹಾರಕ್ಕೋಸ್ಕರ ಪ್ರಾಂತೀಯ ಸರ್ಕಾರವು ಗಾಂಧೀಜಿಯನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿತು. ಗಾಂಧೀಜಿಯು ಹಳ್ಳಿಹಳ್ಳಿಗೂ ತಿರುಗಿ ಜಮೀನ್ದಾರರ ದೌರ್ಜನ್ಯ ಮತ್ತು ಅನ್ಯಾಯಗಳನ್ನು ಬಯಲಿಗೆಳೆದರು. ಸಮಿತಿಯ ಸಲಹೆಯಂತೆ ಜಮೀನ್ದಾರರು ರೈತರಿಂದ ಸುಲಿಯುತ್ತಿದ್ದ ತೆರಿಗೆಯಲ್ಲಿ ಒಂದು ಭಾಗವನ್ನು ರೈತರಿಗೇ ಹಿಂದಕ್ಕೆ ಕೊಡಬೇಕೆಂದೂ, ರೈತರು ವ್ಯವಸಾಯ ಮಾಡುತ್ತಿದ್ದ ಭೂಮಿಯಲ್ಲಿ ಕಡ್ಡಾಯವಾಗಿ ನೀಲಿಯನ್ನು

ಬೆಳೆಯಬೇಕಾಗಿಲ್ಲವೆಂದೂ ಸರ್ಕಾರ ಒಪ್ಪಿತು. ಅದರಿಂದ ಜಮೀನ್ದಾರರ ದಬ್ಬಾಳಿಕೆಯು ತಪ್ಪಿ, ರೈತರ ಕಷ್ಟನಷ್ಟಗಳು ಬಹುಮಟ್ಟಿಗೆ ಪರಿಹಾರ ವಾದುವು.

ಅದಾದಮೇಲೆ ಅಹಮದಾಬಾದಿನ ಗಿರಣಿಕೂಲಿಕಾರರ ವಿಷಮಪರಿಸ್ಥಿತಿಯನ್ನು ತಿಳಿದ ಗಾಂಧೀಜಿ ಅಲ್ಲಿಗೆ ಧಾವಿಸಿದರು. ವಲ್ಲಭಭಾಯಿ ಪಟೇಲರು ಅಲ್ಲೇ ಗಾಂಧೀಜಿಯ ನೆರವಿಗೆ ಬಂದರು. ಗಿರಣಿ ಮಾಲೀಕರ ಮತ್ತು ಕೂಲಿಕಾರರ ಜಗಳದ ಪರಿಹಾರಕ್ಕಾಗಿ ಒಂದು ಪಂಚಾಯಿತಿಯನ್ನು ನೇಮಿಸುವಂತೆ ಸಲಹೆಮಾಡಿದರು. ಆದರೆ ಗಿರಣಿ ಮಾಲೀಕರು ಅದಕ್ಕೆ ಒಪ್ಪಲಿಲ್ಲ. ಅಹಿಂಸಾಮಾರ್ಗದಲ್ಲಿ ಮುಷ್ಕರವನ್ನು ಪ್ರಾರಂಭಿಸುವಂತೆ ಗಾಂಧೀಜಿ ಕಾರ್ಮಿಕರಿಗೆ ಸಲಹೆಯನ್ನು ಕೊಟ್ಟರು. ಮುಷ್ಕರ ಪ್ರಾರಂಭವಾಯಿತು. ಆದರೆ ಸ್ವಲ್ಪದಿನಗಳ ಮೇಲೆ ಕಾರ್ಮಿಕರಲ್ಲಿ ಸಾಕಷ್ಟು ಉತ್ಸಾಹ, ದೃಢತೆಗಳಿಲ್ಲದುದನ್ನು ಕಂಡು ಗಾಂಧೀಜಿ ಅವರ ನೈತಿಕ ಬಲವನ್ನು ಹೆಚ್ಚಿಸಬೇಕೆಂದು ಉಪವಾಸವನ್ನು ಕೈಗೊಂಡರು. ಪರಿಣಾಮವಾಗಿ ಕೂಲಿಕಾರರು ಎಚ್ಚೆತ್ತು ಒಗ್ಗಟ್ಟಿನಿಂದ ಯಶಸ್ವಿಯಾಗಿ ಮುಷ್ಕರವನ್ನು ಮುಂದುವರಿಸಿದರು. ಕೊನೆಗೆ ಗಿರಣಿಮಾಲೀಕರೂ ಪಂಚಾಯಿತಿಗೆ ಒಪ್ಪಿದರಲ್ಲದೆ ಕಾರ್ಮಿಕರ ಬೇಡಿಕೆಗೂ ಮನ್ನಣೆ ದೊರೆಯಿತು.

ಖೇಡಾ ಜಿಲ್ಲೆಯಲ್ಲಿ ಮಳೆಬೆಳೆಗಳಿಲ್ಲದೆ ಕ್ಷಾಮ ತಲೆದೋರಿ, ರೈತರು ಕಷ್ಟನಷ್ಟಗಳಿಗೆ ಗುರಿಯಾಗಿದ್ದರು. ಬೆಳೆಯಾಗದಿದ್ದರೂ ಸರ್ಕಾರದವರು ನಿರ್ಬಂಧದಿಂದ ಕಂದಾಯವನ್ನು ವಸೂಲುಮಾಡುವುದಕ್ಕಾಗಿ ರೈತರಿಗೆ ಕಿರುಕುಳವನ್ನು ಕೊಡಲಾರಂಭಿಸಿದರು. ಆ ವಿಚಾರದ ತೀರ್ಮಾನಕ್ಕಾಗಿ ಒಂದು ಪಂಚಾಯಿತಿಯನ್ನು ನೇಮಿಸಬೇಕೆಂದು ಕೇಳಿಕೊಂಡರು. ಸರ್ಕಾರವು ಗಮನವನ್ನೇ ಕೊಡಲಿಲ್ಲ. ಅದರಿಂದ ನೊಂದ ರೈತರು ಗಾಂಧೀಜಿಯ ಸಲಹೆಯಂತೆ ಸತ್ಯಾಗ್ರಹವನ್ನು ಹೂಡಿದರು. ವಲ್ಲಭಭಾಯಿ ಪಟೇಲ, ಮಹದೇವ ದೇಶಾಯಿ, ಶಂಕರಲಾಲ್, ಅನಸೂಯಾಬಾಯಿ ಮುಂತಾದವರೆಲ್ಲ ಚಳವಳಿಗೆ ಸೇರಿದರು. ಕಂದಾಯವನ್ನು ಕೊಡುವುದಕ್ಕೆ ಅನುಕೂಲವಿದ್ದವರೂ ಕೂಡ ಬಡರೈತರ ಸಲುವಾಗಿಯೂ, ಧರ್ಮದೃಷ್ಟಿಯಿಂದಲೂ ಕಂದಾಯವನ್ನು ಕೊಡದೆ ಸತ್ಯಾಗ್ರಹವನ್ನು ಸೇರಿದರು. ಜನರ ಆರ್ತನಾದಕ್ಕೆ ಗಮನ

ಕೊಡದೆ ಸರ್ಕಾರವು ದಬ್ಬಾಳಿಕೆಯಿಂದ ರೈತಾಪಿ ಜನರ ಆಸ್ತಿಪಾಸ್ತಿಗಳನ್ನು ಹರಾಜುಮಾಡಿತು. ಅದರಿಂದ ರೈತಾಪಿಜನರ ಧೈರ್ಯ ಉತ್ಸಾಹಗಳು ಇಮ್ಮಡಿಯಾದುವು. ಆಗ ನಿರ್ವಾಹವಿಲ್ಲದೆ ಸರ್ಕಾರವೇ ರಾಜಿಗೆ ಬಂದಿತು. ಖೇಡಾ ಸತ್ಯಾಗ್ರಹದಿಂದ ಪೂರ್ಣಜಯ ದೊರೆಯದಿದ್ದರೂ ರೈತರ ಒಗ್ಗಟ್ಟಿನ ಮತ್ತು ದೃಢವಾದ ಪ್ರಯತ್ನಕ್ಕೆ ತಕ್ಕ ಫಲ ದೊರೆಯಿತು. ಜನರು ತಮ್ಮ ಕಷ್ಟನಿವಾರಣೆಗೆ ನ್ಯಾಯವಾದ, ಅಹಿಂಸಾಮಾರ್ಗದ ಸತ್ಯಾಗ್ರಹವೇ ಉತ್ತಮವಾದುದೆಂದು ಅರಿತರು. ಆ ಸತ್ಯಾಗ್ರಹದಿಂದ ಭಾರತೀಯರ ಆತ್ಮ ವಿಶ್ವಾಸ ಮತ್ತು ಶಕ್ತಿಗಳು ಜಗತ್ತಿಗೆ ತಿಳಿಯುವಂತಾದುವು. ಸತ್ಯಾಗ್ರಹದ ಮೂಲಪುರುಷರಾದ ಗಾಂಧೀಜಿಯ ಕೀರ್ತಿ ಪ್ರತಿಷ್ಠೆಗಳು ದೇಶವಿದೇಶಗಳಲ್ಲೂ ಮಾರ್ಮೊಳಗಿದವು.

ರೌಲತ್ ಕಾಯಿದೆಯ ಬಹಿಷ್ಕಾರ ಸತ್ಯಾಗ್ರಹ ಶಿಕ್ಷಣ

ಪ್ರಪಂಚದ ಮೊದಲನೆಯ ಮಹಾಯುದ್ಧ ಇನ್ನೂ ಮುಗಿದಿರಲಿಲ್ಲ. ಆಪತ್ತೊದಗಿದಾಗ ಇಂಗ್ಲಿಷರಿಗೆ ಜನಬಲ ಮತ್ತು ಧನಬಲವನ್ನು ಕೂಡಿಸಿ ಕೊಡಬೇಕೆಂದು ವೈಸ್‌ರಾಯರು ಗಾಂಧೀಜಿ ಮುಂತಾದ ಮುಖಂಡರ ಸಭೆ ಸೇರಿಸಿ ಪ್ರಾರ್ಥಿಸಿಕೊಂಡರು. ಗಾಂಧೀಜಿ ಹಿಂದೆ ಬೋಆರ್ ಯುದ್ಧದಲ್ಲಿ ಸಹಾಯ ಮಾಡಿದ್ದಂತೆ ಬ್ರಿಟಿಷರಿಗೆ ಈಗಲೂ ನೆರವಾದರು. ಗುಜರಾತ್ ಮುಂತಾದ ಕಡೆ ಸಂಚರಿಸಿ ಸೈನ್ಯಬಲವನ್ನು ಸೇರಿಸುವುದಕ್ಕೆ ಶ್ರಮಿಸಿದರು. ಅದನ್ನರಿತ ಬ್ರಿಟಿಷ್ ಸರ್ಕಾರವು ಗಾಂಧೀಜಿಗೆ 'ಕೈಸರ್-ಇ-ಹಿಂದ್' ಪದಕ ಪ್ರಶಸ್ತಿಯನ್ನು ಕೊಟ್ಟಿತು. ಆದರೆ ಮುಖ್ಯವಾದ ಭಾರತದ ಸ್ವಾತಂತ್ರ್ಯ ವಿಷಯವನ್ನೇ ಅಲಕ್ಷಿಸಿತು. ಯುದ್ಧಕ್ಕಾಗಿ ಸಹಾಯ ಕೇಳಿದಾಗ ಮಾಡಿದ್ದ ವಾಗ್ದಾನದಂತೆ ಬ್ರಿಟಿಷ್ ಸರ್ಕಾರವು ನಡೆಯಲಿಲ್ಲ. ಅದರಿಂದ ತಿಲಕ್, ಗಾಂಧೀಜಿ, ಲಾಲಾ ಲಜಪತರಾಯ ಮುಂತಾದ ಹಿರಿಯ ನಾಯಕರಿಗೆ ಬಹಳ ನಿರಾಶೆಯಾಯಿತು. ಅದರಮೇಲೆ ಕ್ರಾಂತಿಕಾರರ ಚಳವಳಿಯನ್ನು ತಡೆಗಟ್ಟುವುದಕ್ಕಾಗಿ ಅನೇಕ ಹೊಸಕಾನೂನುಗಳು ಜಾರಿಗೆ ಬಂದವು. ಹೆಚ್ಚು ಸ್ವಾತಂತ್ರ್ಯವನ್ನು ಕೊಡುವುದಕ್ಕೆ ಬದಲಾಗಿ ಸರ್ಕಾರವು ಇದ್ದ ಸ್ವಾತಂತ್ರ್ಯವನ್ನೇ ಕಸಿದುಕೊಳ್ಳುವುದಕ್ಕೆ ಹವಣಿಸಿತು. ರೌಲತ್ ವರದಿಯು ಸರ್ಕಾರದ ಮನೋಗತವನ್ನು ಪ್ರತಿಬಿಂಬಿಸುವಂತಿತ್ತು. ಸರ್ಕಾರವು ವರದಿ

ಯಂತೆ ಮಸೂದೆಯನ್ನು ಜಾರಿಗೆ ತರುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಿತು. ಅದನ್ನರಿತ ಹಿರಿಯ ನಾಯಕರು ಗಾಂಧೀಜಿಯ ನೇತೃತ್ವದಲ್ಲಿ ಆ ಮಸೂದೆಯ ಬಹಿಷ್ಕಾರಕ್ಕಾಗಿ ಸತ್ಯಾಗ್ರಹವನ್ನು ಹೂಡಬೇಕೆಂದು ತೀರ್ಮಾನಿಸಿದರು. ಸತ್ಯಾಗ್ರಹದ ಕೇಂದ್ರ ಸಮಿತಿಯು ಬೊಂಬಾಯಿನಲ್ಲಿ ಕೆಲಸಮಾಡಲಾರಂಭಿಸಿತು. ಚಳವಳಿಯು ಕಾಡ್ಗಿಚ್ಚಿನಂತೆ ದೇಶದಲ್ಲೆಲ್ಲ ಹರಡಿತು. ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಮಸೂದೆಯನ್ನು ರೈಟ್ ಆನರ್‌ಬಲ್ ಶ್ರೀನಿವಾಸಶಾಸ್ತ್ರಿ ಮುಂತಾದವರು ತೀವ್ರವಾಗಿ ವಿರೋಧಿಸಿದರೂ ಸರ್ಕಾರವು ಅದನ್ನು ಜಾರಿಗೆ ತಂದಿತು. ಅದರಿಂದ ಜನರು ಬೇಸತ್ತು ದೇಶದಾದ್ಯಂತವೂ ಖಂಡನೆ, ಪ್ರತಿಭಟನೆಗಳನ್ನು ವ್ಯಕ್ತಪಡಿಸಿದರು. ೯೯ ನೇ ಏಪ್ರಿಲ್ ೯ನೆಯ ತಾರೀಖಿನ ದಿನ ದೇಶದ ಎಲ್ಲ ಭಾಗಗಳಲ್ಲೂ ಹರತಾಳವನ್ನು ಆಚರಿಸಬೇಕೆಂದು ನಿರ್ಧರಿಸಲಾಯಿತು. ಗಾಂಧೀಜಿ ಮುಂತಾದ ಹಿರಿಯ ನಾಯಕರ ಕರೆಗೆ ಮನ್ನಣೆಕೊಟ್ಟು ಎಲ್ಲೆಡೆಗಳಲ್ಲೂ ಶಾಂತಿಯಿಂದ ಜನರು ಹರತಾಳವನ್ನಾಚರಿಸಿ ತಂಡೋಪತಂಡವಾಗಿ ಸತ್ಯಾಗ್ರಹವನ್ನು ಸೇರಿದರು. ಆದಿನ ವ್ಯಾಪಾರಗಳಾವುವೂ ನಡೆಯಲಿಲ್ಲ. ಸತ್ಯಾಗ್ರಹವು ಯಶಸ್ವಿಯಾಗಿ ನಡೆದದ್ದನ್ನು ನೋಡಿ ಸರಕಾರದ ಸಹನೆ ಮೀರಿತು. ಹರತಾಳದ ಮೆರವಣಿಗೆಯಮೇಲೆ ದೆಹಲಿ, ಅಮೃತಸರಗಳಲ್ಲಿ ನಿಷ್ಕಾರಣವಾಗಿ ಗುಂಡನ್ನು ಹಾರಿಸಿದರು. ಅದರಿಂದ ಕೆಲವು ನಿರಪರಾಧಿಗಳು ಸಾವು ನೋವುಗಳಿಗೆ ತುತ್ತಾದರು.

ಪಂಜಾಬಿನಲ್ಲಂತೂ ಸರ್ಕಾರವು ಮಿಲಿಟರಿ ಶಾಸನವನ್ನೇ ಜಾರಿಗೆ ತಂದಿತು. ಅಲ್ಲಿನ ಜಲಿಯನ್‌ವಾಲಾಬಾಗಿನಲ್ಲಿ ಘೋರವಾದ ಪೈಶಾಚಿಕ ಹತ್ಯಾಖಾಂಡವನ್ನೇ ನಡೆಸಿತು. ಅಮಾನುಷ ಅತ್ಯಾಚಾರಗಳನ್ನೆಸಗಿದ ಸರಕಾರವು ಅಲ್ಲಿನ ಸುದ್ದಿ ಸಮಾಚಾರಗಳು ಹೊರಗೆ ಹೋಗದಂತೆಯೂ ಹೊರಗಿನಿಂದ ಯಾರೂ ಬರದಂತೆಯೂ ತಡೆ ಆಜ್ಞೆಯನ್ನು ಜಾರಿ ಮಾಡಿತು. ಅಲ್ಲಿ ನಡೆದ ಭಯಂಕರ ಅಮಾನುಷ ಘಟನೆಗಳು ಭಾರತದ ಮತ್ತು ಪ್ರಪಂಚದ ದೃಷ್ಟಿಯನ್ನೂ ಸೆಳೆದವು. ಪಂಜಾಬಿನ ಈ ದೃಶ್ಯವನ್ನೂ ಸ್ಥಿತಿಗತಿಗಳನ್ನೂ ತಾವೇ ಕಣ್ಣಾರೆ ನೋಡಬೇಕೆಂದೂ ಸೂಕ್ತಪರಿಹಾರವನ್ನು ಯೋಚಿಸಬೇಕೆಂದೂ ಗಾಂಧೀಜಿಗೆ ಮನಸ್ಸಿದ್ದಿತು. ಆದರೆ ಶಾಸನೋಲ್ಲಂಘನೆ

ಯಿಂದ ತಮ್ಮ ದಸ್ತಗಿರಿಯಾದರೆ ಅಲ್ಲಿನ ಜನರು ಉದ್ರೇಕಗೊಳ್ಳುವರು. ಆಗ ಸರ್ಕಾರವು ಜನರ ಮೇಲೆ ಅನ್ಯಾಯ, ಅತ್ಯಾಚಾರಗಳನ್ನು ನಡೆಸುತ್ತದೆ. ಆದುದರಿಂದ ತಾಳ್ಮೆಯನ್ನು ವಹಿಸುವುದೇ ಲೇಸೆಂದು ಭಾವಿಸಿದರು.

ಚಳವಳಿಯ ಕಾಲದಲ್ಲಿ ಜನರು ವರ್ತಿಸಿದ ರೀತಿಯಿಂದ ಅವರು ಸತ್ಯಾಗ್ರಹದ ರೂಪರೇಖೆಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿಲ್ಲವೆಂದು ಗಾಂಧೀಜಿಗೆ ಮನದಟ್ಟಾಯಿತು. ಸತ್ಯಾಗ್ರಹವು ಸತ್ಯವಂತರ ಆಯುಧ ವೆಂದೂ, ಜನರು ಅಹಿಂಸಾಮಾರ್ಗದಲ್ಲಿ ನಡೆಯಬೇಕೆಂದೂ, ಮನೋ ವಾಕ್ಕಾಯಗಳಿಂದ ಸತ್ಯವನ್ನನುಸರಿಸಬೇಕೆಂದೂ ಎಚ್ಚರಿಕೆಯನ್ನು ಕೊಟ್ಟಿ ದ್ದರೂ ಉದ್ರೇಕಗೊಂಡ ಜನ ಅಲ್ಲಲ್ಲಿ ದಾಂಧಲೆ ನಡೆಸಿದ್ದರು. ಸಮಾಚಾರ ವನ್ನು ಒಯ್ಯುವ ತಂತಿಗಳನ್ನು ಕತ್ತರಿಸುವುದು, ಪೋಲಿಸಿನವರ ಮೇಲೆ ಕಲ್ಲೆಸೆಯುವುದು, ರೈಲುಕಂಬಿಗಳನ್ನು ಸಡಿಲಿಸುವುದು ಮುಂತಾದ ಹಿಂಸಾ ತ್ಮಕ ಕಾರ್ಯಗಳಲ್ಲಿ ನಿರತರಾದುದು ಸತ್ಯಾಗ್ರಹದ ಕಟ್ಟುಪಾಡಿಗೆ ಮೀರಿ ನಡೆದಂತಾಯಿತು. ಸತ್ಯಾಗ್ರಹದ ತತ್ತ್ವವನ್ನು ಜನರಲ್ಲಿ ಹರಡುವುದಕ್ಕಾಗಿ ಪ್ರಚಾರ ಕಾರ್ಯವನ್ನು ಗಾಂಧೀಜಿ ಕೈಗೊಂಡರು. ಅದಕ್ಕಾಗಿ ' ನವ ಜೀವನ ' ಮತ್ತು ' ಯಂಗ್ ಇಂಡಿಯಾ ' ಎಂಬ ಪತ್ರಿಕೆಗಳನ್ನೂ ಪ್ರಕಟಿ ಸಿದರು.

ಪಂಜಾಬಿನ ಸ್ಥಿತಿ ಒಂದು ಹತೋಟಿಗೆ ಬಂದಮೇಲೆ ದೀನಬಂಧು ಆಂಡ್ರೂಸರು ಗಾಂಧೀಜಿಗೆ ಕರೆಯನ್ನು ಕಳುಹಿಸಿದರು. ಗಾಂಧೀಜಿಯು ವೈಸ್‌ರಾಯರ ಅಪ್ಪಣೆಪಡೆದು ಪಂಜಾಬನ್ನು ಪ್ರವೇಶಿಸಿದಾಗ ಅವರಿಗೆ ಅದ್ಭುತ ಸ್ವಾಗತ ದೊರೆಯಿತು. ಪಂಡಿತ ಮದನಮೋಹನ ಮಾಳವೀಯ, ಸ್ವಾಮಿ ಶ್ರದ್ಧಾನಂದ, ಪಂಡಿತ ಮೋತಿಲಾಲ್‌ನೆಹರು, ಜವಹರಲಾಲ್‌ನೆಹರು ಮುಂತಾದವರ ನಿಕಟ ಪರಿಚಯವಾಗುವುದಕ್ಕೆ ಅಲ್ಲಿ ಅವಕಾಶ ದೊರೆಯಿತು. ಜಲಿಯನ್‌ವಾಲಾಬಾಗಿನಲ್ಲಿ ನಡೆದ ಭಯಂಕರಹತ್ಯೆಯ ವಿಚಾರಣೆಗಾಗಿ ಸರ್ಕಾರವು ನೇಮಿಸಿದ ಹಂಟರ್ ಸಮಿತಿಯ ಮುಂದೆ ಕಾಂಗ್ರೆಸ್ ಸಂಸ್ಥೆಯು ಸಾಕ್ಷಿಕೊಡುವುದಕ್ಕೆ ನಿರಾಕರಿಸಿತು. ನಿಷ್ಪಕ್ಷಪಾತವಾದ ವಿಚಾರಣೆಯನ್ನು ನಡೆಸುವುದಕ್ಕಾಗಿ ಕಾಂಗ್ರೆಸ್ಸು ಒಂದು ವಿಚಾರಣಾಸಮಿತಿಯನ್ನು ನೇಮಿ ಸಿತು. ಗಾಂಧೀಜಿಯ ನೇತೃತ್ವದಲ್ಲಿ ವಿಚಾರಣಾಸಮಿತಿಯು ಸುಗಮವಾಗಿ ತನ್ನ ಕಾರ್ಯವನ್ನು ಕೈಗೊಂಡಿತು. ಸತ್ಯಾಂಶಗಳಿಂದ ಕೂಡಿದ್ದ ವರದಿ

ಯನ್ನು ಕಾಂಗ್ರೆಸ್ಸು ಪ್ರಚುರಪಡಿಸಿತು. ಪಂಜಾಬಿನಲ್ಲಿ ಆಳರಸರಾಗಿದ್ದ ಬ್ರಿಟಿಷರು ನಡೆಸಿದ ಅತ್ಯಾಚಾರ, ದೌರ್ಜನ್ಯಗಳನ್ನು ಬಯಲಿಗೆಳೆಯಿತು. ನೊಂದವರಿಗೆ ಪರಿಹಾರವನ್ನು ಕೊಡುವ ವ್ಯವಸ್ಥೆಯನ್ನೂ ಮಾಡಿತು. ತನ್ನ ಪ್ರಾಬಲ್ಯವನ್ನು ಮುಂದುವರಿಸುವುದಕ್ಕಾಗಿ ಬ್ರಿಟಿಷ್ ಸರ್ಕಾರವು ದಬ್ಬಾಳಿಕೆಯಿಂದ ಎಂತೆಂತಹ ಅಮಾನುಷ ಕೃತ್ಯಗಳನ್ನೂ, ಅತ್ಯಾಚಾರ ಅನ್ಯಾಯಗಳನ್ನೂ ನಡೆಸುವುದಕ್ಕೆ ಹಿಂಜರಿಯುವುದಿಲ್ಲ ಎಂಬುದನ್ನು ಇದರಿಂದ ಜಗತ್ತಿಗೇ ಎತ್ತಿಹಿಡಿದು ತೋರಿಸಿದಂತಾಯಿತು.

ಕಾಂಗ್ರೆಸ್ಸಿನ ರಾಷ್ಟ್ರೀಯ ಅಧಿವೇಶನವು ಅದೇವರ್ಷ ಪಂಡಿತ ಮೋತಿಲಾಲರ ಅಧ್ಯಕ್ಷತೆಯಲ್ಲಿ ಅಮೃತಸರದಲ್ಲಿ ಸೇರಿತು. ಗಾಂಧೀಜಿ ಮೊಟ್ಟ ಮೊದಲಾಗಿ ಈ ಅಧಿವೇಶನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದರು. ಜಲಿಯನ್‌ವಾಲಾಬಾಗಿನಲ್ಲಿ ಬಲಿಯಾದವರ ನೆನಪಿಗಾಗಿ ಸ್ಮಾರಕವೊಂದನ್ನು ನಿರ್ಮಿಸಬೇಕೆಂದು ಆ ಅಧಿವೇಶನದಲ್ಲಿ ನಿರ್ಧರಿಸಿದರು. ಗಾಂಧೀಜಿಯು ಅದಕ್ಕಾಗಿ ಶ್ರಮಪಟ್ಟು ಹಣವನ್ನು ಸಂಗ್ರಹ ಮಾಡಿದರು. ಕಾಂಗ್ರೆಸ್ಸಿನ ನೀತಿ ನಿಯಮಗಳನ್ನು ತಿದ್ದಿ, ತಮ್ಮ ಸೇವೆ ಮತ್ತು ತ್ಯಾಗಗಳಿಂದ ಜನಪ್ರಿಯರಾದರು. ನೂತನವಾದ ನ್ಯಾಯಮಾರ್ಗದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಬಲಗೊಳಿಸಿದರು. ಅದಕ್ಕೆ ಹೊಸರೂಪ ಮತ್ತು ಚೈತನ್ಯವನ್ನು ಕೊಟ್ಟು ಒಂದು ರಾಷ್ಟ್ರೀಯ ಸ್ಥಾನವನ್ನು ಪಡೆಯುವಂತೆ ಮಾಡಿದರು. ಅದರಿಂದ ಕಾಂಗ್ರೆಸ್‌ಸಂಸ್ಥೆಯು ರಾಷ್ಟ್ರೀಯ ಸಂಸ್ಥೆಯಾಗಿ ಜನಾನುರಾಗವನ್ನು ಪಡೆಯುವುದಕ್ಕೆ ಅವಕಾಶವಾಯಿತು. ಅದೇ ಸಮಯದಲ್ಲಿ ಸಂಭವಿಸಿದ ಲೋಕಮಾನ್ಯತಿಲಕರ ನಿಧನದಿಂದ ಇಡೀ ದೇಶವೇ ಶೋಕಸಾಗರದಲ್ಲಿ ಮುಳುಗಿತು. ಅವರ ಸಿಂಹವಾಣಿ, ಬುದ್ಧಿವಾದ ಜನತೆಗೆ ಇಲ್ಲದಂತಾಯಿತು. ಭಾರತದ ನಿರ್ಮಾಪಕರಲ್ಲಿ ಒಬ್ಬರಾದ ತಿಲಕರ ನಿಧನದಿಂದ ದೇಶಕ್ಕೆ ತುಂಬಲಾರದ ನಷ್ಟವಾಯಿತು.

ಹಿಂದೂ ಮುಸಲ್ಮಾನರೆಲ್ಲರೂ ಒಂದಾಗಿ ಕಲ್ಕತ್ತೆಯಲ್ಲಿ ಪಂಜಾಬಿನ ಕೇಸರಿ ಲಾಲಾ ಲಜಪತರಾಯ್‌ರವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಸೇರಿಸಿ, ಪಂಜಾಬಿನಲ್ಲಿ ನಡೆದ ಅತ್ಯಾಚಾರವನ್ನು ಖಂಡಿಸಿ, ಖಿಲಾಫತ್ ವಚನಭಂಗವನ್ನು ವಿರೋಧಿಸಿದರು. ಸ್ವರಾಜ್ಯ ಸ್ಥಾಪನೆಗಾಗಿ

ಅಹಿಂಸಾತ್ಮಕ, ಅಸಹಕಾರ ಚಳವಳಿಯನ್ನು ಪ್ರಾರಂಭಿಸುವುದಕ್ಕೆ ನಿರ್ಧರಿಸಿದರು. ಗಾಂಧೀಜಿ ಬ್ರಿಟಿಷ್ ಸರ್ಕಾರದಿಂದ ಪಡೆದಿದ್ದ 'ಕೈಸರ್-ಇ-ಹಿಂದ್' ಪದಕವನ್ನು ಹಿಂದಕ್ಕೆ ಕೊಟ್ಟರು. ದೇಶದ ನಾನಾಭಾಗಗಳಲ್ಲೂ ಅಸಹಕಾರ ಚಳವಳಿಯೂ ಪರದೇಶೀ ವಸ್ತುಗಳ ಬಹಿಷ್ಕಾರವೂ ಹುರುಪಿನಿಂದ ಸಾಗಿದುವು. ಆದರೂ ಸರ್ಕಾರವು ಆಡಳಿತ ವ್ಯವಸ್ಥೆಯ ಸುಧಾರಣೆಗೆ ಕೈಹಾಕದೆ ತನ್ನ ದಬ್ಬಾಳಿಕೆಯನ್ನೇ ಮುಂದುವರಿಸಿತು. ಅಲ್ಲಿಂದಾಚೆಗೆ ಗಾಧೀಜಿಯು ಕಾಂಗ್ರೆಸ್ಸಿನ ಸೂತ್ರಧಾರರಾದರು. ಕಾಂಗ್ರೆಸ್ಸಿನ ಸ್ವರೂಪವು ಬದಲಾಗಿ ದೇಶದಲ್ಲೆಲ್ಲ ಒಂದು ಕ್ರಾಂತಿಯೇ ಉಂಟಾಯಿತು. ಕಾಂಗ್ರೆಸ್ಸಿನವರು ಸ್ವದೇಶೀ ಚಳವಳಿಯನ್ನು ಕಾರ್ಯರೂಕ್ಕೆ ತಂದದ್ದರಿಂದ ಪಾಶ್ಚಾತ್ಯ ಉಡುಪುಗಳ ಬಹಿಷ್ಕಾರವಾಯಿತು. ಕಾಂಗ್ರೆಸ್ ಸದಸ್ಯರು ಸ್ವದೇಶದಲ್ಲೇ ತಯಾರಿಸಿದ ಖಾದಿಯನ್ನು ಧರಿಸಲಾರಂಭಿಸಿದರು.

ನಾಗಪುರದಲ್ಲಿ ನಡೆದ ಕಾಂಗ್ರೆಸ್ಸಿನ ಮಹಾಸಭೆಯಲ್ಲಿ ಸ್ವರಾಜ್ಯ ಸಾಧನೆಗಾಗಿ ಅಹಿಂಸಾತ್ಮಕ ಅಸಹಕಾರಚಳುವಳಿಯನ್ನು ಮುಂದುವರಿಸುವುದಲ್ಲದೆ, ಹಿಂದೂ ಮುಸ್ಲಿಂ ಐಕ್ಯಸಾಧನೆ, ಅಸ್ಪೃಶ್ಯತಾನಿವಾರಣೆ, ಖಾದೀ ಪ್ರಚಾರ ಮುಂತಾದ ರಚನಾತ್ಮಕ ಕಾರ್ಯಗಳಿಗೆ ವಿಶೇಷ ಗಮನಕೊಡಬೇಕೆಂದು ನಿರ್ಧಾರವಾಯಿತು. ಅದರಂತೆ ಅಸಹಕಾರ ಚಳವಳಿಯಿಂದ ಅಸಹಾಯಕರಾಗಿದ್ದ ಭಾರತೀಯರಿಗೆ ಒಂದು ಹೊಸ ಶಕ್ತಿ ಬಂದಂತಾಯಿತು. ಚಳವಳಿಯು ದೇಶದ ಎಲ್ಲ ಭಾಗಗಳಲ್ಲೂ ಹರಡಿತು. ಕಾಂಗ್ರೆಸ್ ನಾಯಕರೂ ಮುಸ್ಲಿಂಲೀಗಿನ ಮುಖಂಡರೂ ಈ ಚಳವಳಿಗೆ ಬೆಂಬಲವನ್ನು ಕೊಟ್ಟರು. ಕಾಂಗ್ರೆಸ್ಸಿನ ಧ್ಯೇಯ ಸಾಧನೆಗಳು ಮಾರ್ಪಾಡಾಗಿ, ಜನರಲ್ಲಿ ರಾಷ್ಟ್ರೀಯ ಮನೋಭಾವನೆಯು ಬೆಳೆಯುವುದಕ್ಕೆ ಪ್ರೋತ್ಸಾಹ ಕೊಟ್ಟಂತಾಯಿತು. ಪರಿಣಾಮವಾಗಿ ಚಳುವಳಿಯು ಜನರ ಪ್ರೋತ್ಸಾಹ. ಬೆಂಬಲಗಳಿಂದ ರಾಷ್ಟ್ರೀಯತೆಯನ್ನು ಪಡೆಯಿತು. ಅಹಿಂಸಾಸಾಧಕವಾದ ಸತ್ಯಾಗ್ರಹ ಚಳವಳಿಯು ಒಂದುಮಹಾಸ್ತ್ರವಾಗಿ ಜನಸಾಮಾನ್ಯರಲ್ಲೂ ಪ್ರಿಯವಾಯಿತು. ಪರದೇಶೀಯರ ಆಡಳಿತ, ಅನ್ಯಾಯಗಳನ್ನು ಎದುರಿಸುವುದಕ್ಕೆ ಇದು ಭಾರತದ ಸಂಪ್ರದಾಯದ ಮೇಲೆ ನಿರೂಪಿಸಿದ ಒಂದು ಪ್ರಬಲವಾದ ಅತ್ರ್ಯಮ ಅಸ್ತ್ರವಾಯಿತು. ಗಾಂಧೀಜಿಯ ನಾಯಕತ್ವದಲ್ಲಿ ಚಳವಳಿಯು ಪ್ರಚಂಡ

ರೂಪವನ್ನು ತಾಳಿ, ದೇಶದಲ್ಲೆಲ್ಲ ಹರಡಿತು. ಕಾಂಗ್ರೆಸ್ಸಿನ ನೈತಿಕ ಬಲವು ವೃದ್ಧಿಯಾಗಿ, ಅದರ ಸ್ಥಾನಮಾನಗಳು ದ್ವಿಗುಣಗೊಂಡವು.

ಕಾಂಗ್ರೆಸ್ಸಿನ ಪ್ರಭಾವವು ಕ್ರಮೇಣ ಬೆಳೆಯುತ್ತಿದ್ದುದನ್ನು ಕಂಡು ಸರ್ಕಾರವು ತನ್ನ ದಬ್ಬಾಳಿಕೆಯನ್ನು ಪುನಃ ಪ್ರಾರಂಭಿಸಿತು. ಚಳವಳಿಗೆ ಸೇರಿದ ಅನೇಕರು ಸೆರೆಮನೆಯನ್ನು ಸೇರಿ, ನಾನಾ ರೀತಿಯ ಶಿಕ್ಷೆಗೊಳಗಾಗ ಬೇಕಾಯಿತು. ಹಿಂದೂಸ್ಥಾನದಲ್ಲಿ ರಾಜಕೀಯ ಪರಿಸ್ಥಿತಿಯು ಉಗ್ರರೂಪ ವನ್ನು ತಾಳಿದ್ದಾಗ ಬ್ರಿಟಿಷ್ ಯುವರಾಜರಾಗಿದ್ದ ವೇಲ್ಸಿನ ರಾಜಕುಮಾ ರರು ಭಾರತಕ್ಕೆ ಭೇಟಿಕೊಟ್ಟರು. ಆದರೆ ಕಾಂಗ್ರೆಸ್ಸು ಯುವರಾಜರ ಮರ್ಯಾದೆಗಾಗಿ ವ್ಯವಸ್ಥೆ ಮಾಡಿದ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದೆ ಅಸಹಕಾರವನ್ನೂ ಬಹಿಷ್ಕಾರವನ್ನೂ ವ್ಯಕ್ತಪಡಿಸಬೇಕೆಂದು ನಿಶ್ಚಯಿಸಿತು. ಅದರಂತೆ ಜನರು ಯುವರಾಜರು ಹೋದೆಡೆಯಲ್ಲೆಲ್ಲಾ ಹರತಾಳಗಳನ್ನಾ ಚರಿಸಿದರು. ಇಂತಹ ಪರಿಣಾಮಕಾರಿಯಾದ ಅಸಹಕಾರಚಳವಳಿಯನ್ನು ನೋಡಿ ಸರ್ಕಾರ ಕೋಪಗೊಂಡು ಅನೇಕರನ್ನು ದಸ್ತಗಿರಿ ಮಾಡಿತು. ಆದರೆ ಇವೆಲ್ಲಕ್ಕೂ ಮುಖಂಡರಾಗಿದ್ದ ಗಾಂಧೀಜಿಯ ಗೊಡವೆಗೆ ಮಾತ್ರ ಹೋಗಲಿಲ್ಲ. ಅಹಿಂಸಾ ಮಾರ್ಗದಲ್ಲಿ ಸತ್ಯಾಗ್ರಹವು ಮುಂದುವರಿಯುತ್ತಿದ್ದಾಗ ೧೯೨೨ರಲ್ಲಿ 'ಚೌರಿ ಚೌರಾ' ಎಂಬಲ್ಲಿ ಉದ್ರೇಕಗೊಂಡಿದ್ದ ಜನರು ಪೋಲೀಸಿನವರ ಮೇಲೆ ತಿರುಗಿಬಿದ್ದು, ಹಿಂಸಾಪ್ರವೃತ್ತಿಗೆ ಮನವನ್ನು ಕೊಟ್ಟರು. ಇದನ್ನು ತಿಳಿದ ಕೂಡಲೇ ಗಾಂಧೀಜಿ ಸತ್ಯಾಗ್ರಹವನ್ನು ಹಠಾತ್ತನೆ ನಿಲ್ಲಿಸಿದರು. ಅನೇಕ ನಾಯಕರು ಆಗಲೇ ಸೆರೆಮನೆ ಸೇರಿದ್ದರು. ಗಾಂಧೀಜಿ ಪತ್ರಿಕೆಗಳ ಮೂಲಕ ಅಹಿಂಸಾ ಮಾರ್ಗಕ್ಕೆ ಬದಲಾಗಿ ಹಿಂಸಾಕೃತ್ಯಗಳನ್ನು ಕೈಗೊಂಡ ಜನರನ್ನು ಖಂಡಿಸಿ, ಎಚ್ಚರಿಕೆಯನ್ನು ಕೊಟ್ಟರು; ಸನ್ಮಾರ್ಗದಲ್ಲಿ ನಡೆದು ಪ್ರಗತಿಯನ್ನು ಸಾಧಿಸುವಂತೆ ಬುದ್ಧಿವಾದವನ್ನಿತ್ತರು. ಹಿಂದೂಮುಸ್ಲಿಮರು ಅಹಿಂಸಾ ಮಾರ್ಗದಲ್ಲಿ ಚಳವಳಿಯನ್ನು ಮುಂದುವರಿಸುವಂತೆ ನಮ್ರರಾಗಿ ಅವರನ್ನು ಪ್ರಾರ್ಥನೆ ಮಾಡಿಕೊಂಡರು. ಆದರೆ ಇವುಗಳಿಂದ ಯಾವ ಪರಿಣಾಮವೂ ಆಗಲಿಲ್ಲ. ಆದುದರಿಂದ ಗಾಂಧೀಜಿಯು ಉಪವಾಸವನ್ನು ಕೈಗೊಂಡರು.

ಗಾಂಧೀಜಿ ಸತ್ಯ ಅಹಿಂಸೆಗಳ ಅಪರಾವತಾರ. ನಾಶಕಾರಕವಾದ ಹಿಂಸಾಮಾರ್ಗಗಳಿಂದ ಸ್ವರಾಜ್ಯ ಲಭಿಸಿದರೂ ಅದು ಸಾಧುಮಾರ್ಗವಲ್ಲ

ವೆಂದೂ ಭಾರತೀಯ ಸಂಪ್ರದಾಯಕ್ಕೆ ಅದು ವಿರುದ್ಧವೆಂದೂ ಭಾವಿಸಿದ್ದರು. ತನ್ನನ್ನು ತಾನು ಹಿಡಿತದಲ್ಲಿಟ್ಟುಕೊಳ್ಳುವುದು ಸ್ವರಾಜ್ಯ ಸಾಧನೆಯ ಮೊದಲ ಹೆಜ್ಜೆ. ಅದಕ್ಕಾಗಿ ನೀತಿಮಾರ್ಗದಲ್ಲಿ ನಡೆದು ಪರರನ್ನು ಹಿಂಸಿಸದೆ, ವಂಚಿಸದೆ, ತಂದೆತಾಯಿಗಳು ಮತ್ತು ನೆರಹೊರೆಯವರ ವಿಚಾರದಲ್ಲಿ ಸತ್ಯದಿಂದಲೂ ಅಹಿಂಸೆಯಿಂದಲೂ ನಡೆಯುವುದು ಸತ್ಯಾಗ್ರಹಿಯ ಮೊದಲ ಕರ್ತವ್ಯವೆಂದು ಅವರು ಭಾವಿಸಿ ಅದರಂತೆ ನಡೆದು ಇತರರಿಗೆ ಮಾರ್ಗದರ್ಶಕರಾದರು. ಆದುದರಿಂದ ಚೌರಿಚೌರಾದ ಅತ್ಯಾಚಾರವನ್ನು ಅವರು ಸಹಿಸಲಾಗದೆ ಚಳವಳಿಯು ಹಿಂಸಾಪ್ರವರ್ತಕವಾಗದಂತೆ ತಡೆಗಟ್ಟಿದರು. ಅನೇಕ ಮುಂದಾಳುಗಳು ಸೆರೆಮನೆಯಲ್ಲಿದ್ದುದರಿಂದ ಜನರು ಸ್ವತಂತ್ರವಾಗಿ ಪರಿಪಾಲಿಸುವುದಕ್ಕಾಗಿ, ಕಾಂಗ್ರೆಸ್ಸಿನ ಉದಾತ್ತ ನೀತಿನಿಯಮಗಳನ್ನು ಅನುಷ್ಠಾನಕ್ಕೆ ತಂದರು. ಸಂಸ್ಥೆಯ ಶುದ್ಧತೆಯನ್ನು ಕಾಪಾಡುವುದಕ್ಕಾಗಿ ಹಿಂಸಾಮಾರ್ಗವನ್ನು ಹಿಡಿದು ಅಡ್ಡದಾರಿಗಿಳಿದಿದ್ದ ಚಳವಳಿಯನ್ನು ಕೂಡಲೆ ನಿಲ್ಲಿಸಿದರು. ಕಾಂಗ್ರೆಸ್ಸಿನ ಕುಂದನ್ನು ತೊಡೆದುಹಾಕಿ ಶುದ್ಧಗೊಳಿಸಿ ಹೊಸ ಚೈತನ್ಯವನ್ನು ತುಂಬಿ ತಲೆಯೆತ್ತುವಂತೆ ಮಾಡುವುದಕ್ಕಾಗಿ ಗಾಂಧೀಜಿ ಉಪವಾಸವನ್ನು ಕೈಗೊಳ್ಳಬೇಕಾಯಿತು. ಆಮೇಲೆ ಸರ್ಕಾರವು ಗಾಂಧೀಜಿಯನ್ನು ಬಂಧಿಸಿ, ಆರುವರ್ಷಗಳ ಕಾಲ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿತು. ಸೆರೆಮನೆಯಲ್ಲಿದ್ದಾಗ ಗಾಂಧೀಜಿಯ ಆರೋಗ್ಯವು ಕೆಟ್ಟು, ಶಸ್ತ್ರಚಿಕಿತ್ಸೆಗೆ ಒಳಗಾದರು. ಈ ಸುದ್ದಿಯನ್ನು ಕೇಳಿದ ಜನರು ಭಯಗ್ರಸ್ತರಾಗಿ ತಲ್ಲಣಗೊಂಡಿದ್ದಾಗ ಗಾಂಧೀಜಿ ಗುಣಮುಖರಾದರು. ಅವರಿಗೆ ಸೆರೆಮನೆಯಿಂದ ಬಿಡುಗಡೆಯೂ ಆಯಿತು. ಆರೋಗ್ಯ ಹೊಂದುತ್ತಿದ್ದ ಗಾಂಧೀಜಿಯವರ ದರ್ಶನಕ್ಕಾಗಿ ದೇಶದ ನಾಯಕರೂ ಜನರೂ ಗುಂಪುಗುಂಪಾಗಿ ಅವರಿದ್ದ ಪೂನಾ ನಗರಕ್ಕೆ ಧಾವಿಸಿದರು. ಗಾಂಧೀಜಿಯು ಆಗಲೇ ಅಷ್ಟೊಂದು ಜನಪ್ರಿಯತೆಯನ್ನು ಗಳಿಸಿದ್ದರು.

ಅದೇವರ್ಷ ಬೆಳಗಾಂನಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನಕ್ಕೆ ಗಾಂಧೀಜಿಯೇ ಅಧ್ಯಕ್ಷರಾದರು. ಕಾಂಗ್ರೆಸ್ ನಾಯಕರಲ್ಲಿ ಸ್ವರಾಜ್ಯಪಕ್ಷವೆಂಬ ಒಂದು ಪಂಗಡವು ಹುಟ್ಟಿಕೊಂಡಿದ್ದರೂ ಗಾಂಧೀಜಿ ಪ್ರಧಾನವಾಗಿ ನೂಲುವುದು, ಖಾದಿಪ್ರಚಾರ, ಅಸ್ಪೃಶ್ಯತಾನಿವಾರಣೆ, ಹಿಂದೂಮುಸ್ಲಿಂ

ಐಕ್ಯತೆ, ಮದ್ಯಪಾನ ನಿರೋಧ ಮುಂತಾದ ರಚನಾತ್ಮಕ ಕೆಲಸಗಳಲ್ಲಿ ನಿರತ
ರಾದರು. ದೇಶದಲ್ಲಿ ಕೋಮುವಾರು ವೈಷಮ್ಯ ಹಾಗೂ ಪ್ರತಿಪಕ್ಷಗಳು
ಹುಟ್ಟಿಕೊಂಡದ್ದನ್ನು ಕಂಡು ಗಾಂಧೀಜಿ ಜನರ ಐಕ್ಯತೆಗಾಗಿ ತುಂಬ ದುಡಿ
ದರು. ೧೯೨೭ರ ಡಿಸೆಂಬರ್ ತಿಂಗಳಲ್ಲಿ ಕಾಂಗ್ರೆಸ್ಸಿನ ಮಹಾಧಿವೇಶನವು
ಡಾಕ್ಟರ್ ಅನ್ಸಾರಿಯವರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ಸೇರಿತು. ಗಾಂಧೀ
ಜಿಯ ಸೂಚನೆಯಂತೆಯೇ ಕಾರ್ಯಕಲಾಪಗಳು ಅಧಿವೇಶನದಲ್ಲಿ
ನಡೆದುವು.

ಗಾಂಧೀಜಿಯ ನಾಯಕತ್ವದಲ್ಲಿ ದೇಶವು ಜಾಗೃತಗೊಂಡಿತು. ದೇಶದ
ಎಲ್ಲಭಾಗಗಳಲ್ಲೂ ರೈತರ ಸಭೆ, ಯುವಜನಸಂಘ ಮುಂತಾದ ಸಂಸ್ಥೆಗಳು
ತಲೆದೋರಿ, ಜನರಲ್ಲಿ ಹುರುಪನ್ನುಂಟುಮಾಡುವುದಕ್ಕೆ ನೆರವಾದುವು. ಎಲ್ಲಾ
ಜಾತಿಪಂಗಡಗಳವರೂ ಸ್ವರಾಜ್ಯಕ್ಕಾಗಿ ಒತ್ತಾಯಪಡಿಸಿದರು. ತತ್ಪರಿಣಾಮ
ವಾಗಿ ಮಾಂಟ್‌ಫರ್ಡ್ ಸುಧಾರಣೆ ಜಾರಿಗೆ ಬಂದಿತು. ಭಾರತದ ರಾಜ
ಕೀಯ ಪರಿಸ್ಥಿತಿಯನ್ನರಿಯುವುದಕ್ಕೆ ಸೈಮನ್ ಸಮಿತಿಯೊಂದು ಭಾರತಕ್ಕೆ
ಬಂದಿತು. ಆದರೆ ಆ ಸಮಿತಿಯಲ್ಲಿ ಭಾರತೀಯ ಸದಸ್ಯನೊಬ್ಬನೂ ಇರಲಿಲ್ಲ.
ಆದುದರಿಂದ ಕಾಂಗ್ರೆಸ್‌ಸಂಸ್ಥೆಯು ಸೈಮನ್ ಸಮಿತಿಯನ್ನು ಬಹಿಷ್ಕರಿ
ಸಿತು. ಸಮಿತಿಯವರು ಹೋದೆಡೆಯಲ್ಲೆಲ್ಲ ಕಪ್ಪುಬಾವುಟದ ಪ್ರದರ್ಶನ
ಗಳಾದುವು. ಜನರ ವಿರೋಧ ಪ್ರದರ್ಶನವನ್ನು ಸರ್ಕಾರವು ದಬ್ಬಾಳಿಕೆಯಿಂದ
ತುಳಿಯುವುದಕ್ಕೆ ಪ್ರಯತ್ನಿಸಿತು. ಸರ್ಕಾರದ ಈ ದಬ್ಬಾಳಿಕೆಗೆ ಪಂಜಾಬಿನ
'ಕೇಸರಿ' ಎಂದು ಪ್ರಸಿದ್ಧರಾಗಿದ್ದ ಲಾಲಾ ಲಜಪತರಾಯರಂತಹ ಹಿರಿಯ
ನಾಯಕರೇ ಪ್ರಾಣ ತೆರಬೇಕಾಗಿ ಬಂದಿತು. ತಮ್ಮ ನೆಚ್ಚಿನ ನಾಯಕರ ಹತ್ಯೆ
ಯಿಂದ ಇಡೀ ದೇಶವೇ ಉದ್ರೇಕಗೊಂಡಿತು. ಪಂಜಾಬಿನ ಜನತೆಗಂತೂ
ಅದೊಂದು ತುಂಬಲಾರದ ನಷ್ಟವಾಯಿತು. ಆ ವ್ಯಥೆಯನ್ನು ಸಹಿಸಲಾರದೆ
ರೋಸಿಹೋದ ಭಗತ್ ಸಿಂಗ್ ಮುಂತಾದ ಕೆಲವು ಯುವಕ ವೀರರು
ಪ್ರಬಲ ವಿರೋಧ ಕಾರ್ಯಗಳನ್ನು ಕೈಗೊಂಡರು.

೧೯೨೮ರಲ್ಲಿ ಪಂಡಿತ ಮೋತಿಲಾಲ ನೆಹರೂರವರ ಅಧ್ಯಕ್ಷತೆಯಲ್ಲಿ
ಕಾಂಗ್ರೆಸ್ ಮಹಾಧಿವೇಶನವು ಕಲ್ಕತ್ತಾದಲ್ಲಿ ನೆರವೇರಿತು. ಅದರಲ್ಲಿ ಸರ್ವ
ಪಕ್ಷ ಸಮ್ಮೇಳನದಲ್ಲಿ ತಯಾರಿಸಿದ ರಾಜ್ಯಾಂಗ ರಚನೆಯ ವರದಿಯನ್ನು
ಕಾಂಗ್ರೆಸ್ಸು ಸರ್ವಾನುಮತದಿಂದ ಅಂಗೀಕರಿಸಿತು. ಬ್ರಿಟಿಷ್ ಸರ್ಕಾರವು

ಅದಕ್ಕೆ ಒಪ್ಪದೆ, ತನ್ನ ರೀತಿನೀತಿಗಳನ್ನು ಬದಲಾಯಿಸದೆ ಭಾರತಕ್ಕೆ ಸ್ವತಂತ್ರವನ್ನೀಯುವುದಕ್ಕೆ ಅಡ್ಡಿಮಾಡಿದ್ದೇ ಆದರೆ ಕಾಂಗ್ರೆಸ್ಸು ಸ್ವಾತಂತ್ರ್ಯ ಸಂಗ್ರಾಮವನ್ನು ಆರಂಭಿಸಬೇಕೆಂದು ನಿರ್ಣಯವನ್ನು ಮಾಡಿತು. ಈ ಎಲ್ಲ ಕಾರ್ಯ ಚಟುವಟಿಕೆಗಳಲ್ಲೂ ಗಾಂಧೀಜಿ ಪ್ರತ್ಯಕ್ಷವಾಗಿ ಭಾಗಿಯಾಗದಿದ್ದರೂ ತಾವೇ ಮಾರ್ಗದರ್ಶಕರಾಗಿದ್ದರು. ಪರಿಸ್ಥಿತಿಯನ್ನರಿತ ಲಾರ್ಡ್ ಇರ್ವಿನ್ನರು ಹಿಂದೂಸ್ಥಾನದ ಆಡಳಿತ ವ್ಯವಸ್ಥೆಯ ಸುಧಾರಣೆಯನ್ನು ಚರ್ಚಿಸುವುದಕ್ಕಾಗಿ ಒಂದು ಚಕ್ರಗೋಷ್ಠಿಯನ್ನು ಸೇರಿಸುವುದಾಗಿ ಘೋಷಿಸಿದರು. ಚಕ್ರಗೋಷ್ಠಿಯಲ್ಲಿ ಭಾಗವಹಿಸುವುದಕ್ಕೆ ಮುನ್ನ, ಸರ್ವಪಕ್ಷ ಸಮ್ಮೇಳನದಲ್ಲಿ ತೀರ್ಮಾನವಾದಂತೆ ಸ್ಪಷ್ಟವಾಗಿ ಸ್ವಾತಂತ್ರ್ಯದೆಡೆಗೆ ದಾರಿಮಾಡಿಕೊಡುವ ಕೆಲವು ನಿಯಮಗಳ ಮೇಲೆ ವೈಸ್‌ರಾಯ್ ಪ್ರಕಟಣೆಯನ್ನು ಅಂಗೀಕರಿಸಿತು. ಭಾರತಕ್ಕೆ ಸಂಪೂರ್ಣ ಪ್ರಜಾಪ್ರಭುತ್ವ ಅಧಿಕಾರವನ್ನು ಕೊಡುವುದಕ್ಕಾಗಿಯೇ ಚಕ್ರಗೋಷ್ಠಿ ಸೇರುವುದೆಂದೂ ಚಕ್ರಗೋಷ್ಠಿಯಲ್ಲಿ ಕಾಂಗ್ರೆಸ್ಸಿಗೆ ಅಧಿಕ ಪ್ರಾತಿನಿಧ್ಯವಿರಬೇಕೆಂದೂ, ರಾಜಕೀಯಬಂದಿಗಳನ್ನು ಯಾವ ಷರತ್ತೂ ಇಲ್ಲದೆ ಬಿಡುಗಡೆ ಮಾಡಬೇಕೆಂದೂ, ಇನ್ನು ಮುಂದೆ ಇಂಡಿಯಾ ಸರ್ಕಾರವು ಪ್ರಜಾ ಪ್ರಭುತ್ವದ ಮಾರ್ಗದಲ್ಲಿ ಸಾಗಬೇಕೆಂದೂ, ಗಾಂಧೀಜಿ ನಿಯಮಾವಳಿಯನ್ನು ಸರ್ಕಾರದ ಮುಂದಿಟ್ಟರು. ಆದರೆ ಸರ್ಕಾರ ಆ ನಿಯಮಾವಳಿಯನ್ನು ಒಪ್ಪಲಿಲ್ಲ. ಅದರಿಂದಾಗಿ ೧೯೩೦ರಲ್ಲಿ ಸ್ವಾತಂತ್ರ್ಯ ಸಂಗ್ರಾಮವನ್ನು ಪ್ರಾರಂಭಿಸುವಂತೆ ಕಾಂಗ್ರೆಸ್ಸು ನಿರ್ಧಾರಮಾಡಿತು. ಆ ಸಂಗ್ರಾಮದ ನಾಯಕತ್ವ ಮಹಾತ್ಮ ಗಾಂಧೀಯವರದಾಗಿತ್ತು.

ಉಪ್ಪಿನ ಸತ್ಯಾಗ್ರಹ

ಗಾಂಧೀಜಿಯವರ ಪ್ರಯತ್ನ ಹಾಗೂ ನಿರ್ದೇಶನದ ಅಹಿಂಸಾ ವಾದದಲ್ಲಿ ಕೆಲವರಿಗಿದ್ದ ಸಂಶಯವು ಅಳಿದು, ಅಹಿಂಸೆಯಿಂದಲೇ ಸಾತಂತ್ರ್ಯ ಸಾಧನೆಯು ಸಾಧ್ಯವೆಂಬ ನಂಬಿಕೆ ಮೂಡಿತ್ತು. ಸರ್ಕಾರವು ಉಪ್ಪಿನ ತಯಾರಿಕೆಯ ಮೇಲೆ ಕಾಯಿದೆಯನ್ನು ವಿಧಿಸಿತ್ತು. ಕಾಲವು ಪಕ್ವವಾಗಿರುವುದನ್ನರಿತು ಗಾಂಧಿಜೀಯವರು ಉಪ್ಪಿನಕಾಯಿದೆಗೆ ವಿರುದ್ಧವಾಗಿಸತ್ಯಾಗ್ರಹವನ್ನು ಹೂಡುವುದಕ್ಕೆ ಕರೆಗೊಟ್ಟರು. ೧೯೩೦ನೆಯ ಏಪ್ರಿಲ್ ೬ನೇ ತಾರೀಖು ದಂಡಿನಲ್ಲಿ ಸತ್ಯಾಗ್ರಹ ಪ್ರಾರಂಭವಾಯಿತು. ದೇಶದ ನಾನಾ ಭಾಗಗಳಲ್ಲೂ

ಸತ್ಯಾಗ್ರಹ ಹರಡಿತು. ಕಾನೂನು ಭಂಗಮಾಡಿದ ತಪ್ಪಿಗಾಗಿ ಆಗಿನ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಜವಹರಲಾಲ್ ನೆಹರೂರವರೊಡನೆ ಸಾವಿರಾರು ಜನರು ಸೆರಮನೆಯನ್ನು ಸೇರಿದರು. ಚಳವಳಿಯು ಉಗ್ರಸ್ವರೂಪವನ್ನು ತಾಳಿದಂತೆ ಸರ್ಕಾರವು ವಿಶೇಷಕಾನೂನುಗಳಿಂದ ಜನರನ್ನು ತುಳಿಯು ವುದಕ್ಕೆ ಹವಣಿಸಿತು. ಆದರೆ ಜನರಲ್ಲಿ ಉಂಟಾಗಿದ್ದ ಜಾಗೃತಿ ಮತ್ತು ರಾಷ್ಟ್ರೀಯ ಮನೋಭಾವನೆಗಳಿಂದ ಚಳುವಳಿಯು ಹೊಸ ಹೊಸ ರೂಪ ವನ್ನು ತಾಳಿತು. ಗಾಂಧೀಜಿಯೂ ಸೆರೆಮನೆಯನ್ನು ಸೇರಬೇಕಾಯಿತು. ಆದರೂ ಜನರು ಉತ್ಸಾಹದಿಂದ ಸತ್ಯಾಗ್ರಹ ಚಳವಳಿಯಲ್ಲಿ ಸೇರಿ ಮುನ್ನುಗ್ಗಿ ದರು. ಜನರು ಉಪ್ಪಿನ ಕೋಟೆಗಳ ಮೇಲೆ ಧಾಳಿ ನಡೆಸಿದಾಗ ನಿರಂಕುಶ ಸರ್ಕಾರದ ಅನ್ಯಾಯದ ದಬ್ಬಾಳಿಕೆಯನ್ನು ಎದುರಿಸಬೇಕಾಯಿತು. ಗಾಂಧೀ ಜಿಯು ತೋರಿಸಿಕೊಟ್ಟ ಶಾಂತಿಯಿಂದ ಕೂಡಿದ ಅಹಿಂಸಾ ಮಾರ್ಗದಲ್ಲಿ ಅಸಹಕಾರ ಹಾಗೂ ಶಾಸನೋಲ್ಲಂಘನೆಯ ಚಳವಳಿಯನ್ನು ಮುಂದುವರಿಸಿ ದರು. ಅವರಿಗೆ ಈ ಉನ್ನತಮಟ್ಟದ ಮಾರ್ಗದಲ್ಲಿ ಶ್ರದ್ಧಾಸಕ್ತಿಗಳುಂಟಾ ದವು. ಅನೇಕ ಮಹಿಳೆಯರೂ ದಿಟ್ಟತನದಿಂದ ಚಳವಳಿಯಲ್ಲಿ ಭಾಗವಹಿಸಿ ಕಷ್ಟನಷ್ಟಗಳನ್ನು ಎದುರಿಸಿದರು.

ಚಳವಳಿಯು ಉಗ್ರರೂಪವನ್ನು ತಾಳಿದಾಗ ತೇಜ್ ಬಹದ್ದೂರ್ ಸಪ್ರು, ಜಯಕರ್ ಮುಂತಾದವರು ಸರ್ಕಾರಕ್ಕೂ ಕಾಂಗ್ರೆಸ್ಸಿಗೂ ರಾಜಿ ಮಾಡುವುದಕ್ಕೆ ಪ್ರಯತ್ನಿಸಿ ನಿಷ್ಫಲರಾದರು. ಹೀಗೆ ಅನೇಕ ನಾಯಕರು ದೇಶದ ಹಿತಕ್ಕಾಗಿ ಸರ್ಕಾರದ ದಬ್ಬಾಳಿಕೆಯಿಂದ ನಾನಾ ಕಷ್ಟಕಾರ್ಪಣ್ಯ ಗಳನ್ನು ಅನುಭವಿಸುತ್ತಿದ್ದಾಗಲೇ ಬ್ರಿಟಿಷ್ ಸರ್ಕಾರವು ಇಂಗ್ಲೆಂಡಿನಲ್ಲಿ ಮೊದಲನೆಯ ಚಕ್ರಗೋಷ್ಠಿಯನ್ನು ಸೇರಿಸಿತು. ಬ್ರಿಟಿಷರ ಕುಟಿಲ ನೀತಿ ಯನ್ನು ಅರಿತಿದ್ದ ಕಾಂಗ್ರೆಸ್ಸು ಇದರಲ್ಲಿ ಭಾಗವಹಿಸುವುದಕ್ಕೆ ನಿರಾಕರಿಸಿದರೂ ಕೆಲವು ಭಾರತೀಯರು ಅದರಲ್ಲಿ ಭಾಗವಹಿಸಿದರು. ಆದರೆ ಈ ಚಕ್ರಗೋಷ್ಠಿ ಯಿಂದ ಏನನ್ನೂ ಸಾಧಿಸಲಾಗಲಿಲ್ಲ. ಅಷ್ಟರಲ್ಲೇ ಸೆರೆಮನೆಯಲ್ಲಿದ್ದ ಮೋತೀ ಲಾಲ ನೆಹರೂರವರ ಕಾಯಿಲೆಯು ವಿಷಮಸ್ಥಿತಿಗೆ ಬಂದಾಗ ಅವರ ಬಿಡುಗಡೆ ಯಾಯಿತು. ಕೂಡಲೇ ಗಾಂಧೀಜಿಯನ್ನೂ ಬಿಡುಗಡೆ ಮಾಡಿದರು. ಗಾಂಧೀಜಿ ಮೋತಿಲಾಲ ನೆಹರೂರವರನ್ನು ನೋಡುವುದಕ್ಕಾಗಿ ಅಲಹಾ ಬಾದಿಗೆ ಹೋಗುವಾಗ ಬೊಂಬಾಯಿನಲ್ಲಿ ಒಂದು ದೊಡ್ಡ ಬಹಿರಂಗ

ಸಭೆಯನ್ನುದ್ದೇಶಿಸಿ ಭಾಷಣಮಾಡಿದರು. ಅವರು ಅಲಹಾಬಾದನ್ನು ತಲಪಿದಾಗ ಜವಹರಲಾಲರ ಬಿಡುಗಡೆಯಾಗಿತ್ತು. ಮೋತಿಲಾಲರ ಸ್ಥಿತಿ ಸ್ವಲ್ಪ ಉತ್ತಮಗೊಂಡಂತೆ ಕಂಡುಬಂದರೂ ೧೯೩೧ನೆಯ ಫೆಬ್ರವರಿ ೬ನೇ ತಾರೀಖು ಅವರು ದೈವಾಧೀನರಾದರು. ಅದರಿಂದ ಇಡೀ ದೇಶವೇ ಅಪಾರವಾದ ದುಃಖ ಸಾಗರದಲ್ಲಿ ಮುಳುಗಿತು.

ಅಷ್ಟರಲ್ಲೇ ಗಾಂಧೀಜಿಯು ವೈಸ್‌ರಾಯಿಯಾಗಿದ್ದ ಲಾಡ್ ಇರ್ವಿನ್‌ರೊಡನೆ ಸಂಧಾನವನ್ನು ನಡೆಸಿ ಒಂದು ಒಪ್ಪಂದಕ್ಕೆ ಬಂದರು. ಅದರಿಂದಾಗಿ ಶಾಸನಭಂಗ ಚಳುವಳಿಯು ಸ್ವಲ್ಪಕಾಲ ನಿಂತಿತು. ಅದೇ ಸಮಯದಲ್ಲಿ ಬಾರ್ದೋಲಿ ಸತ್ಯಾಗ್ರಹವು ಸರದಾರ ವಲ್ಲಭಾಯಿ ಪಟೇಲರ ನಾಯಕತ್ವದಲ್ಲಿ ಪ್ರಾರಂಭವಾಯಿತು. ಕಷ್ಟಕ್ಕೀಡಾಗಿದ್ದ ಬಡರೈತರು ಅಧಿಕ ಹೊರೆಯಾಗಿದ್ದ ಕಂದಾಯವನ್ನು ಕೊಡಲಾರದೆ ಪ್ರತಿಭಟಿಸಿದರು. ಸುಮಾರು ಇಪ್ಪತ್ತು ಸಾವಿರ ಸತ್ಯಾಗ್ರಹಿಗಳು ಸೆರೆಮನೆಯನ್ನು ಸೇರಿದರು. ಸರ್ಕಾರದ ನೀತಿಗೆ, ಅನ್ಯಾಯಕ್ಕೆ ಮರುಗಿ ಕೆಲವು ಸರ್ಕಾರಿ ಉದ್ಯೋಗಸ್ಥರು ತಮ್ಮ ಉದ್ಯೋಗಗಳಿಗೇ ತಿಲಾಂಜಲಿಯನ್ನು ಕೊಟ್ಟು, ಸೆರೆಮನೆಯನ್ನು ಸೇರಿದರು. ಅನೇಕ ಭಾರತೀಯರು ಬ್ರಿಟಿಷ್ ಸರ್ಕಾರವು ಕೊಟ್ಟಿದ್ದ ಬಿರುದಾವಳಿಗಳನ್ನು ಹಿಂತಿರುಗಿಸಿ, ಬ್ರಿಟಿಷ್ ಸರ್ಕಾರದ ನೀತಿಯನ್ನು ಎತ್ತಿ ಹಿಡಿದು ತೋರಿಸಿದರು.

ಗಾಂಧೀಜಿಯು ಕರಾಚಿಯಲ್ಲಿ ಸೇರಿದ ಕಾಂಗ್ರೆಸ್ ಅಧಿವೇಶನದಲ್ಲಿ ನಿರ್ಣಯಿಸಿದಂತೆ ಎರಡನೆಯ ಚಕ್ರಗೋಷ್ಠಿಯಲ್ಲಿ ಭಾಗವಹಿಸುವುದಕ್ಕಾಗಿ ಲಂಡನ್ನಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಅವರು ತಾಳ್ಮೆ ಮೀರಿ ವಾದಿಸಿ, ಶ್ರಮಿಸಿದರೂ ಆ ಚಕ್ರಗೋಷ್ಠಿಯಿಂದ ಏನೂ ಪ್ರಯೋಜನವಾಗಲಿಲ್ಲ. ಕೇವಲ ಮತೀಯ ಆಧಾರದಮೇಲೆ ಕೆಲವು ಮುಸ್ಲಿಂನಾಯಕರು ತಮ್ಮ ಬೇಡಿಕೆಗಳನ್ನು ಮುಂದಿಟ್ಟರು. ಸರ್ಕಾರವು ಅವಕ್ಕೆ ಉತ್ತೇಜನ ಕೊಟ್ಟದ್ದರಿಂದ ಗಾಂಧೀಜಿಯು ಭಾರತದ ಹಿತದೃಷ್ಟಿಯಿಂದ ಯಾವ ಕಾರ್ಯಸಾಧನೆಯನ್ನೂ ಮಾಡಲಾರದೆ ಹಿಂತಿರುಗಬೇಕಾಯಿತು. ಚಕ್ರಗೋಷ್ಠಿಯಿಂದ ನಿರಾಶೆಗೊಂಡಿದ್ದ ಭಾರತೀಯರ ಮನವನ್ನರಿತಿದ್ದ ಸರ್ಕಾರವು ಚಳವಳಿಯು ಮತ್ತಷ್ಟು ಉಗ್ರರೂಪವನ್ನು ತಾಳಬಹುದೆಂದು ವಿಶೇಷ ಶಾಸನಗಳಿಂದ ಅದನ್ನು ತುಳಿಯುವುದಕ್ಕೆ ಸಿದ್ಧತೆಯನ್ನು ಮಾಡಿಕೊಂಡಿತು. ಗಾಂಧೀಜಿಯು ಬೊಂಬಾಯಿಗೆ ಬಂದು ಸೇರಿದಾಗ ದೇಶದಲ್ಲಿ ಆಗಲೇ ಅಶಾಂತಿಯ ವಾತಾ

ವರಣವು ಕಂಡುಬಂದಿತು. ಅವರು ವೈಸ್‌ರಾಯ್‌ರೊಡನೆ ಮಾತನಾಡುವುದಕ್ಕೆ ಪ್ರಯತ್ನಿಸಿದಾಗ ಅವಕಾಶವನ್ನು ಕೊಡದೆ ದಸ್ತಗಿರಿ ಮಾಡಿದರು. ಚಳವಳಿಯನ್ನು ಹೇಗಾದರೂ ಮಾಡಿ ಕೊನೆಗಾಣಿಸಬೇಕೆಂದು ಸರ್ಕಾರವು ನಿರ್ಧರಿಸಿತ್ತು. ಚಳವಳಿಯಲ್ಲಿ ಸೇರಿದ್ದ ದೇಶಭಕ್ತರ ಮೇಲೆ ಲಾಠಿಪ್ರಯೋಗ ಮಾಡಿ, ಶಾಂತಿಯುತರಾಗಿದ್ದ ಅಹಿಂಸಾವಾದಿಗಳಿಗೆ ಚಿತ್ರಹಿಂಸೆಯನ್ನು ಕೊಟ್ಟರು. ಸಾವಿರಾರು ಜನರು ಸೆರೆಮನೆಯನ್ನು ಸೇರಿದರು.

ಹೀಗೆ ದೇಶದಲ್ಲಿ ಹೋರಾಟ ನಡೆಯುತ್ತಿದ್ದಾಗ ಬ್ರಿಟಿಷ್ ಸರ್ಕಾರವು ಜಾತಿ ಪ್ರಾತಿನಿಧ್ಯವುಳ್ಳ ನಿರೂಪವನ್ನು (Communal Award) ಪ್ರಕಟಿಸಿತು. ಭಾರತೀಯರಲ್ಲಿ ಒಡಕನ್ನುಂಟುಮಾಡುವ ಉದ್ದೇಶದಿಂದ ಹರಿಜನರಿಗೆ ಪ್ರತ್ಯೇಕ ಚುನಾವಣೆ ಇರಬೇಕೆಂದು ತೀರ್ಮಾನಿಸಿದರು. ಹರಿಜನರನ್ನು ಹಿಂದೂಗಳಿಂದ ಪ್ರತ್ಯೇಕಿಸುವ ಮನೋಭಾವನೆಯನ್ನು ಮೊದಲೇ ಅರಿತಿದ್ದ ಗಾಂಧೀಜಿಯ ಮನಸ್ಸಿಗೆ ಬಹಳ ನೋವಾಯಿತು. ಆ ನಿರೂಪವನ್ನು ಜಾರಿಗೆ ತರುವುದಕ್ಕೆ ಸರ್ಕಾರವು ಮುಂದೆ ಬಂದಾಗ ಗಾಂಧೀಜಿಯು ಅದನ್ನು ಪ್ರತಿಭಟಿಸಿ ಆಮರಣಾಂತ ಉಪವಾಸವನ್ನು ಕೈಗೊಂಡರು. ನಿಶ್ಶಕ್ತರಾಗಿದ್ದ ಗಾಂಧೀಜಿಯ ಉಪವಾಸದಿಂದ ಇಡೀ ದೇಶವೇ ತಲ್ಲಣಿಸಿತು. ದೇಶದಲ್ಲಿದ್ದ ಹಿಂದೂಗಳೆಲ್ಲ ಎಚ್ಚತ್ತರು. ಅಸ್ಪೃಶ್ಯತೆಯ ಕಳಂಕವನ್ನು ತೊಡೆದುಹಾಕುವುದಕ್ಕೆ ಕಂಕಣವನ್ನು ತೊಟ್ಟರು. ಎರವಾಡ ಜೈಲಿನಲ್ಲಿದ್ದ ಗಾಂಧೀಜಿಗೆ ಜನರ ಮನೋಗತವು ತಿಳಿದಿತ್ತು. ಸಕಾಲದಲ್ಲಿ ಸೂಕ್ತ ಬಾಣವನ್ನು ಬಿಟ್ಟು ಜನರನ್ನು ಚೈತನ್ಯಗೊಳಿಸುವ ಮಹಾಶಕ್ತಿ ಅವರಿಗಿದ್ದುದರಿಂದ ಅಂತಹ ಮಹಾಕಾರ್ಯವನ್ನು ಯಶಸ್ವಿಯಾಗಿ ಕಾರ್ಯಗತ ಮಾಡುವುದಕ್ಕೆ ಅವರಿಗೆ ಕಷ್ಟವಾಗಲಿಲ್ಲ. ಹರಿಜನಪ್ರಮುಖರೆಲ್ಲ ಪೂನಾಕ್ಕೆ ಬಂದು ಗಾಂಧೀಜಿಯೊಡನೆ ಚರ್ಚಿಸಿ, ಚುನಾವಣಾ ವಿಚಾರದಲ್ಲಿ ಒಂದು ತೀರ್ಮಾನಕ್ಕೆ ಬಂದರು. ಬ್ರಿಟಿಷರು ನಿರ್ವಾಹವಿಲ್ಲದೆ ಆ ತೀರ್ಮಾನವನ್ನು ಅಂಗೀಕರಿಸಬೇಕಾಯಿತು. ಗಾಂಧೀಜಿಯು ಉಪವಾಸವನ್ನು ನಿಲ್ಲಿಸಿದ ಮೇಲೆ ಅವರ ಬಿಡುಗಡೆ ಆಯಿತು. ಅವರು ೧೯೩೩ರಲ್ಲಿ ಮತ್ತೆ ೨೧ ದಿನಗಳ ಉಪವಾಸವನ್ನು ಕೈಗೊಂಡು ಯಶಸ್ವಿಯಾದರು. ಅದಾದಮೇಲೆ ಗುಜರಾತಿನ ರೈತರಿಗೆ ಶಾಸನೋಲ್ಲಂಘನೆಯ ತತ್ವವನ್ನು ಬೋಧಿಸಿದರೆಂಬ ಆಪಾದನೆಯು

ಮೇಲೆ ಗಾಂಧೀಜಿಯನ್ನು ಪುನಃ ದಸ್ತಗಿರಿ ಮಾಡಿದರು. ಅವರು ಜೈಲಿನಲ್ಲಿದ್ದರೂ ಹರಿಜನೋದ್ಧಾರ ಕಾರ್ಯವನ್ನು ಆಸಕ್ತಿಯಿಂದ ನಡೆಸುತ್ತಿದ್ದರು. ಆದರೆ ಸರ್ಕಾರವು ಅದಕ್ಕೂ ಅಡ್ಡಿಬಂದಿದ್ದರಿಂದ ಮತ್ತೆ ಉಪವಾಸವನ್ನು ಕೈಗೊಂಡರು. ತುಂಬ ನಿಶ್ಶಕ್ತರೂ ವೃದ್ಧರೂ ಆಗಿದ್ದ ಗಾಂಧೀಜಿಯ ದೇಹಸ್ಥಿತಿ ಕಳವಳಕ್ಕವಕಾಶವಾಗಿದ್ದುದರಿಂದ ಸರ್ಕಾರವು ಹೆದರಿ ಅವರನ್ನು ಬಿಡುಗಡೆ ಮಾಡಿತು.

ಗಾಂಧೀಜಿಯು ಬಿಡುಗಡೆ ಹೊಂದಿದ ಮೇಲೆ ಹರಿಜನೋದ್ಧಾರ ಕಾರ್ಯದಲ್ಲಿ ನಿರತರಾದರು. ಹರಿಜನರು ದೇವಾಲಯವನ್ನು ಪ್ರವೇಶ ಮಾಡುವುದಕ್ಕಾಗಿ ಒಂದು ದೊಡ್ಡ ಚಳವಳಿಯನ್ನೇ ಪ್ರಾರಂಭಿಸಿದರು. ದೇಶದ ನಾನಾ ಭಾಗಗಳಿಗೆಲ್ಲ ಭೇಟಿಕೊಟ್ಟು ಅಸ್ಪೃಶ್ಯತೆಯನ್ನು ಅಳಿಸುವುದಕ್ಕಾಗಿ ಅನೇಕ ವಿಧದಲ್ಲಿ ಶ್ರಮಿಸಿ, ವಿಶೇಷ ಪ್ರಚಾರ ವ್ಯವಸ್ಥೆ ಮಾಡಿದರು. 'ಹರಿಜನ' ಎಂಬ ಪತ್ರಿಕೆಯೂ ತಲೆದೋರಿತು. ಅಲ್ಲಿಂದ ಮುಂದೆ ಗಾಂಧೀಜಿ ಅಷ್ಟಾಗಿ ರಾಜಕೀಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಲಿಲ್ಲ. ಕಾಂಗ್ರೆಸ್ ಸದಸ್ಯರಾಗಿದ್ದರೂ ಕಾಂಗ್ರೆಸ್ ಸಂಸ್ಥೆಯ ಜೀವಾಳವಾಗಿ, ಕಾಂಗ್ರೆಸ್ಸಿನ ಮಾರ್ಗದರ್ಶಕರಾಗಿದ್ದರು. ಮುಖ್ಯವಿಚಾರಗಳೆಲ್ಲ ಅವರ ಅಭಿಮತದಂತೆಯೇ ನಡೆಯುತ್ತಿದ್ದವು. ಅದರಿಂದ ಇತರ ತರುಣ ಕಾರ್ಯಕರ್ತರಿಗೆ ಅವಕಾಶ, ಜವಾಬ್ದಾರಿಗಳನ್ನು ಕೊಟ್ಟು ಉತ್ತಮ ನಾಯಕರಾಗುವಂತೆ ತರಬೇತು ಮಾಡುವುದಕ್ಕೂ ಸಾಧ್ಯವಾಯಿತು. ಆದಾಗ್ಯೂ ಗಾಂಧೀಜಿ ಸುಮ್ಮನೆ ಕಾಲ ಕಳೆಯುತ್ತಿರಲಿಲ್ಲ. ಅಸ್ಪೃಶ್ಯತಾನಿವಾರಣೆ, ಹಿಂದೂಮುಸ್ಲಿಂ ಮೈತ್ರಿ, ಗ್ರಾಮಪುನರುಜ್ಜೀವನ ಮುಂತಾದ ರಚನಾತ್ಮಕ ಕೆಲಸಗಳಲ್ಲಿ ತೊಡಗಿದರು. ದೇಶದ ಬೆನ್ನುಮೂಳೆಯಂತಿದ್ದ ಗ್ರಾಮವಾಸಿಗಳ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ತಾವೇ ಹಳ್ಳಿಗಳಲ್ಲಿ ನಿಂತು ದುಡಿಯಬೇಕೆಂದೂ ನಿಶ್ಚಯಿಸಿದರು. "ನನ್ನ ಹೃದಯ ಹಳ್ಳಿಗಳಲ್ಲಿದೆ" ಎಂದು ಹೇಳಿ ವಾರ್ಧಾ ಬಳಿಯ ಸೇವಾಗ್ರಾಮದಲ್ಲಿ ನೆಲಸಿದರು. ಸೇವಾ ಗ್ರಾಮವು ಗ್ರಾಮಾಭಿವೃದ್ಧಿಯ ಕೆಲಸಗಳಿಗೆ ಕೇಂದ್ರವಾಯಿತು. ಗ್ರಾಮ ಪುನರುಜ್ಜೀವನ ಕಾರ್ಯವು ಪರಿಣಾಮಕಾರಿಯಾಗಿ ನಡೆಯಲಾರಂಭಿಸಿತು. ಅಖಿಲಭಾರತ ಕೈಗಾರಿಕಾ ಕೇಂದ್ರವು ವಾರ್ಧಾದಲ್ಲೇ ಸ್ಥಾಪಿತವಾಯಿತು.

ಗಾಂಧೀಜೀಯ ನಾಯಕತ್ವದಲ್ಲಿ ರಚನಾತ್ಮಕ ಕೆಲಸಗಳಿಗೆ ತುಂಬ ಪ್ರೋತ್ಸಾಹ ದೊರೆಯಿತು.

೧೯೩೭ರಲ್ಲಿ ಜಾರಿಗೆ ಬಂದ ಹೊಸರಾಜ್ಯಾಂಗ ವ್ಯವಸ್ಥೆಯನ್ನು ಎದುರಿಸುವುದಕ್ಕಾಗಿ ಗಾಂಧೀಜಿಯ ಪ್ರಯತ್ನದಿಂದ ಕಾಂಗ್ರೆಸ್ಸು ಪ್ರತಿನಿಧಿಗಳು ಏಳುಪ್ರಾಂತ್ಯಗಳಲ್ಲಿ ಅಧಿಕಾರ ಸೂತ್ರಗಳನ್ನು ವಹಿಸಿಕೊಂಡರು. ಗಾಂಧೀಜಿಯ ಸಲಹೆಯಂತೆ ಈ ಮಂತ್ರಿಮಂಡಲಗಳು ಗ್ರಾಮಾಭಿವೃದ್ಧಿ ಮುಂತಾದ ರಚನಾತ್ಮಕ ಕೆಲಸಗಳಲ್ಲಿ ವಿಶೇಷ ಆಸಕ್ತಿಯಿಂದ ಕೆಲಸ ಮಾಡ ತೊಡಗಿದವು. ೧೯೩೮ ರಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿನ ಪ್ರಜೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ತಾಟಸ್ಥ್ಯವನ್ನು ವಹಿಸಬೇಕೆಂದು ನಿರ್ಣಯವಾಯಿತು. ಇದರಿಂದ ದೇಶೀಯ ಸಂಸ್ಥಾನಗಳು ಎಚ್ಚತ್ತು, ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿಯನ್ನು ಪ್ರಾರಂಭಿಸಿದವು. ನಿರಂಕುಶ ಆಡಳಿತಾಧಿಕಾರವನ್ನು ಪ್ರತಿಭಟಿಸುವುದಕ್ಕಾಗಿ ಪ್ರಜೆಗಳು ಅಹಿಂಸಾ ಮಾರ್ಗದಲ್ಲಿ ಹೋರಾಟವನ್ನು ಮೊದಲು ಮಾಡಿದರು. ಆದರಿಂದ ಕೋಪಗೊಂಡ ಕೆಲವು ರಾಜರು ಪ್ರಜೆಗಳ ಮೇಲೆ ಧಾಳಿಯನ್ನು ನಡೆಸಿದರು. ಕಾಥೇವಾಡದ ರಾಜಕೋಟೆಯಲ್ಲಿ ಪರಿಸ್ಥಿತಿ ವಿಷಮಿಸಿತು. ಠಾಕೂರರು ಒಪ್ಪಂದಕ್ಕೆ ಒಪ್ಪದೆ, ಅನ್ಯಾಯದ ನಿರಂಕುಶಾಧಿಕಾರವನ್ನು ಮುಂದುವರಿಸಿದರು. ಅದನ್ನು ಎದುರಿಸುವುದಕ್ಕಾಗಿ ಗಾಂಧೀಜಿ ಉಪವಾಸವನ್ನು ಕೈಗೊಂಡರು. ಎಪ್ಪತ್ತು ವರ್ಷದ ಜೀರ್ಣದೇಹದ ಗಾಂಧೀಜಿಯ ಈ ಕಾರ್ಯಕ್ರಮದಿಂದ ದೇಶವೇ ಹೆದರಿತು. ದೇಶದ ದೃಷ್ಟಿಯೆಲ್ಲ ರಾಜಕೋಟೆಯ ಕಡೆಗೆ ತಿರುಗಿತು. ಜನರ ಹಾಹಾಕಾರವನ್ನು ಕಂಡು ಕೊನೆಗೆ ವೈಸ್‌ರಾಯರು ಮಧ್ಯೆ ಪ್ರವೇಶಿಸಲು ಠಾಕೂರರು ಒಪ್ಪಂದಕ್ಕೆ ಒಪ್ಪಿದರು. ಗಾಂಧೀಜಿ ಉಪವಾಸವನ್ನು ಮುಕ್ತಾಯ ಮಾಡಿದರು. ರಾಜಕೋಟೆಯ ವಿಚಾರದಲ್ಲಿ ಗಾಂಧೀಜಿ ಪ್ರವೇಶಿಸಿದ್ದರಿಂದ ಇತರ ದೇಶೀಯ ಸಂಸ್ಥಾನಗಳ ಮೇಲೂ ವಿಶೇಷ ಪರಿಣಾಮವುಂಟಾಯಿತು. ಗಾಂಧೀಜಿಯು ಇತರ ಸಂಸ್ಥಾನಗಳ ಪ್ರಜೆಗಳಿಗೂ ಸಲಹೆಕೊಡುವುದಕ್ಕೆ ಸದಾ ಸಿದ್ಧರಾಗಿದ್ದರು. ಅಖಂಡ ಭಾರತದಲ್ಲಿ ಬ್ರಿಟಿಷ್ ಪ್ರಾಂತ್ಯಗಳಲ್ಲೂ ದೇಶೀಯ ಸಂಸ್ಥಾನಗಳಲ್ಲೂ ಬೇರೆಬೇರೆ ಆಡಳಿತವಿರಬಾರದೆಂಬುದೇ ಗಾಂಧೀಜಿಯ ಅಭಿಪ್ರಾಯವಾಗಿತ್ತು.

ಆದಷ್ಟು ಬೇಗನೆ ರಾಜರು ತಮ್ಮ ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರವನ್ನು ಕೊಡಬೇಕೆಂದೂ ಅವರು ಸೂಚನೆಯನ್ನು ಕೊಟ್ಟರು. ರಾಜರೂ ಅವರ ಮಂತ್ರಿಗಳೂ ಜನಜಾಗೃತಿಯನ್ನು ತಿಳಿದು, ಪ್ರಗತಿಪರ ದೃಷ್ಟಿಯಿಂದ ನಡೆಯದಿದ್ದರೆ ಮುಂದೆ ಸಂಸ್ಥಾನಗಳೇ ಮಾಯವಾಗಬಹುದೆಂದೂ ಎಚ್ಚರಿಕೆಯನ್ನು ಕೊಟ್ಟರು. ಆದರೂ ಕೆಲವು ರಾಜರು ಅದನ್ನು ಅರ್ಥ ಮಾಡಿಕೊಳ್ಳಲಿಲ್ಲ.

೧೯೩೯ರಲ್ಲಿ ಪ್ರಪಂಚದ ಮಹಾಯುದ್ಧವು ಪ್ರಾರಂಭವಾಯಿತು. ಭಾರತದ ಜನಾಭಿಪ್ರಾಯವನ್ನು ಕೇಳದೆ, ಅಧಿಕಾರದಲ್ಲಿದ್ದ ಕಾಂಗ್ರೆಸ್ ಮಂತ್ರಿಮಂಡಲಗಳನ್ನೂ ವಿಚಾರಿಸದೆ ವೈಸ್‌ರಾಯರು ಭಾರತವೂ ಯುದ್ಧಕ್ಕೆ ಸೇರಿದೆಯೆಂದು ಘೋಷಿಸಿದರು. ಅನೇಕ ಯುದ್ಧರಕ್ಷಣಾ ಕಾನೂನುಗಳೂ ಜಾರಿಗೆ ಬಂದುವು. ಅಷ್ಟೇ ಅಲ್ಲದೆ ದೇಶದ ಸರ್ವಸ್ವವನ್ನೂ ಯುದ್ಧಕ್ಕಾಗಿ ಉಪಯೋಗಿಸಿಕೊಂಡು ಇಲ್ಲಿನ ಜನರು ಕ್ಷಾಮಡಾಮರಗಳಿಂದ ನರಳುವಂತೆ ಮಾಡಿದರು. ಗಾಂಧೀಜಿ ಸ್ವಾಭಾವಿಕವಾಗಿ ಶಾಂತಿವಾದಿ ಮತ್ತು ಯುದ್ಧ ವಿರೋಧಿ. ಹಿಂಸೆಯ ಮಾರ್ಗವನ್ನು ಬಿಟ್ಟು ಪ್ರೇಮದಿಂದ ಎದುರಾಳಿಯನ್ನು ಗೆಲ್ಲುವುದೇ ಸತ್ಯದ ಮಾರ್ಗವೆಂದು ಅವರು ದೃಢವಾಗಿ ನಂಬಿದ್ದರು. ಅನ್ಯಾಯದ ಹಿಂಸಾತ್ಮಕವಾದ ಯುದ್ಧವನ್ನು ನಿಲ್ಲಿಸುವುದಕ್ಕಾಗಿ ತುಂಬ ಶ್ರಮಿಸಿದರು. ಯುದ್ಧಕ್ಕೆ ಮೂಲಕಾರಣನಾದ ಹಿಟ್ಲರನಿಗೂ ಯುದ್ಧವನ್ನು ನಿಲ್ಲಿಸುವಂತೆ ಬರೆದರು. ತಮ್ಮ ಹರಿಜನ ಪತ್ರಿಕೆಯ ಮೂಲಕವೂ ಯುದ್ಧದಿಂದ ಏನನ್ನೂ ಸಾಧಿಸಲಾಗುವುದಿಲ್ಲವೆಂದು ಪ್ರಚಾರಮಾಡಿದರು. ಒಂದು ಯುದ್ಧದಿಂದ ಮತ್ತೊಂದು ಯುದ್ಧಕ್ಕೆ ಬುನಾದಿಯನ್ನು ಹಾಕಿದಂತಾಗುವುದೆಂದೂ, ಸಂಸ್ಕೃತಿ ಮತ್ತು ಮಾನವೀಯತೆಯ ನಾಶಕ್ಕೆ ಕಾರಣವಾಗುವುದೆಂದೂ ಸಾರಿದರು. ಅವುಗಳಿಂದ ಏನೂ ಪ್ರಯೋಜನವಾಗಲಿಲ್ಲ. ಹಿಂದೂಸ್ಥಾನವು ತನಗೇ ಸ್ವಾತಂತ್ರ್ಯವಿಲ್ಲದಿರುವಾಗ ಪರರಾಷ್ಟ್ರಗಳ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುವುದೆಂದರೇನು? ಆದುದರಿಂದ ತಾವು ಮೊದಲು ಸ್ವತಂತ್ರರಾಗದೆ ಈ ಯುದ್ಧದಲ್ಲಿ ಭಾಗವಹಿಸುವುದಿಲ್ಲವೆಂದು ಕಾಂಗ್ರೆಸ್ಸು ಸ್ಪಷ್ಟಪಡಿಸಿದಮೇಲೆ ಪ್ರಾಂತ್ಯಗಳಲ್ಲಿನ ಕಾಂಗ್ರೆಸ್ ಮಂತ್ರಿಮಂಡಲಗಳು ರಾಜೀನಾಮೆಯನ್ನು ಇತ್ತವು. ಪುನಃ ಕೆಲವು ನಾಯಕರು ಸೆರೆಮನೆಯನ್ನು ಸೇರಿದರು.

೧೯೪೨ರ ಸ್ವಾತಂತ್ರ್ಯ ಚಳುವಳಿ

೧೯೪೨ರಲ್ಲಿ ದೇಶದ ಸ್ಥಿತಿ ಬದಲಾಯಿಸಿತು. ಮೇ ತಿಂಗಳಲ್ಲಿ ಕಾರ್ಯಕಾರೀ ಸಮಿತಿಯು ಬೊಂಬಾಯಿನಲ್ಲಿ ಸೇರಿತು. ಗಾಂಧೀಜಿ ಪುನಃ ಸರ್ಕಾರದೊಡನೆ ಸಂಧಾನವನ್ನು ನಡೆಸಿ ವಿಫಲರಾದರು. ಸತ್ಯಾಗ್ರಹವು ಪ್ರಾರಂಭವಾಯಿತು. ಆಗಸ್ಟ್ ಎಂಟನೆಯ ತಾರೀಖು ಕಾಂಗ್ರೆಸ್ ಅಧಿವೇಶನವು ಬೊಂಬಾಯಿ ನಗರದಲ್ಲಿ ಪ್ರಾರಂಭವಾಯಿತು. ಗಾಂಧೀಜಿಯು ಬ್ರಿಟಿಷರ ಮೋಸ, ಅನ್ಯಾಯ ಮತ್ತು ದೌರ್ಜನ್ಯಗಳಿಗಾಗಿ ಕೋಪಗೊಂಡಿದ್ದರು. ಅನೇಕ ವರ್ಷಗಳಿಂದ ಸ್ವಾತಂತ್ರ್ಯವನ್ನು ಕೊಡುವುದಾಗಿ ಭರವಸೆಯಿತ್ತಿದ್ದ ಬ್ರಿಟಿಷರು ವಚನಭ್ರಷ್ಠರಾಗಿ ಜನರನ್ನು ನಿರಾಶೆಗೊಳಿಸಿದ್ದರು. ತಮ್ಮ ಸರ್ವಾಧಿಕಾರವನ್ನು ಮುಂದುವರಿಸುವುದಕ್ಕಾಗಿ ಅನೇಕ ಅಕೃತ್ಯ, ಅನ್ಯಾಯಗಳನ್ನೂ ನಡೆಸಿದ್ದರು. ಈ ಎಲ್ಲ ಕಾರಣಗಳಿಂದ ಸಿಟ್ಟಾಗಿದ್ದ ಗಾಂಧೀಜಿಯು ಅಧಿವೇಶನದಲ್ಲಿ ಉದ್ವೇಗಪೂರ್ಣವಾದ ಭಾಷಣವನ್ನು ಮಾಡಿ ಬ್ರಿಟಿಷರ ಕುಟಿಲ ನೀತಿಯನ್ನು ಖಂಡಿಸಿದರು. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ಕೂಡಲೇ ಹೋಗಬೇಕೆಂಬ 'ಚಲೇಜಾವ್' ಮಸೂದೆಯನ್ನು ಮಂಡಿಸಿದರು. ಬಹಳ ಕಾಲ ಮಿತಿಮೀರಿದ ತಾಳ್ಮೆಯಿಂದಿದ್ದ ಸದಸ್ಯರು ಗಾಂಧೀಜಿಯ ಮಸೂದೆಯನ್ನು ಪ್ರಚಂಡ ಕರತಾಡನಗಳಿಂದ ಸ್ವಾಗತಿಸಿದರು. ಮೊದಲೇ ಬೇಸತ್ತಿದ್ದ ಜನರು ಇಂತಹ ಮಸೂದೆಗಾಗಿಯೇ ಕಾಯುತ್ತಿದ್ದರು. ಅಂದಿನ ರಾತ್ರಿಯೇ ಗಾಂಧೀಜಿ ಮತ್ತು ಇತರ ನಾಯಕರ ದಸ್ತಗಿರಿಯಾಯಿತು. ಈ ವಿಚಾರ ವಿದ್ಯುತ್ತಿನಂತೆ ದೇಶಾದಾದ್ಯಂತವೂ ಹರಡಿ, ಪ್ರತಿಧ್ವನಿಗೊಂಡಿತು. ಸೆರೆಮನೆಗೆ ಹೋಗಿದ್ದವರೆಲ್ಲ ಚಳವಳಿಗೆ ಸೇರಿದರು. ಸತ್ಯಾಗ್ರಹವು ಹಳ್ಳಿಹಳ್ಳಿಗೂ ಹರಡಿ ಪ್ರಚಂಡರೂಪವನ್ನು ತಾಳಿತು. ನಾಯಕರಿಲ್ಲದಾಗ ಜನರು ತಮಗೆ ತಾವೇ ನಾಯಕರಾಗಿ, ತಮಗೆ ತೋಚಿದಂತೆ ಸ್ವಾತಂತ್ರ್ಯಸಾಧನೆಗಾಗಿ ಚಳವಳಿಯನ್ನು ಪ್ರಾರಂಭಿಸಿದರು. ಕೆಲವರು ತಮ್ಮ ನಾಯಕರನ್ನು ಬಂಧಿಸಿದ್ದ ಸರ್ಕಾರದ ವಿರುದ್ಧ ಹಿಂಸಾಕೃತ್ಯಗಳನ್ನು ಮಾಡಿದರು. ಇದರಿಂದ ಮತ್ತಷ್ಟು ಕೋಪಗೊಂಡ ಸರ್ಕಾರವು ಜನರಮೇಲೆ ಲಾಠಿಪ್ರಯೋಗ, ಗುಂಡು ಹಾರಿಸುವುದು ಮುಂತಾದ ಭೀಕರಕೃತ್ಯಗಳನ್ನು ಲೀಲಾಜಾಲವಾಗಿ ನಡೆಸಿತು. ಪೋಲೀಸ್ ಮತ್ತು ಮಿಲಿಟರಿ ಶಕ್ತಿಯನ್ನೆಲ್ಲ ಉಪಯೋಗಿಸಿ

ಜನರಿಗೆ ತುಂಬ ಕಷ್ಟನಷ್ಟಗಳನ್ನೂ ಸಾವುನೋವುಗಳನ್ನೂ ಉಂಟುಮಾಡಿತು. ಹೆಂಗಸರು, ಮಕ್ಕಳು, ಮುದುಕರು ಕೂಡ ಆ ಕಷ್ಟನಷ್ಟಗಳಿಗೊಳಗಾದರು. ವಿದ್ಯಾರ್ಥಿಗಳು ಶಾಲೆ ಕಾಲೇಜುಗಳಿಗೆ ಹೋಗಲಿಲ್ಲ. ನಾಯಕರಿಲ್ಲದಿದ್ದರೂ ಅಸಹಕಾರ ಚಳವಳಿಯು ಪ್ರಚಂಡರೂಪದಲ್ಲಿ ಮುಂದುವರಿಯಿತು.

ಗಾಂಧೀಜಿ ಮತ್ತು ಕಸ್ತೂರಿಬಾ ಅವರನ್ನು ಪೂನಾದ ಆಗಾಖಾನ್ ಅರಮನೆಯಲ್ಲಿ ಬಂಧಿಸಲಾಗಿತ್ತು. ಜವಹರಲಾಲ್ ನೆಹರೂ, ಸರ್ದಾರ್ ಪಟೇಲ ಮುಂತಾದ ರಾಷ್ಟ್ರನಾಯಕರನ್ನು ಅಹಮದಾಬಾದಿನ ಕೋಟೆಯಲ್ಲಿ ಬಲವಾದ ಕಾವಲಿನಲ್ಲಿರಿಸಿದ್ದರು. ಜನರು ಕೈಗೊಂಡ ಹಿಂಸಾಮಾರ್ಗಕ್ಕಾಗಿ ಗಾಂಧೀಜಿ ನೊಂದು ಇಪ್ಪತ್ತೊಂದು ದಿನಗಳ ಉಪವಾಸವನ್ನು ಕೈಗೊಂಡರು. ಮೊದಲೇ ನಿಶ್ಶಕ್ತರಾಗಿದ್ದುದರಿಂದ ರಾಷ್ಟ್ರದ ಜನವೆಲ್ಲ ತುಂಬ ಹೆದರಿತ್ತು. ಗಾಂಧೀಜಿಯು ಬದುಕಬೇಕೆಂದು ಸಂಕಲ್ಪಿಸಿ ಉಪವಾಸದ ಅವಧಿಯನ್ನು ಪೂರ್ಣಮಾಡಿ ಗೆದ್ದರು. ಆದರೆ ಇದಾದ ಸ್ವಲ್ಪ ಕಾಲದಲ್ಲೇ ಅವರ ಧರ್ಮ ಪತ್ನಿಯಾದ ಕಸ್ತೂರಿಬಾ ನಿಶ್ಶಕ್ತರಾಗಿ ಕಾಯಿಲೆ ಬಿದ್ದರು. ಯಾವ ಉಪಚಾರದಿಂದಲೂ ಪ್ರಯೋಜನವಾಗದೆ ಸೆರೆಮನೆಯಲ್ಲೇ ತೀರಿಕೊಂಡರು. ಜೀವನದ ಸಂಗಾತಿಯನ್ನು ಕಳೆದುಕೊಂಡ ಗಾಂಧೀಜಿ ಬಹಳವಾಗಿ ವ್ಯಥೆ ಪಟ್ಟರು. ಈ ವ್ಯಥೆಯಿಂದ ಹಾಸಿಗೆಯನ್ನು ಹಿಡಿದರು. ಆಗ ಸರ್ಕಾರವು ಹೆದರಿ ಅವರನ್ನು ಬಿಡುಗಡೆಮಾಡಿತು.

ಮಹಾತ್ಮ ಗಾಂಧೀಜಿಯವರ ಸತ್ಯಶೋಧನೆಯಲ್ಲಿ ಅವರ ಧರ್ಮಪತ್ನಿ ಕಸ್ತೂರಿ ಬಾ ಅವರ ಪಾತ್ರ ಹಿರಿದಾದುದು. ಆಧುನಿಕ ಶಿಕ್ಷಣವನ್ನು ಪಡೆಯ ದಿದ್ದರೂ ಆದರ್ಶ ಹಿಂದೂವನಿತೆಯಂತೆ ಆಕೆಯು ತಮ್ಮ ಪತಿಯ ಮನೋ ಭಾವವನ್ನರಿತು ಅವರನ್ನನುಸರಿಸಿ, ಕಷ್ಟನಷ್ಟಗಳನ್ನೆಣಿಸದೆ ಅವರ ಧ್ಯೇಯ ಸಾಧನೆಗಳಲ್ಲಿ ನೆರವಾದರು. ಸರಳಸ್ವಭಾವ, ಸ್ವಾತಂತ್ರ್ಯಪ್ರಿಯತೆ, ಎಂತಹ ಕೆಲಸವನ್ನೂ ನಿರ್ವಹಿಸುವ ದಕ್ಷತೆ ಮತ್ತು ಕಷ್ಟಸಹಿಷ್ಣುತೆಗಳಿಂದ ಗಾಂಧೀಜಿಯ ಸ್ಫೂರ್ತಿದಾಯಕ ಗೆಳತಿಯಾಗಿ, ಅವರ ನಾನಾ ಕ್ಷೇತ್ರಗಳ ದುಡಿಮೆಯಲ್ಲಿ ತಾನೂ ಭಾಗಿಯಾಗಿ, ಆದರ್ಶಸತಿಯಾದರು. ಅವರ ಸಹ ಕಾರ ಬೆಂಬಲಗಳಿಲ್ಲದಿದ್ದರೆ ಗಾಂಧೀಜಿಯವರು ತಮ್ಮ ಧ್ಯೇಯಸಾಧನೆಯನ್ನು ಅಷ್ಟು ಸುಲಭವಾಗಿ ಸಾಧಿಸಲಾಗುತ್ತಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ದೇಶಸೇವೆಗಾಗಿ ಜೈಲಿಗೆ ಹೋಗುವುದಕ್ಕೂ ಕಷ್ಟಕಾರ್ಪಣ್ಯಗಳನ್ನು ಅನುಭವಿಸುವುದಕ್ಕೂ ಕಸ್ತೂರಿ ಬಾ ಎಂದೂ ಹಿಂಜರಿಯಲಿಲ್ಲ. ಆಫ್ರಿಕದ ಸತ್ಯಾಗ್ರಹದಲ್ಲಿ ಭಾಗವಹಿಸಿ ಮೊದಲು ಅಲ್ಲಿ ಜೈಲುವಾಸವನ್ನು ಅನುಭವಿಸಿದರು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ಸಾರಿ ಜೈಲುವಾಸವನ್ನು ಅನುಭವಿಸಬೇಕಾಯಿತು. ಹೀಗೆ ಸೆರೆಮನೆಯ ವಾಸವನ್ನನುಭವಿಸುತ್ತಿದ್ದಾಗಲೇ ತಮ್ಮ ೭೪ನೆಯ ವಯಸ್ಸಿನಲ್ಲಿ ಸ್ವರ್ಗವಾಸಿಗಳಾದರು.

ಸೆರೆಮನೆಯಲ್ಲಿದ್ದ ಕಾಂಗ್ರೆಸ್ಸಿನ ಮುಂದಾಳುಗಳನ್ನು ಸರ್ಕಾರ ಗಾಂಧೀಜಿಯವರ ಬಿಡುಗಡೆಯಾದ ಒಂದು ವರ್ಷದಮೇಲೆ ಬಿಡುಗಡೆ ಮಾಡಿತು. ಅವರಲ್ಲಿ ಕೆಲವರು ಮನೆಯನ್ನು ಮತ್ತೆ ಕಾಣದೆ ಸೆರೆಮನೆಯಲ್ಲಿಯೇ ತೀರಿಕೊಂಡಿದ್ದರು. ದೇಶದ ಪರಿಸ್ಥಿತಿಯನ್ನರಿತಿದ್ದ ಸರ್ಕಾರಕ್ಕೆ ಮೊದಲಿನಂತೆ ಆಡಳಿತವನ್ನು ನಡೆಸಲಾಗುವುದಿಲ್ಲವೆಂದು ಸ್ಪಷ್ಟವಾಯಿತು. ಆದುದರಿಂದ ನಾಯಕರೊಡನೆ ಸಂಧಾನವನ್ನು ಪ್ರಾರಂಭಿಸಿತು. ಆಗ ವೈಸ್‌ರಾಯ್ ಆಗಿದ್ದ ಲಾರ್ಡ್‌ವೇವಲ್ಲರು ನಾಯಕರನ್ನು ಸಿಮ್ಲಾಕ್ಕೆ ಬರಮಾಡಿಕೊಂಡರು. ಭಾರತಕ್ಕೆ ಸ್ವಯಂ ಆಡಳಿತವನ್ನು ಹೇಗೆ ಯಾವಾಗ ಕೊಡಬೇಕೆಂಬ ವಿಚಾರದಲ್ಲಿ ಚರ್ಚೆಯಾಯಿತು. ಈ ಮಾತುಕತೆಗಳಲ್ಲೇ ಒಂದು ವರ್ಷ ಉರುಳಿತು. ಬ್ರಿಟಿಷರ ಹಂಚಿ ಆಳುವ ನೀತಿಯಿಂದ ಪ್ರೇರಿತರಾದ ಜಿನ್ನಾ ಮುಂತಾದ ಕೆಲವು ಮುಸ್ಲಿಂಲೀಗಿನ ನಾಯಕರು ಮತೀಯ ಆಧಾರದ ಮೇಲೆ ಮುಸ್ಲಿಮರಿಗೆ ಪ್ರತ್ಯೇಕ ಪ್ರಾಂತ್ಯಬೇಕೆಂದು ಹಠವನ್ನು ಹಿಡಿದರು. ಹಿಂದೂ ಮುಸ್ಲಿಮರ ಐಕ್ಯತೆಗಾಗಿ ಗಾಂಧೀಜಿ ಮತ್ತು ಕಾಂಗ್ರೆಸ್ಸು ಮಾಡಿದ್ದ ಸೇವೆ ಶ್ರಮಗಳೆಲ್ಲ ವ್ಯರ್ಥವಾದುವು. ಪ್ರಮುಖರಾದ ಮುಸ್ಲಿಮರೇ ಮತೀಯ ದೃಷ್ಟಿಯಿಂದ ದೇಶವನ್ನು ಇಬ್ಭಾಗ ಮಾಡಬೇಕೆಂದು ಒತ್ತಾಯಪಡಿಸಿದರು. ಕಾಂಗ್ರೆಸ್ಸಿಗೆ ಇದು ಸರಿತೋರಲಿಲ್ಲ. ಅಷ್ಟರಲ್ಲೇ ಲಾರ್ಡ್ ಮೌಂಟ್ ಬ್ಯಾಟನ್ ವೈಸ್‌ರಾಯಿಯಾಗಿ ಬಂದರು. ಅವರಿಂದಲೂ ಜಿನ್ನಾ ಮತ್ತು ಮುಸ್ಲಿಂ ನಾಯಕರನ್ನು ಒಪ್ಪಿಸಲಾಗಲಿಲ್ಲ. ಈ ಮಧ್ಯೆ ಮುಸ್ಲಿಮರು ಸಂಕುಚಿತ ದೃಷ್ಟಿಯಿಂದ ಮತದ ಹೆಸರಿನಲ್ಲಿ ಹಿಂಸಾಕೃತ್ಯಗಳನ್ನು ಪ್ರಾರಂಭಿಸಿದರು. ಬಂಗಾಳ, ಬಿಹಾರ, ಪಂಜಾಬುಗಳಲ್ಲಿ ಹಿಂದೂ ಮುಸ್ಲಿಂ ಗಲಭೆಗಳಾದುವು. ಅನೇಕರ ಕೊಲೆ, ಸುಲಿಗೆ, ಮಾನಾಪಹರಣಗಳಿಂದ ಮನನೊಂದ

ಕಾಂಗ್ರೆಸ್ ತಮ್ಮ ತಮ್ಮಲ್ಲೇ ಜಗಳವಾಡುವುದಾದರೂ ನಿಲ್ಲಲಿ ಎಂದು ವಿಧಿಯಿಲ್ಲದೆ ಭಾರತದ ಇಬ್ಭಾಗ ನೀತಿಗೆ ಒಪ್ಪಿಗೆ ಕೊಡಬೇಕಾಯಿತು. ಆಗ ಅದಲ್ಲದೆ ಬೇರೆ ಮಾರ್ಗವೇ ಇರಲಿಲ್ಲ.

ಸ್ವರಾಜ್ಯ ಪ್ರಾಪ್ತಿ

ಮಹಾತ್ಮ ಗಾಂಧೀಜಿಯವರ ಸುಮಾರು ಮೂವತ್ತು ವರ್ಷಗಳ ಅಹಿಂಸಾ ಮಾರ್ಗದ, ರಕ್ತಪಾತವಿಲ್ಲದ ಹೋರಾಟದಿಂದ ಕೊನೆಗೂ ಸ್ವರಾಜ್ಯ ಲಭಿಸಿತು. ಆದರೆ ದೇಶವನ್ನು ಇಬ್ಭಾಗಮಾಡಿದ ನಿಮಿತ್ತ ಗಾಂಧೀಜಿ ಅಸುಖಿಗಳಾದರು. ಸ್ವರಾಜ್ಯ ಪ್ರತಿಷ್ಠಾಪನೆಯ ವಿಜಯದ ಹೊತ್ತಿನಲ್ಲಿ ಜನ ಅಹಿಂಸಾಮಾರ್ಗವನ್ನು ಮರೆತರು. ಹಿಂಸಾಕೃತ್ಯಗಳು ಪ್ರಾರಂಭವಾಗಿ ಹಿಂದೂ ಮುಸ್ಲಿಂ ಗಲಭೆಗಳು ಅಲ್ಲಲ್ಲಿ ತಲೆದೋರಿದವು. ಕಲ್ಕತ್ತ, ಪೂರ್ವ ಬಂಗಾಳ, ಬಿಹಾರಗಳಲ್ಲಿ ಕೊಲೆ, ಸುಲಿಗೆ, ಅತ್ಯಾಚಾರಗಳು ನಡೆದುವು. ಅನೇಕ ಹಿಂದೂಗಳು ಕೊಲೆಗೀಡಾದರು. ಈ ರಾಕ್ಷಸೀಕೃತ್ಯದಿಂದ ಗಾಂಧೀಜಿ ಮುಂತಾದ ನಾಯಕರು ಬಹಳವಾಗಿ ನೊಂದರು. ಎಪ್ಪತ್ತುವರ್ಷಗಳಿಗೂ ಮೀರಿದ ಮುಪ್ಪಿನಿಂದ ಬಲಹೀನರಾಗಿದ್ದರೂ ತಾವೇ ಬಂಗಾಳದಲ್ಲಿ ನೌಕಾಲಿಯಿಂದ ಹಳ್ಳಿಹಳ್ಳಿಗೂ ಕಾಲುನಡಿಗೆಯಲ್ಲಿ ಹೊರಟು ಜನರನ್ನು ಹಿಂಸಾಪ್ರವರ್ತಕರಾಗದಂತೆ ಬೇಡಿಕೊಂಡರು. ದ್ವೇಷ ಅಸೂಯೆಗಳನ್ನು ತೊಲಗಿಸಿ, ಶಾಂತಿವಾತಾವರಣವನ್ನು ಕಲ್ಪಿಸುವುದಕ್ಕಾಗಿ ಹಗಲಿರುಳೂ ದುಡಿದರು. ಹಿಂದೂಮುಸ್ಲಿಂ ಮೈತ್ರಿಗಾಗಿ ಗಾಂಧೀಜಿಪಟ್ಟ ಶ್ರಮ ಅವರ್ಣನೀಯವಾದುದು. ತಮ್ಮ ಜೀವನದ ಸಂಧ್ಯೆಯಲ್ಲಿ ದುರಂತ ನಡೆದ ಪ್ರದೇಶಗಳಲ್ಲೆಲ್ಲ ಏಕಾಂಗಿಯಾಗಿ ಕಾಲ್ನಡಿಗೆಯಲ್ಲಿ ಮನೆ ಮನೆಗೂ ಹೋಗಿ ಶಾಂತಿ ಸಂದೇಶವನ್ನು ಬೀರಿದರು. ಯಾವ ದೇಶವೇ ಆಗಲಿ ಶಾಂತಿಯಿಂದ ಬಾಳಬೇಕಾದರೆ ಅಲ್ಲಿನ ಜನರು ಮೈತ್ರಿಯಿಂದಿರಬೇಕಾದುದು ಆವಶ್ಯಕ. ಗಾಂಧೀಜಿಯ ಈ ಬೋಧೆ ಸಂದೇಶ ಸೇವೆಗಳಿಂದ ಬಂಗಾಳದಲ್ಲಿ ಶಾಂತಿವಾತಾವರಣ ತಲೆದೋರಿತು. ಅವರ ಬೇಡಿಕೆಗೆ ಜನರು ತಲೆಬಾಗಿದರು. ಹಿಂಸೆ, ಕಷ್ಟ, ನಷ್ಟಗಳಿಗೊಳಗಾಗಿದ್ದವರೂ ಗಾಂಧೀಜಿಯ ಬುದ್ಧಿವಾದದಿಂದ ಸೇಡಿನ ಮನೋಭಾವನೆಯನ್ನು ತ್ಯಜಿಸಿದರು. ಅಕೃತ್ಯ ನಡೆಸಿದವರು ಬಾಪುವಿನ ಮಾತಿಗೆ ಕಿವಿಗೊಟ್ಟು, ತಮ್ಮ ಕೃತ್ಯಗಳಿಗಾಗಿ ನಾಚಿಕೆಪಟ್ಟರು. ಕ್ರಮೇಣ

ಕೊಲೆ, ಸುಲಿಗೆ, ಲೂಟಿಗಳೆಲ್ಲ ನಿಂತವು. ಗಾಂಧೀಜಿಯಲ್ಲಿ ಜನರಿಗೆ ಅಷ್ಟೊಂದು ಗೌರವ ಪ್ರೀತಿಗಳಿದ್ದವು. ಆದುದರಿಂದಲೇ ಗಾಂಧೀಜಿ, ಬಾಪೂ, ಅಹಿಂಸೆಯ ಶಾಂತಿದೂತ, ಮಹಾತ್ಮ ಎಂದೂ ಪ್ರಸಿದ್ಧರಾದರು.

೧೯೪೭ರ ಆಗಸ್ಟ್ ೧೫ನೇ ತಾರೀಖು ಭಾರತಮಾತೆ ಸ್ವತಂತ್ರ ಸಾಮ್ರಾಜ್ಞಿಯಾಗಿ ಮೆರೆದಳು. ಸುಮಾರು ಇನ್ನೂರು ವರ್ಷಗಳಮೇಲೆ ಪುನಃ ಸ್ವತಂತ್ರರಾದ ಜನರಲ್ಲಿ ಉತ್ಸಾಹ, ಸಂಭ್ರಮಗಳಿಗೇನೂ ಕೊರತೆ ಯಿರಲಿಲ್ಲ. ಆದರೆ ಅಖಂಡಭಾರತವನ್ನು ಎರಡುಮಾಡಿದ ಕೊರತೆ ಬಹಳ ಮಂದಿಗೆ ವ್ಯಸನವನ್ನುಂಟುಮಾಡಿತ್ತು. ಭಾರತ ಸ್ವತಂತ್ರವಾದ ದಿವಸ ದೇಶದ ಎಲ್ಲಭಾಗಗಳಲ್ಲೂ, ಮನೆಮನೆಗಳಲ್ಲೂ ಸ್ವಾತಂತ್ರ್ಯೋತ್ಸವದ ಹಬ್ಬಗಳಾ ದುವು. ಪರತಂತ್ರದಲ್ಲಿ ಗುಲಾಮರಾಗಿದ್ದ ಭಾರತೀಯರು ಪ್ರಪಂಚದ ಇತರ ರಾಷ್ಟ್ರಗಳ ಜನರೊಡನೆ ಸಮಾನತ್ವವನ್ನು ಗಳಿಸಿದ ಸಂತೋಷದಿಂದ ಹಿಗ್ಗಿ ದರು. ದೇಶವು ಇನ್ನು ಮುಂದೆ ಸುಖಶಾಂತಿಗಳಿಂದ ಬೆಳೆಯುವುದೆಂಬ ಕಲ್ಪನೆ ಕನಸುಗಳನ್ನು ಕಾಣುವ ಕಾಲ ಬಂದಿತು.

ವಿಭಜನೆಯ ದುಷ್ಪರಿಣಾಮ

ಸ್ವಾತಂತ್ರ್ಯೋತ್ಸವದ ಸುಪ್ರಭಾತವಾದ ಕೂಡಲೇ ಭಾರತ ಅನೇಕ ಕಷ್ಟಗಳನ್ನು ಎದುರಿಸಬೇಕಾಯಿತು. ಮೊದಲನೆಯದಾಗಿ, ದೇಶವನ್ನು ವಿಭಾಗಮಾಡಿದ್ದರಿಂದ ಉಂಟಾದ ದುಷ್ಪರಿಣಾಮ ಅಷ್ಟಿಷ್ಟಲ್ಲ. ಪಂಜಾಬು, ಬಂಗಾಳ ಪ್ರಾಂತ್ಯಗಳು ಎರಡೆರಡು ಭಾಗಗಳಾದುವು. ಒಂದು ಭಾಗ ಭಾರತಕ್ಕೆ ಮತ್ತೊಂದು ಭಾಗ ಮುಸ್ಲಿಮರ ಪ್ರತ್ಯೇಕ ಭಾಗವಾದ ಪಾಕೀ ಸ್ಥಾನಕ್ಕೆ. ಇಬ್ಬರಲ್ಲೂ ಒಪ್ಪಂದ ಸಾಧ್ಯವಾಗದೆ ದ್ವೇಷ, ಅಸೂಯೆಗಳು ಬೆಳೆ ದವು. ಕೆಲಸವಿಲ್ಲದ ಪುಂಡರು ಲೂಟಿ, ಸುಲಿಗೆ ಮುಂತಾದ ಅಕೃತ್ಯ, ಅನ್ಯಾಯ ಅನಾಚಾರಗಳಲ್ಲಿ ತೊಡಗಿದರು. ಹೆಂಗಸರು ಮಕ್ಕಳೆನ್ನದೆ ಕೊಲೆ, ಸುಲಿಗೆ, ಮಾನಾಪಹರಣಗಳಾದುವು. ಈ ಪೈಶಾಚಿಕ ದುಂಡಾವರ್ತನೆ ಗಳಿಂದ ಜಗತ್ತೇ ಡಂಗುಬಡಿಯಿತು. ಕಾಂಗ್ರೆಸ್‌ನಾಯಕರ ಕರೆಗೂ ಬಾಪುವಿನ ಕರೆಗೂ ಯಾರೂ ಗಮನಕೊಡಲಿಲ್ಲ. ಪಂಜಾಬು ಮತ್ತು ಬಂಗಾಳಗಳಲ್ಲಿ ಅಶಾಂತಿವಾತಾವರಣ ಬೆಳೆಯಿತು. ಮೊದಲು ಮುಸ್ಲಿಮರು ಮತದ ಹೆಸರಿನಲ್ಲಿ ನಡೆಸಿದ ಅನ್ಯಾಯ ಅತ್ಯಾಚಾರ, ಅಕೃತ್ಯಗಳಿಗೆ ಪ್ರತೀಕಾರಮಾಡುವುದಕ್ಕೆಂದು ಹಿಂದೂಗಳು ಸಿದ್ಧರಾದರು. ಪರಿಸ್ಥಿತಿ ವಿಷ

ಮಿಸಿದ್ದನ್ನು ಕಂಡು, ಪಾಪಕೃತ್ಯಗಳಿಂದ ಮನನೊಂದು ಗಾಂಧೀಜಿ ಹಿಂದೂ ಮುಸ್ಲಿಮರ ಮೈತ್ರಿಗಾಗಿ ಮತ್ತೊಮ್ಮೆ ಉಪವಾಸವನ್ನು ಪ್ರಾರಂಭಿಸಿದರು. ಹಿಂದೂಮುಸ್ಲಿಂನಾಯಕರು ಗಾಂಧೀಜಿಯ ಕ್ಷಮೆಯನ್ನು ಬೇಡಿ, ತಾವೆಲ್ಲ ಹಿಂದೂಮುಸ್ಲಿಂ ಐಕ್ಯತೆಗಾಗಿ ದುಡಿಯುವುದಾಗಿ ವಚನವನ್ನು ಕೊಟ್ಟರು. ಐದುದಿನಗಳಮೇಲೆ ಗಾಂಧೀಜಿಯು ಉಪವಾಸವನ್ನು ನಿಲ್ಲಿಸಿದರು. ಆಮೇಲೆ ವಾತಾವರಣ ಸುಧಾರಿಸಿತು. ಶಾಂತಿ ತಲೆದೋರಿದಂತೆ ಕಂಡುಬಂದಿತು. ಗಾಂಧೀಜಿ ತಮ್ಮ ಆತ್ಮಬಲದಿಂದಲೇ ಬಂಗಾಳ ಪಂಜಾಬುಗಳಲ್ಲಿ ಸುವ್ಯವಸ್ಥೆ ನೆಲೆಗೊಳ್ಳುವುದಕ್ಕೆ ಬಹುಮಟ್ಟಿಗೆ ಕಾರಣರಾದರು. ಅನೇಕ ಕ್ರೂರಿಗಳೂ ಸಾಧುಗಳಾದರು; ವೈರಿಗಳಂತೆ ಹೊಡೆದಾಡುತ್ತಿದ್ದವರೂ ಪ್ರೀತಿಯಿಂದ, ಸೌಹಾರ್ದದಿಂದ ಬಾಳುವುದನ್ನು ಕಲಿತರು. ಗಾಂಧೀಜಿಯ ಈ ಅದ್ಭುತ ಸಾಧನೆ ಸರ್ವಶಕ್ತಿಯುತವಾದ ಸರ್ಕಾರಕ್ಕೂ ಸಾಧ್ಯವಿರಲಿಲ್ಲ.

ಇತ್ತ ದೆಹಲಿ ಮುಂತಾದಕಡೆ ಪಾಕೀಸ್ಥಾನದಿಂದ ಬಂದಿದ್ದ ನಿರಾಶ್ರಿತರು ತಾವು ಪಾಕೀಸ್ಥಾನದಲ್ಲಿ ಮುಸ್ಲಿಮರಿಂದ ಅನುಭವಿಸಿದ ಕಷ್ಟನಷ್ಟಗಳಿಗಾಗಿ ಸೇಡುಭಾವನೆಯನ್ನು ಪೂರ್ಣವಾಗಿ ಬಿಟ್ಟಿರಲಿಲ್ಲ. ಅದನ್ನರಿತು ಗಾಂಧೀಜಿ ದೆಹಲಿಗೆ ಬಂದರು. ಕೋಮುವಾರು ವಿಷಜ್ವಾಲೆ ಒಳಗೊಳಗೇ ಉರಿಯುತ್ತಿದ್ದಿತು. ದ್ವೇಷ ಅಸೂಯೆಗಳು ಇನ್ನೂ ಪೂರ್ತಿಯಾಗಿ ಅಳಿದಿರಲಿಲ್ಲ. ಗಾಂಧೀಜಿ, "ವೈರಿಗಳನ್ನು ಪ್ರೀತಿಸಿರಿ; ದ್ವೇಷ, ಅತ್ಯಾಚಾರಗಳಿಗೆ ಮನಕೊಡಬೇಡಿ" ಎಂದು ಬೋಧಿಸಿದರು. ಆದರೆ ಕೆಲವು ಮತೀಯ ಉನ್ಮತ್ತರು ಗಾಂಧೀಜಿಯನ್ನು ಮುಸ್ಲಿಮರ ಪಕ್ಷಪಾತಿ ಎಂದು ಭಾವಿಸಿದರು. ಅಂತಹವರಲ್ಲಿ ಒಬ್ಬ ಉನ್ಮತ್ತಪುಂಡನು ೧೯೪೮ನೇ ಜನವರಿ ೩೦ನೇ ತಾರೀಖಿನ ಸಂಜೆ ಐದುಗಂಟೆಯ ಸಮಯದಲ್ಲಿ ಅವರು ಪ್ರಾರ್ಥನಾಸಭೆಯಲ್ಲಿದ್ದಾಗ ಪಿಸ್ತೂಲಿನಿಂದ ಗುಂಡನ್ನು ಹಾರಿಸಿದನು. ಅದು ನೇರವಾಗಿ ಗಾಂಧೀಜಿಯ ಎದೆಯನ್ನು ಹೊಕ್ಕಿತು. ಅವರು "ಹೇ ರಾಮ್, ಹೇ ರಾಮ್" ಎನ್ನುತ್ತ ಅಮರರಾದರು. ಭಾರತದ ಭಾಗ್ಯವಿಧಾತ ಕಣ್ಮುಚ್ಚಿದರು. ಜಗತ್ತಿನ ಶ್ರೇಷ್ಠ ಶಾಂತಿದೂತರು ಕಣ್ಮರೆಯಾದರು. ಈ ದುರ್ವಾರ್ತೆ ಜಗತ್ತಿನ ಮೂಲೆಮೂಲೆಗೂ ಅಗ್ನಿಜ್ವಾಲೆಯಂತೆ ಹರಡಿತು. ಭಾರತದೇಶವಂತೂ ಶೋಕಸಾಗರದಲ್ಲಿಯೂ ಅಂಧಕಾರದಲ್ಲಿಯೂ ಮುಳುಗಿತು. ಈ ದುರ್ಘ

ಟನೆಯಿಂದ ಭಾರತಕ್ಕೇ ಏಕೆ, ಇಡೀ ಜಗತ್ತಿಗೇ ತುಂಬಲಾರದ ನಷ್ಟ ವಾಯಿತು. ಏಸುಕ್ರಿಸ್ತ, ಸಾಕ್ರೆಟೀಸ್, ಬಸವಣ್ಣ ಮುಂತಾದವರಂತೆ ಗಾಂಧೀಜಿಯೂ ಅಕಾಲಮರಣಕ್ಕೆ ತುತ್ತಾದರು.

ಗಾಧೀಜಿಯ ನಾಯಕತ್ವದಲ್ಲಿ ಭಾರತ ಸ್ವತಂತ್ರಗೊಂಡಿದ್ದರೂ ದೇಶದ ಮುಂದೆ ನಾನಾ ಸಮಸ್ಯೆಗಳು ಉದ್ಭವಿಸಿದ ಪರ್ವಕಾಲದಲ್ಲಿ ಅವರು ಇಲ್ಲವಾದರು. ಅವರ ಮಾರ್ಗದರ್ಶನ ಅನಿವಾರ್ಯವಾಗಿದ್ದಾಗ, ಅವರ ಆತ್ಮ ಬಲದ ಅದ್ಭುತಶಕ್ತಿ ಅತ್ಯಾವಶ್ಯಕವಾಗಿದ್ದಾಗ, ಅವರು ಕಣ್ಮರೆಯಾದರು. ಆದರೆ ಮಹಾತ್ಮರು ತೋರಿದ ಮಾರ್ಗದಲ್ಲಿ ಶ್ರದ್ಧಾಶಕ್ತಿಗಳಿಂದ ನಡೆದರೆ ಎಂತಹ ಅಂಧಕಾರದಲ್ಲಿಯೂ ಬೆಳಕನ್ನು ಕಾಣವುದು ಸಾಧ್ಯವಾಗುತ್ತದೆ.

ಗಾಂಧೀಜಿಯ ಹಿರಿಮೆ

ಗಾಂಧೀಜಿ ಮಾನವರಾಗಿ ಹುಟ್ಟಿ, ಮಾನವರ ಮೇಲ್ಮೆಗಾಗಿಯೇ ದುಡಿದು, ಸರ್ವೋದಯಸಾಧನೆ, ಅಪಾರತ್ಯಾಗ ಸೇವೆಗಳಿಂದ, ಹಿರಿಯ ಗುಣಗಳಿಂದ, ವಿಶ್ವವಿಶಾಲ ಮನೋಭಾವನೆಯಿಂದ, ದೇವತ್ವಕ್ಕೇರಿ ವಿಶ್ವ ಗುರುಗಳಾದರು. ಸುಮಾರು ಎರಡುಶತಮಾನಗಳಕಾಲ ಪರದಾಸ್ಯ ಪಂಕ ದಲ್ಲಿ ತೊಳಲುತ್ತಿದ್ದ ನಮ್ಮ ದೇಶವನ್ನು ಸ್ವತಂತ್ರಗೊಳಿಸುವುದಕ್ಕೆ ದುಡಿದು ವಿಜಯ ಶಾಲಿಗಳಾಗಿ ಭಾರತದ ಭಾಗ್ಯವಿಧಾತರಾದರು. ಆರ್ಥಿಕ, ಸಾಮಾ ಜಿಕ ಮತ್ತು ರಾಜಕೀಯಗಳಲ್ಲಿ ಹಿಂದುಳಿದಿದ್ದ ಭಾರತೀಯರ ಅಜ್ಞಾನ, ಅಂಧಕಾರ, ಮೂಢನಂಬಿಕೆಗಳನ್ನು ಹೋಗಲಾಡಿಸಿ ತಿಳಿವಳಿಕೆಯನ್ನು ಕೊಟ್ಟು ಮನುಷ್ಯತ್ವವನ್ನು ಅರಿತುಕೊಳ್ಳುವಂತೆ ಮಾಡಿದ ಕೀರ್ತಿ ಗಾಂಧೀ ಜಿಗೆ ಸಲ್ಲುತ್ತದೆ.

ಗಾಂಧೀಜಿಯ ಜೀವನಚರಿತ್ರೆಯಿಂದ ಹಲವಾರು ವಿಷಯಗಳನ್ನು ತಿಳಿದುಕೊಳ್ಳಬೇಕಾಗಿದೆ. ಅವರ ಬೋಧನೆಗಳು ಸಾರ್ವಕಾಲಿಕವಾಗಿ ನಿಲ್ಲು ವಂತಹವುಗಳಾಗಿವೆ. ಅವುಗಳಲ್ಲಿ ಕೆಲವನ್ನು ನೋಡೋಣ : ಅಹಿಂಸೆಯೇ ಪರಮಧರ್ಮ. ಅಹಿಂಸೆಯೆಂದರೆ ಯಾರಿಗೂ ಹಿಂಸೆಮಾಡದಿರುವುದು. ಪೆಟ್ಟಿಗೆ ಬದಲಾಗಿ ಪೆಟ್ಟನ್ನು ಕೊಡುವುದು ಅಹಿಂಸೆಯಲ್ಲ. ಅಹಿಂಸಾಧರ್ಮಿಯು ವೈರಿಯನ್ನೂ ಕ್ಷಮಿಸಬೇಕು. ಧಾರ್ಮಿಕಜೀವನದ ಅರ್ಥವನ್ನು ತಿಳಿಯ ಬೇಕಾದರೆ ಈ ಗುರಿಯನ್ನು ಸಾಧಿಸಬೇಕು. ಈ ತತ್ತ್ವದ ಪ್ರಕಾರ

ಶತ್ರುವಿನಮೇಲೆ ಅಳಿಸಲಾಗದ ವಿಶ್ವಾಸಗಳನ್ನು ತೋರಿದರೆ ಅವನು ಸಹ ಆ ಪ್ರೀತಿವಿಶ್ವಾಸಗಳನ್ನು ಉಳಿಸಿಕೊಳ್ಳಬೇಕಾದುದು ಅನಿವಾರ್ಯವಾಗುತ್ತದೆ. ಈ ತತ್ತ್ವದಂತೆ ವ್ಯವಸ್ಥಿತ ಕೊಲೆಗಳಿಗೆ ಎಡೆಯಿಲ್ಲ: ಮುಚ್ಚುಮರೆಯಿಲ್ಲದೆ ಖೂನಿಮಾಡುವುದೂ ಸಾಧ್ಯವಿಲ್ಲ. ನಮ್ಮ ರಕ್ಷಣೆಯಲ್ಲಿರುವವರ ಮಾನರಕ್ಷಣೆಗಾಗಿ ನಮ್ಮ ಪ್ರಾಣವನ್ನಾದರೂ ಕೊಡುವುದಕ್ಕೆ ಸಿದ್ಧರಿರಬೇಕು. ಅಹಿಂಸಾ ತತ್ತ್ವಕ್ಕನುಗುಣವಾಗಿ ನಮ್ಮ ಜೀವನವನ್ನು ವ್ಯವಸ್ಥೆಗೊಳಿಸಿದರೆ ಯುದ್ಧಗಳಿಗೆ ಎಡೆಯೇ ಇರುವುದಿಲ್ಲ.

ದೇಶಸೇವೆಯನ್ನು ಮಾಡಬೇಕೆನ್ನುವವರು ಧಾರ್ಮಿಕಜೀವನವನ್ನು ನಡೆಸಬೇಕು. ವಿವಾಹಿತರಾಗಲಿ ಅವಿವಾಹಿತರಾಗಲಿ ಅದಕ್ಕಾಗಿ ಬ್ರಹ್ಮಚರ್ಯವನ್ನು ಪಾಲಿಸಬೇಕು. ಮದುವೆಯು ಪತಿಪತ್ನಿಯರ ಸಾಮಿಪ್ಯ ಸಾಧನೆ. ಅದು ಇಹದಲ್ಲೂ ಪರದಲ್ಲೂ ಅವರು ಬೇರೆಯಾಗದಂತೆ ಅವರಲ್ಲಿ ವಿಶೇಷರೀತಿಯ ಮಿತ್ರತ್ವವನ್ನುಂಟುಮಾಡುತ್ತದೆ. ಆದರೆ ಈ 'ಮದುವೆ' ಎಂಬ ಪದಕ್ಕೆ ಕೊಡುವ ಅರ್ಥದಲ್ಲಿ ಕಾಮವು ಸೇರಕೂಡದು. ಒಂದು ಇಂದ್ರಿಯವನ್ನು ಮಾತ್ರ ಪ್ರಯತ್ನದಿಂದ ನಿಗ್ರಹಿಸಿ ಉಳಿದವುಗಳನ್ನು ಸ್ವೇಚ್ಛಾಪ್ರವೃತ್ತಿಗೆ ಬಿಟ್ಟರೆ ಯಾರೂ ಬ್ರಹ್ಮಚರ್ಯವನ್ನು ಪಾಲಿಸಿದಂತಾಗುವುದಿಲ್ಲ. ಉದ್ರೇಕಗೊಳಿಸುವ ಕಥೆಗಳನ್ನು ಕಿವಿಗಳಿಂದ ಕೇಳುವುದು, ಕಾಮೋದ್ರೇಕ ದೃಶ್ಯಗಳನ್ನು ಕಣ್ಣುಗಳಿಂದ ನೋಡುವುದು, ಉದ್ರೇಕಕರವಾದ ಆಹಾರಗಳನ್ನು ನಾಲಗೆಯಿಂದ ತಿನ್ನುವುದು, ರೋಮಾಂಚವನ್ನುಂಟುಮಾಡುವ ವಸ್ತುಗಳನ್ನು ಕೈಯಿಂದ ಸ್ಪರ್ಶಿಸುವುದು, ಇವೆಲ್ಲವೂ ಬ್ರಹ್ಮಚರ್ಯಕ್ಕೆ ದೂರವಾದುವು. ಸತ್ಯಸಾಧನೆಗಾಗಿ ಕಾಯೇನವಾಚಾ ಮನಸಾ ಬ್ರಹ್ಮಚರ್ಯವನ್ನು ಪಾಲಿಸಬೇಕು.

ಆಹಾರವನ್ನು ಹಿತವಾಗಿ ಮಿತವಾಗಿ ತೆಗೆದುಕೊಳ್ಳಬೇಕು. ನಮ್ಮ ದೇಹಪೋಷಣೆಗೆ ಅಗತ್ಯವಾದಷ್ಟನ್ನು ಮಾತ್ರ ತೆಗೆದುಕೊಂಡರೆ ಇಂದ್ರಿಯಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು; ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ನಮ್ಮ ಚಾಪಲ್ಯವನ್ನು ಹೆಚ್ಚಿಸಿ ದೇಹವನ್ನು ಉದ್ರೇಕಗೊಳಿಸುವ ಮಸಾಲೆ ಸಾಮಾನುಗಳನ್ನು ತ್ಯಜಿಸಬೇಕು. ಇಲ್ಲದಿದ್ದರೆ ಅವುಗಳಿಂದ ಪಶುಮನೋವೃತ್ತಿಗೆ ನಾವಾಗಿ ಆಸ್ಪದಕೊಟ್ಟಂತಾಗುತ್ತದೆ. ಅದೂ

ಅಲ್ಲದೆ ಆಹಾರವನ್ನು ಶರೀರದ ಶ್ರಮದಿಂದ ಸಂಪಾದಿಸಬೇಕು. ಕುಳಿತು ಸೋಮಾರಿಯಾಗುವುದಕ್ಕಿಂತ ದುಡಿದು ಉಣ್ಣಬೇಕು.

ಸತ್ಯಶಾಧನೆಗಾಗಿ ನಾವು ಒಳ್ಳೆಯ ಮಾರ್ಗವನ್ನು ಹಿಡಿಯಬೇಕು. ದ್ವೇಷವನ್ನು ತ್ಯಜಿಸಬೇಕು. ಅರಿತೋ ಅರಿಯದೆಯೋ ನಾವು ಒಂದಲ್ಲ ಒಂದು ರೀತಿಯಲ್ಲಿ ಕಳ್ಳರಾಗಿಲ್ಲವೆ? ಇದೇನು ಎಂದು ನೀವು ಆಶ್ಚರ್ಯ ಪಡಬಹುದಲ್ಲವೇ? ಗಾಂಧೀಜಿಯ ಅಭಿಪ್ರಾಯದಲ್ಲಿ ನಮಗೆ ಅವಶ್ಯಕವಲ್ಲದ ವಸ್ತುವನ್ನು ಇಟ್ಟುಕೊಂಡಿದ್ದರೆ ಅದನ್ನು ಇನ್ನೊಬ್ಬರಿಂದ ಕದ್ದಂತಾಯಿತು! ನಮ್ಮ ನಿತ್ಯೋಪಯೋಗಕ್ಕೆ ಬೇಕಾದುದನ್ನು ಪ್ರಕೃತಿ ದೇವಿ ಸೃಷ್ಟಿಸಿ ಒದಗಿಸುತ್ತಾಳೆ. ಯಾರಿಗೇ ಆಗಲಿ ಪ್ರಕೃತಿಯ ಈ ಮೂಲ ನಿಯಮಕ್ಕೆ ವಿನಾಯಿತಿ ಇಲ್ಲ. ಪ್ರತಿಯೊಬ್ಬನೂ ತನಗೆ ಅವಶ್ಯಕವಾದಷ್ಟನ್ನು ಮಾತ್ರ ತೆಗೆದುಕೊಂಡು ಅಧಿಕವಾದುದನ್ನು ಬಿಟ್ಟರೆ ಪ್ರಪಂಚದಲ್ಲಿ ದಿವಾಳಿಗಳೇ ಇರುವುದಿಲ್ಲ; ಹಸಿವಿನಿಂದ ಯಾರೂ ಸಾಯುವಂತೆಯೂ ಇರುವುದಿಲ್ಲ. ನಮ್ಮ ದೇಶದ ಕೋಟ್ಯಂತರ ಜನರಿಗೆ ಹೊಟ್ಟೆತುಂಬ ಆಹಾರ, ಮೈಮುಚ್ಚು ವುದಕ್ಕೆ ಸಾಕಷ್ಟು ಬಟ್ಟೆ ಒದಗುವವರೆಗೂ ನಮ್ಮ ಯಾವ ಸ್ವತ್ತಿನ ಮೇಲೂ ನಮಗೆ ಹಕ್ಕಿಲ್ಲ. ನಮ್ಮ ಬಯಕೆಗಳನ್ನು ಮಿತಿಯಲ್ಲಿಡುವುದನ್ನು ನಾವು ಕಲಿಯಬೇಕು. ಇತರರಿಗೆ ರೋಗ ಬಂದಾಗ ಅನ್ನ, ಬಟ್ಟೆ, ಮುಂತಾದ ಅಗತ್ಯವಾದ ಉಪಚಾರಗಳಿಗಾಗಿ ನಮ್ಮ ಸುಖವನ್ನೂ ತ್ಯಾಗಮಾಡಬೇಕು. ಉದ್ದಿಶ್ಯಪೂರ್ವಕವಾಗಿ ನಮ್ಮ ಆಶೆಗಳನ್ನು ಹೆಚ್ಚಿಸಿಕೊಳ್ಳುವುದು ನಿಜವಾದ ಅರ್ಥದಲ್ಲಿ ಸಂಸ್ಕೃತಿಯ ಲಕ್ಷಣವಲ್ಲ.

ಸ್ವದೇಶೀ ವಸ್ತುಗಳ ಉಪಯೋಗವನ್ನು ನಾವು ಕಲಿಯಬೇಕು. ನಮ್ಮ ಊರಿನಲ್ಲಿ ತಯಾರಾಗುವ ವಸ್ತುಗಳನ್ನು ಬೇರೆಕಡೆಗಳಿಂದ ತರಿಸಿ ಕೊಳ್ಳುವುದು ಅನ್ಯಾಯ; ಅದು ಧರ್ಮವಲ್ಲ. ಸ್ವದೇಶೀ ವಸ್ತುಗಳು ಕೆಲವು ವೇಳೆ ಮೊದಲು ಗುಣದಲ್ಲಿ ಕೀಳಾಗಿದ್ದರೂ ಅವನ್ನು ಉಪಯೋಗಿಸಿ, ಪ್ರೋತ್ಸಾಹಕೊಟ್ಟು ಗುಣದಲ್ಲೂ ಉತ್ತಮಗೊಳಿಸುವುದಕ್ಕೆ ಪ್ರಯತ್ನಿಸ ಬೇಕು. ಹಾಗಾದರೆ ದೇಶೋನ್ನತಿಗೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ.

ಮನಸ್ಸಿನಲ್ಲಿರುವ ಭಾವವನ್ನು ವ್ಯಕ್ತಪಡಿಸುವುದಕ್ಕೆ ಯಾರೂ ಹಿಂಜರಿ ಯಬಾರದು. ಸರಿಯೆನಿಸಿದ ಯಾವ ಕೆಲಸವನ್ನೇ ಆಗಲಿ ನಿರ್ಭಯದಿಂದ

ಮಾಡಬೇಕು. ಹೆದರುವುದು ಹೇಡಿತನ. ದೇವರಿಗೆ ವಿನಾ ಬೇರೆಯವರಾರಿಗೂ ಹೆದರಬೇಕಾಗಿಲ್ಲ. ದೈವಭಯವೊಂದಿದ್ದರೆ ಅವರು ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ ಮತ್ತಾರಿಗೂ ಅಂಜಬೇಕಾಗಿಲ್ಲ. ಸತ್ಯದ ವ್ರತವನ್ನು ನಡೆಸುವುದಕ್ಕೆ ನಿರ್ಭಯತೆ ಆವಶ್ಯಕ.

ನಾವು ಅಹಂಕಾರದಿಂದ ವರ್ತಿಸಬಾರದು. ಜಂಬವಿಲ್ಲದೆ ವಿನಯಶೀಲಗಳಿಂದ ನಡೆಯುವುದು ಸಂಸ್ಕೃತಿಯ ಲಕ್ಷಣ. ನಮ್ರತೆ ಮಾನವನಲ್ಲಿರಬೇಕಾದ ಸಹಜವಾದ ಗುಣ. ಆದುದರಿಂದ ನಡತೆ ಮತ್ತು ಶೀಲಗಳಿಗಾಗಿ ನಮ್ರತೆಯಿಂದ ದುಡಿಯುವವನೇ ಧನ್ಯ.

ಗಾಂಧೀಜಿಯು ಸಾಧಿಸಿದ ಕಾರ್ಯಗಳಲ್ಲಿ ಅಸ್ಪೃಶ್ಯತಾ ನಿವಾರಣೆಯೂ ಒಂದು. ವಿಶ್ವಕ್ಕೆಲ್ಲ ಸರ್ವಸಮತಾಭಾವವನ್ನು ಬೀರುತ್ತಿದ್ದ ಹಿಂದೂ ಸಮಾಜದಲ್ಲೇ ಒಂದು ಹಿರಿಯ ಕುಂದಿತ್ತು. ಚಾತುರ್ವರ್ಣ್ಯಗಳ ಜೊತೆಗೆ ಪಂಚಮವರ್ಗವೊಂದನ್ನು ಸೃಷ್ಟಿಸಿ, ಅವರನ್ನು ಅಸ್ಪೃಶ್ಯರೆಂದು ಕರೆದದ್ದು ಸರಿಯಲ್ಲ. ಇದು ಅನಾದಿಕಾಲದಿಂದಲೂ ಬಂದುದೆಂಬುದರಲ್ಲಿ ಅರ್ಥವಿಲ್ಲ. ಪುರಾಣ ಕಾಲದಿಂದೀಚೆಗೆ 'ಮೇಲ್ತರಗತಿ'ಯವರೆಂದು ಹೇಳಿಕೊಳ್ಳುತ್ತಿದ್ದ ಸ್ವಾರ್ಥ ಪರರು, ಅವರನ್ನು ದೂರೀಕರಿಸಿ, ಸಮಾಜದಲ್ಲಿ ಅವರಿಗೆ ಸ್ಥಾನ ಮಾನಗಳಿಲ್ಲದಂತೆ ಮಾಡಿದರು. ಈ ಅಸಹ್ಯವಾದ, ನಾಚಿಕೆಗೇಡಾದ ಮನೋಭಾವ, ಗುಲಾಮರನ್ನು ಸೃಷ್ಟಿಮಾಡುವ ಈ ಅಸ್ಪೃಶ್ಯತೆಯು ನಮ್ಮ ಸಂಸ್ಕೃತಿಯು ತೀರ ಕೆಳಮಟ್ಟಕ್ಕಿಳಿದಮೇಲೆ ಅಂಟಿಕೊಂಡ ಒಂದು ರೋಗ. ವೃತ್ತಿಯ ನಿಮಿತ್ತವಾಗಿ ಯಾರೂ ಅಸ್ಪೃಶ್ಯರಾಗುವುದಿಲ್ಲ. ಈ ಪಾಪವನ್ನು ತೊಳೆಯುವವರೆಗೂ ಹಿಂದೂಧರ್ಮ ಕಳಂಕರಹಿತವಾಗುವುದಿಲ್ಲವೆಂದು ಹಿಂದೆ ಭಗವಾನ್ ಬುದ್ಧದೇವ ಮತ್ತು ಬಸವಣ್ಣನವರು ಸಾರಿ ನಡೆದಂತೆಯೇ ಗಾಂಧೀಜಿಯೂ ನಡೆದರು. ಈ ದೃಷ್ಟಿಯಿಂದ ಗಾಂಧೀಜಿ ಹಿಂದೂಧರ್ಮಕ್ಕೆ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಪ್ರತಿಯೊಬ್ಬರೂ ಭಂಗಿಯ ಕೆಲಸ ಮುಂತಾದುವುಗಳನ್ನು ಹೆಮ್ಮೆಯಿಂದ ಮಾಡಬೇಕೆಂದೂ ಗಾಂಧೀಜಿ ಹೇಳಿದ್ದಾರೆ. ಹರಿಜನರಿಗೆ ಮೇಲ್ತರಗತಿಯವರು ತೋರಿಸುತ್ತಿದ್ದ ಅನಾದರಣೆಯನ್ನು ತಪ್ಪಿಸಿ, ನ್ಯಾಯವಾಗಿ ಸಲ್ಲಬೇಕಾದ ಹಕ್ಕುಬಾಧ್ಯತೆಗಳನ್ನು ಅವರಿಗೆ ದೊರಕಿಸಿಕೊಟ್ಟು, ಇತರರಂತೆಯೇ ಅವರೂ ವಿದ್ಯಾವಂತರಾಗಿ, ಸುಸಂಸ್ಕೃತ

ರಾಗುವುದಕ್ಕೆ ಗಾಂಧೀಜಿ ತುಂಬ ಶ್ರಮಿಸಿದರು. ಇದರಿಂದ ಹಿಂದೂಧರ್ಮದ ಉದಾತ್ತತತ್ತ್ವಗಳನ್ನು ಕಾಪಾಡಿದಂತಾಯಿತು. ಈ ಮಹಾಸೇವೆಯ ಫಲವಾಗಿ ಹರಿಜನರ ಬಗ್ಗೆ ಜನರಲ್ಲಿದ್ದ ತುಚ್ಛಮನೋಭಾವನೆಯು ತೊಲಗಿತು. ಮಾನವರಲ್ಲಿ ಸೋದರಭಾವನೆ ಬೆಳೆಯುವುದಕ್ಕೆ ಅವಕಾಶವಾಯಿತು. ಗಾಂಧೀಜಿಯ ಸೇವೆಯ ಫಲವಾಗಿ ಸರ್ವವ್ಯಾಪಿಯಾದ ಪರಮಾತ್ಮನ ಮಂದಿರಕ್ಕೆ ದರ್ಶನ ಪೂಜೆಗಳಿಗಾಗಿ ಹರಿಜನರನ್ನೂ ಬಿಡುವಂತಾಯಿತು.

ಸಮಾಜದಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಉತ್ತಮಪಡಿಸುವುದಕ್ಕಾಗಿಯೂ ಗಾಂಧೀಜಿ ಬಹಳವಾಗಿ ದುಡಿದಿದ್ದಾರೆ. "ಸ್ತ್ರೀಗೆ ಪುರುಷನಷ್ಟೇ ಬುದ್ಧಿವಿವೇಕಗಳಿವೆ; ಅವಳು ಪುರುಷನಿಗೆ ಸಮಾನಳು" ಎಂದೂ ಸಾರಿದ್ದಾರೆ. ಸ್ತ್ರೀಯು ಎಂದಿಗೂ ಪುರಷನಿಗಿಂತ ಕಡಮೆಯಲ್ಲವೆಂದು ಹೇಳಿ ಸ್ತ್ರೀಗೂ ಸತ್ಯಾಗ್ರಹ ಮಾರ್ಗವನ್ನು ತೋರಿಸಿಕೊಟ್ಟರು. "ಸ್ತ್ರೀಗೆ ತನ್ನ ಶಕ್ತಿ ತನಗೆ ಗೊತ್ತಿಲ್ಲ. ತನ್ನಲ್ಲಿರುವ ನೈತಿಕ ಬಲವನ್ನು ಅವಳು ಅರಿತಿಲ್ಲ. ಅದರಿಂದಲೇ ಅವಳು ಅಬಲೆ" ಎಂದು ಹೇಳಿದ್ದಾರೆ. ಸ್ತ್ರೀಯು ಅಹಿಂಸೆ, ತಾಳ್ಮೆ, ತ್ಯಾಗ, ಪ್ರೇಮಗಳ ಪ್ರತೀಕ. ಶ್ರೀರಾಮ ಆದರ್ಶಪತಿಯಾದರೆ ಸೀತೆ ಆದರ್ಶ ಸತಿ. ಅವಳು ಪುರುಷನ ಭೋಗವಸ್ತುವಲ್ಲ. ಅವಳಿಗೂ ಆತ್ಮವಿದೆ, ವ್ಯಕ್ತಿತ್ವವಿದೆ. ಅವಳು ಪುರುಷನ ದಾಸಿಯಲ್ಲವೆಂದು ಯುವಕ ಯುವತಿಯರಿಬ್ಬರಿಗೂ ಬೋಧಿಸಿದರು. ಜಗತ್ತಿನಲ್ಲಿ ಧರ್ಮರಕ್ಷಣೆಯಾಗಿರುವುದು ಮುಖ್ಯವಾಗಿ ಸ್ತ್ರೀಯರಿಂದ. ಸಾರ್ವಜನಿಕ ಕ್ಷೇತ್ರದಲ್ಲಿ ಆಕೆ ಪುರುಷನಿಗೆ ಸಮಾನಳು. ಮಧ್ಯಪಾನನಿರೋಧ, ಮಕ್ಕಳ ಶಿಕ್ಷಣ, ಆರೋಗ್ಯರಕ್ಷಣೆ ಮುಂತಾದುವುಗಳಲ್ಲಿ ಅವರು ಮಹತ್ತಾದ ಸೇವೆಯನ್ನು ಸಲ್ಲಿಸಬಲ್ಲರು.

ಗಾಂಧೀಜಿಗೆ ಸ್ತ್ರೀಯರ ವಿಷಯದಲ್ಲಿ ಇಷ್ಟೊಂದು ಗೌರವಭಾವವಿದ್ದರೂ ಆಧುನಿಕ ತರುಣಿಯರಿಗೆ ಸೂಕ್ತ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ. ವೇಷ ಭೂಷಣ ಹೆಂಗಸಿಗೆ ನೈಜವಾದ ಅಲಂಕಾರವಲ್ಲ. ಆಕೆ ತನ್ನ ಸದ್ಗುಣಗಳಿಂದ ಮಾತ್ರ ಶೋಭಿಸಬಲ್ಲಳು. "ನವಯುಗದ ಯುವತಿ ನಾಲ್ಕಾರು ರೋಮಿಯೋಗಳಿಗೆ ಜೂಲಿಯಟ್ ಆಗುವುದಕ್ಕೆ ಬಯಸುತ್ತಿರುವಳೆಂದು ನಾನು ಅಂಜುತ್ತೇನೆ. ಅವಳ ಮನಸ್ಸು ಸಾಹಸದ ಕಡೆಗಿರಬಹುದು. ಗಾಳಿ, ಮಳೆ, ಬಿಸಿಲುಗಳಿಂದ ದೇಹವನ್ನು ರಕ್ಷಿಸುವುದಕ್ಕೆ ಯೋಗ್ಯವಾದ ಉಡುಪನ್ನು

ಧರಿಸುತ್ತಿಲ್ಲ. ಯುವಕರ ಮನಸ್ಸನ್ನು ಸೆಳೆಯುವುದಕ್ಕೆ ಪ್ರಯತ್ನಿಸುತ್ತಾಳೆ. ಸ್ವಾಭಾವಿಕವಾದ ಮುಖದ ಸೌಂದರ್ಯವನ್ನು ರಂಗುರಂಗುಗಳಿಂದ ಅಲಂಕರಿಸಿಕೊಂಡು ಅಸಾಮಾನ್ಯಳಾಗಿ ಕಾಣುವುದಕ್ಕೆ ಪ್ರಯತ್ನಿಸುತ್ತಾಳೆ. ಅಂತಹ ದಾರಿ ತರುಣಿಯರಿಗೆ ಸಲ್ಲದು"ಎಂದು ಗಾಂಧೀಜಿ ಖಡಾ ಖಂಡಿತವಾಗಿ ಹೇಳಿದ್ದಾರೆ.

ಹಾಗೆಯೇ ಗಾಂಧೀಜಿ ಅಸಭ್ಯ ತರುಣರ ನಡತೆಗೂ ರೋಸಿ, "ಯುವಕರಲ್ಲಿ ಒಳ್ಳೆಯ ನಡತೆ ಏಕಿರಬಾರದು? ಸಾಧ್ವೀಮಣಿಯರಾದ ಯುವತಿಯರು ಅವರನ್ನು ನೋಡಿ ಅಂಜುವಂತಾಗಬೇಕೆ? ಅನೇಕ ಯುವಕರಲ್ಲಿ ಸತ್ಪುರುಷರ ಸೌಜನ್ಯವಿಲ್ಲದಿರುವುದು ನನಗೆ ದುಃಖವನ್ನುಂಟು ಮಾಡಿದೆ. ವಿದ್ಯಾರ್ಥಿವರ್ಗದಲ್ಲಿ ಯಾರೂ ಅಸಭ್ಯವರ್ತನೆಗೆ ತೊಡಗದಂತೆ ನೋಡಿಕೊಂಡು ತಮ್ಮ ವರ್ಗದ ಗೌರವವನ್ನು ಕಾಪಾಡಿಕೊಳ್ಳಬೇಕು. ತಮ್ಮ ಅಕ್ಕ ತಂಗಿಯರ, ತಾಂಯದಿರ ಮಾನರಕ್ಷಣೆಯಂತೆಯೇ ಇತರರ ಅಕ್ಕತಂಗಿಯರ ತಾಯಂದಿರ ಮಾನರಕ್ಷಣೆಯೂ ಮುಖ್ಯವಾದುದು. ಈ ವಿಚಾರಗಳಲ್ಲಿ ಒಳ್ಳೆಯ ನಡತೆಯಿಲ್ಲದ ವಿದ್ಯಾರ್ಥಿಗಳು ಎಷ್ಟು ವಿದ್ಯೆ ಕಲಿತರೂ ವ್ಯರ್ಥ" ಎಂದು ಗಾಂಧೀಜಿ ಘೋಷಿಸಿದ್ದಾರೆ.

ನ್ಯಾಯದೃಷ್ಟಿಯಲ್ಲೂ ಸಮಾಜದ ದೃಷ್ಟಿಯಲ್ಲೂ ಸ್ತ್ರೀಪುರುಷರಿಬ್ಬರಿಗೂ ಸಮಾನವಾದ ಹಕ್ಕುಬಾಧ್ಯತೆಗಳಿರಬೇಕೆಂದೂ ತಂದೆತಾಯಿಯರು ಗಂಡುಮಕ್ಕಳಂತೆಯೇ ಹೆಣ್ಣುಮಕ್ಕಳನ್ನೂ ಒಂದೇ ರೀತಿ ಕಾಣುವುದು ಅಗತ್ಯವೆಂದೂ ಗಾಂಧೀಜಿ ಅಭಿಪ್ರಾಯಪಟ್ಟಿದ್ದಾರೆ. ಅವರ ಈ ದೃಷ್ಟಿ ಸಾಧನೆಗಾಗಿ ನಮ್ಮ ಸರ್ಕಾರವು ಈಚೆಗೆ ತಂದೆಯ ಆಸ್ತಿಪಾಸ್ತಿಗಳಲ್ಲಿ ಗಂಡು ಮತ್ತು ಹೆಣ್ಣುಮಕ್ಕಳಿಗೆ ಸಮಾನವಾದ ಹಕ್ಕಿದೆಯೆಂಬ ಕಾನೂನನ್ನೂ ಜಾರಿಗೆ ತಂದಿದೆ. ದಾಂಪತ್ಯ ಜೀವನದಲ್ಲಿ ಸ್ತ್ರೀ ಪುರುಷರಿಬ್ಬರೂ ಸಂಯಮ ನಿಯಮಗಳಿಂದ, ಸಹಧರ್ಮಚರ್ಯದಿಂದ ಹೇಗೆ ವರ್ತಿಸಬೇಕೆಂಬುದನ್ನು ಗಾಂಧೀಜಿಯವರ ದಾಂಪತ್ಯಜೀವನದಿಂದಲೇ ತಿಳಿಯಬಹುದಾಗಿದೆ.

ಆರ್ಥಿಕ ಕ್ಷೇತ್ರದಲ್ಲಿ ಗಾಂಧೀಜಿ ಒಂದು ಕ್ರಾಂತಿಯನ್ನೇ ಉಂಟುಮಾಡಿದರು. ಪ್ರತಿಯೊಬ್ಬರೂ ತಮ್ಮ ಆಹಾರ, ವಸ್ತ್ರ, ವಸತಿಗಳನ್ನು ತಮ್ಮ ದುಡಿಮೆಯಿಂದಲೇ ಸಂಪಾದಿಸಬೇಕು. ಹಾಗೆಯೆ ಪ್ರತಿ ಗ್ರಾಮವೂ

ಆರ್ಥಿಕವಾಗಿ ಸ್ವಾವಲಂಬಿಯಾಗಬೇಕೆಂದೂ, ಮಕ್ಕಳೂ, ವೃದ್ಧರೂ, ಅಶಕ್ತರೂ ಹೊರತು ಇತರರೆಲ್ಲ ದುಡಿದು ಜೀವಿಸಬೇಕೆಂದು ಅವರು ಹೇಳಿರುವುದರಲ್ಲಿ ಅರ್ಥವಿದೆ. ಹಿಂದೆ ಹನ್ನೆರಡನೆಯ ಶತಮಾನದಲ್ಲಿ ಕನ್ನಡನಾಡಿನಲ್ಲಿದ್ದ ಬಸವಣ್ಣನವರು "ಕಾಯಕವೇ ಕೈಲಾಸ" ಎಂದು ಹೇಳಿದ್ದನ್ನು ಗಾಂಧೀಜಿಯು "ದುಡಿಮೆಯಲ್ಲಿ ಗಾಂಭೀರ್ಯವಿದೆ" ಎಂದು ಹೇಳಿ ಸಮರ್ಥಿಸಿದ್ದಾರೆ.

ಗಾಂಧೀಜಿಗೆ ಮೋಸವೆಂದರೆ ಆಗುತ್ತಿರಲಿಲ್ಲ. ಆದುದರಿಂದಲೇ ವ್ಯಾಪಾರದಲ್ಲಿ ಲಾಭಕೋರತನವನ್ನು ಖಂಡಿಸಿದ್ದಾರೆ. ನ್ಯಾಯುವಾದ ಲಾಭವಲ್ಲದೆ, ಜನರನ್ನು ಹೀರಿ, ಹಿಂಡಿ ಗಳಿಸಿದ ಲಾಭದಿಂದ ಆತ್ಮನಾಶವಾಗುತ್ತದೆ. ಕಳ್ಳಸಂತೆ ಮುಂತಾದ ಕೃತ್ರಿಮುಗಳಿಂದ ವ್ಯಾಪಾರಿಗಳು ಜನರ ಸಹಾನುಭೂತಿಯನ್ನು ಕಳೆದುಕೊಳ್ಳುತ್ತಾರೆ. ಧನಿಕರು ತಮ್ಮ ಆವಶ್ಯಕತೆಗೆ ಮೀರಿದ ಧನವನ್ನು ಸಾರ್ವಜನಿಕ ಹಿತಕ್ಕಾಗಿ ವಿನಿಯೋಗಿಸಬೇಕೆಂದು ಗಾಂಧೀಜಿ ಬಿರ್ಲಾ ಮುಂತಾದ ಲಕ್ಷಾಧೀಶ್ವರರಿಗೂ ಮಾರ್ಗತೋರಿಸಿದರು. ನರಕಕ್ಕೆ ಒಯ್ಯುವ ಮೂರುದಾರಿಗಳಲ್ಲಿ ಲೋಭವೂ ಒಂದೆಂದು ಗಾಂಧೀಜಿ ಭಗವದ್ಗೀತೆಯ ತತ್ತ್ವವನ್ನು ಸಮರ್ಥಿಸಿದ್ದಾರೆ.

ರಾಜಕೀಯಕ್ಕೆ ಇಳಿಯುವವರು ಧರ್ಮಸಾಧನೆಯಲ್ಲಿ ತುಂಬ ಅನುಭವಿಗಳಾಗಬೇಕು. ಹಣ ಮತ್ತು ಅಧಿಕಾರದ ಆಸೆಯನ್ನು ತ್ಯಜಿಸಿ ಸತ್ಯಸಾಕ್ಷಾತ್ಕಾರವನ್ನು ಪಡೆದ ಜ್ಞಾನಿಯಾಗಬೇಕು. ಲೋಕಕಲ್ಯಾಣಾರ್ಥವಾಗಿ ಜಗತ್ತಿನ ಶಾಂತಿಗಾಗಿ, ಜ್ಞಾನವನ್ನು ಬೋಧಿಸಿ ಪ್ರಜೆಗಳನ್ನು ಉದ್ಧಾರ ಮಾಡುವ ತಾರಕನನ್ನು ತಪಸ್ಸಿನಿಂದ ಎಳೆದು ತರಬೇಕು. ಇಂತಹ ದಿವ್ಯ ಜೀವನವನ್ನು ನಡೆಸಿದ ಗಾಂಧೀಜಿ ಮಹಾಪುರುಷರಾಗಿ ಜಗತ್ತನ್ನು ಉದ್ಧಾರ ಮಾಡಿದರು. ವ್ಯಕ್ತಿಯ ಜೀವನವನ್ನು ತಿದ್ದಿ, ರಾಜಕೀಯವನ್ನು ಶುದ್ಧಗೊಳಿಸುವುದಕ್ಕೆ ಶ್ರಮಿಸಿ ಪ್ರಪಂಚದ ಶಾಂತಿಗೆ ತಳಹದಿಯನ್ನು ಹಾಕಿದರು.

ಗಾಂಧೀಜಿಯು ನಮ್ಮ ದೇಶದ ಶಿಕ್ಷಣವ್ಯವಸ್ಥೆಯನ್ನು ರಾಷ್ಟ್ರದ ವಾತಾವರಣಕ್ಕೆ ಸರಿಹೊಂದುವಂತೆ ಸುಧಾರಿಸುವುದಕ್ಕಾಗಿ ತುಂಬ ಪ್ರಯತ್ನಿಸಿದರು. ಶಿಕ್ಷಣ ವ್ಯವಸ್ಥೆಯಲ್ಲಿ ಮಾರ್ಪಾಡುಮಾಡುವುದಕ್ಕೆ ತಾವೇ ಸ್ವತಃ ಕಾರ್ಯತತ್ಪರರಾಗಿ ಒಂದು ಉತ್ತಮಮಾರ್ಗವನ್ನು ತೋರಿಸಿಕೊಟ್ಟರು. ಮಕ್ಕಳಿಗೆ ಬಾಲ್ಯದಲ್ಲಿ ಮೊದಲು ಏಳುವರ್ಷಗಳ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾತೃಭಾಷೆಯ ಮೂಲಕವೇ ನಡೆಸಬೇಕೆಂದೂ ಅದು ಕೇವಲ

ಪುಸ್ತಕದ ಜ್ಞಾನವೇ ಆಗದೆ, ಸ್ವತಃ ಮಕ್ಕಳು ತಮಗೆ ಆಸಕ್ತಿಯಿರುವ ಒಂದೆರಡು ಕೈಕಸಬುಗಳನ್ನು ಕಲಿಯುತ್ತಾ ಜ್ಞಾನವನ್ನು ಪಡೆಯುವುದು ಉತ್ತಮವೆಂದೂ, ಅದರಿಂದ ಮಕ್ಕಳ ಶಾರೀರ ಮತ್ತು ಮಾನಸಿಕ ಬೆಳವಣಿಗೆಗೆ ಅವಕಾಶವಾಗುವುದೆಂದೂ ಅವರು ಅಭಿಪ್ರಾಯಪಟ್ಟರು. ಮಕ್ಕಳಿಗೆ ಸಹಜವಾದ ವಾತಾವರಣದಲ್ಲಿ ಕೈಕಸಬು, ತೋಟದ ಕೆಲಸ, ಕುಶಲಕೆಲಸಗಳೊಡನೆ ಉತ್ತಮವಾದ ಮತ್ತು ಪ್ರಗತಿಪರವಾದ ಶಿಕ್ಷಣವನ್ನು ದೇಶದ ಸಮಸ್ತ ಮಕ್ಕಳಿಗೂ ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಗಾಂಧೀಜಿ ವ್ಯಕ್ತಪಡಿಸಿದರು. ಅದಕ್ಕೆ ಪ್ರಯೋಗಾರ್ಥವಾಗಿ ವಾರ್ಧಾಶಿಕ್ಷಣಶಾಲೆಯನ್ನು ಪ್ರಾರಂಭಿಸಿ, ಭಾರತದ ಶಿಕ್ಷಣವ್ಯವಸ್ಥೆಗೆ ಮಾರ್ಗ ತೋರಿಸಿದರು. ರಾಷ್ಟ್ರೀಯ ಸರ್ಕಾರವು ಈಚೆಗೆ ಗಾಂಧೀಜಿಯ ಈ ವಾರ್ಧಾ ಶಿಕ್ಷಣಕ್ರಮ ಅಥವಾ ದೇಶೀಯ ಮೂಲಶಿಕ್ಷಣವನ್ನು ದೇಶದ ಎಲ್ಲಾ ಭಾಗಗಳಲ್ಲೂ ಜಾರಿಗೆ ತರುವುದಕ್ಕೆ ಪ್ರಯತ್ನಿಸುತ್ತಿದೆ.

ಗಾಂಧೀಜಿಯ ದೃಷ್ಟಿಯಲ್ಲಿ ಆರ್ಥಿಕಯೋಜನೆಗಳ ಗುರಿ ಕೇವಲ ರಾಷ್ಟ್ರದ ಸಂಪತ್ತು ಮತ್ತು ಜನಜೀವನವನ್ನು ಹೆಚ್ಚಿಸುವುದೇ ಅಲ್ಲದೆ ಮುಖ್ಯವಾಗಿ ಜನತೆಯನ್ನು ನೀತಿವಂತರೂ ಸ್ವಾವಲಂಬಿಗಳೂ ದೇಶಪ್ರೇಮಿಗಳೂ ಆಗುವಂತೆ ಮಾಡುವುದೇ ಆಗಿದ್ದಿತು. ಮೂಲತಃ ವ್ಯಕ್ತಿಯ ಮತ್ತು ರಾಷ್ಟ್ರದ ಅಧೋಗತಿಗೆ ಕಾರಣವಾದ ದಾರಿದ್ರ್ಯವು ನಿರ್ಮೂಲವಾಗಬೇಕು. ಸಂಸ್ಕೃತಿಯ ಬೆಳವಣಿಗೆಗೂ ನೈತಿಕ ಪ್ರಗತಿಗೂ ಬೇಕಾದಷ್ಟು ಮಾತ್ರ ಜೀವನ ಮಟ್ಟವನ್ನು ಉತ್ತಮಪಡಿಸಬೇಕು. ಸುಖ ಭೋಗಲಾಲಸೆಗಳಿಗೆ ಅವಕಾಶ ಕೊಡದಂತೆ ಸರಳಜೀವನವನ್ನು ನಡೆಸಬೇಕೆಂಬುದೇ ಗಾಂಧೀಜಿಯ ಅಭಿಮತವಾಗಿತ್ತು. ಮುಖ್ಯವಾಗಿ ಭಾರತೀಯರು ಕರ್ಮಯೋಗಿಗಳಾಗಿ ದೈಹಿಕ ಮತ್ತು ಆಧ್ಯಾತ್ಮಿಕ ಶಕ್ತಿಗಳನ್ನು ವೃದ್ಧಿಪಡಿಸಿಕೊಳ್ಳುವುದಕ್ಕೆ ಪ್ರಯತ್ನಿಸಬೇಕೆಂದೂ ಹೇಳಿದ್ದಾರೆ.

ಗಾಂಧೀಜಿಯ ಕಾರ್ಯಕ್ರಮಗಳಲ್ಲಿ ಚರಕಕ್ಕೆ ಅಗ್ರಸ್ಥಾನವಿದೆ. ಗ್ರಾಮಗಳು ಪರಿಪೂರ್ಣತೆಯಿಂದ ಸ್ವಾವಲಂಬಿಗಳಾಗುವುದು ಆವಶ್ಯಕ. ಅದಕ್ಕಾಗಿ ಆರ್ಥಿಕಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಬೇಕು. ಚರಕದಿಂದ ನೂಲು ತೆಗೆದು ಬಟ್ಟೆಯನ್ನು ನೆಯ್ದುಕೊಂಡರೆ ಪ್ರತಿಯೊಬ್ಬರಿಗೂ ಕೆಲಸ

ದೊರೆಯುವುದಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿನ ಆರ್ಥಿಕಮುಗ್ಗಟ್ಟು ಸ್ವಲ್ಪಮಟ್ಟಿಗಾದರೂ ಪರಿಹಾರವಾಗುತ್ತದೆ. ಚರಕದ ಮೂಲಕವೇ ಗಾಂಧೀಜಿಯು ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು ಕಂಡರು. ಆದುದರಿಂದಲೇ ಚರಕವು ಸಂಪಾದನೆ, ಸ್ವಾವಲಂಬನೆ ಹಾಗೂ ಆತ್ಮಗೌರವಗಳ ಪ್ರತೀಕವಾಗಿ ಬೆಳೆಯಿತು. ಖಾದಿಯು ನಮ್ಮ ಸ್ವಾತಂತ್ರ್ಯದ ಸಂಕೇತವಾಯಿತು. ಗ್ರಾಮಗಳಲ್ಲಿ ಕೈಗಾರಿಕಾಭಿವೃದ್ಧಿ, ಸರ್ವತೋಮುಖವಾದ ಉತ್ಪಾದನೆ, ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಪ್ರಮುಖ ಕೈಗಾರಿಕೆಗಳ ರಾಷ್ಟ್ರೀಕರಣ-ಇವುಗಳಿಂದ ಜನರಲ್ಲಿ ತಾರತಮ್ಯವನ್ನು ಬಹುಮಟ್ಟಿಗೆ ಕಡಮೆಮಾಡಬಹುದು. ಹಳ್ಳಿಗರ ಉದ್ಧಾರವೇ ನಮ್ಮ ಸಂಸ್ಕೃತಿಯ ಉದ್ಧಾರವೆಂದು ಗಾಂಧೀಜಿ ಸ್ಪಷ್ಟವಾಗಿ ನುಡಿದಿದ್ದಾರೆ.

ಹೀಗೆ ಗಾಂಧೀಜಿ ನಾನಾ ವಿಧಗಳಲ್ಲಿ ನಾನಾ ಕ್ಷೇತ್ರಗಳಲ್ಲಿ ದೇಶೋನ್ನತಿಗಾಗಿ, ಜಗತ್ಕಲ್ಯಾಣಕ್ಕಾಗಿ ದುಡಿದು ಜಗದ್ವಂದ್ಯರಾದರು. ಭಾರತದ ದಾಸ್ಯವಿಮೋಚನೆಗಾಗಿ ಕಂಕಣತೊಟ್ಟು ಸತ್ಯ ಪ್ರೇಮಗಳಿಂದ ಕೂಡಿದ ಅಹಿಂಸೆಯ ಮಾರ್ಗದಲ್ಲಿ ಮಾನವ ಕಲ್ಯಾಣವನ್ನು ಸಾಧಿಸುವುದಕ್ಕೆ ದಾರಿ ತೋರಿದರು. ಅವರು ನುಡಿದ ನುಡಿಗಳೂ ನಡೆಸಿದ ಆಚರಣೆಗಳೂ ಇಡೀ ಮಾನವ ಜನಾಂಗವನ್ನೇ ಸದಾ ಎಚ್ಚರಗೊಳಿಸುವಂತಹವಾಗಿವೆ. ಅವರು ಈಗ ನಮ್ಮ ಮುಂದೆ ಇಲ್ಲದಿದ್ದರೂ ಅವರ ತತ್ತ್ವಬೋಧನೆಗಳೂ ಜೀವನ ಮಾರ್ಗವೂ ಸರ್ವದಾ ಸ್ಫೂರ್ತಿದಾಯಕವಾಗಿ ಚಿರನೂತನವಾಗಿ ಅವರ ಹೆಸರನ್ನು ಸಜೀವಗೊಳಿಸಿವೆ. ಎಂದೆಂದಿಗೂ ಅವರ ದಿವ್ಯಜ್ಯೋತಿ, ಅವರು ಬೆಳಗಿದ ನಂದಾದೀವಿಗೆ ಇನ್ನೂ ಪ್ರಕಾಶಮಾನವಾಗಿ ಎಲ್ಲರಿಗೂ ಮಾರ್ಗದರ್ಶಕವಾಗಿರುತ್ತದೆ. ಗಾಂಧೀಜಿ ಭಗವದ್ಭಕ್ತರಲ್ಲಿ ಅಗ್ರಗಣ್ಯರಾಗಿ, ಶ್ರೇಷ್ಠ ಧಾರ್ಮಿಕಜೀವನವನ್ನು ನಡೆಸಿ, ನಿಷ್ಠಾವಂತ ದೇಶಸೇವಕರೂ ಜಗತ್ತಿನ ಶಾಂತಿದೂತರೂ ಆಗಿ, ವಿಶ್ವಶಾಂತಿಗಾಗಿ, ಜಗತ್ಕಲ್ಯಾಣಕ್ಕಾಗಿ ಹೋರಾಡಿ ಅಮರರಾದರು. ವಿಶ್ವವಿಭೂತಿ ಪುರುಷರಾದ ಗಾಂಧೀಜಿಯವರಂತಹ ವ್ಯಕ್ತಿಯನ್ನು, ಅವರ ಆದರ್ಶಜೀವನದಂತಹ ಜೀವನವನ್ನು ಭಾರತದಲ್ಲೇ ಅಲ್ಲ ಪ್ರಪಂಚದಲ್ಲಿ ಬೇರೆ ಎಲ್ಲಿಯೂ ಕಾಣುವುದು ದುರ್ಲಭವೇ ಸರಿ.